ಭಾನುವಾರ, ಆಗಸ್ಟ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 230 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಜೀವರಾಶಿಗಳಿಗೆ ಜೀವನೋತ್ಸಾಹ ತುಂಬುವ ಮಳೆಗಾಲದ ವಿಸ್ಮಯಕಾರಿ ಸಂಗತಿಗಳು



ಒಳನೋಟ: 'ಜನ್‌ಮನ್' ಜಾರಿಗೆ ಅಸಡ್ಡೆ 6
ಕಲ್ಯಾಣ ಕರ್ನಾಟಕದಲ್ಲಿ ಮಳೆಯ ಆರ್ಭಟ 7
'ಕೆನೆಪದರ ಬಿಡಿ, ತಕ್ಷಣವೇ ಒಳಮೀಸಲು ಜಾರಿ ಮಾಡಿ' 5
ಉತ್ತರ ಪ್ರದೇಶ: 69,000 ಸಹಾಯಕ ಶಿಕ್ಷಕರ ನೇಮಕ ಪ್ರಕರಣ
ಹೊಸ ಆಯ್ಕೆಪಟ್ಟಿ ಪ್ರಕಟಿಸಿ: ಹೈಕೋರ್ಟ್ 9

ವರದಿ ಬಳಿಕ ಹಳೇ ಪಿಂಚಣಿ: ಸಿ.ಎಂ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿರುವ ಐವರು ಐಎಎಸ್ ಅಧಿಕಾರಿಗಳ ಸಮಿತಿ ವರದಿ ನೀಡಿದ ತಕ್ಷಣ ಹಳೇ ಪಿಂಚಣಿ ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. 5

ಉದ್ಯೋಗ ಸೃಷ್ಟಿ: ಭಾರತ ವಿಫಲ

ನವದೆಹಲಿ (ಪಿಟಿಐ): 'ಹೊಸ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಜಿ20 ರಾಷ್ಟ್ರಗಳ ಪೈಕಿ ಭಾರತವು ತೀರಾ ಹಿಂದುಳಿದಿದೆ. ಜನಸಂಖ್ಯೆ ಬೆಳವಣಿಗೆಗೆ ಅನುಗುಣವಾಗಿ 2030ರ ವೇಳೆಗೆ ಹೆಚ್ಚುವರಿಯಾಗಿ 14.8 ಕೋಟಿ ಉದ್ಯೋಗ ಸೃಷ್ಟಿಸುವ ಅಗತ್ಯವಿದೆ' ಎಂದು ಐಎಂಎಫ್ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಹೇಳಿದ್ದಾರೆ. 8

ಚೂರಿ ಇರಿದ ಬಾಲಕನ ಮನೆ ನೆಲಸಮ

ಜೈಪುರ (ಪಿಟಿಐ): ಕೋಮು ಸಂಘರ್ಷ ಉದ್ವಿಗ್ನಗೊಂಡ ಬೆನ್ನಲ್ಲೇ ರಾಜಸ್ಥಾನ ಸರ್ಕಾರವು, ಚೂರಿ ಇರಿದ ಬಾಲಕನ ಮನೆಯನ್ನು ಪೊಲೀಸರ ಸಮ್ಮುಖದಲ್ಲಿ ಜೆಸಿಬಿಗಳ ಮೂಲಕ ನೆಲಸಮಗೊಳಿಸಿದೆ. ಅರಣ್ಯ ಭೂಮಿಯಲ್ಲಿ ಅಕ್ರಮವಾಗಿ ಮನೆಯನ್ನು ನಿರ್ಮಿಸಲಾಗಿತ್ತು ಎಂದು ಅದು ಹೇಳಿದೆ. 9

ಬಾಂಗ್ಲಾದೇಶದಲ್ಲಿ 650 ಜನರ ಸಾವು

ಢಾಕಾ/ಜಿನೀವಾ (ಪಿಟಿಐ): ಬಾಂಗ್ಲಾದೇಶದಲ್ಲಿ ಜುಲೈ 16ರಿಂದ ಆಗಸ್ಟ್ 11ರವರೆಗೆ ನಡೆದಿರುವ ಹಿಂಸಾಚಾರದಲ್ಲಿ ಸುಮಾರು 650 ಜನರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯ (ಯುಎನ್‌ಎಚ್‌ಸಿಆರ್) ಪ್ರಾಥಮಿಕ ವರದಿ ಹೇಳಿದೆ. 8

ರಾಜ್ಯಪಾಲರ ತೀರ್ಮಾನಕ್ಕೆ ಸಂಪುಟ ಧಿಕ್ಕಾರ • ನಾಯಕನ ಬೆಂಬಲಕ್ಕೆ ಸಚಿವರ ದಂಡು • ಸಿದ್ದರಾಮಯ್ಯ ರಾಜೀನಾಮೆಗೆ ಪ್ರತಿಪಕ್ಷ ಪಟ್ಟು

ಸಿ.ಎಂ ವಿರುದ್ಧ ತನಿಖೆಗೆ ಒಪ್ಪಿಗೆ: ಮುಂದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ರಾಜ್ಯಪಾಲರ ತೀರ್ಮಾನ ಹೊರಬಿದ್ದ ಬೆನ್ನಲ್ಲೇ ರಾಜ್ಯ ಸರ್ಕಾರ ಮತ್ತು ರಾಜಭವನದ ಮಧ್ಯೆ ಸಂಘರ್ಷದ ವಾತಾವರಣ ಸೃಷ್ಟಿಯಾಗಿದೆ. ಶನಿವಾರ ಸಂಜೆ ಹೊತ್ತಿಗೆ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲೇ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ರಾಜ್ಯಪಾಲರ ನಿರ್ಣಯಕ್ಕೆ ಧಿಕ್ಕಾರ ಹೇಳುವ ನಿರ್ಣಯವನ್ನು ಕೈಗೊಳ್ಳಲಾಗಿದೆ. 'ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ರಾಜೀನಾಮೆ ಕೊಡಕೂಡದು, ಅವರ ಜತೆ ಒಗ್ಗಟ್ಟಿನಿಂದ ನಾವು ನಿಲ್ಲಲಿದ್ದೇವೆ' ಎಂಬ ನಿರ್ಣಯವನ್ನೂ ಸಚಿವ ಸಂಪುಟದ ಸಹೋದ್ಯೋಗಿಗಳು ಕೈಗೊಂಡರು.

ಬಳಿಕ ವಿಧಾನಸೌಧದಲ್ಲಿ ಒಟ್ಟಾಗಿಯೇ ಪತ್ರಿಕಾಗೋಷ್ಠಿ ನಡೆಸಿದ ಸಚಿವರು, ಈ ಕುರಿತ ನಿರ್ಣಯವನ್ನು ಪ್ರಕಟಿಸಿದರು.

4ನೇ ಪುಟ ನೋಡಿ

'ಎಚ್‌ಡಿಕೆ, ನಿರಾಣಿ ವಿರುದ್ಧ ಅನುಮತಿ ಏಕೆ ನೀಡಲಿಲ್ಲ'



'ಗಣಿ ಭೂಮಿ ಮಂಜೂರು ಪ್ರಕರಣದಲ್ಲಿ ಎಚ್.ಡಿ. ಕುಮಾರಸ್ವಾಮಿ ತಪ್ಪಿತಸ್ಥ ಎಂದು ಉಲ್ಲೇಖಿಸಿ, ಪ್ರಾಸಿಕ್ಯೂಷನ್ ಅನುಮತಿಗೆ ಲೋಕಾಯುಕ್ತ ಮನವಿ ಸಲ್ಲಿಸಿದ್ದರೂ ರಾಜ್ಯಪಾಲರು ಅನುಮತಿ ನೀಡಿಲ್ಲ. ಆದರೆ, ಮುಡಾ ಪ್ರಕರಣದಲ್ಲಿ ನನ್ನ ಪಾತ್ರದ ಬಗ್ಗೆ ಯಾರೂ ಯಾವುದೇ ದಾಖಲೆ ಕೊಡದಿದ್ದರೂ, ತನಿಖೆಯೇ ನಡೆದಿಲ್ಲವಾದರೂ ಅನುಮತಿ ನೀಡಿರುವುದರ ಉದ್ದೇಶವೇನು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಶನಿವಾರ ನಡೆದ ತುರ್ತು ವಿಶೇಷ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಡಾ ಪ್ರಕರಣ ನನ್ನ ಸರ್ಕಾರದ ಅವಧಿಯಲ್ಲಿ ನಡೆದಿಲ್ಲ. ನನ್ನಿಂದ ಒಂದೂ ಪತ್ರ ಹೋಗಿಲ್ಲ. ನನ್ನ ಸಹಿ ಎಲ್ಲೂ ಇಲ್ಲ. ಎಲ್ಲವೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ. ನನ್ನ ವಿಚಾರದಲ್ಲಿ ಸ್ವಂತ ಬುದ್ಧಿಯಿಂದ ರಾಜ್ಯಪಾಲರು ನಡೆದುಕೊಂಡಿಲ್ಲ' ಎಂದರು.

4ನೇ ಪುಟ ನೋಡಿ

'ಕೈ ಭ್ರಷ್ಟಾಚಾರ ಪರಂಪರೆಗೆ ಸಾಕ್ಷಿ'



ನವದೆಹಲಿ: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, 'ಪಕ್ಷದ ಬೂಟಾಟಿಕೆ ಹಾಗೂ ಕುಟುಂಬ ಕೇಂದ್ರಿತ ರಾಜಕಾರಣಕ್ಕೆ ಇದು ಮತ್ತೊಂದು ನಿದರ್ಶನ' ಎಂದಿದ್ದಾರೆ.

'ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರದ ಪರಂಪರೆ ಮುಂದುವರಿದಿದೆ! ನ್ಯಾಷನಲ್ ಹೆರಾಲ್ಡ್‌ನಿಂದ ಕರ್ನಾಟಕದ ಮುಡಾ ಹಗರಣದವರೆಗೆ, ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರದ ಇತಿಹಾಸ ಉತ್ತಮವಾಗಿ ದಾಖಲಾಗಿದೆ. ಅವರು ವೈಯಕ್ತಿಕ ಲಾಭಕ್ಕಾಗಿ ಜನರ ನಂಬಿಕೆಗೆ ಪದೇ ಪದೇ ದ್ರೋಹ ಮಾಡಿದ್ದಾರೆ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಟೀಕಿಸಿದ್ದಾರೆ. 'ಕಾಂಗ್ರೆಸ್ ತನ್ನನ್ನು ದಲಿತರು ಮತ್ತು ಅಲ್ಪಸಂಖ್ಯಾತರ ಕಾವಲುಗಾರ ಎಂದು ಬಿಂಬಿಸಿಕೊಳ್ಳುತ್ತಿದೆ. ಆದರೆ, ಪಕ್ಷದ ಮುಖ್ಯಮಂತ್ರಿಯೊಬ್ಬರು ದಲಿತ ಕುಟುಂಬದಿಂದ ಭೂಮಿಯನ್ನು ಕಸಿದುಕೊಂಡಿದ್ದಾರೆ' ಎಂದು ಟೀಕಿಸಿದ್ದಾರೆ.



ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ಎಲ್ಲ ರಾಜ್ಯಗಳಲ್ಲೂ ರಾಜ್ಯಪಾಲರು ಕಿರುಕುಳ ನೀಡುತ್ತಿದ್ದಾರೆ. ಕರ್ನಾಟಕದ ರಾಜ್ಯಪಾಲರ ನೋಟಿಸ್‌ನಲ್ಲಿ ಏನಿದೆ ಎನ್ನುವ ವಿವರ ಪಡೆದು, ವಕೀಲರೊಂದಿಗೆ ಚರ್ಚಿಸುವೆ

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ತನಿಖೆ ಏಕೆ? ರಾಜ್ಯಪಾಲರ ಸಮರ್ಥನೆ

ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡುವ ಅವಶ್ಯ ಏಕೆ ಎಂಬ ಬಗ್ಗೆ ರಾಜ್ಯಪಾಲರು ನೀಡಿದ ಸಮರ್ಥನೆ ಹೀಗಿದೆ...



1 ಮುಡಾದಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆಗೆ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದಲ್ಲಿ ಸಮಿತಿ ನೇಮಿಸುವ ತೀರ್ಮಾನವನ್ನು ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಹಗರಣದ ಕುರಿತು ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗುತ್ತಿದ್ದಂತೆಯೇ ಏಕಸದಸ್ಯ ವಿಚಾರಣಾ ಆಯೋಗ ನೇಮಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಬದಲಿ ನಿವೇಶನಗಳ ಹಂಚಿಕೆ, ಜಮೀನು ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬುದನ್ನು ಏಕಸದಸ್ಯ ಆಯೋಗದ ಕಾರ್ಯವ್ಯಾಪ್ತಿ ನಿಗದಿಪಡಿಸಿರುವ ಆದೇಶವೇ ದೃಢಪಡಿಸುತ್ತದೆ. ಐಎಎಸ್ ಅಧಿಕಾರಿಯ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿ, ದಿಢೀರನೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಏಕಸದಸ್ಯ ಆಯೋಗ ರಚಿಸುವ ಮೂಲಕ ಸರ್ಕಾರವು ಮುಡಾದಲ್ಲಿ ಪ್ರಭಾವಿ ವ್ಯಕ್ತಿಗಳಿಂದ ಹಗರಣ ನಡೆದಿರುವುದನ್ನು ಒಪ್ಪಿಕೊಂಡಿದೆ. ಈ ವಿಚಾರದಲ್ಲಿ ಸಂಪುಟದ ನಿರ್ಧಾರವು ವಿಶ್ವಾಸ ಮೂಡಿಸುವಂತಿಲ್ಲ.

2 ಯಾರ ವಿರುದ್ಧ ಆರೋಪಗಳು ಕೇಳಿಬಂದಿವೆಯೋ ಅದೇ ವ್ಯಕ್ತಿ ತನಿಖೆಯ ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಚಲಾಯಿಸಬಾರದು ಎಂಬುದು ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿ ತೀರ್ಮಾನವಾಗಿದೆ. ಈ ಪ್ರಕರಣದಲ್ಲಿ ಗಂಭೀರ ಆರೋಪಗಳು ಕೇಳಿಬಂದಿದ್ದು, ದೂರಿನಲ್ಲಿರುವ ದಾಖಲೆಗಳು ಆರೋಪವನ್ನು ಮೇಲ್ನೋಟಕ್ಕೆ ದೃಢಪಡಿಸುವಂತಿದ್ದರೂ ತನಿಖೆಗೆ ಅನುಮತಿ ಕೋರಿರುವ ಅರ್ಜಿ ತಿರಸ್ಕರಿಸುವಂತೆ ಸಲಹೆ ನೀಡಲು ಸಂಪುಟ ಸಭೆಯು ಕೈಗೊಂಡಿರುವ ನಿರ್ಣಯವು ವಿವೇಕರಹಿತವಾದುದು.

3 ಸಿದ್ದರಾಮಯ್ಯ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ದೂರುಗಳು, ಜತೆಗಿರುವ ದಾಖಲೆಗಳು, ಸಂಪುಟದ ಸಲಹೆ ಮತ್ತು ಕಾನೂನು ತಜ್ಞರ ಅಭಿಪ್ರಾಯಗಳನ್ನು ಪರಿಶೀಲಿಸಲಾಗಿದೆ. ಈ ವಿಷಯದಲ್ಲಿ ಎರಡು ಬಗೆಯ ಅಭಿಪ್ರಾಯಗಳಿವೆ. ಆರೋಪಗಳು ಮತ್ತು ಅವುಗಳ ಜತೆಗಿರುವ ದಾಖಲೆಗಳು ಅಪರಾಧ ನಡೆದಿರುವುದನ್ನು ದೃಢಪಡಿಸುವಂತಿವೆ ಎಂಬುದು ನನಗೆ ಮನವರಿಕೆಯಾಗಿದೆ. ಈ ಕುರಿತು ತಟಸ್ಥ, ವಸ್ತುನಿಷ್ಠ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವುದು ಅತ್ಯಂತ ಅಗತ್ಯವಾಗಿದೆ.

ಕಾನೂನು ತಜ್ಞರು ಏನಂತಾರೆ?

'ತನಿಖೆಗಷ್ಟೇ ಅನುಮತಿ'



ಈಗ ಅನುಮತಿ ನೀಡಿರುವುದು ತನಿಖೆಗಷ್ಟೇ, ವಿಚಾರಣೆಗಲ್ಲ. ಯಾವುದೇ ಸಾರ್ವಜನಿಕ ಸೇವಕನ ವಿರುದ್ಧ ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಅವಶ್ಯಕ ಎಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ 17ಎ ಸೆಕ್ಷನ್ ಹೇಳುತ್ತದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಾರ್ವಜನಿಕ ಸೇವಕ, ರಾಜ್ಯಪಾಲ ಸಕ್ಷಮ ಪ್ರಾಧಿಕಾರ. ಮುಖ್ಯಮಂತ್ರಿ ವಿರುದ್ಧ ತನಿಖೆ ನಡೆಸಲು ಇದ್ದ ತಡೆ ಈಗ ನಿವಾರಣೆಯಾಗಿದೆ ಅಷ್ಟೇ. ಹೀಗಾಗಿ ಟಿ.ಜೆ. ಅಬ್ರಹಾಂ ನೀಡಿರುವ ದೂರಿನ ಪ್ರಕಾರ ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸಬಹುದು.

ಬಿ.ವಿ.ಆಚಾರ್ಯ, ಹಿರಿಯ ವಕೀಲ

'ತನಿಖೆಯ ಹಾದಿ ಮುಕ್ತ'

ಮುಖ್ಯಮಂತ್ರಿಯವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಮತ್ತು ಭಾರತೀಯ ನಾಗರಿಕ ಸುರಕ್ಷತಾ ಸಂಹಿತೆ ಅಡಿ ತನಿಖೆ ನಡೆಸಲು ರಾಜ್ಯಪಾಲರು ಪೂರ್ವಾನುಮತಿ ನೀಡಿದ್ದಾರೆ. ಈಗ ತನಿಖೆಯ ಹಾದಿ ಮುಕ್ತವಾಗಿದೆ. ನ್ಯಾಯಾಲಯವು ನೇರವಾಗಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶಿಸಬಹುದು ಅಥವಾ ಅಪರಾಧ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 202ರ ಅಡಿಯಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆಯೂ ಸಂಬಂಧಿಸಿದ ತನಿಖಾ ಸಂಸ್ಥೆಗೆ ಆದೇಶಿಸಬಹುದು. ತನಿಖೆ ಆರಂಭವಾದ ಬಳಿಕ ದೂರುದಾರರ ಪಾತ್ರ ಸಾಕ್ಷಿಗೆ ಸೀಮಿತವಾಗುತ್ತದೆ. ಸರ್ಕಾರ ಮತ್ತು ಆರೋಪಿತರ ಮಧ್ಯೆ ಪ್ರಕರಣ ಮುಂದುವರಿಯುತ್ತದೆ. ತನಿಖೆ ಪೂರ್ಣಗೊಂಡು ಆರೋಪಪಟ್ಟಿ ಸಲ್ಲಿಸಬೇಕಾದರೆ ತನಿಖಾ ಸಂಸ್ಥೆಯೇ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ರಾಜ್ಯಪಾಲರಿಂದ ಅನುಮತಿ ಪಡೆದು, ಮುಂದುವರಿಯಬೇಕಾಗುತ್ತದೆ.



ಕಾನೂನಿನ ಸಿಂಧುತ್ವ ಮತ್ತು ತಾಂತ್ರಿಕ ಅಂಶಗಳ ಆಧಾರದಲ್ಲಿ ರಾಜ್ಯಪಾಲರ ನಿರ್ಧಾರವನ್ನು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಿದ್ದರಾಮಯ್ಯ ಅವರಿಗೆ ಅವಕಾಶವಿದೆ. ರಾಜ್ಯಪಾಲರ ತೀರ್ಮಾನವು ಬಾಹ್ಯ ಪ್ರಭಾವದಿಂದ ಕೂಡಿದೆ ಅಥವಾ ದುರುದ್ದೇಶದಿಂದ ಕೂಡಿದೆ ಅಥವಾ ಮಾರ್ಗಸೂಚಿಗಳನ್ನು ಪಾಲಿಸದೇ ಕೈಗೊಳ್ಳಲಾಗಿದೆ ಎಂಬುದನ್ನು ಸಾಬೀತುಪಡಿಸಲು ಸಾಧ್ಯವಾದರೆ ಕಾನೂನು ಹೋರಾಟದಲ್ಲಿ ಮೇಲುಗೈ ಸಾಧಿಸಬಹುದು. ರಾಜ್ಯಪಾಲರ ಆದೇಶಕ್ಕೆ ತಡೆಯಾಜ್ಞೆ ಅಥವಾ ಅದನ್ನು ರದ್ದುಗೊಳಿಸುವ ಆದೇಶ ಬರುವವರೆಗೂ ತನಿಖೆಯ ಹಾದಿ ಅಬಾಧಿತವಾಗಿರುತ್ತದೆ.

ಸಿ.ಎಚ್. ಹನುಮಂತರಾಯ, ಹಿರಿಯ ವಕೀಲ

ಒಪಿಡಿ ಸ್ಥಗಿತ: ಆರೋಗ್ಯ ಸೇವೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಪ್ರಕರಣ ಖಂಡಿಸಿ, ರಾಜ್ಯದಾದ್ಯಂತ ಖಾಸಗಿ ಆಸ್ಪತ್ರೆಗಳ ಜತೆಗೆ ಕೆಲ ಸರ್ಕಾರಿ ಆಸ್ಪತ್ರೆಗಳೂ ಒಪಿಡಿ (ಹೊರ ರೋಗಿ ವಿಭಾಗ) ಸೇವೆಯನ್ನು ಶನಿವಾರ ಸ್ಥಗಿತ ಮಾಡಿದ್ದರಿಂದ ಆರೋಗ್ಯ ಸೇವೆಯಲ್ಲಿ ವ್ಯತ್ಯಯವಾಯಿತು.

ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ ನೇತೃತ್ವದಲ್ಲಿ ವೈದ್ಯರು ಮುಷ್ಕರ ನಡೆಸಿದರು. ಶನಿವಾರ ಬೆಳಿಗ್ಗೆ 6 ಗಂಟೆಯಿಂದ ಭಾನುವಾರ ಬೆಳಿಗ್ಗೆ 6 ಗಂಟೆಯವರೆಗೆ ಖಾಸಗಿ ಆಸ್ಪತ್ರೆಗಳ ಒಪಿಡಿ ಬಂದ್ ಆಗಿದ್ದರೆ, ಕೆಲ ಸರ್ಕಾರಿ ಆಸ್ಪತ್ರೆಗಳ ಒಪಿಡಿಗಳಲ್ಲಿ ವೈದ್ಯರಿಲ್ಲದೆ ಸೇವೆಯಲ್ಲಿ ವ್ಯತ್ಯಯವಾಯಿತು. ವಿಕ್ಟೋರಿಯಾ ಸೇರಿ ಇನ್ನೂ ಕೆಲ ಸರ್ಕಾರಿ ಆಸ್ಪತ್ರೆಗಳ ಒಪಿಡಿ ವಿಭಾಗ ಮುಚ್ಚಿದ್ದವು.

ಒಪಿಡಿ ಸೇವೆ ಸ್ಥಗಿತಗೊಳಿಸುವುದಾಗಿ ಖಾಸಗಿ ಆಸ್ಪತ್ರೆಗಳು ಘೋಷಿಸಿದ್ದರೂ ಮಾಹಿತಿ ಕೊರತೆಯಿಂದ ಕೆಲವರು ಚಿಕಿತ್ಸೆಗಾಗಿ ಬಂದು, ಮರಳಿದರು. ತುರ್ತು ಸೇವೆಗಳು ಮಾತ್ರ ಲಭ್ಯವಿದ್ದರಿಂದ ಆಸ್ಪತ್ರೆಗಳಲ್ಲಿ ವೈದ್ಯರ ಸಂಖ್ಯೆಯೂ ಕಡಿಮೆಯಿತ್ತು. ತುರ್ತು ಚಿಕಿತ್ಸೆ ವಿಭಾಗದಲ್ಲಿ ಅಗತ್ಯ ಸೇವೆ ಒದಗಿಸಲಾಯಿತು.

7ನೇ ಪುಟ ನೋಡಿ

'ಉದ್ಯಮಿ ರಾಣಾ ಹಸ್ತಾಂತರಕ್ಕೆ ಅಭ್ಯಂತರವಿಲ್ಲ'

ವಾಷಿಂಗ್ಟನ್ (ಪಿಟಿಐ): 2008ರಲ್ಲಿ ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹವ್ವುರ್ ಹುಸೇನ್ ರಾಣಾ (63) ಅವರನ್ನು ಭಾರತಕ್ಕೆ ಹಸ್ತಾಂತರ ಮಾಡಬಹುದು ಎಂದು ಅಮೆರಿಕದ ನ್ಯಾಯಾಲಯವೊಂದು ಹೇಳಿದೆ.



ರಾಣಾ

ಭಯೋತ್ಪಾದಕ ದಾಳಿ ಸಂಬಂಧ ರಾಣಾ ಅವರನ್ನು ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಬೇಕಿದೆ. ಲಷ್ಕರ್–ಎ–ತಯ್ಯಬಾ ಭಯೋತ್ಪಾದಕ ಸಂಘಟನೆಯು ಈ ದಾಳಿ ನಡೆಸಿತ್ತು.

ಭಾರತ-ಅಮೆರಿಕದ ನಡುವಿನ ಹಸ್ತಾಂತರಕ್ಕೆ ಸಂಬಂಧಿಸಿದ 'ಒಪ್ಪಂದವು ರಾಣಾ ಅವರನ್ನು ಹಸ್ತಾಂತರಿಸುವಕ್ಕೆ ಅನುಮತಿ ನೀಡುತ್ತದೆ' ಎಂದು ಅಮೆರಿಕದ ಮೇಲ್ಮನವಿ ನ್ಯಾಯಾಲಯವೊಂದು ಗುರುವಾರ ಹೇಳಿದೆ.

3ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಭಾನುವಾರದ ಉಷ್ಣಾಂಶ 32° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ಮುನ್ಸೂಚನೆ: ಸೋಮವಾರ 32° 22° | ಮಂಗಳವಾರ 32° 22° | ಬುಧವಾರ 31° 22°

ಸೂರ್ಯೋದಯ: 6:07 ಸೂರ್ಯಾಸ್ತ : 6:39 | ಚಂದ್ರೋದಯ: ಸಂ. 4:46 ಚಂದ್ರಾಸ್ತ: ಬೆ. 3:19 | ಶನಿವಾರದ ಹವಾಮಾನ : ಗರಿಷ್ಠ 32° ಕನಿಷ್ಠ 22°

ಭಾನುವಾರದ ಪುರವಣಿ ಓದಿರಿ

‘ಎಕ್ಸ್’ ಮೂಲಕ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದ್ದ ಸಚಿವ ಕೃಷ್ಣ ಬೈರೇಗೌಡ

ರಸ್ತೆ ರಿಪೇರಿ; ರಾತ್ರಿ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಣ್ಣಪಾಳ್ಯದ ಬಳಿ ರಸ್ತೆ ಗುಂಡಿ ಮುಚ್ಚುವಂತೆ ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸಚಿವ ಕೃಷ್ಣಬೈರೇಗೌಡ ಅವರು ‘ಎಕ್ಸ್’ ಖಾತೆಯಲ್ಲಿ ಮನವಿ ಮಾಡಿದ್ದ ಬೆನ್ನಲ್ಲೇ ಬಿಬಿಎಂಪಿ ಗುಂಡಿ ಮುಚ್ಚುವ ಕಾರ್ಯಕ್ಕೆ ಮುಂದಾಗಿದೆ.

ವೀರಣ್ಣಪಾಳ್ಯದಿಂದ ಹೆಬ್ಬಾಳ ವೃತ್ತದ ಕಡೆಗಿನ ಸರ್ವಿಸ್ ರಸ್ತೆಯಲ್ಲಿ ಆ. 18 ರಿಂದ 21ರವರೆಗೆ ಕಾಮಗಾರಿ ನಡೆಯಲಿದೆ. ಇದರಿಂದಾಗಿ ಸರ್ವಿಸ್ ರಸ್ತೆಯಲ್ಲಿ ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ವಾಹನ ಸಂಚಾರ ಬಂದ್ ಮಾಡಲಾಗಿದೆ. ವೀರಣ್ಣಪಾಳ್ಯ ಕಡೆಯಿಂದ ಹೆಬ್ಬಾಳದ ಕಡೆಗೆ ಸಂಚರಿಸುವ ವಾಹನಗಳು ಹೊರ ವರ್ತುಲ ರಸ್ತೆಯ ಮುಖ್ಯ ಪಥವನ್ನೇ ಪರ್ಯಾಯ ರಸ್ತೆಯಾಗಿ ಬಳಸಬೇಕು ಎಂದು ನಗರ ಸಂಚಾರ ಪೊಲೀಸರು ತಿಳಿಸಿದ್ದಾರೆ.



ಸಚಿವ ಕೃಷ್ಣಬೈರೇಗೌಡ ಅವರ ಎಕ್ಸ್ ಖಾತೆಯ ಸ್ಕ್ರೀನ್ ಶಾಟ್

ಬ್ಯಾಟರಾಯನಪುರ ಕ್ಷೇತ್ರದ ಶಾಸಕರೂ ಆದ ಸಚಿವರು, ರಸ್ತೆ ಗುಂಡಿ ಮುಚ್ಚಲು ಬಿಬಿಎಂಪಿ, ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ 3 ದಿನದ ಹಿಂದೆ ‘ಎಕ್ಸ್’ನ ಖಾತೆಯಲ್ಲಿ ಮನವಿಮಾಡಿದ್ದರು. ಜೊತೆಗೆ ಸಾರ್ವಜನಿಕರೊಬ್ಬರು ಕಳಿಸಿದ್ದ ವಿಡಿಯೊ ಹಂಚಿಕೊಂಡಿದ್ದರು.

ಸಚಿವರ ಈ ಪೋಸ್ಟ್‌ಗೆ ಹಲವರು ಪ್ರತಿಕ್ರಿಯಿಸಿದ್ದರು. ಸಚಿವರೇ ಮನವಿ ಮಾಡಿಕೊಂಡಿರುವುದಕ್ಕೆ ಆಕ್ಷೇಪವೂ ವ್ಯಕ್ತವಾಗಿತ್ತು. ಒಂದು ಪೋಸ್ಟ್‌ನಲ್ಲಿ ‘ಅಧಿಕಾರಿಗಳನ್ನು ಬೇಡಿಕೊಳ್ಳುವಷ್ಟು ಸಚಿವರು ಅಸಹಾಯಕರಾಗಿದ್ದಾರೆ’ ಎಂದು ಲೇವಡಿ ಮಾಡಲಾಗಿತ್ತು.

‘ಇದು, ಸಾರ್ವಜನಿಕ ಅಭಿಪ್ರಾಯದ ಪೋಸ್ಟ್. ಟೀಕೆಗಳು ಸಹಜ. ಎಲ್ಲಕ್ಕೂ ಉತ್ತರಿಸಲಾಗದು. ಜನರ ಅಭಿಪ್ರಾಯದ ಬಗ್ಗೆ ಗಮನ ಸೆಳೆಯಲಾಗಿದೆ. ಅಧಿಕಾರಿಗಳು ಎಚ್ಚೆತ್ತು ಕೆಲಸ ಮಾಡಬೇಕು. ಪರಿಹಾರ ಸಿಗುವುದು ಮುಖ್ಯ’ ಎಂದು ಸಚಿವರು ಪ್ರತಿಕ್ರಿಯಿಸಿದ್ದರು.

ರಸ್ತೆ ಗುಂಡಿಗಳಿಗೆ ಪೂಜೆ!

ಬೆಂಗಳೂರು: ನಗರದ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವಂತೆ ಒತ್ತಾಯಿಸಿ ಪ್ರತಿಭಟಿಸಲು ಸಾರ್ವಜನಿಕರು ವಿನೂತನ ಮಾರ್ಗ ಕಂಡುಕೊಂಡಿದ್ದು, ಜಯನಗರದ ನಿವಾಸಿಯೊಬ್ಬರು ರಸ್ತೆ ಗುಂಡಿಗಳಿಗೆ ಪೂಜೆ ಸಲ್ಲಿಸಿದ್ದಾರೆ.

‘ಗುಂಡಿ ಬಿದ್ದ ರಸ್ತೆಗಳಲ್ಲಿ ವಾಹನಗಳ ಅಪಘಾತಗಳಿಂದಾಗಿ ಸಾವು–ನೋವು ಸಂಭವಿಸುತ್ತಿವೆ. ಈ ಬಗ್ಗೆ ಸಂಬಂಧಪಟ್ಟವರಿಗೆ ದೂರು ಸಲ್ಲಿಸಿದರೂ ಸಮಸ್ಯೆ ಬಗೆಹರಿದಿಲ್ಲ. ಹಾಗಾಗಿ ರಸ್ತೆಯ ಗುಂಡಿಗಳಿಗೆ ಹೂವು, ಅರಿಶಿನ, ಕುಂಕುಮ ಹಾಕಿ, ಪೂಜೆ ಸಲ್ಲಿಸುವ ಮೂಲಕ ಸಂಬಂಧಪಟ್ಟವರ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದ್ದೇವೆ’ ಎಂದು ನಿವಾಸಿಯೊಬ್ಬರು ಹೇಳಿದ್ದಾರೆ.

ನೀರು ತುಂಬಿದ ಗುಂಡಿಯ ಸುತ್ತ ದಂಪತಿ ಪೂಜೆ ಸಲ್ಲಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಆನೆ ದಂತ ವಶ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆ ಅಧಿಕಾರಿಗಳು ಶನಿವಾರ ಆನೆ ದಂತಗಳನ್ನು ಸಾಗಿಸುತ್ತಿದ್ದ ಮೂವರನ್ನು ರಾಜಾನುಕುಂಟೆ ಸಮೀಪದ ಸಾದರಹಳ್ಳಿ ಬಳಿ ಬಂಧಿಸಿದ್ದಾರೆ.

ಮೋಹನ್, ಆನಂದ್ ಹಾಗೂ ವಿನೋದ್ ಬಂಧಿತ ಆರೋಪಿಗಳು. ಬಂಧಿತರಿಂದ 8.5 ಕೆ.ಜಿ. ಮತ್ತು 9 ಕೆ.ಜಿ ತೂಕದ ಎರಡು ಆನೆ ದಂತಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ.

ಖಚಿತ ಮಾಹಿತಿ ಆಧರಿಸಿ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಆರೋಪಿಗಳು ತೆರಳುತ್ತಿದ್ದ ವಾಹನ ತಡೆದು ತಪಾಸಣೆ ನಡೆಸಿದರು. ‘ಎರಡು ಆನೆ ದಂತಗಳು ಪತ್ತೆಯಾಗಿವೆ. ಈ ಸಂಬಂಧ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀಗಂಧ ಮರಗಳ್ಳನ ಸೆರೆ

ಬೆಂಗಳೂರು: ಶ್ರೀಗಂಧದ ಮರಕಳ್ಳತನ ಮಾಡುತ್ತಿದ್ದ ಮಾಗಡಿ ರಸ್ತೆಯ ಸೀಗೆಹಳ್ಳಿ ಗೇಟ್ ನಿವಾಸಿ ವೆಂಕಟೇಶ್ ಎಂಬಾತನನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿ, ₹7 ಲಕ್ಷ ಮೌಲ್ಯದ 26 ಕೆ.ಜಿ. ತೂಕದ ಶ್ರೀಗಂಧದ ತುಂಡುಗಳನ್ನು ಜಪ್ತಿ ಮಾಡಿದ್ದಾರೆ.

ದೊಡ್ಡತೋಗೂರು ಗ್ರಾಮದ ನಿವಾಸಿ ಜಮೀನಿನಲ್ಲಿ ಬೆಳೆದಿದ್ದ 20 ಅಡಿ ಎತ್ತರದ ಗಂಧದಮರ ಕಳ್ಳತನವಾಗಿತ್ತು. ಪೊಲೀಸರು, ವಿಟ್ಟಸಂದ್ರ ಗ್ರಾಮದ ರಸ್ತೆಯಲ್ಲಿ ವೆಂಕಟೇಶ್‌ನನ್ನು ಬಂಧಿಸಿ, ಕೊಡಲಿ, ಗರಗಸ ಹಾಗೂ ಕಾರು ವಶಪಡಿಸಿಕೊಂಡಿದ್ದಾರೆ.

₹4 ಲಕ್ಷ ಮೌಲ್ಯದ ಲ್ಯಾಪ್‌ಟಾಪ್‌ಗಳ ವಶ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮನೆ ಮತ್ತು ಕಚೇರಿಗಳ ಬೀಗ ಒಡೆದು ಚಿನ್ನಾಭರಣ ಹಾಗೂ ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲಸೂರು ನಿವಾಸಿಗಳಾದ ಅಜಯ್ (24), ಅರುಣ್ (23), ಪ್ರತಾಪ್ (25), ಸಾಯಿ ಅಲಿಯಾಸ್ ಅಪ್ಪು (25) ಬಂಧಿತರು. ಇವರಿಂದ 24 ಗ್ರಾಂ ತೂಕದ ಚಿನ್ನಾಭರಣ, ₹ 4 ಲಕ್ಷ ಮೌಲ್ಯದ 11 ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜೂನ್ 30ರಂದು ಕಂಪನಿಯೊಂದರ ಬಾಗಿಲು ಮುರಿದು 20 ಲ್ಯಾಪ್‌ಟಾಪ್, ಯುಪಿಎಸ್ ಇನ್ವರ್ಟರ್ ಬ್ಯಾಟರಿಗಳು, ವಾಷ್ ರೂಂ ಟ್ಯಾಪ್‌ಗಳು ಹಾಗೂ ಇತರ ವಸ್ತುಗಳನ್ನು ಕಳವು ಮಾಡಿದ್ದರು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಹಲಸೂರಿನ ಲಕ್ಷ್ಮೀಪುರ ಹರಿಶ್ಚಂದ್ರ ಸ್ಮಶಾನದ ಬಳಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕೃತ್ಯದಲ್ಲಿ ಮತ್ತಿಬ್ಬರು ಭಾಗಿಯಾಗಿರುವುದು ಗೊತ್ತಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮರ ಬಿದ್ದು ಆಟೊ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ವಿಜಯನಗರದ ಎಂಸಿ ಲೇಔಟ್ ಬಳಿ ಆಟೊ ಮೇಲೆ ಮರ ಬಿದ್ದು, ಚಾಲಕ ಮೃತಪಟ್ಟಿದ್ದಾರೆ. ಎಂ.ಸಿ.ಲೇಔಟ್‌ನ ಶಿವರುದ್ರಯ್ಯ (49) ಮೃತಪಟ್ಟವರು.

ಶಿವರುದ್ರಯ್ಯ ಅವರ ತಲೆ, ಕಾಲಿಗೆ ತೀವ್ರ ಪೆಟ್ಟಾಗಿತ್ತು. ಸ್ಥಳಕ್ಕೆ ಧಾವಿಸಿದ ಬಿಬಿಎಂಪಿ ಅಧಿಕಾರಿಗಳು ಅವರನ್ನು ಸಮೀಪದ ಆಸ್ಪತ್ರೆಗೆ ಬಳಿಕ, ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದರು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ನಿಯಮಾವಳಿಗಳ ಪ್ರಕಾರ, ಮೃತನ ಕುಟುಂಬ ಸದಸ್ಯರಿಗೆ ಪರಿಹಾರ ಬಿಡುಗಡೆ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆ. 12 ರಂದು ಸರ್ವಜ್ಞ ನಗರದ ಜೈ ಭಾರತ್ ನಗರದಲ್ಲಿ ಮರ ಬಿದ್ದು ನಾಲ್ವರು ಶಾಲಾ ಮಕ್ಕಳು ಸೇರಿ 6 ಮಂದಿ ಗಾಯಗೊಂಡಿದ್ದರು.

ಕ್ಯಾಂಟರ್ ಚಕ್ರ ಹರಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ಕ್ಯಾಂಟರ್‌ವೊಂದು ಡಿಕ್ಕಿ ಹೊಡೆದು ದ್ವಿಚಕ್ರವಾಹನದಲ್ಲಿ ತೆರಳುತ್ತಿದ್ದ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುವೆಂಪುನಗರ ನಿವಾಸಿಗಳಾದ ಮಹಮದ್ ಶಾಹಿಬ್ ರಾಝಾ (21), ರೆಹಾನ್ ರಾಝಾ (14) ಸ್ಥಳದಲ್ಲೇ ಮೃತಪಟ್ಟಿದ್ದು, ತಾಸಿಮಾ (47) ಅವರಿಗೆ ಗಾಯಗಳಾಗಿವೆ. ಕ್ಯಾಂಟರ್ ವಶಕ್ಕೆ ಪಡೆದು ಚಾಲಕ ಸುರೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿ ಸಮೀಪ ದ್ವಿಚಕ್ರ ವಾಹನದಲ್ಲಿ ಮಹಮದ್ ಶಾಹಿಬ್ ರಾಝಾ, ರೆಹಾನ್ ಹಾಗೂ ತಾಸಿಮಾ ಬರುತ್ತಿದ್ದರು. ಎದುರಿನಿಂದ ಬಂದ ಹಾಲೊಬ್ಲಾಕ್ ತುಂಬಿದ್ದ ಕ್ಯಾಂಟರ್ ವಾಹನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ.

ಬೈಕ್‌ನಿಂದ ಕೆಳಗೆ ಬಿದ್ದ ಇಬ್ಬರ ಮೇಲೆ ಕ್ಯಾಂಟರ್ ಚಕ್ರ ಹರಿದಿದೆ, ಇಬ್ಬರನ್ನು 100 ಮೀಟರ್‌ವರೆಗೂ ಎಳೆದೊಯ್ದಿದೆ. ರಸ್ತೆ ಬದಿ ನಿಲ್ಲಿಸಿದ್ದ ಏಳು ದ್ವಿಚಕ್ರ ವಾಹನಗಳು ಹಾಗೂ ಎರಡು ಕಾರು ಜಖಂ ಆಗಿವೆ. ಚಾಲಕ ಅಲ್ಲಿಂದ ತಪ್ಪಿಸಿಕೊಂಡು ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾರೆ. ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವ್ಹೀಲಿ: ಮೇಲ್ಸೇತುವೆಯಿಂದ ವಾಹನ ಎಸೆದು ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ವ್ಹೀಲಿ ನಡೆಸಿ ತೊಂದರೆ ಉಂಟು ಮಾಡುತ್ತಿದ್ದ ಯುವಕರ ವರ್ತನೆಯಿಂದ ಸಿಟ್ಟಿಗೆದ್ದ ವಾಹನ ಸವಾರರು ಎರಡು ದ್ವಿಚಕ್ರ ವಾಹನಗಳನ್ನು ಮೇಲ್ಸೇತುವೆಯಿಂದ ಕೆಳಗೆ ಎಸೆದಿದ್ದಾರೆ.

ಬೆಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿ ಅಡಕಮಾರನಹಳ್ಳಿಯ ಮೇಲ್ಸೇತುವೆ ಬಳಿ ಈ ಘಟನೆ ನಡೆದಿದೆ. ಈ ದೃಶ್ಯವನ್ನು ಸಾರ್ವಜನಿಕರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದೆ.

ಹೆದ್ದಾರಿಯಲ್ಲಿ ವ್ಹೀಲಿ ಮಾಡುತ್ತಿದ್ದ ಯುವಕನೊಬ್ಬ ವಾಹನವೊಂದಕ್ಕೆ ಡಿಕ್ಕಿ ಹೊಡೆದಿದ್ದಾನೆ. ಇದರಿಂದ ಸಿಟ್ಟಿಗೆದ್ದ ಇತರೆ ಸವಾರರು ಆತನ ಮತ್ತು ವ್ಹೀಲಿ ಮಾಡುತ್ತಿದ್ದ ಮತ್ತೊಬ್ಬ ಯುವಕನ ದ್ವಿಚಕ್ರ ವಾಹನವನ್ನೂ ಕೆಳಗೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರವಷ್ಟೇ ಕೆಂಪೇಗೌಡ ವಿಮಾನ ನಿಲ್ದಾಣ ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದ 44 ಯುವಕರನ್ನು ಯಲಹಂಕ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದರು.

32 ಹೋಂಡಾ ಆ್ಯಕ್ಟಿವಾ ವಶ; ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಮನೆ ಮತ್ತು ಕಚೇರಿಗಳ ಮುಂದೆ ನಿಲ್ಲಿಸಿದ್ದ ಹೋಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನಗಳ ಕಳ್ಳತನ ಮಾಡಿದ್ದ ಇಬ್ಬರು ಯುವಕರನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ.ನಗರ ನಿವಾಸಿ ಕಿಶೋರ್ ಮತ್ತು ವಿನಯ್ ಬಂಧಿತರು. ಇವರಿಂದ ₹22 ಲಕ್ಷ ಮೌಲ್ಯದ 32 ವಾಹನ ವಶಕ್ಕೆ ಪಡೆಯಲಾಗಿದೆ.

ಆ.5ರ ರಾತ್ರಿ ಜೆ.ಪಿ.ನಗರದ 3ನೇ ಹಂತದ ಈಸ್ಟ್ ಎಂಡ್ ರಸ್ತೆಯಲ್ಲಿ ವಾಹನ ಕಳವಾಗಿತ್ತು. ಈ ಪ್ರಕರಣದ ತನಿಖೆಯಡಿ ಇಬ್ಬರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಹಲವೆಡೆ ವಾಹನ ಕೃತ್ಯ ಎಸಗಿರುವುದನ್ನು ಅವರು ಒಪ್ಪಿಕೊಂಡರು ಎಂದು ತಿಳಿಸಿದ್ದಾರೆ.

ತಮಿಳುನಾಡಿನ ವೇಲೂರು ಜಿಲ್ಲೆ ಪೆರಣಂಪಟ್ಟು ಗ್ರಾಮ ಮತ್ತು ಜೆ.ಪಿ. ನಗರದ ವಿವಿಧೆಡೆ ವಾಹನಗಳನ್ನು ಅಡಗಿಸಿಡಲಾಗಿತ್ತು. ವಿನಯ್ ಸಂಬಂಧಿಕರು ಚೆನ್ನೈನಲ್ಲಿದ್ದ ಕಾರಣ ಅಲ್ಲಿ ಸುಲಭವಾಗಿ ಮಾರಾಟ ಮಾಡಬಹುದು ಎಂದು ಅಲ್ಲಿಗೆ ಹೋಗಲಾಗಿತ್ತು. ಹೊಂಡಾ ಆ್ಯಕ್ಟಿವಾ ವಾಹನಗಳ ಕೀ ಸುಲಭವಾಗಿ ತೆಗೆಯಬಹುದಾಗಿದ್ದ ಕಾರಣಕ್ಕೇ ಈ ವಾಹನಗಳನ್ನೇ ಕದ್ದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಗಳ ತಂದೆ– ತಾಯಿ ಕೂಲಿ ಕಾರ್ಮಿಕರು. ಡ್ರಗ್ಸ್, ಮದ್ಯ ಸೇವನೆ ಚಟಕ್ಕೆ ದಾಸರಾಗಿರುವ ಆರೋಪಿಗಳು, ವಾಹನಗಳನ್ನು ಕದ್ದು, ಮಾರಾಟ ಮಾಡಿ ಬಂದ ಹಣದಲ್ಲಿ ಮೋಜು, ಮಸ್ತಿ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ. ಇಬ್ಬರ ಬಂಧನದಿಂದ ದ್ವಿಚಕ್ರ ವಾಹನ ಕಳವಿನ 13 ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಿದ್ದಾರೆ.

ಏಳು ವಾಹನ ವಶ: ತಲಘಟ್ಟಪುರ ಠಾಣಾ ವ್ಯಾಪ್ತಿಯ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪಿಯನ್ನು ಬಂಧಿಸಿ, ₹ 5 ಲಕ್ಷ ಮೌಲ್ಯದ ಏಳು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಠಾಣಾ ವ್ಯಾಪ್ತಿಯ ಮಂಜುನಾಥ ನಗರದ ನಿವಾಸಿಯೊಬ್ಬರ ವಾಹನ ಕಳವಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಆಧರಿಸಿ ಆರೋಪಿಯನ್ನು ಬಂಧಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಮನವಿ: ನಗರದಲ್ಲಿ ಮನೆ ಕಳವು ಪ್ರಕರಣಗಳು ಹೆಚ್ಚುತ್ತಿದ್ದು, ನಿವಾಸಿಗಳು ದೂರದ ಊರುಗಳಿಗೆ ಹೋಗುವಾಗ, ಸ್ಥಳೀಯ ಠಾಣೆಗೆ ಮಾಹಿತಿ ನೀಡಬೇಕು. ಇದರಿಂದ ನಿಗಾ ಇಡಲು ಸಾಧ್ಯವಾಗುತ್ತದೆ ಎಂದು ಪೊಲೀಸ್ ಕಮಿಷನರ್ ಕೋರಿದ್ದಾರೆ.

ವಿಚಾರ ಸಂಕಿರಣದಲ್ಲಿ ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಕ್ ಅಭಿಮತ

‘ಕಾರ್ಮಿಕರು ಲಭ್ಯರಿದ್ದಾರೆ, ಕೆಲಸ ಸಿಗುತ್ತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಕಾರ್ಮಿಕರ ಲಭ್ಯತೆ ಹೆಚ್ಚುತ್ತಿದೆ. ಅವರಿಗೆ ಮೊದಲಿನಂತೆ ಕೆಲಸ ಸಿಗುತ್ತಿಲ್ಲ. ಹೀಗಾಗಿ, ದೇಶದ ಆರ್ಥಿಕತೆ ಬೆಳವಣಿಗೆ ಆಗುತ್ತಿದೆ ಎಂದು ತೋರಿದರೂ, ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ’ ಎಂದು ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಕ್ ಹೇಳಿದರು.

ನಾಗರಿಕರ ವೇದಿಕೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಆರ್ಥಿಕ ಅಸಮತೆ ಮತ್ತು ಸಾಮಾಜಿಕ ದುಷ್ಪ-ರಿಣಾಮಗಳು’ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಮೊದಲು ಕೆಲಸದ ಲಭ್ಯತೆ ಇತ್ತು. ಹೀಗಾಗಿ ಕಾರ್ಮಿಕರಿಗೆ ವಾರದಲ್ಲಿ

> **ದೇಶ ಮುಂದುವರೆಯುತ್ತಿದೆ ಎಂದು ಕೇಂದ್ರ ಸರ್ಕಾರ ದೊಡ್ಡ ಸಂಖ್ಯೆಗಳನ್ನು ತೋರಿಸುತ್ತದೆ. ಆದರೆ ಆರ್ಥಿಕ ಅಸಮಾನತೆ ಬಗ್ಗೆ ಯಾರೂ ಚರ್ಚಿಸುತ್ತಿಲ್ಲ**
>
> **ಪ್ರೊ.ಬಿ.ಕೆ.ಚಂದ್ರಶೇಖರ್**
> ಅಧ್ಯಕ್ಷ, ನಾಗರಿಕರ ವೇದಿಕೆ

ನಾಲ್ಕು ದಿನ ಕೆಲಸ ಸಿಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ದೇಶದಾದ್ಯಂತ ಲಭ್ಯವಿರುವ ಕಾರ್ಮಿಕರಿಗೆ ವಾರದಲ್ಲಿ ಮೂರು ದಿನವಷ್ಟೇ ಕೆಲಸ ಸಿಗುತ್ತಿದೆ. ಹೀಗಾಗಿ, ಹೆಚ್ಚು ಜನರು ಬಡತನಕ್ಕೆ ಜಾರುತ್ತಿದ್ದಾರೆ. ಆರ್ಥಿಕ ಅಸಮಾನತೆ ಅಂತರ ನೂರು ವರ್ಷಗಳಲ್ಲೇ ಗರಿಷ್ಠ ಮಟ್ಟಕ್ಕೆ ತಲುಪಿದೆ. ಕೇಂದ್ರ ಸರ್ಕಾರವು ಇಂತಹ ದತ್ತಾಂಶಗಳನ್ನು ಹೇಳುವುದಿಲ್ಲ’ ಎಂದರು.



ವಿಚಾರ ಸಂಕಿರಣದಲ್ಲಿ ಪ್ರೊ.ಬಿ.ಕೆ.ಚಂದ್ರಶೇಖರ್, ಗೀತಾ ಸೇನ್, ಆರ್.ಇಂದಿರಾ, ಪ್ರಭಾತ್ ಪಟ್ನಾಯಕ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು ಐಐಎಂನ ಪ್ರಾಧ್ಯಾಪಕಿ ಗೀತಾ ಸೇನ್, ‘ದೇಶದ ಆರ್ಥಿಕ ಬೆಳವಣಿಗೆ ಉತ್ತಮವಾಗಿದೆ, ಜಿಡಿಪಿ ಏರುತ್ತಿದೆ ಎಂದು ಸರ್ಕಾರ ಹೇಳುತ್ತದೆ. ಸರ್ಕಾರ ತನಗೆ ಅನುಕೂಲಕರ ಅಂಕಿ–ಅಂಶಗಳನ್ನಷ್ಟೇ ಹೇಳುತ್ತಿದೆ. ಪ್ರತಿಕೂಲವಾದ ಅಂಕಿಅಂಶಗಳನ್ನು ಮುಚ್ಚಿಡುತ್ತಿದೆ. ಶೇ 50ರಷ್ಟಿರುವ ಕಡುಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. ಸುಮಾರು 8,000 ಮಂದಿ ಅತಿಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ’ ಎಂದರು.

‘ಬಡವರು ಅಪೌಷ್ಟಿಕತೆಯಿಂದ ಕುಬ್ಜರಾಗುತ್ತಿದ್ದಾರೆ. ಮೇಲ್ಮಧ್ಯಮ ವರ್ಗ ಮತ್ತು ಅತಿಶ್ರೀಮಂತರು ದಷ್ಟಪುಷ್ಟವಾಗಿಬೆಳೆಯುತ್ತಿದ್ದಾರೆ.ಭೌತಿಕವಾಗಿಇದು ವಿಚಿತ್ರ ಎನಿಸಬಹುದು. ಆದರೆ, ಈ ರೀತಿ ಎರಡು ಭಿನ್ನ ಜನಾಂಗಗಳು ರೂಪುಗೊಳ್ಳಲು ಆರ್ಥಿಕ ಅಸಮಾನತೆಯೂ ಕಾರಣ’ ಎಂದು ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಂ.ಎನ್.ಪಾಣಿನಿ ಕಳವಳ ವ್ಯಕ್ತಪಡಿಸಿದರು.

ರಾಮಯ್ಯ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರೊಫೆಸರ್ ಆರ್.ಇಂದಿರಾ ವಿಚಾರ ಸಂಕಿರಣ ನಡೆಸಿಕೊಟ್ಟರು.



ಐಪಿಎಸ್ ವರ್ಗಾವಣೆ

ಬೆಂಗಳೂರು: ಹುದ್ದೆ ನಿರೀಕ್ಷೆಯಲ್ಲಿದ್ದ ಐಪಿಎಸ್ ಅಧಿಕಾರಿ ಚೇತನ್ ಸಿಂಗ್ ರಾಥೋಡ್ ಅವರನ್ನು ಸಿಐಡಿ ವಿಭಾಗದ ಡಿಐಜಿಯಾಗಿ ನೇಮಿಸಲಾಗಿದೆ

ವರ್ಗಾವಣೆ ಆದವರು: ಸಿಮಿ ಮರಿಯಂ ಜಾರ್ಜ್– ಜಂಟಿ ನಿರ್ದೇಶಕಿ, ವಿಧಿವಿಜ್ಞಾನ ಪ್ರಯೋಗಾಲಯ, ಬೆಂಗಳೂರು; ಯಶೋಧಾ ಒಂಟಿಗೋಡಿ– ಎಸ್‌ಪಿ, ಕಾರಾಗೃಹಗಳು; ಎಂ.ರಾಜೀವ್– ಎಸ್‌ಪಿ, ಆಂತರಿಕ ಭದ್ರತಾ ವಿಭಾಗ; ರಂಜಿತ್ ಕುಮಾರ್ ಬಂಡಾರು– ಎಸ್‌ಪಿ, ಚಿತ್ರದುರ್ಗ.



ನಗರದಲ್ಲಿ ಇಂದು

ಕುಂದಾಪ್ರ ಕನ್ನಡ ಹಬ್ಬ: ಬೆಳಿಗ್ಗೆ 10ಕ್ಕೆ ಸಾಂಸ್ಕೃತಿಕ ಹಬ್ಬ: ಬಯಲಾಟ, ಜಿತೇಂದ್ರ ಶೆಟ್ಟಿ, ಅಣ್ಣಯ್ಯ ಕುಲಾಲ್ ಉಳ್ತೂರು, ತಾರೆಯರ ಜೊತೆ ಮಾತುಕವಿತೆ, ಬೆಳಿಗ್ಗೆ 11ಕ್ಕೆ ಡಾನ್ಸ್ ಕುಂದಾಪ್ರ ಡಾನ್ಸ್, ಬೆಳಿಗ್ಗೆ 11.15ಕ್ಕೆ ನುಡಿ ಚಾವಡಿ: ಬಾಲಕೃಷ್ಣ ಶೆಟ್ಟಿ, ಮಧ್ಯಾಹ್ನ 12ಕ್ಕೆ ಹಂದಾಡ್ತಾ ನೆಗ್ಯಾಡಿ: ಪ್ರಸ್ತುತಿ: ಮನು ಹಂದಾಡಿ ಮತ್ತು ತಂಡ, ಮಧ್ಯಾಹ್ನ 1.30ಕ್ಕೆ ಪೆಟ್ ಒಂದೇ ಸ್ವರ ಬೇರೆ: ಚಂಡೆ–ಜಂಬೆ ಜುಗಲ್ಬಂದಿ: ಬೀಟ್ ಗುರೂಸ್, ಮಧ್ಯಾಹ್ನ 2.30: ಮಂದಾರ್ತಿ ಮಾದೇವಿ: ಪ್ರಸ್ತುತಿ: ನಂದಗೋಕಲ ಕಲಾವಿದರು, ಸಂಜೆ 4.30ಕ್ಕೆ ರಥೋತ್ಸವ, ಸಂಜೆ 5.30ಕ್ಕೆ ಸಮಾರೋಪ: ಅತಿಥಿಗಳು: ಮಾಲತಿ ಕೆ.ಹೊಳ್ಳ, ಉಪಸ್ಥಿತಿ: ಗುರುರಾಜ್ ಗಂಟಿಹೊಳೆ, ಕೆ.ಜಯಪ್ರಕಾಶ ಹೆಗ್ಡೆ, ಕೆ.ಪ್ರಕಾಶ ಶೆಟ್ಟಿ, ಉಪೇಂದ್ರ ಶೆಟ್ಟಿ, ಅಪ್ಪಣ್ಣ ಹೆಗ್ಡೆ, ಶಿವರಾಮ ಹೆಗ್ಡೆ, ಸಂಜೆ 7.30ಕ್ಕೆ ಸಂಗೀತ ಸಂಜೆ: ರವಿ ಬಸ್ರೂರು, ಆಯೋಜನೆ: ಕುಂದಾಪ್ರ ಕನ್ನಡ ಪ್ರತಿಷ್ಠಾನ, ಸ್ಥಳ: ವೈಟ್ ಪೆಟಲ್ಸ್, ಗೇಟ್ ಸಂಖ್ಯೆ 3, ಅರಮನೆ ಮೈದಾನ

‘ಹೂಲಿ ಶೇಖರ್ 70 ಹೂಲಿ ರಂಗ ಶಿಖರ’ ಅಭಿನಂದನಾ ಗ್ರಂಥ ಬಿಡುಗಡೆ: ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ವಿಜಯಮ್ಮ, ಪ್ರಾಸ್ತಾವಿಕ ನುಡಿ: ಶ್ರೀನಿವಾಸ ಜಿ.ಕಪ್ಪಣ್ಣ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಗಣೇಶ ಕಾಸರಗೋಡು, ಎಂ.ಬಿ. ಜಯರಾಮ, ಕೆ.ಎಸ್. ಶ್ರೀಧರ್, ಪುಸ್ತಕ ಪರಿಚಯ: ಗಿರಿಜಾ ಶಾಸ್ತ್ರಿ, ಆಯೋಜನೆ: ಆಕೃತಿ ಕನ್ನಡ ಪ್ರಕಾಶನ, ಸ್ಥಳ: ಶಂಕರ ಫೌಂಡೇಶನ್, ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 10



ಟಿ.ಎಸ್. ನಾಗಾಭರಣ

ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಬೆಳ್ಳಿ ಮಹೋತ್ಸವ: ಉದ್ಘಾಟನೆ: ಬಿ.ವಿ.ನಾಗರತ್ನ, ಅತಿಥಿ: ಅರವಿಂದ್ ಕುಮಾರ್, ಅಧ್ಯಕ್ಷತೆ: ಎನ್.ವಿ. ಅಂಜಾರಿಯಾ, ಅನು ಶಿವರಾಮನ್, ಉಪಸ್ಥಿತಿ: ನರಹರಿ ಪ್ರಭಾಕರ್ ಮರಾಠೆ, ಕೆ.ಎಸ್. ಭರತ್ ಕುಮಾರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಕ್ರೆಸೆಂಟ್ ರಸ್ತೆ, ಬೆಳಿಗ್ಗೆ 10.30

‘ಐತಿಹಾಸಿಕವಾದ ಒಳಮೀಸಲಾತಿ ತೀರ್ಪು’ ಒಂದು ಮುನ್ನೋಟ: ಚಾಲನೆ: ಎಲ್.ಹನುಮಂತಯ್ಯ, ಅಧ್ಯಕ್ಷತೆ: ಕೆ.ಎಚ್. ಮುನಿಯಪ್ಪ, ಅತಿಥಿಗಳು: ಆರ್.ಬಿ.ತಿಮ್ಮಾಪುರ, ಎ.ನಾರಾಯಣಸ್ವಾಮಿ, ಎಚ್.ಆಂಜನೇಯ, ಎನ್. ಶ್ರೀನಿವಾಸ್, ಉಪಸ್ಥಿತಿ: ಆರ್.ಧರ್ಮಸೇನಾ, ಗಡ್ಡಂ ವೆಂಕಟೇಶ್, ಭೀಮರಾಜು, ಆಯೋಜನೆ: ಮಾದಿಗ ಪೊಲಿಟಿಕಲ್ ಫೋರಂ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

‘ಡಾ.ಬಾಬು ಕೃಷ್ಣಮೂರ್ತಿಯವರು ಬರೆದಿರುವ ಕ್ರಾಂತಿಕಾರಿ ಸ್ವಾತಂತ್ರ್ಯ ಯೋಧರ ಪುಸ್ತಕಗಳು’ ಕುರಿತು ವಿಚಾರಸಂಕಿರಣ: ಪ್ರಾಸ್ತಾವಿಕ ನುಡಿ: ವಿ. ನಾಗರಾಜ್, ಉಪನ್ಯಾಸ: ಬೆಳವಾಡಿ ಮಂಜುನಾಥ್, ಚಕ್ರವರ್ತಿ ಸೂಲಿಬೆಲೆ, ಜಿ.ಬಿ. ಹರೀಶ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ ಶತಮಾನೋತ್ಸವ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಗುರುರಾಜ ಕರಜಗಿ ಅವರ ‘ಸಾಕ್ಷಿ’ ಪುಸ್ತಕ ಬಿಡುಗಡೆ: ಮಲ್ಲೇಪುರಂ ಜಿ.ವೆಂಕಟೇಶ್, ಅತಿಥಿ: ಎಚ್.ಆರ್.ರಂಗನಾಥ್, ಅಧ್ಯಕ್ಷತೆ: ಯು.ಬಿ.ವೆಂಕಟೇಶ್, ಆಯೋಜನೆ: ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಬೆಂಗಳೂರು ಪೌರಾಣಿಕ ಯಕ್ಷ ಹಬ್ಬ: ‘ಮಗಧ ನೃಪಾಲ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಸ್ಥಳ: ತ್ರಿಗುಣಾತ್ಮಕ ಮಹಾಲಕ್ಷ್ಮಿ ಹುಳಿಮಾವು, ಮಧ್ಯಾಹ್ನ 2.30

> **‘24ರ ವಾರ್ಷಿಕ ಸಂಭ್ರಮ’, ‘ರಂಗಸ್ಥಳ–2024 ಹಾಗೂ ದತ್ತಿನಿಧಿ ಪ್ರಶಸ್ತಿಗಳ’ ಪ್ರದಾನ:** ಅತಿಥಿಗಳು: ಅಜಿತ್ ಕುಮಾರ್ ಹೆಗ್ಡೆ, ನಾಗರಾಜ ಶೇರೆಗಾರ್, ವಿಜಯನಾಥ ಹೆಗ್ಡೆ, ಲೋಕೇಶ್ ಕಾಯರ್ಗ, ಸುಬ್ರಾಯ ನಂದೋಡಿ, ಎಂ.ಆರ್. ರಾಜಶೇಖರ್, ವಕ್ವಾಡಿ ರಂಜಿತ್ ಕುಮಾರ್ ಶೆಟ್ಟಿ, ‘ರಂಗಸ್ಥಳ ಪ್ರಶಸ್ತಿ’ ಪುರಸ್ಕೃತರು: ದಯಾನಂದ ನಾಗೂರು, ಕೃಷ್ಣಮೂರ್ತಿ ಉರಾಳ, ‘ದತ್ತಿನಿಧಿ ಪ್ರಶಸ್ತಿ’ ಪುರಸ್ಕೃತರು: ರಾಜೀವ ಶೆಟ್ಟಿ ಹೊಸಂಗಡಿ, ಆಜ್ರಿ ಗೋಪಾಲ ಗಾಣಿಗ, ಪ್ರಭಾಕರ ಭಂಡಾರಿ ಕರ್ಕಿ, ಬಾಬು ನಾಯ್ಕ ಹೆಬ್ಬಾಬೈಲ್, ಆಯೋಜನೆ: ರಂಗಸ್ಥಳ ಯಕ್ಷಮಿತ್ರ ಕೂಟ, ಸ್ಥಳ: ವೇಣುಗೋಪಾಲಕೃಷ್ಣ ಸಮುದಾಯ ಭವನ, ಶ್ರೀಗಂಧಕಾವಲು, ನಾಗರಬಾವಿ, ಸಂಜೆ 4

ಸಮರ್ಪಣಾ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾನ ಕಾಡುಗೋಡಿ, ಸಂಜೆ 4


ಜೀವನ್ಮುಖಿ ಪತ್ರಿಕೆ ವಾರ್ಷಿಕೋತ್ಸವ, ‘ಜೀವನ್ಮುಖಿ ವಾರ್ಷಿಕ ಪ್ರಶಸ್ತಿ’ ಪ್ರದಾನ, ವಿಶೇಷ ಸ್ಮರಣ ಸಂಚಿಕೆ ಬಿಡುಗಡೆ, ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ಪ್ರದಾನ: ಪುರುಷೋತ್ತಮ ಬಿಳಿಮಲೆ, ಉದ್ಘಾಟನೆ: ಎಸ್.ಜಿ.ಸಿದ್ಧರಾಮಯ್ಯ, ಎಸ್.ಡಿ.ಶರಣಪ್ಪ, ಅಧ್ಯಕ್ಷತೆ: ಎಚ್.ಕೆ.ರಾಮು, ಪ್ರಶಸ್ತಿ ಪುರಸ್ಕೃತರು: ಅರವಿಂದ ಮಾಲಗತ್ತಿ, ಪಿ.ಮಲ್ಲಿಕಾರ್ಜುನಪ್ಪ, ಬಿ.ರತನ್, ಜೆ.ಸುರೇಂದ್ರ ನಾಯ್ಡು, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಜೀವನ್ಮುಖಿ ಕನ್ನಡ ಪಾಕ್ಷಿಕ ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30

‘ಬಾಯ್ ತುಂಬ ನಕ್ಬಿಡಿ’ ನಾಟಕ ಪ್ರದರ್ಶನ: ಸಂಜೆ 4.30ಕ್ಕೆ ರಚನೆ: ನಾಗವೇಣಿ ರಂಗನ್, ನಿರ್ದೇಶನ: ವನಿತಾ ರಂಗಾಯಣ, ಸಂಜೆ 7.30ಕ್ಕೆ ‘ಹಿಂಗ್ ಮಾಡಿದ್ರೆ ಹೆಂಗೆ’ ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ಬಾಪ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ

ಸಂಗೀತ ಕಛೇರಿ: ಗಾಯನ: ಹೆಮ್ಮಿಗೆ ಎಸ್. ಪ್ರಶಾಂತ್, ಪಿಟೀಲು: ಕೇಶವ ಮೋಹನ್‌ಕುಮಾರ್, ಮೃದಂಗ: ಸುನಾದ್ ಕೃಷ್ಣ ಮೈ, ಘಟ: ಬಿ.ಎಸ್. ರಘುನಂದನ್, ಆಯೋಜನೆ: ತ್ಯಾಗರಾಜ ಗಾನಸಭಾ, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

‘ರಾಜ್‌ರತ್ನ ಗಾನಯಾನ’ ಡಾ.ರಾಜ್ ಹಾಗೂ ಅವರ ಮಕ್ಕಳ ಚಿತ್ರಗಳ ಗೀತ ಗಾಯನ: ಅತಿಥಿಗಳು: ಭಾ.ಮ.ಹರೀಶ್, ಗಾಯತ್ರಿ, ಗಾಯನ: ಕುಮಾರ್ ಗಂಗೋತ್ರಿ, ಸಿರಿ ಚಂದ್ರಶೇಖರ್, ಅಜಿತ್ ಕೇಶವ್, ನಾಗರಂಜಿನಿ, ಶ್ರೀನಿವಾಸಮೂರ್ತಿ, ಸ್ಪರ್ಶ, ವಿನಯ್ ಶರ್ಮ ಮತ್ತು ತಂಡ, ನಿರೂಪಣೆ: ಅಕ್ಷತಾ ಅನೂಪ್, ಆಯೋಜನೆ: ಸ್ವರ ಮಾಧುರ್ಯಾ, ಸ್ಥಳ: ಯುವಪಥ ಸಭಾಂಗಣ, 31ನೇ ಅಡ್ಡರಸ್ತೆ, 4ನೇ ಬ್ಲಾಕ್ ಜಯನಗರ, ಸಂಜೆ 5.30

ಶ್ರೀರಾಘವೇಂದ್ರ ಗುರುಸಾರ್ವಭೌಮರ ಆರಾಧನಾಂಗ ‘49ನೇ ವಾರ್ಷಿಕೋತ್ಸವ’, ‘ಶ್ರೀಧೀರೇಂದ್ರ ದರ್ಶನ’ ಪುಸ್ತಕ ಬಿಡುಗಡೆ, ‘ಪರಿಮಳ ಪ್ರಶಸ್ತಿ’ ಪ್ರದಾನ: ಪುಸ್ತಕ ಬಿಡುಗಡೆ: ಸುವಿದ್ಯೇಂದ್ರತೀರ್ಥ ಶ್ರೀಪಾದ ಸ್ವಾಮೀಜಿ, ಸಾನ್ನಿಧ್ಯ: ವಿದ್ಯಾವಲ್ಲಭತೀರ್ಥ ಶ್ರೀಪಾದ ಸ್ವಾಮೀಜಿ, ಉದ್ಘಾಟನೆ: ಎಂ.ಎನ್. ವೆಂಕಟಾಚಲಯ್ಯ, ಅತಿಥಿ: ಎನ್. ಸಂತೋಷ್ ಹೆಗ್ಡೆ, ಪ್ರಶಸ್ತಿ ಪುರಸ್ಕೃತರು: ವಿ. ಶ್ರೀಶಾನಂದ, ರಮೇಶ್ ಅರವಿಂದ್, ಎಂ. ಮುತ್ತೂರಾಯ, ಎಚ್. ಡುಂಡಿರಾಜ್, ಎಸ್. ಅಹಲ್ಯ, ಶ್ಯಾಮಸುಂದರ್ ವಟ್ಟಂ, ಗಣೇಶ್ ಎಲ್. ಭಟ್, ಸುಧೀಂದ್ರ ಬಿಂದಗಿ, ಗಯಾ ರಾಮಚಾರ್ಯ, ಸರ್ವೇಶ ವಿಠಲದಾಸರು, ರುದ್ರಪಟ್ಟಣಂ ಎಸ್. ರಮಾಕಾಂತ್, ಎಚ್.ಕೆ. ವೆಂಕಟರಾಮ್, ಉಪಾಸನಾ ಮೋಹನ್, ಗೋಕುಲನಾಥ್, ಧರ್ಮೇಶ್, ರಾಜೇಶ್ ಬಾಯರಿ, ಆಯೋಜನೆ: ಪರಿಮಳ ಗೆಳೆಯರ ಬಳಗ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.45



ವೆಂಕಟಾಚಲಯ್ಯ

ಗುರುರಾಜರ ಆರಾಧನಾ ಮಹೋತ್ಸವ: ದಾಸವಾಣಿ: ಮೈಸೂರು ರಾಮಚಂದ್ರಾಚಾರ್ಯ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಗುರುರಾಘವೇಂದ್ರ ಸೇವಾ ಸಮಿತಿ, ಪ್ರಕಾಶನಗರ, ಸಂಜೆ 6

ಸುಧಾ–ಮಯೂರ ಓದಿರಿ

ಖಾಸಗಿ ವೈದ್ಯಕೀಯ ಕಾಲೇಜು ಶುಲ್ಕ: ಶೇ 10 ಹೆಚ್ಚಳಕ್ಕೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ 10ರಷ್ಟು ಶುಲ್ಕ ಹೆಚ್ಚಳ ಮಾಡಲು ವೈದ್ಯಕೀಯ ಶಿಕ್ಷಣ ಇಲಾಖೆಯು ಸಮ್ಮತಿಸಿದೆ.

ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಪ್ರತಿನಿಧಿಗಳು ಶೇ 15ರಿಂದ ಶೇ 20ರವರೆಗೆ ಶುಲ್ಕ ಹೆಚ್ಚಳಕ್ಕೆ ಬೇಡಿಕೆ ಸಲ್ಲಿಸಿದ್ದವು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಂಚಿಕೆ ಮಾಡುವ ಸರ್ಕಾರಿ ಕೋಟಾ ಸೀಟುಗಳಿಗೆ ₹1.40 ಲಕ್ಷ ಹಾಗೂ ಖಾಸಗಿ ಕೋಟಾದ ಸೀಟುಗಳಿಗೆ ₹11.88 ಲಕ್ಷ ನಿಗದಿ ಮಾಡಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರು ಹೇಳಿದ್ದಾರೆ.

ಕಳೆದ ವರ್ಷ ಈ ಶುಲ್ಕ ಕ್ರಮವಾಗಿ ₹1.28 ಲಕ್ಷ ಹಾಗೂ ₹9.94 ಲಕ್ಷ ಇತ್ತು. ಸರ್ಕಾರಿ ವೈದ್ಯ ಕಾಲೇಜುಗಳ ಶುಲ್ಕದಲ್ಲಿ ಬದಲಾವಣೆ ಇಲ್ಲ. ವಾರ್ಷಿಕ ₹50 ಸಾವಿರವೇ ಇರಲಿದೆ.

‘ರಾಣಾ ಹಸ್ತಾಂತರಕ್ಕೆ ಅಭ್ಯಂತರವಿಲ್ಲ’

ಒಂದನೇ ಪುಟದಿಂದ...

ರಾಣಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮೇಲ್ಮನವಿ ನ್ಯಾಯಾಲಯವು, ಜಿಲ್ಲಾ ಕೋರ್ಟ್ ಆದೇಶವನ್ನು ಎತ್ತಿಹಿಡಿಯಿತು.

ರಾಣಾ ಅವರು ಈಗ ಲಾಸ್ ಏಂಜಲೀಸ್ ಜೈಲಿನಲ್ಲಿದ್ದಾರೆ. ಅವರು ಪಾಕಿಸ್ತಾನ ಮೂಲದ ಅಮೆರಿಕದ ಭಯೋತ್ಪಾದಕ ಡೇವಿಡ್ ಹೆಡ್ಲಿ ಜೊತೆ ನಂಟು ಹೊಂದಿದ್ದಾರೆ ಎನ್ನಲಾಗಿದೆ. ಮುಂಬೈ ದಾಳಿಯ ಪ್ರಮುಖ ಸಂಚುಕೋರರಲ್ಲಿ ಡೇವಿಡ್ ಹೆಡ್ಲಿ ಕೂಡ ಒಬ್ಬ. ಈಗ ಕೋರ್ಟ್ ಆದೇಶವನ್ನು ಪ್ರಶ್ನಿಸುವ ಅವಕಾಶ ರಾಣಾ ಅವರಿಗೆ ಇದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ತ್ರೈಮಾಸಿಕ ನಿರ್ವಹಣೆ ನಿಮಿತ್ತ ಪೀಣ್ಯ ಉಪಕೇಂದ್ರದ ವ್ಯಾಪ್ತಿ ಪ್ರದೇಶಗಳಲ್ಲಿ ಭಾನುವಾರ ಬೆಳಿಗ್ಗೆ 9.30ರಿಂದ 3.30ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಆ ಪ್ರದೇಶಗಳು: ಎಚ್‌ಎಂಟಿ ರಸ್ತೆ, ಆರ್‌ಎನ್‌ಎಸ್ ಅಪಾರ್ಟ್ ಮೆಂಟ್, ಸಿಎಂಟಿಐ, ಬೋರಲಿಂಗಪ್ಪ ಗಾರ್ಡನ್, ಪೀಣ್ಯ ಠಾಣೆ ರಸ್ತೆ, ಟೆಲಿಫೋನ್ ಎಕ್ಸ್‌ಚೇಂಜ್, 6ನೇ ಕ್ರಾಸ್, ರಿಲಯನ್ಸ್ ಕಮ್ಯುನಿಕೇಷನ್, ಗಣಪತಿನಗರ ಮುಖ್ಯ ರಸ್ತೆ, ಪೊಲೀಸ್ ಠಾಣೆ ರಸ್ತೆ, ಚಾಮುಂಡಿಪುರ, ಮುನೇಶ್ವರ ದೇವಸ್ಥಾನ ರಸ್ತೆ, ಎಂಇಸಿ ಲೇಔಟ್, ಮಲಯಾಳಿ ಅತಿಥಿ ಗೃಹ ರಸ್ತೆ, ಕೆಎಚ್‌ಬಿ, ರಾಜೇಶ್ವರಿನಗರ, ಆಕಾಶ್ ಥಿಯೇಟರ್ ರಸ್ತೆ, ಫ್ರೆಂಡ್ಸ್ ಸರ್ಕಲ್, ವಿಜ್ಞಾನ ಪಬ್ಲಿಕ್ ಸ್ಕೂಲ್ ರಸ್ತೆ. ಭೈರವೇಶ್ವರ ನಗರ, ಬ್ಯಾಂಕ್ ಕಾಲೋನಿ, 6ನೇ ಮುಖ್ಯ ರಸ್ತೆ, ವಿಭಾಗ ರಸ್ತೆ, ಯುಕೊ ಬ್ಯಾಂಕ್ ರಸ್ತೆ, ಥರ್ಲಾಕ್ ರಸ್ತೆ, 7ನೇ ಮುಖ್ಯ ರಸ್ತೆ, 3ನೇ ಹಂತ, ರಾಜಗೋಪಾಲ ನಗರ, ಕಸ್ತೂರಿ ಬಡಾವಣೆ, ಜಿಕೆಡಬ್ಲ್ಯೂ ಲೇಔಟ್, ಬೈರವೇಶ್ವರ ನಗರ, ಇಎಸ್‌ಐ ಆಸ್ಪತ್ರೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World
Brokers excuse.
Genuine Party Contact
9108133206

Hebbal

BDA 60 x 40, Site 511 East Face, Rajivgandhinagar, NTI PH2, Kodigehalli. Call- 6364712736

Sites

Arkavathi Layout

55X100 PROPERTY For Sale at Arkavathi Latout, Srirampura (Revenue Title). Contact: 7676900174 6363496142

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

AVAILABLE BDA SITES BANASHANKARI 6th- 4th Block 30x40- W/F Near R.V. Architecture College 7th Block Near RVK School 30x40-S/F, 20x30-E/F- 9535575774/ 9343668888

SALE BDA Site No.1367 30x40 BSK 6th Phase 7th Block West facing direct No broker owner 9844270806

'AVAILABLE' BANASHANKARI 6TH Stage,5th Block 40x60,W/F, 3RD Block 40x60, S/F, Owner Meeting :9741296957

BDA 2100 Sft. SE Corner Clean Site, 1150 Sft. Margin Land, Behind Kamakya Depot. 9591566166.

BEL Layout

40*60 PLOT for sale SF BBMP A Katha 40 ft road Rs 10200/- negotiable BEL Layout near East West College. Contact: 9916826976.

30*50 PLOT for sale WF BBMP A Katha 40 ft road Rs 11750/- BEL Layout near Karnataka Bank. Contact :9916826976.

Bannerghatta Road

NISARGA LAYOUT of Nirman Shelter's 40x60 Site`(East) BMRDA approved at Jigani Koppa gate- Jagruthi Estates -9972535002/ 9341280002.

Hosur Road

PLOTS,VILLAS FOR Sale. SWARNA SUBIKSHAA HOMES. Plots from 17 Lakhs* Villas from 28 Lakhs* From Hosur 4.5kms. HNTDA, RERA Approved. Municipal Corporation Limit. Contact 95 85 900 007

J P Nagar

66X51 NORTH Facing B Khata Site 7th phase JPNagar Gouravanagar, suitable PG Rental, Houses, Apartments. 8500/- Psft Nego. Immediate Regn. Mallesh- 9743865623

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Kanakapura Road

SITE FOR SALE Judicial Layout Kanakapura Road 50x80 Corner & BSK 6th Stage 30x40 Call: 9449830618/ 8660800061

SALE 3660 sft. corner site BMRDA approved excellent Vasthu in gated community Near Art of Living Hqrs. Call 8660840328.

Kempegowda Layout

NADAPRABHU KEMPEGOWDA Layout 1st block K sector 30x40 W/F 82 lakhs,9th block D sector 80x65 South west corner commercial site ₹6500/-.and Vishveshwaraiah Layout 3rd block 40x60 E/F.Contact: 9686469799

FOR SALE: BDA Approved sites in middle of Kempegowda Layout at KNS ANIRVAN, different sizes (1400/ 2650/ 2930/3280 Sqft) Price: Rs. 6500/- Sqft. Contact: 9880535558

BDA KEMPEGOWDA LAYOUT 50X80 COMMERCIAL DOUBLE ROAD EAST FACING, CONTACT OWNER: 9663005859/ 9449556869

BDA KEMPEGOWDA LAYOUT 50×80 COMMERCIAL DOUBLE ROAD NEAR 300 FEET ROAD OWNER CONTACT: 7899570235

BDA KEMPEGOWDA LAYOUT 40X60 COMMERCIAL SITE SALE EAST FACING CONTACT: OWNER 9035151657

35X40 CORNER Revenue Site Sale "40ft" Road Opposite Podar School Near Kempeygowda Layout 5000/-: 9731652042

Magadi Road

BHARATH NAGAR 2nd Stage North Face 30X50 Magadi Road Bangalore-91 Rs. 10900/- Slightly Negotiable: 9845550606

Mysore Road

"CONTACT FOR Buying/ Selling BMRDA Approved Sites near BigBanyan Tree/ Hejjala/ Bidadi Areas. Call: 9845178335"

Nagarabhavi

NAGARABAVI, MALLATHAHALLI village, ITI employees Co-operative Society 30x40`site No.753 16000/-`&.418 15000/-`final both South facing for sale, Krishna: 9845059328

Nelamangala

"30X50 SOUTH facing Site for sale`@ Nelamangala Rashi Developers close`to 'D'Mart, Tumkur Highway. 9845268611"

BEL NAGARUR Layout BMRDA Site SALE: 30'x60' N/F 40' Road Near BGS Medical College Hospital. 9632813065/8884444634

Rajajinagar

***RAJAJINAGAR* 5TH** Block 68th cross 1517sqft South Facing Rs.23500/- sqft Slightly Negotiable. Contact: 9686469799

Rajarajeshwari Nagar

RAJARAJESHWARI NAGAR Ideal Homes 50x80, 70x96, 80x120. BEML 40x60, 50x80 and Commercial Building, Banashankari 6th Stage 30x40, 40x60, 50x80. 94484-83699

RMV

SALE 1800 Sqft Residential property, near RMV club, Dollars Colony, Bangalore. Excellent Location. Interested parties contact:- 8105122220.

Sahakarnagar

SAHAKAR NAGAR, C Block - 1287 SQFT North-East Corner Site for SALE. No Brokers, Please Call: 9448589729.

Sanjaynagar

RMV BHOOPASANDRA BDA Site 29'x57'=1650Sqft East, 40' Road, off Kalpana Chawla Road, 3.15Crore Owner: 9980555558

Tumkur Road

URGENT SITE SALE 60x40 Include 1BHK, Makali Alur Road, Unibic Factory 2100/- sqft. 9632330007/ 9986420007.

TWO 30*50 sites adjacent in BDA approved BLUEJAY SUNSHINE layout for sale. Contact 9845018867.

Vishweshwariah Layout

AVAILABLE 5TH Block Vishweshwariah Layout 30X40 BDA Site Good Location Near by Vidyaniketan School: 9844603127

SALE 30X40-SITE Number 1682 Visvesvaraya Layout 2nd Block East Facing Near Kengeri Satellite Club Call:9980066939

"30X40 RESIDENCIAL CONVERSION BBMP SITE SALE ARUNACHALAM LAYOUT, NEAR 100 FEET ROAD VISHVESHWARAIAH LAYOUT- 9845143579"

"VISWESHWARAIAH 4TH- BLOCK 50x80 80 feet Road Sami-Commercial suitable Hospital, genuine buyer Contact: 7259675150"

"VISHVESHWARAIAH 1ST Block 50x80 North 40ft Road,parallel to 80ft Road near Shirckey circle. 9886908408"

Vidyaranyapura

VIDYARANYAPURA HMT Layout 40X60 BDA APPROVED Site Excellent Location 40 Feet Road For Sale, Call:9341260828

AVAILABLE SITE For SALE 40x60 West Facing, MS.Palya, Near Sambhram College, Bangalore. Contact: 9611135365.

Yeshwanthpur

SALE TUMKUR- ROAD, BDA 50x125 Commercial Site, West facing 200ft road, Near Orion mall, Metro cash'and'carry. OWNER- 9900276199.

Hegganahalli

PLOT FOR Sale 160 ft x 100 ft East facing for Outright Sale @ Hegganahalli cross, Bangalore- 560091. Contact: 9900287834/ 9448377834.

House

Basaweshwaranagar

SALE: GROUND 2BHK FIRST FLOOR 3 BHK, 2 CAR PARKING WITH BANK LOAN 1,88,00,000/- 8660820155

J P Nagar

J.P.NAGAR 3RD Phase 45x55, North, Roadhit Property, 3 BHK 2`unit House 27,000/-`Sft. Final, full cheque payment- 9845059328.

Rajajinagar

30X50, EAST With 2 Old Houses Rajajinagar 2nd Stage, Full Cheque Payment Brokers Excuse:9448508410

Vijayanagar

FOR SALE Prime BDA East facing property, RPC Layout, Vijayanagar II Stage, 1350 sqft. Owner: 9008910999.

Vishweshwariah Layout

20X30 TRIPLEX 4BHK Building for SALE, (2 Year Old Building) BDA Property, SMV Layout, 3rd Block. Rs.1.35 Cr. Negotiate. Call: 7411893279

Vidyaranyapura

SEMI FURNISHED Independent 4 BHK Duplex House, Garage -2400 sft- South facing Prime Location :9449059015

Flat

Banashankari



TATA PROMONT
Launching a New Tower Features 3 & 4BHK Ranging from 2380 Sqft To 3000 Sqft Price Starting from 2.90Cr
9916190157

J P Nagar

FLAT FOR Sale Near J P Nagar Metro Station. 66 Lakhs. Sarakki Homes. 9663676464

Nagarabhavi

FLATS FOR-SALE @ Nagarabavi Circle 2 & 3 BHK Ready to Move.1KM From Metro Station Call:9845066608 9538828808

Rajarajeshwari Nagar

R.R NAGAR NEW HOUSE SALE (G+4 Floors), 2 BHK per Floor with lift, fully furnished, ready to move, N/E corner site. Owner 9035464075

Sadashiva Nagar

SALE 2BHK 711Sft FLAT SANJAYNAGAR Close to MS Ramiah College Reasonable Price. Contact OWNER: 7400160159

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Uttarahalli

3/4 BHK New Luxurious Flat Sale, A khatha Ready-move 75L/ 1cr. carparking, cauvery. Vaasthu. 9844394444, 9019110623.

Commercial Land

Mysore Road

60x40 BDA SITE



COMMERCIAL SITE FOR SALE @ Nadaprabhu Kempegowda Layout Adjacent to 300 ft. Pheripheral Ring Road, Rs 8750 per sqft. Fixed. **Call: 9900040216**

Commerical

Multiple Locations

"COMMERCIAL SITES & Buildings Banashankari 2nd Stage, Jayanagar, J.P.Nagar. for more details Call: 9845286505"

Vishweshwariah Layout

"VISHVESHWARAIAH 6TH Block KLE Law college 80`feet Road 50x80 North 100% Vasthu site. 9448432633"

Real Estate Agents

Hosur Road

REAL ESTATE AGENTS !! Wanted for a Leading Plots & Villas Developer at Hosur . ATTRACTIVE INCENTIVES. Contact : 7070702919

Farm House/ Land/ Resorts

Devanahalli

NANDI HILLS rd 1/2 acre converted eKhata 15 fully furnished AC rooms garden sale 9Cr non-nego Ph: 9677002197

Electronic City

5700 SQFT South West residential land for sale 650 meters from Electronic City main road, clear tittles with compound.price 3000/ sqft. Contact: 9916777777

Industrial & Factory

Peenya



FOR RENT: 18000 sq.ft Newly constructed East facing Ground + 3 floors Ground 65 HP, 1st 50HP, 2nd 50 HP with lift 1000 kg at **PEENYA 1st stage**, near TVS cross.
Ph: 9448398678,9886577211

Residential/ Commercial

Devanahalli

1100 SQFT BIAAPA Approved Plot Sale at Military officers society Devenahalli Rs 3300000. M 9752121223

Konanakunte

5 BHK BBMP A Khata 30x50 West Facing Doctor's Colony Main Road Konanakunte Bangalore 560062 Rs 2.00Crs Negotiable Genuine Buyer's Contact 9449852743

Singsandra

FOR SALE 55×50- 2750 Sqft Site Between Singasandra Bus Stop & Hosa Rd Metro Station, Suitable For PG Building, Rs.8200/- Per Sqft, Contact-09900004901

REAL ESTATE BUYING

Commerical

Out-Station

WANTED SITE KIADB or Commercial suitable for Hotel building at MYSORE. Call- 9845001628, 7483445170 7760118279.

Industrial & Factory

Mysore Road

WANTED INDUSTRIAL Land With Building 15000 to 20000Sft At Mysore Road Kumbalgodu Surrounding Areas Call VERNA DEVELOPERS, MG Road. 9916310226/ 9353128035

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED BDA & BBMP SITES Anjanapura Banashankari 6th Stage, BCC & BCMC Layout, JP Nagar 8th 9th Phase Vishweshwaraiah Layout, Contact : 9845298419

HRBR Layout

HRBR- WANTED Clear Titled Site 50x80/ 40x60 For Purchase. Sellers Contact:- 9886026969/ 9731614500. Agents Excuse

Kanakapura Road

WANTED BDA SITE Anjanapura, Banashankari 6`Stage, JP.Nagar 9th, BCCHS, BCMC, Gubblala Doddakallasandra. Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

GODOWN/ KITCHEN Space of 5000 sqft available for Rent in Neelasandra, near Rose garden bus stop. Contact: 9844079596/ 9686210975.

Industrial And Factory

BANNERAGTTA ROAD Near Honeywell 5000 Sft.Commercial space ideal for Godown/Industry RCC`Building 20 feet height with 20 HP Power for`Rent 60/- sft. -9739995042.

KANAKAPURA ROAD, Harohalli Industrial area 3rd Phase, 11000Sft. Industrial Shed/ Godown for Rent, Ready Occupation- 9108982314

AVAILABLE OF Industrial Shed of 95000 sqft at Soukya Road, Whitefield. Contact: 9341234288/ 9663224353/ 9845417487.

Godown

2000 SFT Commercial Space For Rent OnChamrajpete 5th Main.Ideal For Godown/Office. Contact: 9845000643/ 9740066372/ 9980542350

Accommodation Wanted

House

ACCOMMODATION WANTED, 2 BHK &.`3 BHK house's for Company Guest house in J.P.Nagar, Jayanagar on`Rent full building -9739995042

JOB OPPORTUNITIES

Engg/ Production Technical

CONVERGENT TECHNOLOGIES INDIA PVT LTD
Is looking to hire **SALES ENGINEERS** having 1-3 yrs experience with diploma/ B.E degree in Electrical & Electronics only. Interested applicants can reach out with their CVs to-
gopal@convergenttech.in
Mobile: 9844441782
www.convergenttech.in

REQUIRED EXPERIENCED CIVIL ENGINEERS for a Reputed Construction Co. Contact: 94490-53904, Mail: kmc185km@gmail.com

General

OFFICE ASSISTANT (Male) SSLC/PUC/Degree, Salary Rs.15000 to 18000 Per month. For Immediate appointment contact: 9980322157 Email: accounts@ newindiaelectricals.com, Walk-In:- New India Electricals Ltd, J.C.Road Bangalore-02

REQUIRED CANDIDATES for Supervisors, Fine Dining Restaurant at 80' feet Road, Indiranagar, Bengaluru. Candidates should speak Kannada, English & Telugu, Timely Attractive salaries + Employees benefits, Direct Recruitment. Contact: 9966455888, 9573202020

EARN MORE than Rs: 50,000/- per month, Part/ Full time, Age above 30 Years. 9343616020

Marketing & Sales

WANTED EXPERIENCED Sales Girls to work at HEERA JEWELLERS at Frazer Town, Bangalore. Cell: 9019929424, Mailid: heeramartbangalore@ gmail.com

Wanted

REQUIRED STORE Keeper for Swastik Ceramics Co & Age Limit 23-35 Years. Location Jayanagar 5th Block Contact 9741040290



Multiple Vacancy

LTG INFRASTRUCTURE LIMITED
Immediately hiring the below positions for Bangalore Location

Head - Tenders & Contracts (Getting in New Govt., Private Civil Projects)
Qualification: B.E/B.Tech/Dip-Civil
Experience: 5 to 10 yrs

Retired Bank Employee (Nationalized Banks only)
Qualification: Any Graduate / PG, Exp – 26+ yrs/ Retired
Experience: In all Bank works, Loan sections, BG's LC's, etc.

Manager Accounts (From Construction & Realestate)
Qualification: B. Com / M. Com / other professional courses
Experience: 10 to 15 yrs

Business Developement / Liasioning Officer (Relevant Exp in Realestate & Construction)
Qualification: Any Graduate/PG
Experience: 3 to 10 yrs

Sr Engineer/Jr Engineer- Civil
Qualification: B.E/B.Tech/Dip-Civil
Experience: 3 to 10 yrs (Buildings, Plotted Developments, Others)

Interested candidates may please send their resume to **hrm@ltgindia.com** or Call **99860 41188**

Teachers/ Professors

POORNAPRAJNA EDUCATION CENTRE®
No.1, 9th 'B' Cross, Yelahanka New Town, Bengaluru -560064
We invite applications for the following positions:

I. High School Section: Instructor
Vocational Training in Electricals and Electronics
Applicants should be Diploma in Electricals and Electronics, should have at least three years experience but freshers are welcome to apply.

II. Primary School Section: Lady Candidates
1. English and Social Science Teacher
Applicants should have B.A and B.Ed degrees with fluency in English language. Candidates with three to five years' experience will get preference
2. Art/Craft Teacher
Applicants should have Bachelor's degree in Fine Arts (BFA) or a Diploma in Fine Arts with three to five years of teaching experience at primary/High school level but freshers are welcome to apply.
3 .Laboratory Assistant
Applicants should be Science graduates with fluency in English language. Candidates with three to five years of experience are preferred but freshers are welcome to apply.

III. Pre-Primary Section
A.V. & Library Teacher
Applicants should have a degree in Computer application or a Diploma in Computer Science with fluency in English language . Lady candidates with two to three years experience will get preference but freshers are welcome to apply.
Apply to Honorary Secretary, within 2 weeks
Send to E-mail : ppecps@yahoo.com
Website: www.ppecynk.org
Ph : 080 – 42033482


LITTLE LILLYS Education Society Requires Graduate/ Post Graduate Teachers for Coordinator & Computer for Higher Primary, High School, Salary: 2.5 Lakhs to 3.5 Lakhs Contact: 9731558585/ 9535498177

WANTED BE /Diploma /ITI in Electrical, Electronics Mechanical to take part time /Full time Diploma Day & Evening classes and M.A, B.A, B.Sc B.Ed, for English and Social for High school classes, Marketing Executive. Contact personally with resume, original documents. Nadgir Institute, Near Modi Hospital, Rajajinagar, Bangalore-560010. Ph: 23387333, 8867065525, 9731721446.

Hospital & Medical Jobs

FPA INDIA requires LAB TECHNICIAN for clinic @ Peenya. Bengaluru candidates apply. Recruitment reflects our commitment to safety protection of children and young people. Email: bengaluru@fpaindia.org

SALE BUILDING



G+5 Consist of 20 single BHK, 4 SINGLE RK, G FLOOR PARKING WITH MODERN ALL FACILITIES
RENT INCOME 3.89L
SHIRDI SAI LAYOUT, KUNDALAHALLI
7353779800, 9886737977

WANTED PEDIATRICIAN and Female GYNAECOLOGIST, Attractive Salary. @ DECCAN HOSPITAL, Opp. KSRTC Depot, Ashwini Extension, Chintamani-563125. Contact: 9845610288, 9845659988. email: deccanhospital@gmail. com

BUSINESS

Business to Business

Business

NEW HOME Interiors showroom in Varthur for sale. Please contact 7644984260

MATRIMONIAL

Grooms Wanted

Hindu

WANTED GROOM
Bride 37 years, 5.3 feet Height, Fair, Slim, Good Looking, Balajiga Caste, Govt. Official, Bangalore. Wanted Well Settled, Decent, Good Background, Qualified Groom.
Contact: 77603 92299 99454 43877

Brides Wanted

Muslim

MUSLIM BOY 1994 Born 5'10' high Class Family (BusinessMan) Bangalore Resident is looking for a Match (080-69072093)

MUSLIM BOY 1991 Born 5'9' MBBS MD Bangalore resident is looking for a match for early marriage (080-69103132)

MUSLIM BOY 1996 Born 5'10' M.Tech Working is USA Affluent Family is looking for match (080-69070609)

PUBLIC NOTICE

SWATHI EDUCATIONAL TRUST®
Veerabhadra Nagar, BSK 3rd stage, Bengaluru-85.
PUBLIC NOTICE
It is brought to the notice of general public that the **ST. ANN'S ENGLISH SCHOOL,** Veerabhadra nagara, Bengaluru run by this trust has changed its school name to **SRI ANNAPURNA VIDYAANIKETAN** with the permission from Government of Karnataka w.e.f. academic year 2024-25.

PUBLIC NOTICE
It is hereby notified that our client has agreed to purchase the schedule property mentioned herein from its owner /Director **Mr USMAN FAHEED** S/o Mr Usman Fayaz Registered in the name **M/s. CLEMET VENTURES Pvt. Ltd. NOW KNOWN AS UFX VENTURES Pvt.Ltd.** who are in physical possession of the schedule property. If any persons have any manner of right, title, interest or demand of any nature in or over the schedule property they are hereby requested to file their objections along with the photo copies of the documents on which they are relying with the undersigned within 15 days from the date of publication of this notice. Objections received thereafter will not be binding on our clients.

A Schedule Property (description of the entire property on which the commercial building is constructed):- All that piece and parcel of the BDA Site bearing No.820, situated at 80 feet road, VIII Block, Koramangala Extension, Bangalore, measuring East to West 24.40 meters and North to South 15.25 meters admeasuring 4000 Square Feet along with a commercial building constructed thereon and bounded as follows :-
East by : 80 Feet Road,
West by : Site No.823 & 824,
North by : Site No.821,
South by : Site No.819.

B Schedule Property:- (description of the commercial office space subject matter of sale) :- A commercial office space bearing Unit No.2, New BBMP /PIDNo.67-6-820/B comprising of the entire first floor of the commercial building known as **"Golden House"** constructed on the A Schedule Property, having a super built up area of 3254square feet (including proportionate share in common areas) with 29.85% undivided share, right, title an interest in the A Schedule Property measuring about 1194.12 Square Feet consisting of RCC roofing, concrete flooring, doors made of Honne Wood and Steel Windows with a car park area specifically earmarked in the basement/adjoining open space.

Date: 17/8/2024
Bangalore
GEETHA SHREE C
Advocate
#37/7, 2nd Cross, Kumara Park west, Sheshadripuram, Bangalore-560020

PERSONAL

Change of Name

CHANGE OF NAME
I, **SINDHU K CHUGH**, DOB: 11-05-1974, W/o Lakshya Kumar Chugh R/a Kristal Dolomite Apartments, Flat No. 2301, Narayana Nagar, Kanakapura Road, Bangalore - 560062. PAN card my name is mentioned as **SINDHU KESHAVAN.** Aadhar card my name is mentioned as **SINDHU K CHUGH.** I declare that **SINDHU K CHUGH and SINDHU KESHAVAN** both names belong to me only, vide affidavit dated 13-06-2024. Sworn before Notary L. Puttaraju, Bangalore.

CHANGE OF NAME
I, **PALLAVI SHANBHAG,** Resident at # 581 MIG, 2nd Floor, SFS-707, 3rd Cross, 4th Phase, Yelahanka New Town, Bangalore-560064, I have changed my name to **PALLAVI ADITYA SIDDHARTH** vide affidavit dated 17-08-2024, before notary L. Gopalakrishna, Bangalore. Henceforth I shall be called **PALLAVI ADITYA SIDDHARTH** only

Lost

ಕಳೆದು ಹೋಗಿದೆ
ನಾನು, ಎಂ.ವಿ.ಪದ್ಮ **w/o** ಕೆ.ಸಿ.ಮುನಿಕೃಷ್ಣಪ್ಪ, ಮಾರಸಂದ್ರ, ಹೆಸರಘಟ್ಟ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಆಲೂರು ಗ್ರಾಮದ ಸೈಟ್ ನಂ.11ರ, ಹಳೆ ಅಸೆಸ್ಮೆಂಟ್ ನಂ. 112, ಅಸೆಸ್ಮೆಂಟ್ ನಂ.116/1ಸಿ, ರ ಒಟ್ಟು 1320 ಚದರ ಅಡಿಗಳ (1ನೇ ಪುಸ್ತಕದ ದಸ್ತಾವೇಜು ನಂ. ಎಂ.ಡಿ.ಎಲ್–1–04908– 2014–15 ಆಗಿ ಸಿ.ಡಿ ನಂ. ಎಂ.ಡಿ.ಎಲ್.ಡಿ 183, ತಾ.5.3.2015) ಸ್ವತ್ತಿನ ಕ್ರಯಪತ್ರ 10.1.2024 ರಂದು ಯಲಹಂಕದಿಂದ ರಾಜಾನುಕುಂಟೆಗೆ ಬರುತ್ತಿದ್ದಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ ಎಂದು ನೋಟರಿ ಪ್ರಕಾಶ.ಸಿ, ವಕೀಲರು, ಬೆಂಗಳೂರು. ಇವರ ಸಮಕ್ಷಮದಲ್ಲಿ ಪ್ರಮಾಣೀಕರಿಸಿದ್ದೇನೆ. ಯಾರಿಗಾದರೂ ಸಿಕ್ಕಿದಲ್ಲಿ ಮೇಲಿನ ವಿಳಾಸಕ್ಕೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಸಂಪರ್ಕಿಸಿ.





ಐಎಂಎ ಕರ್ನಾಟಕ ಶಾಖೆಯ ನೇತೃತ್ವದಲ್ಲಿ ವೈದ್ಯರು, ವೈದ್ಯ ವಿದ್ಯಾರ್ಥಿಗಳು ಜಾಥಾ ನಡೆಸಿದರು ಪ್ರಜಾವಾಣಿ ಚಿತ್ರ (ಎಡ) ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ವೈದ್ಯರು, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ವಿವಿಧ ಆಸ್ಪತ್ರೆಗಳಲ್ಲಿ ಒಪಿಡಿ ಸೇವೆ ಬಂದ್ ● ಮುಷ್ಕರ ಯಶಸ್ವಿ ● ಚಿಕಿತ್ಸೆಗಾಗಿ ಪರದಾಡಿದ ರೋಗಿಗಳು

ಬೀದಿಗಿಳಿದು ಪ್ರತಿಭಟಿಸಿದ ವೈದ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ದೇಶವ್ಯಾಪಿ ಮುಷ್ಕರ ಕರೆಗೆ ಸ್ಪಂದಿಸಿ, ನಗರದ ಖಾಸಗಿ, ಸರ್ಕಾರಿ ಆಸ್ಪತ್ರೆಗಳಲ್ಲೂ ಹೊರ ರೋಗಿ ವಿಭಾಗಗಳ (ಒಪಿಡಿ) ಸೇವೆ ಬಂದ್ ಮಾಡಿ ಪ್ರತಿಭಟಿಸಲಾಯಿತು.

ಮುಷ್ಕರ ನಗರದಲ್ಲಿ ಯಶಸ್ವಿಯಾಗಿದ್ದು, ಇದರಿಂದ ಚಿಕಿತ್ಸೆಗಾಗಿ ರೋಗಿಗಳು ಪರದಾಡುವಂತಾಯಿತು. ಶನಿವಾರ ಬೆಳಿಗ್ಗೆ 6 ಗಂಟೆಯಿಂದ ಭಾನುವಾರ ಬೆಳಿಗ್ಗೆ 6 ಗಂಟೆಯವರೆಗೆ ಖಾಸಗಿ ಆಸ್ಪತ್ರೆಗಳ ಒಪಿಡಿ ಸಂಪೂರ್ಣ ಬಂದಾಗಿದ್ದವು.

ಕೋಲ್ಕತ್ತದಲ್ಲಿ ನಡೆದಿದ್ದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಖಂಡಿಸಿ ಐಎಂಎ ಮುಷ್ಕರಕ್ಕೆ ಕರೆ ನೀಡಿತ್ತು.

ವಿಕ್ಟೋರಿಯಾ, ಕೆ.ಸಿ.ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ ಸೇರಿ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಒಪಿಡಿ ಸೇವೆ ಇರಲಿಲ್ಲ. ಆಸ್ಪತ್ರೆಗಳಿಗೆ ಬಂದಿದ್ದವರು 'ಒಪಿಡಿ ಬಂದ್' ಎಂಬ ಫಲಕಗಳನ್ನು ಹಾಕಿದ್ದರೂ ಆಸ್ಪತ್ರೆಗಳ ಆವರಣದಲ್ಲಿಯೇ ಮಧ್ಯಾಹ್ನದವರೆಗೂ ಕಾದು ಮನೆಗೆ ತೆರಳಿದರು. ಹೊರರೋಗಿ ವಿಭಾಗ ಹೊರತುಪಡಿಸಿ ಉಳಿದ ಸೇವೆಗಳಲ್ಲಿ ವ್ಯತ್ಯಯವಾಗಲಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ 'ತುರ್ತು ಸೇವೆಗಳು ಮಾತ್ರ ಲಭ್ಯ' ಎಂಬ ಫಲಕಕಂಡುಬಂತು. ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳು ಕಪ್ಪುಪಟ್ಟಿ ಧರಿಸಿ, ಆಸ್ಪತ್ರೆ ಮುಂದೆ ಪ್ರತಿಭಟಿಸಿದರು. ಈ ವೇಳೆ ಚಿಕಿತ್ಸೆಗಾಗಿ ವಿವಿಧೆಡೆಯಿಂದ ಬಂದಿದ್ದ ರೋಗಿಗಳು ಆಸ್ಪತ್ರೆಯ ಆವರಣದಲ್ಲಿಯೇ ಕೆಲ ಗಂಟೆಗಳು ಕಾದರು. ಅವರಿಗೆ ವೈದ್ಯರಿಲ್ಲದ ಕಾರಣ ನಾಳೆ ಬರುವಂತೆ ಆಸ್ಪತ್ರೆ ಸಿಬ್ಬಂದಿ ಸೂಚಿದರು.



ಕಿಮ್ಸ್ ಆಸ್ಪತ್ರೆಯ ಹೊರ ರೋಗಿ ವಿಭಾಗದ ಮುಂಭಾಗ ಚಿಕಿತ್ಸೆಗಾಗಿ ರೋಗಿಗಳು ಕಾದರು ಪ್ರಜಾವಾಣಿ ಚಿತ್ರಗಳು

'ಡಯಾಲಿಸಿಸ್‌ಗಾಗಿ ಬಂದಿದ್ದೇನೆ. ಮುಷ್ಕರದ ಬಗ್ಗೆ ತಿಳಿದಿರಲಿಲ್ಲ. ನಾಳೆ ಬರಲು ಸೂಚಿಸುತ್ತಿದ್ದಾರೆ. ಸಮಸ್ಯೆಯಾಗುತ್ತಿದೆ' ಎಂದು ವಿಕ್ಟೋರಿಯಾ ಆಸ್ಪತ್ರೆಗೆ ಚಿಕ್ಕಬಾಣಾವರದಿಂದ ಬಂದಿದ್ದ ರೋಗಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಕೆ.ಸಿ.ಜನರಲ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದ ಗರ್ಭಿಣಿಯೊಬ್ಬರು ಪರದಾಟ ನಡೆಸಿದರು. ರಕ್ತಸ್ರಾವದ ಕಾರಣ ಲಗ್ಗೆರೆ ಸರ್ಕಾರಿ ಆಸ್ಪತ್ರೆಗೆ ತೆರಳಿ, ಅಲ್ಲಿ ಚಿಕಿತ್ಸೆ ಸಿಗದಿದ್ದರಿಂದ ಅವರು ತಾಯಿಯೊಂದಿಗೆ ಕೆ.ಸಿ.ಜನರಲ್ ಆಸ್ಪತ್ರೆಗೆ ಬಂದಿದ್ದರು.

'ಮಗಳು ಎಂಟು ತಿಂಗಳ ಗರ್ಭಿಣಿ. ರಕ್ತಸ್ರಾವದ ಕಾರಣ ಬಂದಿದ್ದೇವೆ. ಮುಷ್ಕರದ ಮಾಹಿತಿ ಇರಲಿಲ್ಲ. ಚಿಕಿತ್ಸೆ ನೀಡುತ್ತಿದ್ದ ವೈದ್ಯರಿಗೆ ದೂರವಾಣಿ ಕರೆ ಮಾಡಿದ್ದು, ಆಸ್ಪತ್ರೆಗೆ ಬರುವುದಾಗಿ ತಿಳಿಸಿದ್ದಾರೆ. ಕಾಯುತ್ತಿದ್ದೇವೆ' ಎಂದು ಮಹಿಳೆಯೊಬ್ಬರು ತಿಳಿಸಿದರು.

ಕಿಮ್ಸ್, ಅಪೋಲೊ, ಮಣಿಪಾಲ್, ವೈದೇಹಿ, ಮಲ್ಲಿಗೆ, ಸುಗುಣ, ಫೋರ್ಟಿಸ್, ನಾರಾಯಣ ಹೆಲ್ತ್, ಆಸ್ಟರ್ ಸೇರಿದಂತೆ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿಯೂ ಒಪಿಡಿ ಸೇವೆಯು ಜತೆಗೆ ಕ್ಲಿನಿಕ್‌ಗಳು ಬಂದ್ ಆಗಿದ್ದವು. ಇಎಸ್‌ಐ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ರಾಜಾಜಿನಗರದ ಕ್ಯಾಂಪಸ್‌ನಲ್ಲಿ ಪ್ರತಿಭಟನೆ ನಡೆಸಿದರು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಆವರಣಲ್ಲಿ ವೈದ್ಯರು, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸೇರಿ 1,500 ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಕರ್ತವ್ಯನಿರತ ವೈದ್ಯರಿಗೆ ಸುರಕ್ಷತೆಯನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಸ್ಥಾನಿಕ ವೈದ್ಯರ ಸಂಘದ (ಕೆಎಆರ್‌ಡಿ) ನೇತೃತ್ವದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದ ಬಳಿ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಮೊಂಬತ್ತಿ ಹಿಡಿದು ಪ್ರತಿಭಟಸಲಾಯಿತು.

ಜಾಥಾ ನಡೆಸಿದ ವೈದ್ಯರು

ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ನ್ಯಾಯ ಒದಗಿಸಲು ಐಎಂಎ ಕರ್ನಾಟಕ ಶಾಖೆ ನೇತೃತ್ವದಲ್ಲಿ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ನಗರದಲ್ಲಿ ಭಿತ್ತಿ ಪತ್ರ ಹಿಡಿದು ಜಾಥಾ ನಡೆಸಿದರು.

ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ.ಎಸ್.ಶ್ರೀನಿವಾಸ್ ಮಾತನಾಡಿ, 'ಇದು ಪ್ರತಿಭಟನೆ ಮಾತ್ರ ಆಗಿರದೆ, ನ್ಯಾಯಕ್ಕಾಗಿ ನಡೆಸಿದ ಹೋರಾಟವಾಗಿದೆ' ಎಂದರು. ಸೇವಾನಿರತ ವೈದ್ಯರ ಮೇಲೆ ನಿರಂತರ ಹಲ್ಲೆ ನಡೆಯುತ್ತಿದೆ. ಇದನ್ನು ತಡೆಯಲು ಕಾನೂನು ಬಲಪಡಿಸಬೇಕು. ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಪಡಿಸಿದರು.

ಆರೋಪಿಗಳ ಬಂಧನಕ್ಕೆ ಆಗ್ರಹ

ಬೆಂಗಳೂರು: ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ವಿಸಿಎನ್ ವೈದ್ಯರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಡಾ.ಎಸ್.ರಾಜು, 'ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಆಸ್ಪತ್ರೆಯ ಮೇಲೆ ದಾಳಿ ಮಾಡಿದವರ ವಿರುದ್ಧ ಕ್ರಮಜರುಗಿಸಬೇಕು. ವೈದ್ಯರು ಆರೋಗ್ಯ ಸಿಬ್ಬಂದಿಗೆ ಸರ್ಕಾರ ಭದ್ರತೆ ಒದಗಿಸಬೇಕು' ಎಂದು ಆಗ್ರಹಪಡಿಸಿದರು.

'ರೋಗಿಗಳ ಜೀವ ರಕ್ಷಿಸುವ ವೈದ್ಯರನ್ನು ಗೌರವದಿಂದ ಕಾಣುವ ವಾತಾವರಣ ನಿರ್ಮಿಸುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ, ಡಾ.ಬಿ.ಟಿ.ರಮೇಶ್, ಡಾ.ಭೋಜಮ್ಮ, ಡಾ.ವೆಂಕಟರಾಮ್,ಡಾ.ಚಂದ್ರಶೇಖರ್, ಡಾ.ಚಂದ್ರಿಕಾ ಆನಂದ್, ಡಾ.ಪ್ರೀತ್ ಶೆಟ್ಟಿ, ಡಾ. ಮಂಜುನಾಥ್ ಭಾಗವಹಿಸಿದ್ದರು.

'ಹಂಟಿಂಗ್ಟನ್ ರೋಗಿಗಳಿಗೆ ಚಿಕಿತ್ಸೆ'



ಜಾಗೃತಿ ಸಭೆಯಲ್ಲಿ ದಿನೇಶ್ ಗುಂಡೂರಾವ್ ಮಾತನಾಡಿದರು. ಡಾ.ಸಿ.ಎನ್. ಮಂಜುನಾಥ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಂಟಿಂಗ್ಟನ್ ಕಾಯಿಲೆಗೆ ಒಳಗಾದವರಿಗೆ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಹಂಟಿಂಗ್ಟನ್ ಸೊಸೈಟಿ ಆಫ್ ಇಂಡಿಯಾ (ಎಚ್‌ಡಿಎಸ್) ಸಂಸ್ಥೆಯು 5ನೇ ವಾರ್ಷಿಕೋತ್ಸವದ ಪ್ರಯುಕ್ತ ನಗರದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಸಭೆಯಲ್ಲಿ ರೋಗ ನಿರ್ವಹಣೆ ಬಗ್ಗೆ ಚರ್ಚಿಸಲಾಯಿತು.

ರೋಗಿಗಳ ಆರೈಕೆಗೆ ಕ್ಲಿನಿಕ್‌ಗಳ ಸ್ಥಾಪನೆ, ರೋಗವನ್ನು ಅಪರೂಪದ ಕಾಯಿಲೆಗಳ ಪಟ್ಟಿಗೆ ಸೇರ್ಪಡೆಗೊಳಿಸುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಂಸ್ಥೆಯ ಪ್ರತಿನಿಧಿಗಳು ಸಚಿವರಿಗೆ ಮನವಿ ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಹಂಟಿಂಗ್ಟನ್ ನಂತಹ ಅಪರೂಪದ ಕಾಯಿಲೆಗಳಿಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿ ಸಂಗ್ರಹಿಸಿ, ರೋಗಿಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡಬೇಕಿದೆ. ಆರೈಕೆಗೆ ವಿವಿಧ ಸಂಘ–ಸಂಸ್ಥೆಗಳೂ ಕೈಜೋಡಿಸಬೇಕು' ಎಂದರು.

ಸಂಸದ ಡಾ.ಸಿ.ಎನ್. ಮಂಜುನಾಥ್, 'ಹಂಟಿಂಗ್ಟನ್ ಕಾಯಿಲೆಯಿಂದ ಮಿದುಳಿನಲ್ಲಿ ಜೀವಕೋಶಗಳ ನಾಶದ ಜತೆಗೆ ವ್ಯಕ್ತಿಯ ಚಿಂತನಾ ಶಕ್ತಿ ಕುಂದುತ್ತದೆ. ಇದನ್ನು ಅಪರೂಪದ ರೋಗಗಳ ರಾಷ್ಟ್ರೀಯ ನೀತಿಯಡಿ ಗುರುತಿಸಬೇಕಿದೆ' ಎಂದು ತಿಳಿಸಿದರು.

'ದೇಶದಲ್ಲಿ ಈ ಕಾಯಿಲೆ ಹಾಗೂ ಚಿಕಿತ್ಸಾ ಸೌಲಭ್ಯದ ಬಗ್ಗೆ ಅರಿವಿನ ಕೊರತೆಯಿದೆ. ಸರಳ ಪರೀಕ್ಷೆಗಳ ಮೂಲಕ ಕಾಯಿಲೆಯನ್ನು ಪತ್ತೆಹಚ್ಚಲು ಅನುಕೂಲವಾಗುವಂತೆ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್‌ಗಳನ್ನು ಸ್ಥಾಪಿಸಬೇಕಿದೆ' ಎಂದು ಸಭೆಯಲ್ಲಿ ಮನವಿ ಮಾಡಿದರು.



ಪದ್ಮನಾಭನಗರದಲ್ಲಿ ಶನಿವಾರ ನಡೆದ ಉದ್ಯೋಗ ಮೇಳದಲ್ಲಿ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಉದ್ಯೋಗಾಕಾಂಕ್ಷಿಗಳೊಂದಿಗೆ ಚರ್ಚೆ ನಡೆಸಿದರು. ಎನ್‌.ಆರ್‌. ರಮೇಶ್ ಉಪಸ್ಥಿತರಿದ್ದರು

4 ಸಾವಿರ ಮಂದಿಗೆ ಉದ್ಯೋಗಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ವಿರೋಧಿ ವೇದಿಕೆ ಹಾಗೂ ಎಂಎಲ್‌ಆರ್ ಕುಟುಂಬದ ಸಹಯೋಗದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಸುಮಾರು ನಾಲ್ಕು ಸಾವಿರ ಮಂದಿಗೆ ಉದ್ಯೋಗಾವಕಾಶ ಲಭಿಸಿದೆ.

ಪದ್ಮನಾಭನಗರದ ಪುಟ್ಟಲಿಂಗಯ್ಯ ಆಟದ ಮೈದಾನ ಮತ್ತು ಕಾರ್ಮೆಲ್ ಶಾಲೆಯ ಸಭಾಂಗಣದಲ್ಲಿ ಶನಿವಾರ ನಡೆದ ಉದ್ಯೋಗ ಮೇಳದಲ್ಲಿ 12 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಐಟಿಐ., ಡಿಪ್ಲೊಮಾ, ಎಂಜಿನಿಯರಿಂಗ್ ಪದವೀಧರ ಆಕಾಂಕ್ಷಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳು ನೇಮಕಾತಿ ಆದೇಶ ನೀಡಿದವು. ಉದ್ಯೋಗಾವಕಾಶ ಪಡೆದವರಲ್ಲಿ ಅಂಗವಿಕಲರೂ ಇದ್ದಾರೆ ಎಂದು ಉದ್ಯೋಗ ಮೇಳದ ನೇತೃತ್ವ ವಹಿಸಿದ್ದ ಬಿಬಿಎಂಪಿ ಮಾಜಿ ಸದಸ್ಯ ಎನ್. ಆರ್.ರಮೇಶ್ ತಿಳಿಸಿದರು.

ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಉದ್ಯೋಗ ಮೇಳಕ್ಕೆ ಚಾಲನೆ ನೀಡಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ನೇಮಕಾತಿ ಪತ್ರಗಳನ್ನು ವಿತರಿಸಿದರು.

'ಕಾಗದ ರಹಿತ ಕಾರ್ಯಕ್ರಮ' ಉದ್ಯೋಗ ಮೇಳ ಇದಾಗಿದ್ದರಿಂದ, 'ಲಂಡನ್ ಬುಕ್ ಆಫ್ ವರ್ಲ್ಡ್ ಆಫ್ ರೆಕಾರ್ಡ್ಸ್' ಅವರೂ ಮಾಹಿತಿ ಪಡೆದರು. 200ಕ್ಕೂ ಹೆಚ್ಚು ಕಾರ್ಪೊರೇಟ್ ಮತ್ತು ಎಂಎನ್‌ಸಿ ಕಂಪನಿಗಳು ಪಾಲ್ಗೊಂಡಿದ್ದವು.

ಮುಂದಿನ ನಡೆ: ಖರ್ಗೆ– ಸಿ.ಎಂ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ರಾತ್ರಿ ಸುಮಾರು ಒಂದೂವರೆ ತಾಸು ಚರ್ಚೆ ನಡೆಸಿದರು.

ತುರ್ತು ಸಚಿವ ಸಂಪುಟ ಸಭೆಯ ಬಳಿಕ ಸದಾಶಿವನಗರದ ನಗರದಲ್ಲಿರುವ ಖರ್ಗೆ ಅವರ ನಿವಾಸಕ್ಕೆ ತೆರಳಿದ ಮುಖ್ಯಮಂತ್ರಿ, ಮುಡಾ ಪ್ರಕರಣದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ವಿಚಾರ ಮತ್ತು ಮುಂದಿನ ನಡೆಯ ಕುರಿತು ಸಮಾಲೋಚನೆ ನಡೆಸಿದರು.

ಸಚಿವರಾದ ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ ಅವರೂ ಮುಖ್ಯಮಂತ್ರಿಯ ಜೊತೆಗಿದ್ದರು.

ರಾಜ್ಯಪಾಲರು ದಾಖಲೆ ತೋರಿಸಲಿ: ಕೃಷ್ಣಬೈರೇಗೌಡ



ಬೆಂಗಳೂರು: 'ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಯಾವ ಪೊಲೀಸ್ ಅಧಿಕಾರಿ ವರದಿ ನೀಡಿದ್ದಾರೆ? ಯಾವ ಅಧಿಕಾರಿ ಅನುಮತಿ ಕೇಳಿದ್ದಾರೆ. ಆ ದಾಖಲೆ ಕೊಡಿ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

'ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡುವ ಮೊದಲು ಪ್ರಾಥಮಿಕ ತನಿಖೆ ನಡೆಯಬೇಕು. ಕೇಂದ್ರ ಸರ್ಕಾರ 2021ರ ಸೆ. 3ರಲ್ಲಿ 17 'ಎ' ಸೆಕ್ಷನ್ ಅನ್ನು ಹೇಗೆ ಪರಿಗಣಿಸಬೇಕೆಂದು ನಿಯಮಾವಳಿ ರೂಪಿಸಿದ್ದಾರೆ. ಅಂದರೆ, ಒಂದು ಹುದ್ದೆಯಲ್ಲಿ ಇರುವ ವ್ಯಕ್ತಿಯನ್ನು ತನಿಖೆಗೆ ಒಳಪಡಿಸಲು ಈ ಸೆಕ್ಷನ್ ಅಡಿ ಪೊಲೀಸ್ ಅಧಿಕಾರಿ ಅನುಮತಿ ಪಡೆಯಬೇಕು. ಪ್ರಸ್ತುತ ಈ ಪ್ರಕರಣದಲ್ಲಿ ಯಾವ ಪೊಲೀಸ್ ಅಧಿಕಾರಿ ಅನುಮತಿ ಪಡೆದಿದ್ದಾರೆ' ಎಂದು ಅವರು ಕೇಳಿದ್ದಾರೆ.

'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಾಗ ಪ್ರಕರಣದಲ್ಲಿ ತಪ್ಪು ಮಾಡಿರುವವರ ವಿರುದ್ಧ ದಾಖಲೆ ಇರಬೇಕು. ಯಾರ ಮೇಲೆ ಆಪಾದನೆ ಬಂದಿದೆ ಅವರು ಯಾವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ದಾಖಲೆಸಹಿತ ರಾಜ್ಯಪಾಲರಿಗೆ ಪೊಲೀಸರು ನೀಡಬೇಕು. ಆಗ ಮಾತ್ರ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಮೊದಲು ಯಾವ, ಯಾವ ದಾಖಲೆಗಳನ್ನು ಒದಗಿಸಬೇಕು ಎಂಬುದಕ್ಕೆ ಪಟ್ಟಿಯನ್ನು ಕೇಂದ್ರ ಸರ್ಕಾರ ನೀಡಿದೆ. ಅವುಗಳಲ್ಲಿ ಒಂದೇ ಒಂದು ದಾಖಲೆಯನ್ನು ರಾಜ್ಯಪಾಲರು ತೋರಿಸಲಿ' ಎಂದೂ ಸವಾಲು ಹಾಕಿದರು.

ಸಿ.ಎಂ ವಿರುದ್ಧದ ದೂರುಗಳಲ್ಲಿ ಏನಿದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಕೋರಿ ರಾಜ್ಯಪಾಲರಿಗೆ ಮೂವರು ಮನವಿಗಳನ್ನು ಸಲ್ಲಿಸಿದ್ದರು.

ಮುಡಾಗೆ ಸೇರಿದ ಜಮೀನನ್ನು ಅಕ್ರಮವಾಗಿ ಡಿನೋಟಿಫೈ ಮಾಡಿಕೊಳ್ಳಲಾಗಿದೆ. ಇದಕ್ಕಾಗಿ ಸಿದ್ದರಾಮಯ್ಯ ಅವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಜತೆಗೆ ಮುಡಾ ಹೆಸರಿನಲ್ಲಿ ಇದ್ದು, ಅಭಿವೃದ್ಧಿಪಡಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದ್ದ ಜಮೀನನ್ನು ಸಿದ್ದರಾಮಯ್ಯ ಅವರ ಬಾಮೈದ ಅಕ್ರಮವಾಗಿ ಖರೀದಿ ಮಾಡಿದ್ದಾರೆ. ಇದರಲ್ಲಿ ಸಿದ್ದರಾಮಯ್ಯ ತನ್ನ ಪ್ರಭಾವ ಬಳಸಿದ್ದಾರೆ ಎಂಬುದು ಟಿ.ಜೆ.ಅಬ್ರಹಾಂ ಅವರ ಆರೋಪ.

ಜತೆಗೆ, ಈಗಾಗಲೇ ಪರಿವರ್ತನೆಯಾದ ಜಮೀನನ್ನು ಮತ್ತೆ ಅಕ್ರಮವಾಗಿ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಸಿದ್ದರಾಮಯ್ಯ ಅವರ ಪತ್ನಿ ಹೆಸರಿಗೆ ಮಾಲೀಕತ್ವ ವರ್ಗಾವಣೆ ಮಾಡಲಾಗಿದೆ. ಮುಡಾದ ದಿಕ್ಕು ತಪ್ಪಿಸಿ, ದುಬಾರಿ ಬೆಲೆಯ ಬದಲಿ ನಿವೇಶನಗಳನ್ನು ಮಂಜೂರು ಮಾಡಿಸಿಕೊಳ್ಳಲಾಗಿದೆ. ಈ ಎಲ್ಲಾ ಕೃತ್ಯಗಳಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದು ದೂರಿದ್ದರು.

'ಸತ್ತ ವ್ಯಕ್ತಿ ಹೆಸರಿನಲ್ಲಿ ಡಿನೋಟಿಫೈ'

ಮುಡಾ ನಿವೇಶನ ಹಂಚಿಕೆಯಲ್ಲಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ, ದೇವರಾಜು ಮತ್ತು ಅಧಿಕಾರಿಗಳು ಅಕ್ರಮ ಎಸಗಿದ್ದಾರೆ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರು ದಾಖಲಿಸಿದ್ದರು. ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಅವರ ಕೋರಿಕೆಯಾಗಿತ್ತು.

ಮೃತ ನಿಂಗ ಉರುಫ್ ಜವರನ ಹೆಸರಿನಲ್ಲಿ ಡಿನೋಟಿಫೈ ಮಾಡಲಾಗಿದೆ. ಅದಾಗಲೇ ನಿವೇಶನ ಹಂಚಿಕೆ ಮಾಡಲಾಗಿದ್ದ ಜಮೀನು ತಮ್ಮದು ಎಂದು ತೋರಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ನಿಂಗ ಉರುಫ್ ಜವರನ ಕುಟುಂಬದ ಎಲ್ಲ ಸದಸ್ಯರನ್ನು ಮುಚ್ಚಿಟ್ಟು, ಒಬ್ಬರ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಮಾಡಿಕೊಳ್ಳಲಾಗಿದೆ ಎಂದು ಕೃಷ್ಣ ಅವರ ಆರೋಪ.

'ಎಫ್‌ಐಆರ್‌ಗೆ ಅನುಮತಿ ನೀಡಿ'

ಅಕ್ರಮ ಎಸಗುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಸಂಪತ್ತನ್ನು ವೃದ್ಧಿಪಡಿಸಿಕೊಂಡಿದ್ದಾರೆ. ಅಕ್ರಮಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾಶಪಡಿಸುವ ಉದ್ದೇಶದಿಂದ ತಮ್ಮ ಆಪ್ತ ಮರೀಗೌಡ ಅವರನ್ನು ಮುಡಾ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಸಿದ್ದರಾಮಯ್ಯ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು. ಇದಕ್ಕಾಗಿ ಅನುಮತಿ ನೀಡಬೇಕು ಎಂಬುದು ಮತ್ತೊಬ್ಬ ಖಾಸಗಿ ದೂರುದಾರ ಪ್ರದೀಪ್ ಕುಮಾರ್ ಎಸ್.ಪಿ. ಅವರ ಕೋರಿಕೆಯಾಗಿತ್ತು.

ಕೈ ಕಾರ್ಯಕರ್ತರು ವಶಕ್ಕೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅವ್ಯವಹಾರಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ವಿರುದ್ಧ ವಿಚಾರಣೆಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಜಭವನದ ಎದುರು ಶನಿವಾರ ಪ್ರತಿಭಟಿಸಿದರು.

ಕಪ್ಪುಪಟ್ಟಿ ಧರಿಸಿದ್ದ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ರಾಜ್ಯಪಾಲರ ಭೇಟಿಗೆ ಅನುಮತಿಗೆ ಪಟ್ಟು ಹಿಡಿದರು. ಬಳಿಕ ಪೊಲೀಸರು, ಮುಖಂಡರಾದ ಕುಶಾಲ್, ನವೀನ್ ಸೇರಿದಂತೆ ಹಲವು ಕಾರ್ಯಕರ್ತರನ್ನು ವಶಕ್ಕೆ ಪಡೆದರು. 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಿನಾಕಾರಣ ಹಗೆ ಸಾಧಿಸಲಾಗುತ್ತಿದೆ. ರೋಲ್ ಕಾಲ್ ಮಾಡುವವರಿಗೆ, ಕಳ್ಳರಿಗೆ ಒಳಗೆ ಪ್ರವೇಶವಿದೆ, ನಮಗಿಲ್ಲವೇ?' ಎಂದು ಕಾರ್ಯಕರ್ತರು ಪ್ರಶ್ನಿಸಿದರು.

'ಪುಸ್ತಕ ಸಂಸ್ಕೃತಿಯನ್ನು ಸರ್ಕಾರ ಉಳಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ವಿರುದ್ಧ, ಅನ್ಯಾಯದ ವಿರುದ್ಧ ಮಾತನಾಡುವ ಶಕ್ತಿ ನೀಡುವುದು ಪುಸ್ತಕಗಳು. ಆದ್ದರಿಂದ ಪುಸ್ತಕ ಸಂಸ್ಕೃತಿ ಉಳಿಸಲು ಸರ್ಕಾರ ಮುಂದಾಗಬೇಕು' ಎಂದು ಸಾಹಿತಿ ಕುಂ.ವೀರಭದ್ರಪ್ಪ ಶನಿವಾರ ಇಲ್ಲಿ ಅಭಿಪ್ರಾಯಪಟ್ಟರು.

ಸಪ್ನ ಬುಕ್ ಹೌಸ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರ 'ಲ್ಯಾಟರೀನಾ' ಕಾದಂಬರಿ ಬಿಡುಗಡೆಯಾಯಿತು. ಈ ವೇಳೆ ಮಾತನಾಡಿದ ಅವರು, 'ಇಂದಿಗೂ ಬೇರೆ ರೀತಿ ಗಲೀಜು ಸಮಾಜದಲ್ಲಿದೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಕಾದಂಬರಿ ಬರೆದಿದ್ದೇನೆ' ಎಂದರು.

'ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2021 ಹಾಗೂ ಆ ನಂತರ ಪುಸ್ತಕಗಳ ಖರೀದಿ ನಡೆದಿಲ್ಲ. ಪ್ರತಿ ಹಗರಣದಲ್ಲೂ ನೂರಾರು ಕೋಟಿ ರೂಪಾಯಿ ಅವ್ಯವಹಾರವಾದ ಆರೋಪಗಳಿವೆ. ಆದರೆ, ಸರ್ಕಾರಗಳಿಗೆ ಪುಸ್ತಕಗಳ ಖರೀದಿಗೆ ಹಣವಿಲ್ಲವೇ? ವಾರ್ಷಿಕ ₹ 20 ಕೋಟಿ ಮೌಲ್ಯದ ಕನ್ನಡ ಪುಸ್ತಕಗಳನ್ನು ಸರ್ಕಾರ ಖರೀದಿಸಲಿ' ಎಂದು ಆಗ್ರಹಿಸಿದರು.

ಪುಸ್ತಕ ಬಿಡುಗಡೆ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಬರಹಗಾರರು, ಹೋರಾಟಗಾರರು ಹಾಗೂ ಭಾಷಣಕಾರರಿಗೆ ದಿನ ಕಳೆದಂತೆ ಉತ್ಸಾಹ ಮತ್ತು ತೀವ್ರತೆ ಕಡಿಮೆಯಾಗುತ್ತದೆ. ಆದರೆ, ಕುಂ.ವೀರಭದ್ರಪ್ಪ ಇದಕ್ಕೆ ಅಪವಾದ. ಕಳೆದ ನಾಲ್ಕು ದಶಕಗಳ ಹಿಂದೆ ಇದ್ದ ಉತ್ಸಾಹ, ತೀವ್ರತೆಯನ್ನು ಈಗಲೂ ಅವರಲ್ಲಿ ಕಾಣಬಹುದು' ಎಂದು ಹೇಳಿದರು.

'ನಾಗರಿಕ ಸಮಾಜ ತಲೆತಗ್ಗಿಸುವ ಮಲ ಹೊರುವ ಪದ್ಧತಿಯ ವಿರುದ್ಧ ವಿಭಿನ್ನ ಪರಿಕಲ್ಪನೆಯನ್ನು 'ಲ್ಯಾಟರೀನ' ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ' ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, 'ಕುಂ.ವೀ. ಅವರ ಕಾದಂಬರಿ ಈ ದೇಶದ ಜನರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತಿತರ ಪರಿಸ್ಥಿತಿಗಳ ಸಾಂಕೇತಿಕ ರೂಪ' ಎಂದು ಬಣ್ಣಿಸಿದರು.



ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್‌. ರಮೇಶ್ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ವಿತರಿಸಿದರು

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ: ಬಹುಮಾನ ವಿತರಣೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ನಿಮಿತ್ತ ಲಾಲ್‌ಬಾಗ್‌ನಲ್ಲಿ ನಡೆದ 'ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನ'ದಲ್ಲಿ ನಡೆದ ಸ್ಪರ್ಧೆಗಳಲ್ಲಿ ವಿಜೇತರಿಗೆ ಶನಿವಾರ ಬಹುಮಾನ ವಿತರಿಸಲಾಯಿತು.

ಗಾಜಿನಮನೆಯ ಪ್ರದರ್ಶಿಕೆಗಳು, ತೋಟಗಳ ಸ್ಪರ್ಧೆಗಳು, ಇಕೆಬಾನ, ಪುಷ್ಪ ಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಒಣ ಹೂವಿನ ಜೋಡಣೆ, ಥಾಯ್‌ಆರ್ಟ್, ಜಾನೂರ್, ಬೋನ್ಸಾಯ್ ಗಿಡಗಳ ಪ್ರದರ್ಶನ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರು ಬಹುಮಾನ ಪಡೆದರು.

ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಶನಿವಾರ ಬೆಳಿಗ್ಗೆಯಿಂದಲೇ ಜನರು ಲಾಲ್‌ಬಾಗ್‌ಗೆ ಗುಂಪು–ಗುಂಪಾಗಿ ಆಗಮಿಸಿದರು. ಬಂಡೆ, ಕೆರೆ ಏರಿ, ಬೋನ್ಸಾಯ್, ತರಕಾರಿ ಉದ್ಯಾನ, ಮಾರಾಟ ಮಳಿಗೆಗಳ ಬಳಿ ಹೆಚ್ಚು ಜನ ಕಂಡು ಬಂದರು. ಗಾಜಿನ ಮನೆಯಲ್ಲಿ ಜನದಟ್ಟಣೆ ಉಂಟಾಗಿ, ಸಾಲುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ಹರಸಾಹಸಪಟ್ಟರು.

ನಟ ರಿಷಬ್ ಶೆಟ್ಟಿಗೆ ಊರ ಗೌರವ ● ಮನಸೆಳೆದ ಗಾಯನ, ಜೋಡಾಟ

ಕುಂದಾಪ್ರ ಕನ್ನಡ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾವ ಬೀದಿಯಲಿ ಭಾಷೆಯ ತೇರು 'ಕುಂದಾಪ್ರ ಕನ್ನಡ ಹಬ್ಬ' ಶನಿವಾರ ನಗರದ ಅರಮನೆ ಮೈದಾನದಲ್ಲಿ ಸಂಭ್ರಮದಿಂದ ಆರಂಭಗೊಂಡಿತು. ಭಾನುವಾರವೂ ನಡೆಯಲಿದೆ.

ಮಂಗಳೂರು ಜರ್ನಿ ಥೇಟರ್ ಗ್ರೂಪ್ ಕಲಾವಿದರು ನಡೆಸಿಕೊಟ್ಟ ಜನಪದ ಗೀತೆ, ರಂಗಗೀತೆ, ಕನ್ನಡ ಗೀತೆಗಳ ಗಾಯನ ಮನಸೂರೆಗೊಂಡಿತು. ಕರಾವಳಿಯ ಪ್ರಸಿದ್ಧ ಕಲಾವಿದರ ಜೋಡಾಟವು ಹಬ್ಬಕ್ಕೆ ರಂಗು ನೀಡಿತು. ಹಬ್ಬದಲ್ಲಿ ಊರ ಗೌರವ ಸ್ವೀಕರಿಸಿದ ನಟ ರಿಷಬ್ ಶೆಟ್ಟಿ, 'ಎಷ್ಟೇ ಎತ್ತರಕ್ಕೆ ಬೆಳೆದರೂ ನಮ್ಮ ಮೂಲಬೇರುಗಳನ್ನು ಮರೆಯಬಾರದು. ಕುಂದಾಪ್ರ ಮಣ್ಣಿನಲ್ಲಿ ಹುಟ್ಟಿದ್ದರಿಂದ ಸಿನಿಮಾಗಳಲ್ಲಿ ನೆಲಮೂಲ ಸಂಸ್ಕೃತಿ ನೀಡಲು ಸಾಧ್ಯವಾಗಿದೆ' ಎಂದರು.



ಶನಿವಾರ ನಗರದಲ್ಲಿ 'ಕುಂದಾಪ್ರ ಕನ್ನಡ ಹಬ್ಬ'ದಲ್ಲಿ ವಿವಿಧ ಪ್ರದರ್ಶನ ವೀಕ್ಷಿಸಿದ ಜನರು ಫೋಟೊ ತೆಗೆದು ಸಂಭ್ರಮಿಸಿದರು.

ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರು, 'ಆಧುನಿಕತೆ ಭರಾಟೆಯಲ್ಲಿ ಕುಂದಾಪ್ರ ಭಾಷೆ ಉಳಿಯುವುದೇ ಎಂಬ ಶಂಕೆ ಇದೆ. ಕೃಷಿಯಲ್ಲಿ ಹಿಂದೆ ಬಳಸುತ್ತಿದ್ದ ಬಹಳಷ್ಟು ಶಬ್ದಗಳು ಇಂದಿನ ಪೀಳಿಗೆಗೆ ಪರಿಚಯವೇ ಇಲ್ಲ. ಇಂಥ ಕಾಲದಲ್ಲಿ ಕುಂದಾಪ್ರ ಕನ್ನಡ ಹಬ್ಬದ ಮೂಲಕ ನಮ್ಮ ಸಂಸ್ಕೃತಿ ಉಳಿಸುವ ಮತ್ತು ವಿಶ್ವಕ್ಕೆ ಪರಿಚಯಿಸುವ ಕಾರ್ಯವೂ ಆಗುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಅಧ್ಯಕ್ಷ ದೀಪಕ್ ಶೆಟ್ಟಿ ಬಾರ್ಕೂರು, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ, ಜೊತೆ ಕಾರ್ಯದರ್ಶಿ ಅಜಿತ್ ಶೆಟ್ಟಿ ಉಳ್ತೂರು ಕಾರ್ಯಕ್ರಮ ನಡೆಸಿಕೊಟ್ಟರು.

ಶಾಸಕ ಗುರುರಾಜ್ ಗಂಟಿಹೊಳೆ, ಸಂಗೀತ ನಿರ್ದೇಶಕ ರವಿ ಬಸ್ರೂರು, ಎಂ.ಎಸ್. ಮಂಜ ಚಾರಿಟಬಲ್ ಟ್ರಸ್ಟ್‌ನ ಕೃಷ್ಣಮೂರ್ತಿ ಮಂಜ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ, ಉದ್ಯಮಿಗಳಾದ ಕಿಶೋರ್ ಕುಮಾರ್ ಹೆಗ್ಡೆ ಕೈಲ್ಕೇರಿ, ಅಂಜಲೀನಾ, ಶಿವರಾಮ ಹೆಗ್ಡೆ, ಸತೀಶ್ ಶೆಟ್ಟಿ ಭಾಗವಹಿಸಿದ್ದರು.

ಗಮನ ಸೆಳೆದ ಕಲಾ ಪ್ರದರ್ಶನ



ಪ್ರದರ್ಶನದಲ್ಲಿ ಇರಿಸಲಾಗಿರುವ ಕಲಾ ಕೃತಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅದ್ವೈತ ಹುಂಡೈ ಸಂಸ್ಥೆಯು ಮಾರತ್‌ಹಳ್ಳಿಯ ಹೊರವರ್ತುಲ ರಸ್ತೆಯಲ್ಲಿರುವ ತನ್ನ ಕೇಂದ್ರದಲ್ಲಿ 'ಆಟೋಮೋಟಿವ್ ರಾಪ್ಸೋಡಿ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ವರ್ಣಚಿತ್ರ ಪ್ರದರ್ಶನ ಕಲಾ ಪ್ರೇಮಿಗಳನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ವಿದಿತಾ ಸಿಂಗ್ ಬರ್ವಾನಿ ಅವರು ರಚಿಸಿದ ಕಲಾಕೃತಿಗಳ ಪ್ರದರ್ಶನ ಇದಾಗಿದೆ.

ಆ.15ರಂದು ಈ ಪ್ರದರ್ಶನಕ್ಕೆ ಚಾಲನೆ ದೊರೆತಿದ್ದು, ಭಾನುವಾರ ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಪ್ರದರ್ಶನ ನಡೆಯಲಿದೆ. ಪ್ರದರ್ಶನದಲ್ಲಿ 'ವಿಂಟೇಜ್ ಕಾರುಗಳ' ವೈಭವ ಅನಾವರಣಗೊಂಡಿದೆ. ಕಾರುಗಳ ತಾಂತ್ರಿಕ ವೈಶಿಷ್ಟ್ಯಗಳನ್ನೂ ಕಲಾವಿದೆ ಚಿತ್ರಿಸಿದ್ದಾರೆ.

ಮುಡಾ ಪ್ರಕರಣ: ಸರ್ಕಾರಕ್ಕೆ ಪತ್ರ ಬರೆದಿದ್ದ ಅಧ್ಯಕ್ಷ ಮರೀಗೌಡ ● ಕಾಂಗ್ರೆಸ್ ಒಳಜಗಳದಿಂದ ಹಗರಣ ಬೆಳಕಿಗೆ

ಆಪ್ತರ ಸಲಹೆಯೇ ಮುಳುವಾಯಿತೆ?

● ಆರ್. ಜಿತೇಂದ್ರ

ಮೈಸೂರು: ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ಕೆಲವು ಆಪ್ತರ ವರ್ತನೆ ಹಾಗೂ ಸಲಹೆಗಳೇ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆಯೇ?

–ಇಂಥದ್ದೊಂದು ಚರ್ಚೆ ಈಗ ಸಾರ್ವಜನಿಕ ವಲಯದಲ್ಲಿ ನಡೆದಿದೆ. 'ಆಪ್ತ ವಲಯದಲ್ಲಿ ಗುರುತಿಸಿಕೊಂಡ ಕೆಲವರ ಮಾತುಗಳನ್ನು ಅತಿಯಾಗಿ ನಂಬಿದ ಸಿದ್ದರಾಮಯ್ಯ, ತಮ್ಮನ್ನು ಸಮರ್ಥಿಸಿಕೊಳ್ಳುವಲ್ಲಿ ಎಡವಿದ ರೀತಿಯೇ ವಿವಾದ ಬೆಳೆಯಲು ಕಾರಣ' ಎನ್ನಲಾಗುತ್ತಿದೆ.

'ಸಿದ್ದರಾಮಯ್ಯ ತಮ್ಮ ಪತ್ನಿಯ ಹೆಸರಿನಲ್ಲಿದ್ದ 3.16 ಎಕರೆ ಜಮೀನನ್ನು ಕೊಟ್ಟು, ಪ್ರತಿಯಾಗಿ ಕಾನೂನಾತ್ಮಕವಾಗಿ 14 ನಿವೇಶನ ಪಡೆದಿದ್ದಾರೆ. ಹೀಗಾಗಿ ಹೆದರುವ ಅಗತ್ಯವಿರಲಿಲ್ಲ. ಆರೋಪ ಕೇಳಿಬರುತ್ತಲೇ ನಿವೇಶನಗಳನ್ನು ಹಿಂತಿರುಗಿಸಿ, 'ತನಿಖೆ ಬಳಿಕವಷ್ಟೇ ವಾಪಸ್ ಪಡೆಯುತ್ತೇನೆ' ಎಂಬ ಧೈರ್ಯ ತೋರಬೇಕಿತ್ತು. ಸ್ವತಂತ್ರ ತನಿಖೆಗೆ ಆದೇಶಿಸಬೇಕಿತ್ತು. ಆದರೆ, ಮುಖ್ಯಮಂತ್ರಿ ಸುತ್ತ ಇರುವ ಕೆಲವು 'ಪಂಡಿತರು' ಅವರನ್ನು ಓಲೈಸುವ ಭರದಲ್ಲಿ, ಪ್ರಕರಣದಲ್ಲಿ ಆಗಿರುವ ಲೋಪಗಳನ್ನೇ ಮುಚ್ಚಿಟ್ಟರು. ಅದೆಲ್ಲ ಗಮನಕ್ಕೆ ಬರುವಷ್ಟರಲ್ಲಿ ಪ್ರಕರಣ ದೊಡ್ಡದಾಯಿತು. ವಿರೋಧ ಪಕ್ಷಗಳಿಗೊಂದು ಪ್ರಬಲ ಅಸ್ತ್ರ ಸಿಕ್ಕಿತು' ಎಂದು ಬಿಜೆಪಿ ಮುಖಂಡರು ಹೇಳುತ್ತಾರೆ.


ಮುಡಾ ಕಚೇರಿ

ಆಪ್ತರಿಂದಲೇ ಬಹಿರಂಗ: ಇಡೀ ಪ್ರಕರಣ ಬಯಲಿಗೆ ಬರಲು ಸಿದ್ದರಾಮಯ್ಯ ಆಪ್ತ ಬಳಗವೇ ಕಾರಣ. ಕಾಂಗ್ರೆಸ್‌ನ ಎರಡು ಗುಂಪುಗಳ ಒಳಜಗಳದಿಂದ ಅಕ್ರಮಗಳ ಗುಟ್ಟು ರಟ್ಟಾಯಿತು. ಆ ಭರದಲ್ಲೇ ಸಿದ್ದರಾಮಯ್ಯ ಕುಟುಂಬಕ್ಕೆ ನಿವೇಶನ ಹಂಚಿಕೆಯ ದಾಖಲೆಗಳೂ ಬಯಲಾದವು.

ಅಧ್ಯಕ್ಷರಿಂದಲೇ ಪತ್ರ: 'ಮುಡಾದಲ್ಲಿ ಶೇ 50:50 ಅನುಪಾತದ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ' ಎಂದು ಆರೋಪಿಸಿ ಮುಡಾ ಅಧ್ಯಕ್ಷ ಮತ್ತು ಸಿದ್ದರಾಮಯ್ಯ ಆಪ್ತ ಕೆ.ಮರೀಗೌಡ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ಸ್ವತಃ ಅಧ್ಯಕ್ಷರೇ ಹೀಗೆ ಆರೋಪಿಸಿದ್ದು ಪ್ರತಿಪಕ್ಷಗಳಿಗೆ ಅಸ್ತ್ರವಾಯಿತು. ಅದರಿಂದಾಗಿ ಇಡೀ ಸರ್ಕಾರ ಮುಜುಗರಕ್ಕೆ ಸಿಲುಕಿತು.

ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಇದೇ ಮರೀಗೌಡ ಅಂದಿನ ಜಿಲ್ಲಾಧಿಕಾರಿ ಸಿ. ಶಿಖಾ ಅವರನ್ನು ನಿಂದಿಸಿ, ನಂತರ ಒಂದಷ್ಟು ದಿನ ತಲೆಮರೆಸಿಕೊಂಡಿದ್ದರು. ಅದರಿಂದಾಗಿ ಸಿದ್ದರಾಮಯ್ಯ ಮುಜುಗರ ಪಟ್ಟುಕೊಳ್ಳುವಂತಾಗಿತ್ತು. 'ಎರಡೂ ಅವಧಿಯಲ್ಲಿ ಮರಿಗೌಡರಿಂದಲೇ ಸಿದ್ದರಾಮಯ್ಯ ಇಕ್ಕಟ್ಟಿಗೆ ಸಿಲುಕಿದ್ದರು' ಎಂದು ಕಾಂಗ್ರೆಸ್ ಮುಖಂಡರೇ ಅಸಮಾಧಾನ ಹೊರಹಾಕುತ್ತಾರೆ.

ಅಧಿಕಾರಿಗಳ ಮೇಲೆ ಕ್ರಮವಿಲ್ಲ: ಜುಲೈ 1ರಂದು ಮುಡಾಕ್ಕೆ ಭೇಟಿ ನೀಡಿದ್ದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸಭೆ ನಡೆಸಿ, ಆಯುಕ್ತರೂ ಸೇರಿದಂತೆ ಮೂವರು ಅಧಿಕಾರಿಗಳ ವರ್ಗಾವಣೆಗೆ ಸೂಚಿಸಿದ್ದರು. ಆದರೆ, 'ಇಷ್ಟೆಲ್ಲ ದಾಖಲೆಗಳಿದ್ದರೂ ಅಧಿಕಾರಿಗಳನ್ನು ಅಮಾನತು ಮಾಡದೇ, ಮುಖ್ಯಮಂತ್ರಿಗೆ ತಪ್ಪು ಮಾಹಿತಿ ನೀಡಿದರು' ಎಂಬ ಆರೋಪವೂ ಇದೆ.

ಚರ್ಚೆ ನಿರಾಕರಣೆ: 'ಜುಲೈನಲ್ಲಿ ನಡೆದ ವಿಧಾನಸಭೆ ಅಧಿವೇಶನದಲ್ಲಿ ಮುಡಾ ಹಗರಣಗಳ ಚರ್ಚೆಗೆ ಸರ್ಕಾರ ಅವಕಾಶ ನೀಡಿದ್ದರೆ ಪ್ರಕರಣ ಅಲ್ಲಿಯೇ ಮುಗಿಯುತ್ತಿತ್ತು. ಆದರೆ ಅಧಿವೇಶನ ಆರಂಭದ ಹಿಂದಿನ ರಾತ್ರಿ ಪ್ರಕರಣದ ತನಿಖೆಯನ್ನು ನಿವೃತ್ತ ನ್ಯಾಯಮೂರ್ತಿಯವರಿದ್ದ ಏಕಸದಸ್ಯ ಆಯೋಗಕ್ಕೆ ಒಪ್ಪಿಸಿ ಸರ್ಕಾರ ಆದೇಶಿಸಿತ್ತು. ತನಿಖೆಯ ನೆಪವೊಡ್ಡಿ ಚರ್ಚೆಗೆ ಅವಕಾಶ ನಿರಾಕರಿಸಲಾಯಿತು. ಅದರಿಂದ ಕೆರಳಿದ ಪ್ರತಿಪಕ್ಷಗಳು ಪಾದಯಾತ್ರೆಯ ನಿರ್ಣಯ ಕೈಗೊಂಡವು. ಆಗ ಕಾನೂನು ತಜ್ಞರು ಸೂಕ್ತ ಸಲಹೆ ನೀಡಬೇಕಿತ್ತು' ಎಂದು ಕಾಂಗ್ರೆಸ್ ಮುಖಂಡರೊಬ್ಬರು ಪ್ರತಿಪಾದಿಸುತ್ತಾರೆ.

ಅಲ್ಲದೆ, ಬದಲಿ ನಿವೇಶನ ಹಂಚಿಕೆ ಸಮರ್ಥಿಸಿಕೊಳ್ಳುವ ಭರದಲ್ಲಿ ಸಿದ್ದರಾಮಯ್ಯ, 'ನಮ್ಮ ಜಮೀನಿಗೆ ₹62 ಕೋಟಿ ಪರಿಹಾರ ಕೊಡಿ' ಎಂದಿದ್ದರು. ನಂತರ, 'ನಿವೇಶನಗಳನ್ನು ವಾಪಸ್ ಕೊಡಲು ಸಿದ್ಧ' ಎಂದೂ ಹೇಳಿದ್ದು ಅವರಿಗೆ ಮುಳುವಾಯಿತು ಎಂಬ ಚರ್ಚೆ ನಡೆಯುತ್ತಿದೆ.

ಸ್ವಗ್ರಾಮದಲ್ಲಿ ಬೇಸರದ ಛಾಯೆ

ಮೈಸೂರು: ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಕ್ಕೆ ಅವರ ಸ್ವಗ್ರಾಮವಾದ ಸಿದ್ದರಾಮನಹುಂಡಿಯಲ್ಲಿ ಬೇಸರದ ಛಾಯೆ ಆವರಿಸಿದೆ. ಹಳ್ಳಿಕಟ್ಟೆಗಳಲ್ಲಿ, ಮನೆ ಮುಂದಿನ ಜಗಲಿಗಳಲ್ಲಿ ಸದ್ಯ ಈ ರಾಜಕೀಯದ ಚರ್ಚೆಯೇ ಜೋರಾಗಿದೆ.

'ಸಾಹೇಬರು ಐದು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ ಎಂದು ಈಗಲೂ ನಂಬಿದ್ದೇವೆ. ಬಿಜೆಪಿ–ಜೆಡಿಎಸ್ ಕುತಂತ್ರದಿಂದ ಈ ಪರಿಸ್ಥಿತಿ ಬಂದಿದೆ. ಆದರೆ, ಅವರಂತಹ ಪ್ರಾಮಾಣಿಕ ರಾಜಕಾರಣಿ ಇನ್ನೊಬ್ಬರಿಲ್ಲ. ಯಾವ ಕಾರಣಕ್ಕೂ ರಾಜೀನಾಮೆ ನೀಡದೇ ಎಲ್ಲವನ್ನೂ ಧೈರ್ಯದಿಂದ, ಕಾನೂನಿನ ಬಲದಿಂದ ಎದುರಿಸಬೇಕು' ಎಂದು ಗ್ರಾಮಸ್ಥರು ಹೇಳುತ್ತಾರೆ.

ಸಿದ್ದರಾಮಯ್ಯ ಹಿತಶತ್ರುಗಳ ಮಾತು ಕೇಳಿ ಸಂಕಷ್ಟ ಅನುಭವಿಸುತ್ತಿದ್ದಾರೆ. ಆರಂಭದಲ್ಲೇ 14 ನಿವೇಶನಗಳನ್ನು ಹಿಂತಿರುಗಿಸಿ, ಮುಡಾ ಆಯುಕ್ತರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಿತ್ತು
ಟಿ.ಎಸ್. ಶ್ರೀವತ್ಸ ಬಿಜೆಪಿ ಶಾಸಕ

ನಿವೇಶನಗಳನ್ನು ಹಿಂತಿರುಗಿಸುವಂತೆ ಆರಂಭದಲ್ಲೇ ಸಲಹೆ ನೀಡಿದ್ದೆ. ಕಾನೂನು ಓದಿದವರು ಕಾನೂನಿಗೆ ಬಗ್ಗಬೇಕು. ರಂಪ ಮಾಡಿಕೊಳ್ಳಬಾರದು
ಎಚ್. ವಿಶ್ವನಾಥ್ ವಿಧಾನ ಪರಿಷತ್ ಸದಸ್ಯ

ಸಿದ್ದರಾಮಯ್ಯ ವಿರುದ್ಧದ ಆರೋಪವೇನು?

- ಮುಡಾ ಬಡಾವಣೆ ನಿರ್ಮಿಸಿದ ನಂತರ ಕೃಷಿ ಜಮೀನು ಎಂದು ನೋಂದಣಿ ಮಾಡಿದ್ದಾರೆ
- ಡಿನೋಟಿಫೈ ಹಿಂದೆ ಸಿದ್ದರಾಮಯ್ಯ ಪ್ರಭಾವ ಇದೆ
- ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಜಮೀನಿನ ದಾಖಲೆಗಳನ್ನು ತಿದ್ದಲಾಗಿದೆ
- ವಿಜಯನಗರ ಬಡಾವಣೆಯಲ್ಲಿ ದುಬಾರಿ ಮೌಲ್ಯದ ಬದಲಿ ನಿವೇಶನ ಪಡೆದಿದ್ದಾರೆ

ಪರ ವಾದವೇನು?

- ಡಿನೋಟಿಫೈ ಆದ ಜಮೀನನ್ನು ಮುಡಾ ವಶಕ್ಕೆ ಪಡೆದಿದ್ದು, ಪ್ರಾಧಿಕಾರವೇ ಒಪ್ಪಿಕೊಂಡಿದೆ
- ಕಾನೂನಾತ್ಮಕವಾಗಿಯೇ ಬದಲಿ ನಿವೇಶನ ಹಂಚಿಕೆ ಆಗಿದೆ
- ನಿರ್ದಿಷ್ಟ ಸ್ಥಳದಲ್ಲೇ ಬದಲಿ ನಿವೇಶನ ಕೊಡಿ ಎಂದು ಕೇಳಿಲ್ಲ
- ನಿವೇಶನ ಹಂಚಿಕೆ ಮಾಡಿದ್ದೇ ಬಿಜೆಪಿ ಸರ್ಕಾರ
- ಡಿನೋಟಿಫೈ, ಜಮೀನು ನೋಂದಣಿ ಸಂಬಂಧ ಯಾರ ಮೇಲೂ ಪ್ರಭಾವ ಬೀರಿಲ್ಲ

ಸುದ್ದಿ 2 ನಿಮಿಷ

ಕುರಿ ಹೊಲಸು ತಿನ್ನಲ್ಲ, ಕುರುಬ ತಪ್ಪುಮಾಡಲ್ಲ: ಈಶ್ವರಾನಂದಪುರಿ

ಬೆಂಗಳೂರು: 'ಕುರಿ ಹೊಲಸು ತಿನ್ನಲ್ಲ, ಕುರುಬ ತಪ್ಪುಮಾಡಲ್ಲ. ಯಾವ ಅಕ್ರಮವನ್ನೂ ಮಾಡದ ಸಿದ್ದರಾಮಯ್ಯ ಅವರ ಪರವಾಗಿ ನಾವೆಲ್ಲರೂ ಇರುತ್ತೇವೆ. ಬೃಹತ್ ಜನಾಂದೋಲನ ರೂಪಿಸುತ್ತೇವೆ' ಎಂದು ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.



ರಾಜ್ಯಪಾಲರು ದುರುದ್ದೇಶದಿಂದ, ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಖಂಡನೀಯ. ಒಂದು ಚುನಾಯಿತ ಸರ್ಕಾರವನ್ನು ಅಭದ್ರಗೊಳಿಸುವ ಹುನ್ನಾರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅಗೌರವ ಎಂದು ಅವರು ದೂರಿದ್ದಾರೆ.

ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ಪ್ರಬಲ ನಾಯಕ. ದೀನರು, ದುರ್ಬಲರು, ಮಹಿಳೆಯರೂ ಸೇರಿದಂತೆ ಶೋಷಿತರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ವರ್ಚಸ್ಸು ಮತ್ತು ಜನಪ್ರಿಯತೆಯನ್ನು ಸಹಿಸಲಾಗದ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಕುತಂತ್ರ ಮಾಡಿದ್ದಾರೆ. ಇಂತಹ ಕೃತ್ಯವನ್ನು ರಾಜ್ಯದ ಶೋಷಿತ ಸಮುದಾಯ ಸಹಿಸುವುದಿಲ್ಲ ಎಂದಿದ್ದಾರೆ.

'ಸಿ.ಎಂ ರಾಜೀನಾಮೆ ಪ್ರಶ್ನೆಯೇ ಇಲ್ಲ'

ಬೆಂಗಳೂರು: 'ರಾಜ್ಯಪಾಲರ ಕಚೇರಿ ದುರ್ಬಳಕೆ ಮಾಡಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ, ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಷಡ್ಯಂತ್ರ ನಡೆಯುತ್ತಿದೆ. ಈ ಪ್ರಕರಣದಲ್ಲಿ ಕೇವಲ ಸರ್ಕಾರ, ಕಾಂಗ್ರೆಸ್ ಪಕ್ಷವಷ್ಟೆ ಅಲ್ಲ, 'ಇಂಡಿಯಾ' (ವಿರೋಧ ಪಕ್ಷಗಳ ಮೈತ್ರಿಕೂಟ) ಒಕ್ಕೂಟ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲಲಿದೆ. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸಂಪುಟ ಸಹೋದ್ಯೋಗಿಗಳ ಜತೆ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಯಾವುದೇ ಒತ್ತಡಕ್ಕೆ ಸಿದ್ದರಾಮಯ್ಯ ಅವರು ಮಣಿಯುವುದಿಲ್ಲ. ಈ ಪ್ರಕರಣದಲ್ಲಿ ರಾಜಕೀಯ ಹೋರಾಟ ಮತ್ತು ಕಾನೂನು ಸಮರಕ್ಕೆ ನಾವು ಸಿದ್ಧರಾಗಿದ್ದೇವೆ' ಎಂದು ಘೋಷಿಸಿದರು.

ತನಿಖೆಯ ಸೆಕ್ಷನ್‌ಗಳು; ಶಿಕ್ಷೆಯ ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಮತ್ತು ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅನುಮತಿ ಕೋರಿದ್ದರು.

ಎರಡೂ ಕಾನೂನುಗಳ ಒಟ್ಟು 28 ಸೆಕ್ಷನ್‌ಗಳ ಅಡಿಯಲ್ಲಿ ಅನುಮತಿ ನೀಡಬೇಕು ಎಂದು ಅವರು ರಾಜ್ಯಪಾಲರನ್ನು ಕೋರಿದ್ದರು. ಆ ಸೆಕ್ಷನ್‌ಗಳ ಅಡಿಯಲ್ಲಿ ವ್ಯಾಖ್ಯಾನಿಸಲಾದ ಅಪರಾಧ ಕೃತ್ಯಗಳು ಮತ್ತು ಅವುಗಳಿಗೆ ವಿಧಿಸಬಹುದಾದ ಶಿಕ್ಷೆಯ ಪ್ರಮಾಣದ ವಿವರ ಇಲ್ಲಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ

ಸರ್ಕಾರಿ ನೌಕರ ಅಥವಾ ಚುನಾಯಿತ ಪ್ರತಿನಿಧಿಗಳಿಗೆ ಈ ಸೆಕ್ಷನ್‌ಗಳು ಅನ್ವಯವಾಗುತ್ತವೆ.

7: ಕರ್ತವ್ಯದಲ್ಲಿ ಅಕ್ರಮ, ಅಕ್ರಮ ಎಸಗುವಂತೆ ಒತ್ತಡ ಸೃಷ್ಟಿ ಅಥವಾ ಪ್ರಭಾವ ಬೀರುವುದು. ಮೂರು ವರ್ಷದಿಂದ ಏಳು ವರ್ಷದವರೆಗೆ ಜೈಲು ಮತ್ತು ದಂಡಕ್ಕೆ ಅವಕಾಶ

9: ಅಕ್ರಮ ಎಸಗಲು ವಾಣಿಜ್ಯ ಕಂಪನಿಯೊಂದು ಲಂಚ/ಆಮಿಷ ಒಡ್ಡುವುದು. ದಂಡಕ್ಕೆ ಅವಕಾಶ

11: ತಾನು ಮಾಡುತ್ತಿರುವ ಅಕ್ರಮದಿಂದ ಒಬ್ಬ ವ್ಯಕ್ತಿಗೆ ಲಾಭವಾಗುತ್ತದೆ ಎಂದು ಗೊತ್ತಿಲ್ಲದೇ ಅಥವಾ ಗೊತ್ತಿದ್ದೂ ಆ ವ್ಯಕ್ತಿಯಿಂದ ಲಾಭ ಪಡೆದುಕೊಳ್ಳುವುದು. 6 ತಿಂಗಳಿಂದ ಐದು ವರ್ಷದವರೆಗೆ ಜೈಲುಶಿಕ್ಷೆ ಮತ್ತು ದಂಡ

12: ಅಕ್ರಮಕ್ಕೆ ಪ್ರಚೋದನೆ: ಮೂರು ವರ್ಷದಿಂದ ಏಳು ವರ್ಷದವರೆಗೆ ಜೈಲು ಮತ್ತು ದಂಡ

15: ಅಕ್ರಮಕ್ಕೆ ಯತ್ನ: ಎರಡು ವರ್ಷದಿಂದ ಐದು ವರ್ಷದವರೆಗೆ ಜೈಲು ಮತ್ತು ದಂಡ

ಭಾರತೀಯ ನ್ಯಾಯ ಸಂಹಿತೆ

59: ಸಾರ್ವಜನಿಕ ಸೇವಕ ತಾನು ಅಕ್ರಮ ಎಸಗುತ್ತಿದ್ದೇನೆ ಎಂದು ಗೊತ್ತಿದ್ದೂ, ಎಸಗುವುದು. ಮತ್ತು ಅಂತಹ ಕೃತ್ಯವನ್ನು ಮುಚ್ಚಿಡುವಂತಹ ಅಥವಾ ಮರೆಮಾಚುವಂತಹ ಕೃತ್ಯ ಎಸಗುವುದು. ಗರಿಷ್ಠ 10 ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಅವಕಾಶ

61: ಅಕ್ರಮಕ್ಕೆ ಸಂಚು. ಆರು ತಿಂಗಳು ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡೂ

201: ಅಕ್ರಮ ಎಸಗುವ ಉದ್ದೇಶದಿಂದ ಸುಳ್ಳು ದಾಖಲೆ ಸಲ್ಲಿಸುವುದು. ಮೂರು ವರ್ಷದವರೆಗೆ ಜೈಲು ಅಥವಾ ದಂಡ ಅಥವಾ ಎರಡೂ

227, 228, 229: ಸುಳ್ಳು ಸಾಕ್ಷ್ಯ ನೀಡುವುದು, ಸುಳ್ಳು ಸಾಕ್ಷ್ಯ ಸೃಷ್ಟಿಸುವುದು. ಏಳು ವರ್ಷ ಮೀರದಂತಹ ಜೈಲುಶಿಕ್ಷೆ ಅಥವಾ ಗರಿಷ್ಠ ₹10,000 ದಂಡ ಅಥವಾ ಎರಡೂ

239: ಅಕ್ರಮದ ಬಗ್ಗೆ ಉದ್ದೇಶಪೂರ್ವಕವಾಗಿ ಮಾಹಿತಿ ನೀಡದೇ ಇರುವುದು ಅಥವಾ ಮರೆಮಾಚುವುದು. ಗರಿಷ್ಠ ಆರು ತಿಂಗಳವರೆಗೆ ಜೈಲುಶಿಕ್ಷೆ ಅಥವಾ ಗರಿಷ್ಠ ₹5,000 ದಂಡ ಅಥವಾ ಎರಡೂ

316(5): ವಿಶ್ವಾಸಕ್ಕೆ ಧಕ್ಕೆ ತಂದಂತಹ ಕೃತ್ಯ ಎಸಗಿದ ಸಾರ್ವಜನಿಕ ಸೇವಕನಿಗೆ ಗರಿಷ್ಠ 10 ವರ್ಷದವರೆಗೆ ಜೈಲುಶಿಕ್ಷೆ ಮತ್ತು ದಂಡ

322: ಸುಳ್ಳು ಹೇಳಿಕೆ ಮೇಲೆ ಆಸ್ತಿಯನ್ನು ಅಕ್ರಮವಾಗಿ ವರ್ಗಾಯಿಸಿಕೊಳ್ಳುವುದು. ಮೂರು ವರ್ಷದವರೆಗೆ ಜೈಲು ಅಥವಾ ದಂಡ ಅಥವಾ ಎರಡೂ

335, 336, 338, 340: ನಕಲಿ ದಾಖಲೆ ಸೃಷ್ಟಿ, ದಾಖಲೆ ತಿರುಚುವುದು. ಗರಿಷ್ಠ 10 ವರ್ಷಗಳ ಜೈಲುಶಿಕ್ಷೆ ಮತ್ತು ದಂಡ

'ಸಂಪುಟದ ನಿರ್ಣಯ ವಿಶ್ವಾಸಾರ್ಹವಾಗಿಲ್ಲ'

ಸ್ವತಂತ್ರವಾಗಿ ಪರಿಶೀಲಿಸಿ ನಿರ್ಧಾರ; ರಾಜ್ಯಪಾಲ ಥಾವರಚಂದ್ ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ಕೋರಿರುವ ಅರ್ಜಿ ತಿರಸ್ಕರಿಸುವಂತೆ ಸಲಹೆ ನೀಡಲು ಆಗಸ್ಟ್ 1ರಂದು ನಡೆದ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯವು ವಿಶ್ವಾಸ ಮೂಡಿಸುವಂತಿಲ್ಲ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದ್ದಾರೆ.

ಪ್ರದೀಪ್ ಕುಮಾರ್ ಎಸ್.ಪಿ., ಟಿ.ಜೆ. ಅಬ್ರಹಾಂ ಮತ್ತು ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಗಳನ್ನು ಆಧರಿಸಿ ಮುಖ್ಯಮಂತ್ರಿಯವರ ವಿರುದ್ಧ ತನಿಖೆಗೆ ಅನುಮತಿ ನೀಡಿ ಶುಕ್ರವಾರ ಹೊರಡಿಸಿರುವ ಆರು ಪುಟಗಳ ಆದೇಶದಲ್ಲಿ ಅವರು ಈ ಅಭಿಪ್ರಾಯ ಉಲ್ಲೇಖಿಸಿದ್ದಾರೆ. ದೂರುಗಳು ಮತ್ತು ದಾಖಲೆಗಳನ್ನು ತಾವು ಸ್ವತಂತ್ರವಾಗಿ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

'ತನಿಖೆಗೆ ಏಕೆ ಅನುಮತಿ ನೀಡಬಾರದು ಎಂದು ಜುಲೈ 26ರಂದು ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ನೀಡಿದ್ದೆ. ಆಗಸ್ಟ್ 3ರಂದು ಉತ್ತರ ನೀಡಿದ್ದ ಸಿದ್ದರಾಮಯ್ಯ, ಆರೋಪಗಳನ್ನು ಅಲ್ಲಗಳೆದಿದ್ದರು. ಆಗಸ್ಟ್ 1ರಂದು ಸಂಪುಟ ಸಭೆಯ ನಿರ್ಣಯವು ನನ್ನ ಕಚೇರಿಗೆ ತಲುಪಿತು. ಆಗಸ್ಟ್ 4ರಂದು ಆರೋಪಗಳನ್ನು ನಿರಾಕರಿಸಿ ಮತ್ತಷ್ಟು ದಾಖಲೆಗಳನ್ನು ಸಲ್ಲಿಸಿದ್ದರು' ಎಂದು ರಾಜ್ಯಪಾಲರು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ಮುಖ್ಯ ಕಾರ್ಯದರ್ಶಿಯವರು ಆಗಸ್ಟ್ 1ರಂದು ಸಂಪುಟ ಸಭೆ ಕರೆದಿರುವುದು ಕಡತಗಳಲ್ಲಿ ಉಲ್ಲೇಖವಾಗಿದೆ. ತಾವು ಜುಲೈ 26ರಂದು ನೀಡಿದ್ದ ಶೋಕಾಸ್ ನೋಟಿಸ್ ಅನ್ನು ಆ.1ರ ಸಂಪುಟ ಸಭೆಯಲ್ಲಿ ಮಂಡಿಸಿ ಚರ್ಚಿಸಲಾಗಿದೆ. ಸಿದ್ದರಾಮಯ್ಯ ಅವರು ಸಂಪುಟ ಸಭೆಯ ಅಧ್ಯಕ್ಷತೆ ವಹಿಸಿರಲಿಲ್ಲ ಎಂಬುದನ್ನೂ ಗಮನಿಸಲಾಗಿದೆ ಎಂದು ರಾಜ್ಯಪಾಲರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.


'ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ಕೋರಿರುವ ಅರ್ಜಿಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಮುಖ್ಯಮಂತ್ರಿಯವರ ಸಲಹೆಯಂತೆ ನೇಮಕಗೊಂಡ ಸಂಪುಟ ಸದಸ್ಯರು, ನೋಟಿಸ್ ಹಿಂಪಡೆಯುವಂತೆ ಮತ್ತು ಅರ್ಜಿಯನ್ನು ತಿರಸ್ಕರಿಸುವಂತೆ ಸಲಹೆ ನೀಡಿದ್ದಾರೆ. ಇದು ವಿಶ್ವಾಸ ಮೂಡಿಸುವ ನಿರ್ಣಯವಲ್ಲ' ಎಂದಿದ್ದಾರೆ.

ಮಧ್ಯಪ್ರದೇಶ ವಿಶೇಷ ಪೊಲೀಸ್ ಘಟಕ ಮತ್ತು ಮಧ್ಯಪ್ರದೇಶ ಸರ್ಕಾರದ ಮಧ್ಯದ ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟ್ 2004ರಲ್ಲಿ ನೀಡಿದ್ದ ತೀರ್ಪನ್ನು ತಮ್ಮ ಆದೇಶದಲ್ಲಿ ಉಲ್ಲೇಖಿಸಿರುವ ರಾಜ್ಯಪಾಲರು, ಸಂಪುಟದ ಸಲಹೆಯನ್ನು ರಾಜ್ಯಪಾಲರು ಪಾಲಿಸಬೇಕಾದುದು ಮತ್ತು ವಿಶೇಷ ಸಂದರ್ಭಗಳಲ್ಲಿ ವಿವೇಚನಾ ಅಧಿಕಾರವನ್ನು ಬಳಸಲು ಇರುವ ಅವಕಾಶಗಳ ಕುರಿತು ಈ ಪ್ರಕರಣವು ಸ್ಪಷ್ಟಪಡಿಸಿದೆ ಎಂದು ಹೇಳಿದ್ದಾರೆ.

'ಇಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ಮೇಲ್ನೋಟಕ್ಕೆ ದೃಢಪಡಿಸುವಂತಹ ಪ್ರಬಲ ದಾಖಲೆಗಳು ಲಭ್ಯವಿದ್ದಾಗಲೂ ರಾಜ್ಯಪಾಲರು ವಿವೇಚನಾ ಅಧಿಕಾರ ಬಳಸಲು ಅವಕಾಶ ನೀಡದೆ ಸರ್ಕಾರಕ್ಕೆ ಅನುಮತಿ ನಿರಾಕರಿಸುವ ಅಧಿಕಾರ ನೀಡಿದಲ್ಲಿ ಕಾನೂನಿನ ಆಡಳಿತವು ಕುಸಿದುಬೀಳುತ್ತದೆ. ಅಧಿಕಾರದಲ್ಲಿರುವ ಪ್ರಭಾವಿ ವ್ಯಕ್ತಿಗಳ ವಿರುದ್ಧ ಮೇಲ್ನೋಟಕ್ಕೆ ಸಾಕ್ಷ್ಯಗಳು ಲಭ್ಯವಿದ್ದಾಗಲೂ ತನಿಖೆಗೆ ಅನುಮತಿ ನಿರಾಕರಿಸಿದರೆ ಅಥವಾ ನಿರ್ಣಯವನ್ನು ತಡೆ ಹಿಡಿದರೆ ಅದರಿಂದ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತದೆ. ತಮ್ಮ ವಿರುದ್ಧ ವಿಚಾರಣೆಗೆ ಅನುಮತಿ ನೀಡವುದಿಲ್ಲ ಎಂಬ ಭಾವನೆಯಿಂಧ ಅಧಿಕಾರದಲ್ಲಿರುವ ವ್ಯಕ್ತಿಗಳು ಕಾನೂನು ಉಲ್ಲಂಘಿಸಲು ಪ್ರೇರಣೆ ದೊರೆಯುತ್ತದೆ ಎಂದು ಸುಪ್ರೀಂ ಕೋರ್ಟ್ 2004ರ ತೀರ್ಪಿನಲ್ಲಿ ಹೇಳಿದ್ದನ್ನು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಭಂಡತನ ಬಿಟ್ಟು ಸಿ.ಎಂ ರಾಜೀನಾಮೆ ಕೊಡಲಿ: ವಿಜಯೇಂದ್ರ ಆಗ್ರಹ

ಪ್ರಜಾವಾಣಿ ವಾರ್ತೆ


ವಿಜಯೇಂದ್ರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಂಡತನ ಬಿಟ್ಟು ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಮುಡಾ' ನಿವೇಶನ ಹಗರಣದ ದೂರು ಆಧರಿಸಿ ರಾಜ್ಯಪಾಲರು ಸಂವಿಧಾನದತ್ತ ಅಧಿಕಾರ ಚಲಾಯಿಸಿ, ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡಿದ್ದಾರೆ. ಸರ್ಕಾರದ ಭ್ರಷ್ಟ ಹಗರಣಗಳ ವಿರುದ್ಧ ಹಾಗೂ ಮುಖ್ಯಮಂತ್ರಿ ಸ್ವಜನ ಪಕ್ಷಪಾತ ವಿರುದ್ಧ ಸಾಕಷ್ಟು ದಾಖಲೆ, ಪುರಾವೆಗಳು ಇರುವುದನ್ನು ದೃಢಪಡಿಸಿಕೊಂಡಿದ್ದಾರೆ ಎಂದಿದ್ದಾರೆ.

ಎಷ್ಟೇ ಹೋರಾಟ ನಡೆಸಿದರೂ ತಮ್ಮನ್ನು ಜಗ್ಗಿಸುವವರಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭಂಡತನ ಪ್ರದರ್ಶಿಸುತ್ತಿದ್ದರು. ಪ್ರಕರಣದ ತನಿಖೆ ಪಾರದರ್ಶಕವಾಗಿ ನಡೆಯಲು ಅನುವಾಗುವಂತೆ ಈಗಲಾದರೂ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.


ಬಿಜೆಪಿ ಅವಧಿಯ ಭ್ರಷ್ಟಾಚಾರಗಳನ್ನು ಬಯಲಿಗೆಳೆಯುವ ಮೂಲಕ ಆ ಪಕ್ಷದವರನ್ನು ನಾವು ಬೆತ್ತಲೆ ಮಾಡುತ್ತೇವೆ
ಸಲೀಂ ಅಹಮದ್ ವಿಧಾನಪರಿಷತ್ ಸರ್ಕಾರಿ ಮುಖ್ಯ ಸಚೇತಕ


ಮೇಲಿನಿಂದ ಒತ್ತಡವಿರುವ ಕಾರಣ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ಕೊಟ್ಟಿದ್ದಾರೆ, ಇದರ ಹಿಂದೆ ರಾಜಕೀಯ ಷಡ್ಯಂತ್ರವಿದೆ. ನಾವು ಕೂಡ ಕಾನೂನು ಮೂಲಕವೇ ಉತ್ತರ ಕೊಡುತ್ತೇವೆ
ಜಿ. ಪರಮೇಶ್ವರ, ಗೃಹ ಸಚಿವ


ರಾಜ್ಯಪಾಲರು ಸಂವಿಧಾನದತ್ತ ಅಧಿಕಾರ ಚಲಾಯಿಸಿ, ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡಿದ್ದಾರೆ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟು, ಕಾನೂನು ಕ್ರಮ ಎದುರಿಸಬೇಕು
ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ


ಮುಡಾ ಹಗರಣದಲ್ಲಿ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು. ಅವರ ಕಾನೂನು ಹೋರಾಟಕ್ಕೆ ನಮ್ಮ ತಕರಾರು ಇಲ್ಲ. ಆದರೆ, ಅದರ ನೆಪದಲ್ಲಿ ತನಿಖೆಗೆ ಅಡ್ಡಿಪಡಿಸಬಾರದು
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ


ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿದರೆ ನನ್ನಷ್ಟು ಖುಷಿಪಡುವ ಮತ್ತೊಬ್ಬ ವ್ಯಕ್ತಿ ಇಲ್ಲ. ಪ್ರಾಸಿಕ್ಯೂಷನ್‌ಗೆ ಅನುಮತಿಯ ಮುಂದಿನ ಹಂತ ಕಾನೂನು ಪ್ರಕಾರ ನಡೆಯುತ್ತದೆ
ವಿ. ಸೋಮಣ್ಣ , ಕೇಂದ್ರ ಸಚಿವ


ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಆಗಿನ ರಾಜ್ಯಪಾಲರು ಖಾಸಗಿ ದೂರು ಆಧರಿಸಿ ತನಿಖೆಗೆ ಅನುಮತಿ ನೀಡಿದ್ದರು. ಆಗ ಕಾಂಗ್ರೆಸ್ ಕೈವಾಡ ವಿತ್ತು ಎಂದರೆ ಅದನ್ನು ಒಪ್ಪುತ್ತಾರಾ?
ಆರ್. ಅಶೋಕ
ವಿರೋಧ ಪಕ್ಷದ ನಾಯಕ

ಕಾನೂನು ತಜ್ಞರು ಏನಂತಾರೆ?

'ಎರಡು ಸಾಧ್ಯತೆಗಳು'




ಈ ಪ್ರಕರಣದಲ್ಲಿ ತನಿಖೆಯ ಅಗತ್ಯವಿಲ್ಲ. ತನಿಖೆಯಿಂದ ಸಿಗಬಹುದಾದ ಎಲ್ಲಾ ದಾಖಲೆಗಳನ್ನು ನಾವೇ ತೆಗೆದಿದ್ದೇವೆ. ಹೀಗಾಗಿ ವಿಚಾರಣೆ ಆರಂಭಿಸಿ ಎಂದು ಕೇಳಬಹುದು. ಅದಕ್ಕೆ ನ್ಯಾಯಾಧೀಶರು, 'ಲಭ್ಯವಿರುವ ದಾಖಲೆಗಳ ಆಧಾರದಲ್ಲೇ ವಿಚಾರಣೆ ನಡೆಸಬಹುದು. ಆದರೆ ಈಗ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ 17ಎ ಸೆಕ್ಷನ್ ಅಡಿ ತನಿಖೆಗೆ ಮಾತ್ರ ಅನುಮತಿ ನೀಡಲಾಗಿದೆ. ಕಾಯ್ದೆಯ 19ನೇ ಸೆಕ್ಷನ್ ಅಡಿ ವಿಚಾರಣೆ ನಡೆಸಲು ಅನುಮತಿ ದೊರೆತಿಲ್ಲ. ಅಂತಹ ಅನುಮತಿ ದೊರೆತ ನಂತರ ಪ್ರಕರಣದಲ್ಲಿ ಮುಂದುವರೆಯಬಹುದು' ಎಂದು ಹೇಳಬಹುದು. ಇದು ಮೊದಲನೇ ಸಾಧ್ಯತೆ.

ವಿಚಾರಣೆ ನಡೆಸಿ ಎಂದು ದೂರುದಾರ ಕೋರಿದರೂ ನ್ಯಾಯಾಧೀಶರು, 'ಲಭ್ಯವಿರುವ ದಾಖಲೆಗಳ ಆಧಾರದಲ್ಲಷ್ಟೇ ವಿಚಾರಣೆ ನಡೆಸಲು ಆಗುವುದಿಲ್ಲ. ತನಿಖೆಯ ಅಗತ್ಯ ಇದೆ' ಎಂದು ತನಿಖೆಗೆ ಆದೇಶಿಸುವುದು ಎರಡನೇ ಸಾಧ್ಯತೆ. ಹಾಗೆ ಆದೇಶಿಸಿದರೆ ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸುತ್ತಾರೆ. ಜಿಲ್ಲಾ ನ್ಯಾಯಾಲಯಗಳೇ ಸಿಬಿಐ ತನಿಖೆಗೆ ಆದೇಶಿಸುವ ಅಧಿಕಾರ ವ್ಯಾಪ್ತಿ ಹೊಂದಿರುವುದಿಲ್ಲ. ಹೀಗಾಗಿ ಅಂತಹ ಸಾಧ್ಯತೆ ಇಲ್ಲ.

ಕೆ.ವಿ.ಧನಂಜಯ, ಹಿರಿಯ ವಕೀಲ

'ಯಡಿಯೂರಪ್ಪ ಅಧಿಕಾರ ನಡೆಸಲಿಲ್ಲವೇ'



ಯಡಿಯೂರಪ್ಪ ವಿರುದ್ಧವೂ ತನಿಖೆಗೆ ಅನುಮತಿ ನೀಡಲಾಗಿತ್ತು. ಅವರು ಅದರ ಮಧ್ಯೆಯೇ ಅಧಿಕಾರ ನಡೆಸಲಿಲ್ಲವೇ? ಈಗ ಅರವಿಂದ ಕೇಜ್ರಿವಾಲ್ ಜೈಲಿನಿಂದಲೇ ಅಧಿಕಾರ ನಡೆಸುತ್ತಿಲ್ಲವೇ? ಈ ಪ್ರಕರಣದಲ್ಲೂ ಹಾಗೇ ಆಗಬಹುದು. ರಾಜಕೀಯವಾಗಿ ಏನು ಆಗುತ್ತದೆ ಎಂದು ಹೇಳಲು ಬರುವುದಿಲ್ಲ.

ಕಾನೂನಾತ್ಮಕವಾಗಿ ಇದೊಂದು ಖಾಸಗಿ ದೂರು. ದೂರು ನೀಡಿದ ವ್ಯಕ್ತಿ ನ್ಯಾಯಾಲಯದ ಮುಂದೆ ಏನನ್ನು ಕೋರುತ್ತಾರೆ ಎಂಬುದರ ಮೇಲೆ ಪ್ರಕರಣ ಹೇಗೆ ಮುಂದುವರೆಯುತ್ತದೆ ಎಂಬುದು ನಿರ್ಧಾರವಾಗುತ್ತದೆ. ಅವರು ತನಿಖೆಗೂ ಕೋರಬಹುದು. ವಿಚಾರಣೆಗೂ ಕೋರಬಹುದು. ಮುಖ್ಯಮಂತ್ರಿಗೂ ಹಲವು ಆಯ್ಕೆಗಳಿವೆ.

ಉದಯ ಹೊಳ್ಳ, ಹಿರಿಯ ವಕೀಲ

ಸಿ. ಎಂ ವಿರುದ್ಧ ತನಿಖೆಗೆ ಒಪ್ಪಿಗೆ: ಮುಂದೆ?

ಒಂದನೇ ಪುಟದಿಂದ...

ತನಿಖೆಗೆ ಅನುಮತಿ ನೀಡಿರುವುದರ ವಿರುದ್ಧ ಕಾನೂನು ಹೋರಾಟಕ್ಕೂ ಸರ್ಕಾರ ತಯಾರಿ ನಡೆಸಿರುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿರುವ ಮಾಹಿತಿ ಹೊರ ಬೀಳುತ್ತಿದ್ದಂತೆಯೇ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ರಾಜ್ಯದಾದ್ಯಂತ ಪ್ರತಿಭಟನೆ ಆರಂಭಿಸಿದ್ದಾರೆ. ಸಂಪುಟದ ಎಲ್ಲ ಸದಸ್ಯರು ಮತ್ತು ಕಾಂಗ್ರೆಸ್ ನಾಯಕರು ಮುಖ್ಯಮಂತ್ರಿಯವರ ಬೆನ್ನಿಗೆ ನಿಂತಿದ್ದಾರೆ. ಇನ್ನೊಂದೆಡೆ ಬಿಜೆಪಿ ಹಾಗೂ ಜೆಡಿಎಸ್ ಮುಖ್ಯಮಂತ್ರಿಯವರ ರಾಜೀನಾಮೆಗೆ ಆಗ್ರಹಿಸಿವೆ.

ರಾಜ್ಯಪಾಲರ ಸಮ್ಮತಿ: ವಕೀಲರಾದ ಟಿ.ಜೆ. ಅಬ್ರಹಾಂ, ಪ್ರದೀಪ್ ಕುಮಾರ್ ಎಸ್.ಪಿ. ಮತ್ತು ಮೈಸೂರಿನ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಮನವಿಗಳನ್ನು ಪುರಸ್ಕರಿಸಿರುವ ರಾಜ್ಯಪಾಲರು, ಮೂರೂ ದೂರುಗಳಲ್ಲಿರುವ ಆರೋಪಗಳ ಕುರಿತು ತನಿಖೆಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17–ಎ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 218ರಡಿ ಒಪ್ಪಿಗೆ ನೀಡಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ಕೋರಿ ಅಬ್ರಹಾಂ ಜುಲೈ 26ರಂದು ಮನವಿ ಸಲ್ಲಿಸಿದ್ದರು. ಅದೇ ದಿನ ಮುಖ್ಯಮಂತ್ರಿಯವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದ ರಾಜ್ಯಪಾಲರು, ವಿವರಣೆ ಕೇಳಿದ್ದರು. ಮನವಿಯನ್ನು ತಿರಸ್ಕರಿಸುವಂತೆ ರಾಜ್ಯಪಾಲರಿಗೆ ಸಲಹೆ ನೀಡುವ ನಿರ್ಣಯವನ್ನು ಆಗಸ್ಟ್ 1ರ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಮುಖ್ಯಮಂತ್ರಿಯವರು ಆ.3ರಂದು ರಾಜ್ಯಪಾಲರಿಗೆ ಉತ್ತರ ಸಲ್ಲಿಸಿದ್ದರು.

ಎರಡು ವಾರ ಮೌನವಾಗಿದ್ದ ರಾಜ್ಯಪಾಲರು, ತನಿಖೆಗೆ ಅನುಮತಿ ನೀಡುವ ನಿರ್ಧಾರವನ್ನು ಶುಕ್ರವಾರ ತಡರಾತ್ರಿ ಕೈಗೊಂಡಿದ್ದಾರೆ. ಮೂರೂ ಅರ್ಜಿದಾರರಿಗೆ ಶನಿವಾರ ಆದೇಶದ ಪ್ರತಿಯನ್ನು ಹಸ್ತಾಂತರಿಸಲಾಯಿತು.

ಶೋಕಾಸ್ ನೋಟಿಸ್ ನೀಡಿದ್ದ ರಾಜ್ಯಪಾಲರ ಕ್ರಮಕ್ಕೇ ಆಕ್ಷೇಪಿಸಿದ್ದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ಈಗ ತನಿಖೆಗೆ ಅನುಮತಿ ನೀಡಿರುವುದನ್ನೂ ವಿರೋಧಿಸಿದೆ.


ಮೈಸೂರಿನ ಅಹಿಂದ ಸಂಘಟನೆ ಹಾಗೂ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸದಸ್ಯರು ನ್ಯಾಯಾಲಯದ ಮುಂಭಾಗ ಶನಿವಾರ ಅರೆಬೆತ್ತಲೆಯಾಗಿ ರಾಜ್ಯಪಾಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು– ಪ್ರಜಾವಾಣಿ ಚಿತ್ರ

ಪ್ರಕರಣದಲ್ಲಿ ಮಂದಿನ ಸಾಧ್ಯತೆಗಳು

- ಟಿ.ಜೆ. ಅಬ್ರಹಾಂ, ಸ್ನೇಹಮಯಿ ಕೃಷ್ಣ ಮತ್ತು ಪ್ರದೀಪ್ ಕುಮಾರ್ ಎಸ್.ಪಿ. ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಲ್ಲಿಸಿರುವ ಖಾಸಗಿ ದೂರುಗಳು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇವೆ. ನ್ಯಾ. ಸಂತೋಷ ಗಜಾನನ ಭಟ್ ಅವರು ಇದೇ 21ಕ್ಕೆ ಆದೇಶವನ್ನು ಕಾಯ್ದಿರಿಸಿದ್ದಾರೆ.
- ರಾಜ್ಯಪಾಲರು ಮುಖ್ಯಮಂತ್ರಿ ವಿರುದ್ಧ ವಿಚಾರಣೆ ಆರಂಭಿಸಲು ಅನುಮತಿ ನೀಡಿಲ್ಲ. ತನಿಖೆಗೆ ಮಾತ್ರ ಅನುಮತಿ ನೀಡಿದ್ದಾರೆ. ದೂರುದಾರರು ರಾಜ್ಯಪಾಲರ ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದು. ಅದನ್ನು ಆಧರಿಸಿ ಆರೋಪಗಳ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ನ್ಯಾಯಾಲಯ ಆದೇಶಿಸಬಹುದು.
- ದೂರುದಾರರು ನೇರವಾಗಿ ಲೋಕಾಯುಕ್ತ ಪೊಲೀಸರಿಗೆ ದೂರು ಮತ್ತು ರಾಜ್ಯಪಾಲರ ಅನುಮತಿಯನ್ನು ಸಲ್ಲಿಸಿ ತನಿಖೆ ಆರಂಭಿಸುವಂತೆಯೂ ಮನವಿ ಮಾಡಬಹುದು.
- ನ್ಯಾಯಾಲಯ ನಿರ್ದೇಶನ ನೀಡಿದರೆ ಅಥವಾ ದೂರುದಾರರು ನೇರವಾಗಿ ದೂರು ಸಲ್ಲಿಸಿದರೆ ಲೋಕಾಯುಕ್ತ ಪೊಲೀಸರು ಆರೋಪಿಗಳ ಪಟ್ಟಿಯಲ್ಲಿ ಉಲ್ಲೇಖಿಸಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಬಹುದು.
- ದೂರಿನ ಜತೆ ಲಭ್ಯವಿರುವ ದಾಖಲೆಗಳ ಆಧಾರದಲ್ಲೇ ಮುಖ್ಯಮಂತ್ರಿಯವರ ವಿರುದ್ಧ ವಿಚಾರಣೆ ಆರಂಭಿಸಬಹುದು, ತನಿಖೆಯ ಅಗತ್ಯವಿಲ್ಲ ಎಂದು ದೂರುದಾರರು ಮನವಿ ಸಲ್ಲಿಸಿದರೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ರಾಜ್ಯಪಾಲರಿಂದ ವಿಚಾರಣೆಗೆ ಪ್ರತ್ಯೇಕ ಅನುಮತಿ ಪಡೆದು ಸಲ್ಲಿಸುವಂತೆ ದೂರುದಾರರಿಗೆ ನ್ಯಾಯಾಲಯವು ನಿರ್ದೇಶನ ನೀಡುತ್ತದೆ. ಅನುಮತಿ ಪಡೆದು, ಸಲ್ಲಿಸುವವರೆಗೂ ಖಾಸಗಿ ದೂರನ್ನು ಬಾಕಿ ಇರಿಸಬಹುದು.

ಎಚ್‌ಡಿಕೆ, ನಿರಾಣಿ ವಿರುದ್ಧ ಅನುಮತಿ ಏಕಿಲ್ಲ?

ಒಂದನೇ ಪುಟದಿಂದ...

'ಮಾಜಿ ಸಚಿವ ಮುರುಗೇಶ ನಿರಾಣಿ, ಮಾಜಿ ಸಚಿವೆ ಶಶಿಕಲಾ ಜೊಲ್ಲೆ, ಜನಾರ್ದನ ರೆಡ್ಡಿ ವಿರುದ್ಧವೂ ತನಿಖೆ ನಡೆಸಿದ್ದ ಲೋಕಾಯುಕ್ತ, ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿ ಈ ಹಿಂದೆಯೇ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ. ಆದರೆ, ರಾಜ್ಯಪಾಲರು ಅನುಮತಿ ಕೊಟ್ಟಿಲ್ಲ. ಆದರೆ, ನನ್ನ ವಿಚಾರದಲ್ಲಿ ತರಾತುರಿಯಿಂದ ತೀರ್ಮಾನ ತೆಗೆದುಕೊಂಡಿದ್ದಾರೆ' ಎಂದು ಟೀಕಿಸಿದರು.

'ರಾಜ್ಯಪಾಲರ ತೀರ್ಮಾನ ಕಾನೂನುಬಾಹಿರ, ಅಸಂವಿಧಾನಿಕವೆಂದು ಅಭಿಪ್ರಾಯಪಟ್ಟು, ಇಡೀ ಸಚಿವ ಸಂಪುಟ ತೀವ್ರವಾಗಿ ಖಂಡಿಸಿದೆ. ಪ್ರಾಸಿಕ್ಯೂಷನ್ ಅನುಮತಿಗೆ ಸಂವಿಧಾನದ ಬಲವಿಲ್ಲ ಎಂದೂ ನಿರ್ಣಯಿಸಿದೆ. ರಾಜ್ಯಪಾಲರು ಸಂವಿಧಾನದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು. ಅದನ್ನು ಬಿಟ್ಟು ಬಿಜೆಪಿ–ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಕೆಲಸ ಮಾಡಿದ್ದಾರೆ. ಜನಾಶೀರ್ವಾದದಿಂದ ರಚನೆಯಾಗಿರುವ ಸರ್ಕಾರವನ್ನು ರಾಜ್ಯಪಾಲರ ಮೂಲಕ ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಇದು ಪ್ರಜಾಪ್ರಭುತ್ವದ ಮೂಲ ತತ್ವಕ್ಕೆ, ಒಕ್ಕೂಟ ವ್ಯವಸ್ಥೆಗೆ, ಪ್ರಜಾತಂತ್ರಕ್ಕೆ ಧಕ್ಕೆ ಎಂದು ಸಚಿವ ಸಂಪುಟ ನಿರ್ಣಯಿಸಿದೆ' ಎಂದರು.

'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಸಂಪೂರ್ಣ ರಾಜಕೀಯ ದುರುದ್ದೇಶದ ತೀರ್ಮಾನ. ಅನುಮತಿ ನೀಡಿರುವ ರಾಜ್ಯಪಾಲರ ನಡೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ. ರಾಜಭವನದ ಈ ನಡೆಗೆ ಧಿಕ್ಕಾರ ಹೇಳುತ್ತೇವೆ. ದೊಡ್ಡ ಷಡ್ಯಂತ್ರ ನಡೆಯುತ್ತಿರುವುದು ನಮಗೆ ಗೊತ್ತಿತ್ತು. ಅದಕ್ಕೆ ನಾವೂ ಹೋರಾಟದ ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದರು.

'ನನ್ನನ್ನು ರಾಜಕೀಯವಾಗಿ ತೇಜೋವಧೆ ಮಾಡಲು ಹೊರಟಿದ್ದಾರೆ. ಜನರು ನನ್ನ ಜೊತೆ ಇರುವವರೆಗೂ ಇದು ಸಾಧ್ಯವಿಲ್ಲ. ಏಳು ಕೋಟಿ ಕನ್ನಡಿಗರ ಆಶೀರ್ವಾದದಿಂದ ನಾವು ಅಧಿಕಾರಕ್ಕೆ ಬಂದಿದ್ದೇವೆ' ಎಂದರು.

'ಇಡೀ ಸಚಿವ ಸಂಪುಟ ನನ್ನ ಜೊತೆ ಇರುವುದಾಗಿ ಹೇಳಿದೆ. ಪಕ್ಷ ಕೂಡ ಇದನ್ನೇ ಹೇಳಿದೆ. ಸಚಿವರು, ಶಾಸಕರು ಬೆಂಬಲ ನೀಡಿದ್ದಾರೆ. ನನ್ನ ಜೊತೆ ಇರುತ್ತೇವೆಂದು ಹೈಕಮಾಂಡ್ ನಾಯಕರೂ ದೂರವಾಣಿ ಕರೆ ಮಾಡಿ ಹೇಳಿದ್ದಾರೆ' ಎಂದರು.

ರಾಜೀನಾಮೆ ನೀಡಬೇಕೆಂಬ ವಿಪಕ್ಷಗಳ ಆಗ್ರಹಕ್ಕೆ ಆಕ್ರೋಶ ವ್ಯಕ್ತಪಡಿಸಿದ ಮುಖ್ಯಮಂತ್ರಿ, 'ನಾನು ಯಾಕೆ ರಾಜೀನಾಮೆ ನೀಡಬೇಕು? ಏನು ಅಪರಾಧ ಮಾಡಿದ್ದೇನೆ? ನನ್ನ ವಿರುದ್ಧ ಕಾನೂನುಬಾಹಿರವಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ತೀರ್ಮಾನ ತೆಗೆದುಕೊಂಡ ರಾಜ್ಯಪಾಲರೇ ರಾಜೀನಾಮೆ ನೀಡಬೇಕು' ಎಂದು ಏರುಧ್ವನಿಯಲ್ಲಿ ಪ್ರತಿಕ್ರಿಯಿಸಿದರು.

ಅನುಮತಿ ಏಕೆ ಅಗತ್ಯ?

- ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಸರ್ಕಾರಿ ನೌಕರ ಅಥವಾ ಚುನಾಯಿತ ಪ್ರತಿನಿಧಿ ವಿರುದ್ಧ ತನಿಖೆ ಆರಂಭಿಸುವುದಕ್ಕೂ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಿ 2018ರಲ್ಲಿ ತಿದ್ದುಪಡಿ ತರಲಾಗಿದೆ. ಸೆಕ್ಷನ್ 17–ಎ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ತನಿಖೆ ನಡೆಸುವಂತಿಲ್ಲ.
- ಸರ್ಕಾರಿ ನೌಕರರು ಅಥವಾ ಚುನಾಯಿತ ಪ್ರತಿನಿಧಿಗಳ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್‌ಗಳ ಅಡಿಯಲ್ಲಿನ ಆರೋಪಗಳ ಕುರಿತು ವಿಚಾರಣೆ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಕಡ್ಡಾಯ ಎಂದು ಬಿಎನ್‌ಎಸ್‌ಎಸ್ ಸೆಕ್ಷನ್ 218 ಹೇಳುತ್ತದೆ.

ಬಿಎಸ್‌ವೈ ವಿರುದ್ಧವೂ ನಡೆದಿತ್ತು ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅಂದಿನ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರು ಅನುಮತಿ ನೀಡಿದ್ದರು.

2011ರಲ್ಲಿ ನಡೆದ ಈ ಪ್ರಕರಣ ಬಿಟ್ಟರೆ, ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ನೀಡಿರುವುದು ರಾಜ್ಯದಲ್ಲಿ ಎರಡನೇ ಪ್ರಕರಣವಾಗಿದೆ. ರಾಜ್ಯಪಾಲರ ನಡೆಯನ್ನು ಸ್ವಾಗತಿಸಿದ್ದ ಅಂದಿನ ವಿರೋಧ ಪಕ್ಷ ಕಾಂಗ್ರೆಸ್, ಯಡಿಯೂರಪ್ಪ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿತ್ತು. ರಾಜ್ಯಪಾಲರ ನಡೆ ಸಂವಿಧಾನ ಬಾಹಿರ ಎಂದು ಖಂಡಿಸಿದ್ದ ಆಡಳಿತಾರೂಢ ಬಿಜೆಪಿ ನಾಯಕರು ರಾಜ್ಯ ಬಂದ್‌ಗೆ ಕರೆ ಕೊಟ್ಟಿದ್ದರು. ಬಂದ್ ನೇತೃತ್ವವನ್ನು ಅಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಕೆ.ಎಸ್. ಈಶ್ವರಪ್ಪ ಅವರೇ ವಹಿಸಿಕೊಂಡಿದ್ದರು.

ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು, ಎರಡು ಪ್ರಕರಣಗಳಲ್ಲಿ ಅಕ್ರಮವಾಗಿ ಭೂಮಿ ಡಿನೋಟಿಫೈ ಮಾಡಿ ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿ ವಕೀಲರಾದ ಸಿರಾಜಿನ್ ಬಾಷಾ ಹಾಗೂ ಬಾಲರಾಜ್ ಅವರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದರು. ತಮ್ಮ ಕುಟುಂಬದ ಹೆಸರಿನಲ್ಲಿರುವ ಪ್ರೇರಣಾ ಟ್ರಸ್ಟ್‌ಗೆ ₹20 ಕೋಟಿ ಲಂಚ ಪಡೆದಿದ್ದಾರೆ ಎಂಬ ಆರೋಪ ಯಡಿಯೂರಪ್ಪ ಮೇಲಿತ್ತು.

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು 2011ರ ಜುಲೈನಲ್ಲಿ ವರದಿ ನೀಡಿದ್ದರು. 2011ರ ಅಕ್ಟೋಬರ್ 11ರಂದು ಅವರನ್ನು ಬಂಧಿಸಲಾಗಿತ್ತು.

ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸನ್ಮಾನ

ವರದಿ ಬಳಿಕ ಹಳೇ ಪಿಂಚಣಿ: ಸಿ.ಎಂ

ಪ್ರಜಾವಾಣಿ ವಾರ್ತೆ



ರಾಜ್ಯ ಸರ್ಕಾರಿ ನೌಕರರ ಸಂಘ ಅರಮನೆ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ನಮ್ಮಭಿಮಾನದ ಅಭಿನಂದನಾ ಸಮಾರಂಭ'ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿರುವ ಐವರು ಐಎಎಸ್ ಅಧಿಕಾರಿಗಳ ಸಮಿತಿ ವರದಿ ನೀಡಿದ ತಕ್ಷಣ ಹಳೇ ಪಿಂಚಣಿ ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘ ಅರಮನೆ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ನಮ್ಮಭಿಮಾನದ ಅಭಿನಂದನಾ ಸಮಾರಂಭ'ದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಳೇ ಯೋಜನೆಯನ್ನು ಮರು ಜಾರಿಗೊಳಿಸಿರುವ ರಾಜ್ಯಗಳಲ್ಲಿ ಕೈಗೊಂಡ ಕ್ರಮಗಳ ಕುರಿತು ಸಮಿತಿ ಅಧ್ಯಯನ ನಡೆಸಲಿದೆ. ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಆರ್. ವಿಶಾಲ್ ಅವರನ್ನು ಸದಸ್ಯರನ್ನಾಗಿ ಹಾಗೂ ಎಂ.ಟಿ. ರೇಜು ಅವರನ್ನು ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಶೀಘ್ರದಲ್ಲೇ ವರದಿ ನೀಡಲು ಸೂಚಿಸಲಾಗಿದೆ ಎಂದು ಅವರು ಹೇಳಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಬಡ್ತಿ ಸಮಸ್ಯೆಯನ್ನು ಬಗೆಹರಿಸಲಾಗುವುದು. ನೌಕರರು, ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದು ರಹಿತ ಆರೋಗ್ಯ ಚಿಕಿತ್ಸೆ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' ಜಾರಿಗೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಸಮರ್ಪಕ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಆರು ಮತ್ತು ಏಳನೇ ವೇತನ ಆಯೋಗದ ಎರಡೂ ಶಿಫಾರಸುಗಳನ್ನು ನಾನು ಮುಖ್ಯಮಂತ್ರಿ ಆಗಿದ್ದಾಗಲೇ ಜಾರಿ ಮಾಡಿರುವೆ. 2018ರಲ್ಲಿ ₹10,500 ಕೋಟಿ ಹಾಗೂ 2024ರಲ್ಲಿ ₹20,000 ಕೋಟಿ ಸರ್ಕಾರಕ್ಕೆ ಹೆಚ್ಚುವರಿ ಹೊರೆಯಾಗಿದೆ. ತೆರಿಗೆ ಹಣವನ್ನು ಖರ್ಚು ಮಾಡುವಾಗ ಸರ್ಕಾರ ಸದಾ ಮಿತವ್ಯಯದ ಬಗ್ಗೆ ಚಿಂತಿಸುತ್ತದೆ. ಆದರೂ, ಸರ್ಕಾರಿ ನೌಕರರ ಸವಲತ್ತು ನೀಡುವಾಗ ಆಯೋಗದ ಶಿಫಾರಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಪ್ರಾಸ್ತಾವಿಕ ಮಾತನಾಡಿದರು. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಗಳಾದ ನಸೀರ್ ಅಹಮದ್, ಗೋವಿಂದರಾಜು, ಶಾಸಕ ಅಜಯ್ ಸಿಂಗ್, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ರಾಷ್ಟ್ರೀಯ ಹಳೇ ಪಿಂಚಣಿ ಯೋಜನೆ ಮರುಸ್ಥಾಪನ ಸಂಯುಕ್ತ ಮೋರ್ಚಾ ಅಧ್ಯಕ್ಷ ಬಿ.ಪಿ. ರಾವತ್, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಭೈರಪ್ಪ ಉಪಸ್ಥಿತರಿದ್ದರು.

'ಬಡ ಬೋರೇಗೌಡನಿಗೆ ಶಕ್ತಿ ತುಂಬಬೇಕು'

ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯದ ನೆಲೆಯಲ್ಲಿ ಆದ್ಯತೆ ನೀಡುತ್ತಿದೆ. ಬುದ್ಧ, ಬಸವ, ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಆಶಯದಂತೆ ನಡೆದುಕೊಳ್ಳುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಮತ್ತು ಸಿಬ್ಬಂದಿ ಮಾಡಬೇಕು. ಸಾಮಾಜಿಕ, ಆರ್ಥಿಕ ಅಸಮಾನತೆ ಹೋಗಲಾಡಿಸಬೇಕು. ಎಲ್ಲ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ರಾಜಕಾರಣಿಗಳು, ಅಧಿಕಾರಿಗಳು ಮಾಡಬೇಕು. ಬಡ ಬೋರೇಗೌಡನಿಗೂ ಉತ್ತಮ ಶಿಕ್ಷಣ, ಆರೋಗ್ಯ ಸವಲತ್ತು, ಕೆಲಸ ಸಿಗುವಂತೆ ನೋಡಿಕೊಂಡು ಶಕ್ತಿ ತುಂಬಬೇಕು ಎಂದು ಹೇಳಿದರು.

ಕೆನೆಪದರ ಬಿಡಿ, ತಕ್ಷಣವೇ ಒಳಮೀಸಲು ಜಾರಿ ಮಾಡಿ

ದುಂಡು ಮೇಜಿನ ಸಭೆಯಲ್ಲಿ ಹಕ್ಕೊತ್ತಾಯ ಮಂಡನೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಶಾಸಕರ ಭವನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ರವಿವರ್ಮ ಕುಮಾರ್ ಮಾತನಾಡಿದರು. ಮುಖಂಡರಾದ ಎನ್ ವೆಂಕಟೇಶ್, ಬಸವರಾಜ್ ಕೌತಾಳ್, ಮಾವಳ್ಳಿ ಶಂಕರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೆನೆಪದರ ಬಗ್ಗೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ವೈಯಕ್ತಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಯೇ ಹೊರತು ಯಾವುದೇ ತೀರ್ಪು ನೀಡಿಲ್ಲ. ಒಳ ಮೀಸಲಾತಿ ಬಗ್ಗೆ ಮಾತ್ರ ತೀರ್ಪು ನೀಡಿದ್ದಾರೆ. ರಾಜ್ಯ ಸರ್ಕಾರವು ಕೆನೆಪದರ ವಿಚಾರವನ್ನು ಬದಿಗಿಟ್ಟು ಒಳಮೀಸಲಾತಿಯನ್ನು ಕೂಡಲೇ ಜಾರಿ ಮಾಡಬೇಕು ಎಂಬ ಹಕ್ಕೊತ್ತಾಯವನ್ನು ಇಲ್ಲಿ ನಡೆದ ದುಂಡು ಮೇಜಿನ ಸಭೆ ಮಂಡಿಸಿದೆ.

ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟವು ಶನಿವಾರ ಹಮ್ಮಿಕೊಂಡಿದ್ದ 'ಒಳಮೀಸಲಾತಿಗಾಗಿ ಸುಪ್ರೀಂ ಕೋರ್ಟ್‌ನ ತೀರ್ಪಿನ ಕುರಿತು ಅಭಿಪ್ರಾಯ ಮತ್ತು ಅನುಷ್ಠಾನಕ್ಕೊತ್ತಾಯ' ಕುರಿತ ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಂಡ ಎಲ್ಲರೂ ಏಕಮತದ ಒತ್ತಾಯವನ್ನು ಮಂಡಿಸಿದರು.

ರಾಜ್ಯದಲ್ಲಿ ವೈಜ್ಞಾನಿಕ ದತ್ತಾಂಶಗಳ ಆಧಾರದಲ್ಲಿ ರಚಿತವಾಗಿರುವ ನ್ಯಾ. ಸದಾಶಿವ ಆಯೋಗದ ವರದಿಯನ್ನು ಆಧಾರವಾಗಿಟ್ಟುಕೊಂಡು ಒಳಮೀಸಲಾತಿಯನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಲಾಯಿತು.

ಒಳ ಮೀಸಲಾತಿಯು ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಕ್ಕೆ ಮಾತ್ರ ಸಂಬಂಧಪಟ್ಟಿದೆ. ಶಾಲೆಗಳಿಗೆ ಪ್ರವೇಶ ಪಡೆಯುವಾಗಲೇ ಜಾತಿ ದಾಖಲಾಗಿರುತ್ತದೆ. ಹಾಗಾಗಿ ಶಾಲಾ-ಕಾಲೇಜುಗಳಲ್ಲಿ ಎಷ್ಟು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿದ್ದಾರೆ ಎಂದು ಮಾಹಿತಿ ಸಂಗ್ರಹಿಸುವುದು ಕಷ್ಟದ ಕೆಲಸವಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯೋಗಿಗಳಾಗಿ ಎಷ್ಟು ಮಂದಿ ಇದ್ದಾರೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಎಷ್ಟು ಜನರು ಉದ್ಯೋಗ ಪಡೆದಿದ್ದಾರೆ ಎಂಬ ಮಾಹಿತಿ ಪಡೆಯಬೇಕು. ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಸಿಕ್ಕಿದೆಯೇ ಎಂಬ ಮಾಹಿತಿಯನ್ನು ಸಂಗ್ರಹಿಸಬೇಕು ಎಂಬ ಸಲಹೆಗಳು ಬಂದವು.

ನ್ಯಾ. ಸದಾಶಿವ ಆಯೋಗವು ಪರಿಶಿಷ್ಟ ಜಾತಿಯಲ್ಲಿರುವ ಎಡಗೈ, ಬಲಗೈ, ಸ್ಪರ್ಶರು ಮತ್ತು ಇತರರು (ಅಲೆಮಾರಿಗಳು) ಎಂದು ನಾಲ್ಕು ವಿಭಾಗ ಮಾಡಿದೆ. ಅದೇ ರೀತಿ ನ್ಯಾ. ನಾಗಮೋಹನದಾಸ್ ಆಯೋಗವು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಿ ವರದಿ ನೀಡಿತ್ತು. ಇದೆಲ್ಲವನ್ನು ಪರಿಗಣಿಸಿಕೊಂಡು ಒಳಮೀಸಲಾತಿಯನ್ನು ವಿಳಂಬ ಮಾಡದೇ ಜಾರಿಗೊಳಿಸಬೇಕು ಎಂದು ಎಲ್ಲ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ನೇತೃತ್ವದ ಏಳು ಸದಸ್ಯರ ಪೀಠದ ಇತರ ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ನೀಡಿದ ನಾಲ್ಕು ಪುಟಗಳಲ್ಲಿ ಕೆನೆಪದರ ವಿಚಾರ ಇರಲೇ ಇಲ್ಲ. ಆನಂತರ ಇತರ ನ್ಯಾಯಮೂರ್ತಿಗಳು ಇದರ ಬಗ್ಗೆ ವೈಯಕ್ತಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನ್ಯಾ. ಚಂದ್ರಚೂಡ್ ಅವರು ಕೆನೆಪದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮೇಲ್ಬರಲು ಅವಕಾಶ ಉಂಟಾಗಿದ್ದರೆ ಮಾತ್ರ ಕೆನೆಪದರ ಜಾರಿಗೆ ತರಬಹುದು. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮೇಲ್ಚಲನೆ ಉಂಟಾದರೂ ಜಾತಿ ವ್ಯವಸ್ಥೆಯಿಂದ ಈ ದೇಶದಲ್ಲಿ ಸಾಮಾಜಿಕ ಮೇಲ್ಚಲನೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಹಾಗಾಗಿ ಕೆನೆಪದರ ವಿಚಾರ ಇಟ್ಟುಕೊಂಡು ಜಗ್ಗಾಡುವ ಬದಲು ಒಳಮೀಸಲಾತಿ ಜಾರಿ ಮಾಡಿ ಸಮುದಾಯಗಳಿಗೆ ನ್ಯಾಯ ನೀಡಬೇಕು ಎಂದು ಪ್ರಮುಖರು ಆಗ್ರಹಿಸಿದರು.

ವಿವಿಧ ರಂಗಗಳ ಚಿಂತಕರಾದ ರವಿವರ್ಮ ಕುಮಾರ್, ಎನ್. ವೆಂಕಟೇಶ್, ಬಸವರಾಜ್ ಕೌತಾಳ್, ಮಾವಳ್ಳಿ ಶಂಕರ್, ಎನ್. ಮುನಿಸ್ವಾಮಿ, ಶಿವಸುಂದರ್, ಗುರುರಾಜ್ ಬೇಡಿಕರ್, ವೀರಭದ್ರಯ್ಯ, ಸಿರಿಗೌ, ಅಂಬಣ್ಣ ಅರೋಲಿಕರ್ ಮಾತನಾಡಿದರು.

ನಿಧನ ವಾರ್ತೆ

ರಾಜಾರಾಮ್



ಬೆಂಗಳೂರು: ಪ್ರಗತಿಪರ ಚಿಂತಕ ಹಾಗೂ ನವಕರ್ನಾಟಕ ಪ್ರಕಾಶನದ ರೂವಾರಿಯಾದ ಆರ್.ಎಸ್. ರಾಜಾರಾಮ್ (84) ಅವರು ವಯೋಸಹಜ ಅನಾರೋಗ್ಯದಿಂದ ಶನಿವಾರ ಅಬ್ಬಿಗೆರೆಯ ಸ್ವಗೃಹದಲ್ಲಿ ನಿಧನರಾದರು.

ಮೃತರಿಗೆ ಪುತ್ರ ಹರ್ಷ, ಪುತ್ರಿ ಪೂರ್ಣಿಮಾ, ಸೊಸೆ ಪ್ರಿಯಾ ಹಾಗೂ ಅಳಿಯ ರಾಘವೇಂದ್ರ ಇದ್ದಾರೆ. ಅವರ ನಿವಾಸದಲ್ಲಿಯೇ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಭಾನುವಾರ ಬೆಳಿಗ್ಗೆ 11.30ಕ್ಕೆ ಹೆಬ್ಬಾಳದ ಚಿತಾಗಾರದಲ್ಲಿ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1941ರಲ್ಲಿ ಮಂಗಳೂರಿನಲ್ಲಿ ಜನಿಸಿದ್ದ ರಾಜಾರಾಮ್ ಅವರು, ಮಂಗಳೂರು ಮತ್ತು ಪುತ್ತೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಸ್ವಾತಂತ್ರ್ಯ ಹೋರಾಟಗಾರ, ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದ ಬಿ.ವಿ.ಕಕ್ಕಿಲ್ಲಾಯ ಅವರ ಸಂಬಂಧಿಯೂ ಆಗಿದ್ದ ಅವರು 1960ರಲ್ಲಿ ಬೆಂಗಳೂರಿನ ನವಕರ್ನಾಟಕ ಪ್ರಕಾಶನ ಸಂಸ್ಥೆಯಲ್ಲಿ ವಿ.ಎಸ್.ಆರ್. ಭಟ್ ಅವರಿಗೆ ಸಹಾಯಕರಾಗಿ ಸೇರಿದ್ದರು. ಬಳಿಕ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು.

ಐದು ದಶಕಕ್ಕೂ ಹೆಚ್ಚು ಕಾಲ ಸಂಸ್ಥೆಯನ್ನು ಮುನ್ನಡೆಸಿದ ರಾಜಾರಾಮ್, ಕನ್ನಡ ಸಾಹಿತ್ಯ ಲೋಕಕ್ಕೆ ಜನಪರ, ವೈಚಾರಿಕ, ವೈಜ್ಞಾನಿಕ ಮಾರ್ಗವನ್ನು ನಿರ್ಮಿಸಿಕೊಟ್ಟ ಪ್ರಮುಖರಲ್ಲಿ ಒಬ್ಬರು.

2017ರಲ್ಲಿ ಸಂಸ್ಥೆಯ ನಿರ್ದೇಶಕ ಹುದ್ದೆಯಿಂದ ನಿರ್ಗಮಿಸಿದ್ದರು. ಈ ಸಂದರ್ಭದಲ್ಲಿ ಅವರ ಕುರಿತು 'ನವಕರ್ನಾಟಕ ಪ್ರಕಾಶನದ ರೂವಾರಿ ಆರ್.ಎಸ್. ರಾಜಾರಾಮ್' ಮತ್ತು ಪರಂಜ್ಯೋತಿ ಸ್ವಾಮಿ ಅವರು ಬರೆದ 'ಸ್ಮೃತಿಯ ಸೆಲೆ ಆರ್.ಎಸ್. ರಾಜಾರಾಮ್ ಬದುಕು-ಸಾಧನೆ' ಪುಸ್ತಕಗಳು ಪ್ರಕಟಗೊಂಡಿದ್ದವು. ಅವರಿಗೆ 2018ರಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ಸಂದಿತ್ತು.

ಪ್ರೊ. ಮಹೇಶ್ ಚಂದ್ರ ಗುರು



ಮೈಸೂರು: ಪ್ರಗತಿಪರ ಚಿಂತಕ, ಮೈಸೂರು ವಿಶ್ವವಿದ್ಯಾಲಯ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ. ಬಿ.ಪಿ. ಮಹೇಶ್ ಚಂದ್ರ ಗುರು (68) ವಿಜಯನಗರ 2ನೇ ಹಂತದ ಮನೆಯಲ್ಲಿ ಹೃದಯಾಘಾತದಿಂದ ಶನಿವಾರ ನಿಧನರಾದರು.

ಇವರು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆಯವರು. ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ ಪ್ರೊ. ಹೇಮಾವತಿ, ಸಹೋದರ ಮತ್ತು ಸಹೋದರಿ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಸನಾಗದ ಆದಿವಾಸಿಗಳ ಬದುಕು ಕಾರ್ಯಕ್ರಮ ಅನುಷ್ಠಾನಕ್ಕೆ ನಿರ್ಲಕ್ಷ್ಯ

‘ಜನ್‌ಮನ್’ ಜಾರಿಗೆ ಅಸಡ್ಡೆ

ಬಹು ಉದ್ದೇಶದ ಕೇಂದ್ರಗಳು

ಜಿಲ್ಲಾವಾರು ಗುರಿ ಸಾಧನೆ ವಿವರ
● ಗುರಿ, (ಎಲ್ಲ ಜಿಲ್ಲೆಗಳಲ್ಲೂ ಪ್ರಗತಿಯು ಡಿಪಿಆರ್ ತಯಾರಿಕೆ ಹಂತದಲ್ಲೇ ಇದೆ)

ಮೈಸೂರು	ಚಾಮರಾಜನಗರ	ಕೊಡಗು	ಉಡುಪಿ	ದಕ್ಷಿಣ ಕನ್ನಡ
33	6	13	18	4

ವನ–ಧನ ವಿಕಾಸ ಕೇಂದ್ರ (ವಿಡಿವಿಕೆ)

ಮೈಸೂರು	ಕೊಡಗು
21	12
(ಸಾಧನೆ: ತರಬೇತಿ ಪೂರ್ಣ, ಸಮೀಕ್ಷೆ ಪ್ರಗತಿಯಲ್ಲಿದೆ)	(ಸಾಧನೆ: ತರಬೇತಿ ಆರಂಭವಾಗಬೇಕಿದೆ)

ವರದಿಯಲ್ಲಿ ಏನಿದೆ?

ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಿ.ಸಿ.ನಂಜುಂಡ ಮತ್ತು ಮಂಡ್ಯ ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೇಮಕುಮಾರ್ ಜಿ.ಎಸ್. ನೇತೃತ್ವದ ಸಂಶೋಧನಾ ತಂಡವು ಸಮೀಕ್ಷೆ ನಡೆಸಿ ‘ಬುಡಕಟ್ಟು ಮಾನವ ಅಭಿವೃದ್ಧಿ ವರದಿ’ ಸಿದ್ಧಪಡಿಸಿದೆ. ರಾಜ್ಯದ 50 ಬುಡಕಟ್ಟು ಸಮುದಾಯಗಳ 5 ಸಾವಿರಕ್ಕೂ ಹೆಚ್ಚಿನ ಜನರನ್ನು ಭೇಟಿಯಾಗಿ ದತ್ತಾಂಶ ಸಂಗ್ರಹಿಸಲಾಗಿದೆ. ಬುಡಕಟ್ಟು ಸಮುದಾಯದ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗದ (ಜೀವನೋಪಾಯ) ಸ್ಥಿತಿಗತಿಗೆ ಆದ್ಯತೆ ನೀಡಿದೆ. ಸಚಿವಾಲಯದ ಕೋರಿಕೆಯಂತೆ ಲಿಂಗ, ಭಾಗವಹಿಸುವಿಕೆ, ಹೊರಗುಳಿಯುವಿಕೆ ಮೊದಲಾದ ಅಂಶಗಳ ಆಧಾರದಲ್ಲೂ ಸಮೀಕ್ಷೆ ನಡೆದಿದೆ. ಈ ವಿಷಯಗಳಲ್ಲಿ ಬುಡಕಟ್ಟು ಜನ ಬಹಳ ಹಿಂದುಳಿದಿರುವುದನ್ನು ಗುರುತಿಸಲಾಗಿದೆ.

ಗ್ರಾಮೀಣ ಹಾಗೂ ಅರಣ್ಯದ ಬುಡಕಟ್ಟು ಜನರ ಮಾನವ ಅಭಿವೃದ್ಧಿಯ ಅಂತರ ಹೆಚ್ಚಿರುವುದನ್ನು ಗುರುತಿಸಲಾಗಿದೆ. ಬಹಳಷ್ಟು ಮಂದಿಗೆ ಮತದಾರರ ಗುರುತಿನ ಚೀಟಿ ದೊರೆತಿಲ್ಲ. ಚುನಾವಣೆಯಲ್ಲಿ ಸ್ಪರ್ಧೆಗೆ ಅವಕಾಶ ಸಿಕ್ಕಿಲ್ಲ. ಯೋಜನೆಗಳು ಎಲ್ಲರಿಗೂ ತಲುಪಿಲ್ಲ. ಉದ್ಯೋಗ ಸಿಕ್ಕಿಲ್ಲ. ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಗಣನೀಯವಾಗಿ ಹೆಚ್ಚಿರುವುದನ್ನು ಗುರುತಿಸಲಾಗಿದೆ.

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಪ್ರಾಯೋಜಕತ್ವದಲ್ಲಿ 2021ರಿಂದ 2023ರವರೆಗೆ ನಡೆದ ಈ ಸಮೀಕ್ಷೆಗೆ ಸಚಿವಾಲಯದಿಂದ ₹30 ಲಕ್ಷ ನೆರವು ದೊರೆತಿತ್ತು.

● ಎಂ. ಮಹೇಶ

ಮೈಸೂರು: ‘ನಮ್ಮ ಕಾಲವಂತೂ ಮುಗಿಯುತ್ತಾ ಬಂತು. ನಮ್ಮ ಮಕ್ಕಳಾದರೂ ಅಕ್ಷರ ಕಲಿಯಬೇಕೆಂಬ ಆಸೆ ಇತ್ತು. ಆದರೆ ಅವರು ಮನಸ್ಸು ಮಾಡ್ತಿಲ್ಲ. ಶಾಲೆಗೆ ಕಳಿಸಿದರೂ ಅರ್ಧಕ್ಕೆ ನಿಲ್ಲಿಸಿ ಕೂಲಿಗೆ ಹೋಗ್ತಾರೆ. ಸರ್ಕಾರವೂ ನಮ್ಮ ಕೈ ಹಿಡೀತಿಲ್ಲ..’

–ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ಮಂಚಿಕೇರಿಯ ಮಂಜು ಸಿದ್ದಿ ತೋಡಿಕೊಂಡ ನೋವಿದು.

ಅಪ್ಪಟ ಬುಡಕಟ್ಟು ಸಮುದಾಯವಾಗಿರುವ ಸಿದ್ದಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿದ್ದು, 18 ಸಾವಿರ ಜನಸಂಖ್ಯೆ ಇರಬಹುದೆಂದು ಅಂದಾಜಿಸಲಾಗಿದೆ. ಆ ಪೈಕಿ ಶೇ 90ರಷ್ಟು ಮಂದಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸ್ವಂತ ಭೂಮಿ ಇಲ್ಲದೆ ಕೂಲಿಯನ್ನೇ ನೆಚ್ಚಿ ಕೊಂಡಿದ್ದಾರೆ. ಯಲ್ಲಾಪುರ, ಹಳಿಯಾಳ, ಅಂಕೋಲಾ ಮತ್ತು ಶಿರಸಿ ತಾಲ್ಲೂಕಿನಲ್ಲಿ ನೆಲೆನಿಂತ ಸಮುದಾಯದ ನೂರಾರು ಕುಟುಂಬಗಳಿಗೆ ಅರಣ್ಯ ಭೂಮಿಯಲ್ಲಿ ಸಾಗುವಳಿಯೇ ಆಧಾರ. ಆದರೆ, ಹಕ್ಕುಪತ್ರಗಳೇ ದೊರೆತಿಲ್ಲ. ‘ಸಾಗುವಳಿ ಜಮೀನಿಗೆ ಹಕ್ಕುಪತ್ರ ಕೊಡಬೇಕೆಂಬುದು ಅವರ ಪ್ರಮುಖ ಬೇಡಿಕೆ. ಆದರೆ, ಇದನ್ನು ಈಡೇರಿಸುವ ಕೆಲಸವನ್ನು ಸರ್ಕಾರಗಳು ಇಂದಿಗೂ ಮಾಡಿಲ್ಲ.

ಇದು ರಾಜ್ಯದಲ್ಲಿರುವ ಸಿದ್ದಿ ಸಮುದಾಯದವರ ಸಮಸ್ಯೆಯಷ್ಟೇ ಅಲ್ಲ. ಇಂತಹ ಹಲವು ಬುಡಕಟ್ಟು ಜನರನ್ನು ಮುಖ್ಯವಾಹಿನಿಗೆ ತರಲು ಜಾರಿಗೊಳಿಸಿರುವ ಯೋಜನೆಗಳು ಸಮರ್ಪಕ ಅನುಷ್ಠಾನ ಕಂಡಿಲ್ಲ. ಅದಕ್ಕೀಗ ಮತ್ತೊಂದು ಸೇರ್ಪಡೆಯಾಗಿರುವುದು ಕೇಂದ್ರ ಸರ್ಕಾರದ ಪಿಎಂ–ಜನ್‌ಮನ್ ಯೋಜನೆ. ಬುಡಕಟ್ಟು ಜನರಿಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಲೆಂದೇ ಕೇಂದ್ರ ಸರ್ಕಾರ 2023 ನ.15ರಂದು ಜಾರಿಗೊಳಿಸಿದ ‘ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾಅಭಿಯಾನ’ (ಪಿಎಂ–ಜನ್‌ಮನ್) ಅನುಷ್ಠಾನ ಕಾರ್ಯ ರಾಜ್ಯದಲ್ಲಿ ಕುಂಟುತ್ತಾ ಸಾಗಿದೆ. ಯೋಜನೆ ಜಾರಿಗೆ ಚುರುಕು ನೀಡಿದ್ದರೆ ಆದಿವಾಸಿಗಳ ಬದುಕು ಹಸನಾಗುವತ್ತ ಸಾಗುವುದಕ್ಕೆ ಅವಕಾಶವಿತ್ತು.

ಮೈಸೂರು, ಕೊಡಗು, ಚಾಮರಾಜನಗರ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಜೇನುಕುರುಬ ಮತ್ತು ಕೊರಗ ಜನಾಂಗದವರಿಗೆ 57,047 (ಜೇನುಕುರುಬ 44,040 ಮತ್ತು ಕೊರಗ 13,007) ಸೌಲಭ್ಯ ಕಲ್ಪಿಸುವ ಉದ್ದೇಶವನ್ನು ಪಿಎಂ–ಜನ್‌ಮನ್ ಯೋಜನೆಯಲ್ಲಿ ಹೊಂದಲಾಗಿದೆ. ಈ ಜಿಲ್ಲೆಗಳಲ್ಲಿ ಬಹು ಉದ್ದೇಶದ ಕೇಂದ್ರಗಳು (ಎಂಪಿಸಿ) ಮತ್ತು ವನ–ಧನ ವಿಕಾಸ ಕೇಂದ್ರ (ವಿಡಿವಿಕೆ) ಆರಂಭಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನೆ ರೂಪಿಸಿದೆ.



ಮೈಸೂರು ಜಿಲ್ಲೆಯ ಎಚ್‌ಡಿ.ಕೋಟೆ ತಾಲ್ಲೂಕಿನ ಅರಳಹಳ್ಳಿ ಹಾಡಿಯ ನೋಟ

> **ಬುಡಕಟ್ಟು ಜನರ ನೆರವಿಗಾಗಿ ಆಗಾಗ ಲೋಕಾಯುಕ್ತ ಅಧಿಕಾರಿಗಳನ್ನು ಕರೆದೊಯ್ದು ವಿವಿಧ ಇಲಾಖೆಗಳಿಗೆ ನಿರ್ದೇಶನ ಕೊಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಕೆಲವರ ಪಡಿತರ ಚೀಟಿಗಳು ಮಧ್ಯ ಅಕ್ರಮ ಮಾರಾಟಗಾರರ ಪಾಲಾಗಿವೆ. ಅದನ್ನು ತಡೆಯಬೇಕು.**
> **ಪ್ರಸನ್ನ,** ರಾಜ್ಯ ಉಪಾಧ್ಯಕ್ಷ, ಜನಸಂಗ್ರಾಮ ಪರಿಷತ್

> **ನೆಲ, ಜಲ ಮತ್ತು ಕಾಡು ನಮ್ಮ ಹಕ್ಕು ಹಾಗೂ ಸ್ವಾಭಿಮಾನದ ಪ್ರಶ್ನೆ. ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಕಾಡಿನಲ್ಲಿರುವವರಿಗೆ ಹಕ್ಕುಪತ್ರ ನೀಡಬೇಕು. ಪ್ರೊ. ಮುಜಾಫರ್ ಅಸ್ಸಾದಿ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು.**
> **ಶಾಂತರಾಮ ಸಿದ್ದಿ,** ವಿಧಾನಪರಿಷತ್ ಸದಸ್ಯ

> **ಆದಿವಾಸಿಗಳಿಗೆ ತಲಾ 3 ಎಕರೆ ಜಮೀನು ಸಿಗಬೇಕು. ವಿದ್ಯಾರ್ಹತೆ ಆಧಾರಿಸಿ ಸರ್ಕಾರಿ ನೌಕರಿ ಕೊಡಬೇಕು. ಮೂಲ ಬುಡಕಟ್ಟು ಜನರಿಗೆ ಪ್ರತ್ಯೇಕ ಯೋಜನೆ ಆಗಬೇಕು; ಒಳಮೀಸಲಾತಿ ದೊರೆಯಬೇಕು.**
> **ಸೋಮಣ್ಣ,** ಆದಿವಾಸಿಗಳ ಪರ ಹೋರಾಟಗಾರ, ಎಚ್‌.ಡಿ. ಕೋಟೆ, ಮೈಸೂರು ಜಿಲ್ಲೆ

ಈ ಸಮುದಾಯಗಳ ಕಾಲೊನಿಗಳಲ್ಲಿ ಬಹು ಉದ್ದೇಶದ ಕೇಂದ್ರಗಳನ್ನು (ಮಲ್ಟಿ ಪರ್ಪಸ್ ಸೆಂಟರ್–ಎಂಪಿಸಿ) ತಲಾ ₹ 60 ಲಕ್ಷದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ 16 ಕೇಂದ್ರಗಳ ಸ್ಥಾಪನೆಗೆ ₹ 9.60 ಕೋಟಿ ಮಂಜೂರಾಗಿದ್ದು, ಮೊದಲ ಕಂತಿನಲ್ಲಿ ₹ 3.32 ಕೋಟಿಯಷ್ಟೆ ಬಿಡುಗಡೆಯಾಗಿದೆ. 2ನೇ ಹಂತದಲ್ಲಿ 58 ಕೇಂದ್ರ ಮಂಜೂರಾಗಿದೆ.

‘ಆರ್ಥಿಕ ಏಳಿಗೆಗಾಗಿ ಸಮುದಾಯದವರು ಸಿದ್ಧಪಡಿಸುವ ಉತ್ಪನ್ನಗಳ ಮೌಲ್ಯವರ್ಧನೆಗೆ ಮೈಸೂರು ಜಿಲ್ಲೆಯಲ್ಲಿ 21 ಮತ್ತು ಕೊಡಗಿನಲ್ಲಿ 12 ವಿಡಿವಿಕೆ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಮೈಸೂರು ಜಿಲ್ಲಾಧಿಕಾರಿ ಮತ್ತು ಯೋಜನಾ ಸಮನ್ವಯ ಅಧಿಕಾರಿಗಳ ಜಂಟಿ ಖಾತೆಗೆ ₹ 29.20 ಲಕ್ಷ ಅನುದಾನ ಬಿಡುಗಡೆಯಾಗಿದೆ. ತರಬೇತಿ ಪೂರ್ಣಗೊಂಡಿದ್ದು ಸರ್ವೆ ಆರಂಭವಾಗಿದೆ. ಈ ಎರಡೂ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2024ರ ಜ.2ರಂದು ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ.



ಮೈಸೂರು ಜಿಲ್ಲೆಯ ಸೊಳ್ಳೇಪುರ ಹಾಡಿಯ ವೃದ್ಧೆ ಚಿತ್ರ: ಸತೀಶ್ ಆರಾಧ್ಯ

ಮೈಸೂರು, ಕೊಡಗು, ಚಾಮರಾಜನಗರ, ಉಡುಪಿ ಮತ್ತು ದಕ್ಷಿಣ ಕನ್ನಡಕ್ಕೆ ಸಂಬಂಧಿಸಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ’ ಎನ್ನುತ್ತವೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೂಲಗಳು. ಬಹು ಉದ್ದೇಶದ ಕೇಂದ್ರಗಳು (ಎಂಪಿಸಿ) ಇನ್ನೂ ಡಿಪಿಆರ್ ಹಂತದಲ್ಲೇ ಇವೆ.

11 ನಿರ್ಣಾಯಕ ಮೂಲ ಸೌಲಭ್ಯಗಳಿಗೆ: ಮುಂದಿನ ಮೂರು ವರ್ಷಗಳಲ್ಲಿ ದೇಶದ 18 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿರುವ ಪಿವಿಟಿಜಿ (ನೈಜ ದುರ್ಬಲ ಬುಡಕಟ್ಟು ಸಮುದಾಯಗಳು) ಸಮುದಾಯಗಳ ಜೀವನ ಸುಧಾರಣೆಗಾಗಿ ಹನ್ನೊಂದು ಮೂಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ, ಯೋಜನೆಯಲ್ಲಿ ₹ 24 ಸಾವಿರ ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆಯ ವೇಳೆ ಘೋಷಿಸಿದ್ದರು. ಆದರೆ ಯೋಜನೆಯು ಈಗಲೂ ಪ್ರಾಥಮಿಕ ಸಮೀಕ್ಷೆಯ ಹಂತದಲ್ಲೇ ಇದೆ. ಮೈಸೂರಿನ ಮೂಲ ಆದಿವಾಸಿಗಳ ಅಧ್ಯಯನ ಕೇಂದ್ರದ ಸಂಶೋಧನಾಧಿಕಾರಿ ಕೃಷ್ಣಮೂರ್ತಿ ಕೆ.ವಿ. ನೇತೃತ್ವದಲ್ಲಿ ಪ್ರಕ್ರಿಯೆ ನಡೆಯುತ್ತಿದೆ.

ಬುಡಕಟ್ಟು ಸಮುದಾಯಗಳಲ್ಲಿ ಅತಿ ಕಡಿಮೆ ಅಭಿವೃದ್ಧಿ ಆಗಿರುವವರನ್ನು ಮುಖ್ಯವಾಹಿನಿಗೆ ತರುವುದು. ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು ಮತ್ತು ಮೂಲ ಸೌಕರ್ಯಗಳ ಜತೆಗೆ ನೈರ್ಮಲ್ಯ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕ ಆಹಾರ ಪೂರೈಕೆ ಮಾಡುವುದು. ವಿದ್ಯುತ್, ರಸ್ತೆ ಮತ್ತು ದೂರಸಂಪರ್ಕ ಸಂಪರ್ಕದ ಮೂಲಕ ಸುಸ್ಥಿರ ಜೀವನೋಪಾಯದ ಅವಕಾಶ ಸೃಷ್ಟಿ. ಅರಣ್ಯ ಉತ್ಪನ್ನಗಳ ಮಾರಾಟಕ್ಕಾಗಿ ‘ವನ್ ಧನ್ ವಿಕಾಸ ಕೇಂದ್ರ’ಗಳ ಸ್ಥಾಪನೆ. ಒಂದು ಲಕ್ಷ ಮನೆಗಳಿಗೆ ಆಫ್‌-ಗ್ರಿಡ್ ಸೌರ ವಿದ್ಯುತ್ ವ್ಯವಸ್ಥೆ, ಸೌರ ವಿದ್ಯುತ್ ಬೀದಿದೀಪಗಳ ಅಳವಡಿಕೆ. ಆಧಾರ್, ಬಿಪಿಎಲ್ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಕಿಸಾನ್ ಸಮ್ಮಾನ್ ಕಾರ್ಡ್ ಮೊದಲಾದ ದಾಖಲೆಗಳನ್ನು ಒದಗಿಸುವುದು. ಅದಕ್ಕಾಗಿ ಹಾಡಿಗಳಲ್ಲೇ ಇಲಾಖೆಗಳಿಂದ ಅಭಿಯಾನ ನಡೆಸುವುದು. ಮನೆ ಇಲ್ಲದವರಿಗೆ ಮನೆಗಳ ನಿರ್ಮಾಣ. ಅಂಗನವಾಡಿ ಕೇಂದ್ರ, ಆಸ್ಪತ್ರೆ ನಿರ್ಮಾಣ, ಶಿಕ್ಷಣ ಮತ್ತು ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶವನ್ನು ‘ಜನ್‌ಮನ್’ ಹೊಂದಿದೆ. ಇದನ್ನು ಅನುಷ್ಠಾನ ಮಾಡಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ ಎಂಬ ಆರೋಪ ಆದಿವಾಸಿ ಮುಖಂಡರದ್ದಾಗಿದೆ.

ಕೊರಗ, ಜೇನುಕುರುಬ, ಇರುಳಿಗ, ಸೋಲಿಗ, ಬೆಟ್ಟಕುರುಬ, ಯರವ, ಪಣಿಯ, ಕುಡಿಯ, ಮಲೆಕುಡಿಯ, ಹಸಲರು, ಸಿದ್ದಿ ಹಾಗೂ ಗೌಡಲು ಹೀಗೆ... ರಾಜ್ಯದಲ್ಲಿ 12 ಬಗೆಯ ಆದಿವಾಸಿ ಸಮುದಾಯದವರಿದ್ದಾರೆ. ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ರಾಮನಗರ, ಶಿವಮೊಗ್ಗ, ಚಿಕ್ಕಮಗಳೂರು ಸೇರಿ ರಾಜ್ಯದಲ್ಲಿ 6 ಲಕ್ಷಕ್ಕೂ ಹೆಚ್ಚು ಆದಿವಾಸಿಗಳಿದ್ದಾರೆ. ಬಹುತೇಕರಿಗೆ ಆಧಾರ್ ಚೀಟಿ, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಮೊದಲಾದ ದಾಖಲೆಗಳು ಸಿಕ್ಕಿಲ್ಲ; ಕೃಷಿ ಮಾಡುತ್ತಿದ್ದರೂ, ಭೂಮಿಯ ಹಕ್ಕುಪತ್ರ ದೊರೆತಿಲ್ಲ.

ಕಾನೂನು ಪಾಲನೆ ನೆಪದಲ್ಲಿ ಅಧಿಕಾರಿಗಳು ಕೊಡುವ ತೊಂದರೆಯ ಜೊತೆಗೆ ಕಾಡು ಪ್ರಾಣಿಗಳೊಂದಿಗೂ ನಿರಂತರ ‘ಸಂಘರ್ಷ’. ಸೊಪ್ಪು, ಗೆಣಸು ತರಲು ಕಾಡಿಗೆ ಹೋದರೆ ‘ಕಳ್ಳ’ನೆಂಬ ಪಟ್ಟ. ಸುಳ್ಳು ಕೇಸುಗಳಲ್ಲಿ ಸಿಲುಕುವ ಆತಂಕ ಸರ್ವೇಸಾಮಾನ್ಯವಾಗಿ ಕಾಡುತ್ತಿದೆ. ಅಪೌಷ್ಟಿಕತೆ, ಗಂಭೀರ ಕಾಯಿಲೆಗಳು, ರಕ್ತಹೀನತೆ, ಕಾಡುಪ್ರಾಣಿಗಳ ದಾಳಿಗೆ ಸಿಲುಕಿ ಅಂಗವೈಕಲ್ಯ ಸಾಮಾನ್ಯವಾಗಿದೆ. ಹೀಗೆ... ರಾಜ್ಯದ ಹಲವೆಡೆ ಕಾಡು ಮತ್ತು ಕಾಡಿನಂಚಿನಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಕಣ್ಣೀರ ಕಥೆಗಳು ಜಿಲ್ಲೆಯಿಂದ ಜಿಲ್ಲೆಗೆ ವಿಭಿನ್ನವಾಗಿವೆ.

ಶುದ್ಧ ನೀರು, ವಾಸಕ್ಕೆ ಮನೆ, ದುಡಿಯುವ ಕೈಗಳಿಗೆ ಕೆಲಸ, ರಸ್ತೆ, ಆರೋಗ್ಯ ಸೇವೆ, ವಿದ್ಯುತ್ ಸಂಪರ್ಕ, ಶಿಕ್ಷಣ, ಸಾಮಾಜಿಕ ಭದ್ರತೆ... ಇಂತಹ ಕನಿಷ್ಠ ಮೂಲಸೌಕರ್ಯಗಳಿಲ್ಲದೆ ಯಾರಾದರೂ ಇದ್ದರೆ, ಅವರು ಈ ನೆಲದ ಆದಿವಾಸಿಗಳು ಹಾಗೂ ಅರಣ್ಯಾಧಾರಿತ ಬುಡಕಟ್ಟು ಜನ ಮಾತ್ರ. ಯೋಜನೆಯಲ್ಲಿ ಹೇಳಿರುವ ಸೌಲಭ್ಯಗಳೆಲ್ಲಾ ದೊರೆತರೆ ಆದಿವಾಸಿಗಳ ಜೀವನಶೈಲಿಯಲ್ಲಿ ಸಕಾರಾತ್ಮಕ ಬದಲಾವಣೆಯನ್ನು ನಿರೀಕ್ಷಿಸಬಹುದಾಗಿದೆ ಎನ್ನುವುದು ಕೇಂದ್ರ ಸರ್ಕಾರದ ಆಶಯವಾಗಿದೆ.

‘ಆದರೆ, ಆರ್ಥಿಕ ನೆರವನ್ನೂ ಹೊಂದಿರುವ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯಲು ಅಗತ್ಯವಾದ ದಾಖಲೆಗಳನ್ನು ಒದಗಿಸುವ ಕೆಲಸವೂ ಈವರೆಗೆ ನಡೆದಿಲ್ಲ. ಪೌಷ್ಟಿಕ ಆಹಾರವನ್ನೂ ನಿಯಮಿತವಾಗಿ ಒದಗಿಸುತ್ತಿಲ್ಲ. ಆಗಾಗ ಕೊಟ್ಟರೂ ಕಳಪೆಯಾಗಿರುತ್ತದೆ’ ಎಂದು ಆರೋಪಿಸುತ್ತಾರೆ ಮಾನವ ಹಕ್ಕುಗಳ ಹೋರಾಟಗಾರ ಮೈಸೂರಿನ ಪ್ರಸನ್ನ.

‘ಕರ್ನಾಟಕದಲ್ಲಿ ಅಳಿವಿನಂಚಿನಲ್ಲಿರುವ ಇರುಳಿಗ ಸಮುದಾಯಕ್ಕೂ ಮೂಲಸೌಕರ್ಯಗಳಿಲ್ಲ. ಪಾರಂಪರಿಕವಾಗಿ ಅಲ್ಪಸ್ವಲ್ಪ ಭೂಮಿ ಹೊಂದಿರುವವರು, ಅದನ್ನು ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. 1964ರವರೆಗೂ ನೈಜ ದುರ್ಬಲ ಬುಡಕಟ್ಟು ಸಮುದಾಯಗಳ (ಪಿವಿಟಿಜಿ) ಪಟ್ಟಿಯಲ್ಲಿದ್ದ ಅವರನ್ನು ಅಲ್ಲಿಂದ ಕೈ ಬಿಡಲಾಗಿದೆ. ರಾಜಧಾನಿ ಬೆಂಗಳೂರಿಗೆ ಹತ್ತಿರದ ರಾಮನಗರ ಜಿಲ್ಲೆಯಲ್ಲಿದ್ದರೂ ನಮಗೆ ಸಿಗಬೇಕಾದ ಸೌಲಭ್ಯಗಳು ದೊರೆತಿಲ್ಲ’ ಎನ್ನುತ್ತಾರೆ ಸಂಶೋಧಕ ಕೃಷ್ಣಮೂರ್ತಿ ಇರುಳಿಗ.

ಆದಿವಾಸಿ ಮಕ್ಕಳಿಗೆಂದೇ ಆಶ್ರಮ ಶಾಲೆಗಳಿದ್ದರೂ ಶೈಕ್ಷಣಿಕ ಸ್ಥಿತಿಗತಿ ಸುಧಾರಣೆಯಾಗಿಲ್ಲ. ಕೃಷಿ ಜಮೀನುಗಳಲ್ಲಿ, ಕಾಫಿ ತೋಟಗಳಲ್ಲಿ ಕೂಲಿ ಕಡಿಮೆಯಿದೆ. ಉಳಿತಾಯ ಮರೀಚಿಕೆ. ಮದುವೆ, ನಾಮಕರಣ, ಅನಾರೋಗ್ಯ ಕಾರಣಗಳಿಗಾಗಿ ತೋಟದ ಮಾಲೀಕರ ಬಳಿ ಸಾಲ ಮಾಡಿ, ತೀರಿಸಲು ದುಡಿಮೆಯಲ್ಲೇ ಜೀವನ ಕಳೆದು ಹೋಗುತ್ತದೆ.

ಎಚ್‌.ಆಂಜನೇಯ, ಆರ್‌. ಅಶೋಕ್, ಬಿ.ನಾಗೇಂದ್ರ ಸಚಿವರಾಗಿದ್ದಾಗ ಹಾಡಿಗಳಲ್ಲಿ ವಾಸ್ತವ್ಯ ಹೂಡಿ ಪ್ರಚಾರ ಪಡೆದರೂ, ಹಾಡಿಗಳಲ್ಲಿ ಗಮನಾರ್ಹ ಬದಲಾವಣೆ ಯೇನೂ ಆಗಿಲ್ಲ ಎಂದು ಆದಿವಾಸಿ ಮುಖಂಡ ಶಿವಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದಿಗಳದ್ದು ಮತ್ತೊಂದು ಕತೆ...

‘ಅನೇಕ ತಲೆಮಾರುಗಳಿಂದ ಅರಣ್ಯದಂಚಿನ ಭೂಮಿಯಲ್ಲಿ ಉಳುಮೆ ಮಾಡುತ್ತಿದ್ದರೂ ಹಕ್ಕುಪತ್ರ ನೀಡಿಲ್ಲ. ರಾಜಕಾರಣಿಗಳು ಭಾಷಣ ಮಾಡೋದಕ್ಕಷ್ಟೇ ಸೀಮಿತವಾಗಿದ್ದಾರೆ. ದಶಕದಿಂದ ಹೋರಾಡುತ್ತಿದ್ದರೂ ಪಟ್ಟಾ ಸಿಕ್ಕಿಲ್ಲ’ ಎನ್ನುತ್ತಾರೆ ಉತ್ತರ ಕರ್ನಾಟಕದ ಹಳಿಯಾಳದ ಜೂಲಿಯಾನಾ ಸಿದ್ದಿ.

‘ಸ್ವಂತ ಜಮೀನಿಲ್ಲವೆಂದು ಬ್ಯಾಂಕ್ ಸಾಲ, ಕೃಷಿ ಚಟುವಟಿಕೆಗೆ ಸಹಾಯಧನ ಸಿಕ್ಕಿಲ್ಲ. ಪೌಷ್ಟಿಕ ಆಹಾರದ ಕಿಟ್ ಬಿಟ್ಟರೆ ಬೇರೆ ಯಾವ ವಿಶೇಷ ಸೌಲಭ್ಯವೂ ಸಿಕ್ಕಿಲ್ಲ’ ಎಂಬುದು ಅವರ ಅಳಲು.

‘ಮಕ್ಕಳನ್ನು ಶಾಲೆಗೆ ಕಳುಹಿಸಿದರೂ ಬೇಸಿಗೆ ರಜೆ ಬಂದ ಕೂಡಲೇ ಮಹಾರಾಷ್ಟ್ರದ ಕೊಲ್ಹಾಪುರ, ಬೆಳಗಾವಿಗೆ ಕೆಲಸಕ್ಕೆ ತೆರಳುತ್ತಾರೆ. ಅಲ್ಲಿ ಸಿಗುವ ಕೂಲಿಯೇ ಅವರನ್ನು ಆಕರ್ಷಿಸುತ್ತದೆ. ಓದು ಬಿಟ್ಟು ಪೂರ್ಣಾವಧಿ ಕಾರ್ಮಿಕರಾಗುತ್ತಿದ್ದಾರೆ’ ಎನ್ನುತ್ತಾರೆ ಅವರು. ಆದರೆ, ಅಧಿಕಾರಿಗಳು ನೀಡುವ ಮಾಹಿತಿ ಪ್ರಕಾರ, ಹಕ್ಕುಪತ್ರ ಸಂಬಂಧಿಸಿದ ಇವರ ಬೇಡಿಕೆಯನ್ನು ಪಿಎಂ–ಜನ್‌ಮನ್ ಯೋಜನೆಯಲ್ಲಿ ಸೇರಿಸಿಯೇ ಇಲ್ಲ!

ಮಲೆಕುಡಿಯರ ಪಾಡು

ಮಲೆಕುಡಿಯರ ಪೈಕಿ ಶೇ 75ರಷ್ಟು ಮಂದಿ ಕಾಡಿನ ಒಳಗೇ ಇದ್ದಾರೆ. ಅರಣ್ಯ ಉತ್ಪನ್ನವೇ ಜೀವನಾಧಾರ. ರಸ್ತೆ, ವಿದ್ಯುತ್ ಇಲ್ಲದಿರುವುದೇ ದೊಡ್ಡ ಸಮಸ್ಯೆ. ಸೌಲಭ್ಯಕ್ಕಾಗಿ ಹೋರಾಡುವ ಚೈತನ್ಯವಿಲ್ಲದ ಸ್ಥಿತಿ. ಎಲ್ಲರದೂ ಪಟ್ಟಾ ಜಾಗವಾಗಿರುವುದರಿಂದ ಸರ್ಕಾರಿ ಜಮೀನು ಅಥವಾ ಅರಣ್ಯ ಹಕ್ಕುಪತ್ರ ಪಡೆದವರು ತೀರಾ ಕಡಿಮೆ. ಪುನರ್ವಸತಿ ಬಯಸುವವರು ಅರಣ್ಯ ಇಲಾಖೆಗೆ ಜಾಗವನ್ನು ನೀಡಿ ಪರಿಹಾರ ಪಡೆದುಕೊಳ್ಳುತ್ತಾರೆ. ಹೀಗೆ ಮಾಡಿ ತಮ್ಮ ಅಸ್ಮಿತೆಯನ್ನು ಬಿಟ್ಟುಕೊಡಲು ಬಯಸದವರೆಲ್ಲ ಅರಣ್ಯದಲ್ಲೇ ಇದ್ದಾರೆ.

ಅವರಿಗೆ ಕಾಡೇ ಸ್ವರ್ಗ. ಅನೇಕರಿಗೆ ಪಟ್ಟಾ ಜಾಗವನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ತಾಂತ್ರಿಕ ಸಮಸ್ಯೆಗಳಿವೆ. ಅರಣ್ಯದಂಚಿನಲ್ಲಿರುವ ಕೆಲವರಿಗೆ ಅಕ್ರಮ ಸಕ್ರಮವೂ ನೆರವಾಗುತ್ತಿಲ್ಲ. ‘ಆರ್‌ಟಿಸಿಯಲ್ಲಿ ಅರಣ್ಯ ಎಂದು ಉಲ್ಲೇಖವಾಗಿದೆ. ಆದರೆ, ಅರಣ್ಯ ಇಲಾಖೆ ಅದು ತನ್ನದಲ್ಲ ಎನ್ನುತ್ತದೆ. ಅರಣ್ಯ ಇಲಾಖೆಯ ಜಾಗ ಆಗಿರುವುದರಿಂದ ಪಟ್ಟಾ ಕೊಡಲಾಗದು ಎಂದು ಕಂದಾಯ ಇಲಾಖೆ ಹೇಳುತ್ತದೆ. ಈ ಸಂದಿಗ್ಧ ಪರಿಸ್ಥಿತಿಯಿಂದ ಹೊರಬರಲು ಆಗುತ್ತಿಲ್ಲ’ ಎಂಬುದು ಈ ಬುಡಕಟ್ಟಿನ ಜಯಾನಂದ ಅವರ ಸಂಕಟ.

ಉತ್ತಮ ಬದುಕಿಲ್ಲ...

‘ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ರಕ್ಷಣೆಯಲ್ಲಿ ಹಿಂದುಳಿದಿರುವ ಕೊರಗ ಜನಾಂಗದವರಿಗೆ ಉತ್ತಮ ಬದುಕು ಕಟ್ಟಿಕೊಳ್ಳುವುದು ಸಾಧ್ಯವಾಗಿಲ್ಲ’ ಎಂದು ಹೋರಾಟಗಾರ ಸುಂದರ ಕೊರಗ ಬೇಸರ ವ್ಯಕ್ತಪಡಿಸುತ್ತಾರೆ.

‘ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯೇ ಕೊರಗರ ಮೂಲ ಸ್ಥಾನ. ಮನೆ ನಿರ್ಮಿಸಲು ಪ್ರತಿ ಕುಟುಂಬಕ್ಕೆ ₹ 4.90 ಲಕ್ಷ ನೀಡುವ ‘ಗಿರಿಜನ ಉಪಯೋಜನೆಯ ವಸತಿ ಯೋಜನೆ’ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಈಗ ಕೇಳಿದರೆ, ₹ 3.5 ಲಕ್ಷದ ಮನೆ ನಿರ್ಮಿಸಲು ಅರ್ಜಿ ಸಲ್ಲಿಸಿ ಎನ್ನುತ್ತಾರೆ. ಸುಳ್ಯ ತಾಲ್ಲೂಕಿನಲ್ಲಿ 40 ವರ್ಷಗಳ ಹಿಂದೆ ನಿರ್ಮಿಸಿದ ಹತ್ತು ಮನೆಗಳಿವೆ. ಇನ್ನೂ 7 ಮನೆಗಳು ಬೇಕು. ಎಲ್ಲ ತಾಲ್ಲೂಕುಗಳಲ್ಲಿ ಪ್ರತಿ ವರ್ಷ ತಲಾ 10 ಮನೆ ನಿರ್ಮಿಸಿದರೆ ಐದು ವರ್ಷಗಳಲ್ಲಿ ಸಮಸ್ಯೆ ನಿವಾರಣೆ ಆಗುತ್ತದೆ’ ಎಂಬ ಸಲಹೆ ಅವರದು.

‘ಕೊರಗ, ಮಲೆಕುಡಿಯ ಮತ್ತು ಮರಾಠಿ ನಾಯಕ ಸಮುದಾಯವರು ಬುಡಕಟ್ಟು ಜನಾಂಗಕ್ಕೆ ಸೇರಿದವರು. ಈ ಪೈಕಿ ಕೊರಗ ಜನಾಂಗದವರನ್ನು ನೈಜ ದುರ್ಬಲ ಬುಡಕಟ್ಟು ಸಮುದಾಯ ಎಂದು ಘೋಷಿಸಲಾಗಿದೆ. ಆದರೂ ಸೌಲಭ್ಯಗಳು ಸರಿಯಾಗಿ ತಲುಪಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ 2007ರಲ್ಲಿ ಸ್ವಲ್ಪ ಭೂಮಿ ನೀಡಿದ್ದಾರೆ. ಅದರ ದಾಖಲೆಗಳು ಸಮರ್ಪಕವಾಗಿಲ್ಲದೆ ಸಾಗುವಳಿಗೆ ತೊಂದರೆಯಾಗಿದೆ’ ಎಂಬುದು ಅವರ ಅಸಮಾಧಾನ.

ಆದಿವಾಸಿಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು, ವಿವಿಧ ಇಲಾಖೆಗಳ ನಡುವಿನ ಸಾಮರಸ್ಯದ ಕೊರತೆಯನ್ನು ತುಂಬುವ ಆಡಳಿತವನ್ನು ಈ ಸಮುದಾಯಗಳು ನಿರೀಕ್ಷಿಸುತ್ತಿವೆ. ಜನ್–ಮನ್ ಯೋಜನೆಯು ಈ ಅಸಹಾಯಕ ಜನರ ಮನದ ಆಳವನ್ನು ಅರಿಯಬೇಕಾದ್ದು ಮೊದಲು ಆಗಬೇಕಾದ ಕೆಲಸ ಎನ್ನುವುದು ಮುಖಂಡರ ಅಭಿಪ್ರಾಯವಾಗಿದೆ.

ಪೂರಕ ಮಾಹಿತಿ: ರಾಜೇಶ್ ರೈ ಚಟ್ಲ, ವಿಕ್ರಂ ಕಾಂತಿಕೆರೆ, ಕೆ.ಎಸ್. ಗಿರೀಶ, ಬಾಲಚಂದ್ರ ಎಚ್., ಗಣಪತಿ ಹೆಗಡೆ
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಚಾಮರಾಜನಗರದಲ್ಲಿ ಸ್ಪಂದನೆ

ಯೋಜನೆಗೆ ಚಾಮರಾಜನಗರ ಜಿಲ್ಲೆಯಲ್ಲಿ ಸ್ಪಂದನೆ ಕಂಡುಬಂದಿದೆ. ‘ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಮುಖ್ಯವಾಹಿನಿಯಿಂದ ದೂರ ಉಳಿದ ಜೇನು ಕುರುಬರನ್ನು ನೈಜ ಬುಡಕಟ್ಟು ಸಮುದಾಯ ಎಂದು ಗುರುತಿಸಲಾಗಿದೆ. ಗುಡ್ಡೆಕೇರೆ, ಆಡಿನಕಣಿವೆ, ಅಣಜಿಹುಂಡಿ, ಕೆರೆಮಾಳ, ನವಿಲುಗುಂಡಿ, ಮದ್ದೂರು ಕಾಲೊನಿ, ಉಪ್ಕರ ಕಾಲೊನಿ, ಮುಕ್ತಿ ಕಾಲೊನಿ, ಮಗುವಿನಹಳ್ಳಿ, ಮೇಲಕಮ್ಮನಹಳ್ಳಿ ಕಾಲೊನಿ, ದೇಶಿಪುರ ಕಾಲೊನಿ, ಹಗ್ಗದಹಳ್ಳದ 439 ಕುಟುಂಬಗಳ 1,096 ಮಂದಿಯನ್ನು ಗುರುತಿಸಲಾಗಿದೆ’ ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಮಂಜುಳಾ ಮಾಹಿತಿ ನೀಡಿದರು.

‘ಆಧಾರ್ ಸೇರಿದಂತೆ ಗುರುತಿನ ಚೀಟಿಗಳನ್ನು ವಿತರಿಸಲಾಗುತ್ತಿದೆ. 27 ಕುಟುಂಬಗಳಿಗೆ ಮನೆ ನಿರ್ಮಿಸಿಕೊಳ್ಳಲು ತಲಾ ₹ 2.39 ಲಕ್ಷ ಜಮೆ ಮಾಡಲಾಗಿದೆ. 23 ಮನೆಗಳ ನಿರ್ಮಾಣ ನಡೆದಿದೆ’ ಎಂದರು.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 18-08-1999

● ಸೋನಿಯಾ ವಿರುದ್ಧ ರಾಜಶೇಖರ ಮೂರ್ತಿ

ಬೆಂಗಳೂರು, ಆಗಸ್ಟ್ 17– ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದೇ ಆದರೆ ಅವರ ವಿರುದ್ಧ ಕೇಂದ್ರದ ಮಾಜಿ ಸಚಿವ ಎಂ. ರಾಜಶೇಖರ ಮೂರ್ತಿ ಅವರನ್ನು ಕಣಕ್ಕಿಳಿಸಲು ಬಿಜೆಪಿ ತೀರ್ಮಾನಿಸಿದೆ.

ನಾಮಪತ್ರ ಸಲ್ಲಿಸಲು ರಾಜಶೇಖರ ಮೂರ್ತಿ ಅವರು ಇಂದು ರೈಲಿನಲ್ಲಿ ಬಳ್ಳಾರಿಗೆ ಪ್ರಯಾಣಿಸಿದರು. ಸೋನಿಯಾ ಅವರು ನಾಳೆ ನಾಮಪತ್ರ ಸಲ್ಲಿಸಿದರೆ ಮೂರ್ತಿ ಅವರು ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತಾರೆ; ಇಲ್ಲದಿದ್ದಲ್ಲಿ ನಾಮಪತ್ರ ಸಲ್ಲಿಸದೆ ಹಿಂತಿರುಗಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 18-08-1974

● ಸೇಂದಿ ಇಳಿಸುವ ಮೂರ್ತೆದಾರರಿಗೆ ಸೂಕ್ತ ರಕ್ಷಣೆ

ಬೆಂಗಳೂರು, ಆಗಸ್ಟ್ 17– ದಕ್ಷಿಣ ಕನ್ನಡ ಜಿಲ್ಲೆಯ ಸೇಂದಿ ಇಳಿಸುವ ಮೂರ್ತೆದಾರರಿಗೆ ಹಾಗೂ ಕಂಟ್ರಾಕ್ಟರುಗಳಿಗೆ ಇರುವ ಭಿನ್ನಾಭಿಪ್ರಾಯದಲ್ಲಿ ಮೂರ್ತೆದಾರರಿಗೆ ಕಿರುಕುಳವಾಗದಂತೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಕೂಡಲೇ ಸೂಚನೆ ಕಳುಹಿಸುವುದಾಗಿ ಲೋಕೋಪಯೋಗಿ ಸಚಿವ ಎಚ್‌.ಎಂ. ಚನ್ನಬಸಪ್ಪ ಅವರು ಇಂದು ವಿಧಾನಸಭೆಗೆ ಭರವಸೆ ನೀಡಿದರು.

ಕೂಲಿ ಹೆಚ್ಚಳ ವಿಚಾರವಾಗಿ ಭಿನ್ನಾಭಿಪ್ರಾಯವಿದ್ದು, ಕಂಟ್ರಾಕ್ಟರುಗಳು ತಮ್ಮ ಹಣ ಹಾಗೂ ಪ್ರಭಾವದಿಂದ ಪೊಲೀಸರನ್ನು ಬಳಸಿ ಮೂರ್ತೆದಾರರ ಮೇಲೆ ಹಲ್ಲೆ ನಡೆಸಿರುವುದಾಗಿ ಎಸ್. ಬಂಗಾರಪ್ಪನವರು ವಿಚಾರ ಪ್ರಸ್ತಾಪಿಸಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ ಭಾನುವಾರ ಆಗಸ್ಟ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ತ್ರಯೋದಶಿ ಗಂ. 5-52 ನಂತರ ಚತುರ್ದಶಿ ಗಂ. 27-05 **ನಕ್ಷತ್ರ:** ಉತ್ತರಾಷಾಢ ಗಂ. 10-15 **ಯೋಗ:** ಆಯುಷ್ಮಾನ್ ಗಂ. 07-51, ಸಿಂಹ ಮಾಸದ 02 ನೇ ದಿನ, **ಮಳೆನಕ್ಷತ್ರ:** ಮಘಾ 1.
ರಾಹುಕಾಲ: ಸಂಜೆ 04-30 – 06-00
ಸೂರ್ಯೋದಯ: 06-22 **ಸೂರ್ಯಾಸ್ತ:** 06-47
ಮುಸ್ಲಿಂ ದಿನಾಂಕ: 13 ಸಫರ್
ಅದೃಷ್ಟ ಸಂಖ್ಯೆ: 4, 8

ಮೇಷ: ಹಿಂಜರಿಕೆಯ ಸ್ವಭಾವದಿಂದ ಕೆಲಸ ಗಿಟ್ಟಿಸಿಕೊಳ್ಳಲು ಕಷ್ಟವಾಗುತ್ತದೆ. ಲಾಟರಿಯಂತಹ ಯೋಜನೆಗಳು ಕಣ್ಣಾ-ಮುಚ್ಚಾಲೆಯಾಟ ನಡೆಸಲಿದೆ. ವ್ಯವಹಾರ ನಿಮಿತ್ತ ದೂರದ ಪ್ರಯಾಣ ಮಾಡಬೇಕಾಗುವುದು.

ವೃಷಭ: ಜೀವನದಲ್ಲಿ ಮಹತ್ವದ ಬದಲಾವಣೆಯಾಗುವ ಸಮಯ. ನೆರೆ-ಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು. ಕುಟುಂಬದಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗಬಹುದು.

ಮಿಥುನ: ಯುವ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ, ಅವಕಾಶಗಳು ಲಭಿಸಲಿವೆ. ಮಕ್ಕಳಿಗೆ ಆಟಿಕೆ ವಸ್ತುಗಳ ಖರೀದಿಸಬೇಕಾಗುವುದು. ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ.

ಕರ್ಕಾಟಕ: ಕಾರ್ಯ ಕ್ಷೇತ್ರದಲ್ಲಿ ಕೆಲವು ಮೂಲಭೂತ ಬದಲಾವಣೆಗಳಾಗುವ ಸಾಧ್ಯತೆ ಇದೆ. ಬಂಧುಗಳು ಸಂಬಂಧ ಅರಸಿ ನಿಮ್ಮ ಮನೆಗೆ ಬರಲಿದ್ದಾರೆ. ಇಲಾಖೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ಪಡೆಯುವಿರಿ.

ಸಿಂಹ: ನಿಮ್ಮ ಬಗ್ಗೆಯಷ್ಟೆ ಯೋಚಿಸುವುದನ್ನು ಬಿಟ್ಟು ಇತರರ ಬಗ್ಗೆಯೂ ಕಾಳಜಿ ವಹಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ಆಟಿಕೆ ಸಾಮಾನು ಮಾರಾಟಗಾರರಿಗೆ ಲಾಭವಾಗಲಿದೆ. ಅಪೇಕ್ಷಿಗಳಿಗೆ ಸಂತಾನ ಭಾಗ್ಯ ದೊರೆಯುವುದು.

ಕನ್ಯಾ: ನಿದ್ರಾ ಅಭಾವದಿಂದ ಅನಾರೋಗ್ಯಗಳಿಗೆ ತುತ್ತಾಗುವ ಸಾಧ್ಯತೆ ಇದೆ. ವ್ಯಾಪಾರ-ವ್ಯವಹಾರಗಳಲ್ಲಿ ಹಾಗೂ ಪ್ರಯಾಣದ ವೇಳೆ ನಯವಂಚಕರ ಬಗ್ಗೆ ಎಚ್ಚರವಹಿಸಿ. ಎಲ್ಲರ ಒಪ್ಪಿಗೆ ಪಡೆದು ವಿವಾಹ ಆಯೋಜಿಸಿ.

ತುಲಾ: ದೇಹಕ್ಕೆ ಆಯಾಸವಾದರೆ ಸ್ವ–ಆರೈಕೆ ಮಾಡಿಕೊಳ್ಳುವುದು ಉತ್ತಮ. ಹಾಲು, ಮೊಸರು, ತುಪ್ಪದಂತಹ ಗೋ ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಹಾಗೂ ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು.

ವೃಶ್ಚಿಕ: ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಸ್ವ–ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬೇಡಿ. ಬೆಂಕಿಯಿಂದ ಅಥವಾ ಸುಡುವ ಪದಾರ್ಥದಿಂದ ಅಂತರ ಕಾಯ್ದುಕೊಳ್ಳುವುದು ಉತ್ತಮ.

ಧನು: ಹಲವು ದಿನಗಳ ಮನಸ್ತಾಪದ ಬಳಿಕ ಕುಟುಂಬದಲ್ಲಿ ಸಡಗರ ಕಂಡು ಸಂತೋಷವಾಗುವುದು. ರಕ್ಷಣಾ ವೃತ್ತಿಗೆ ಸಂಬಂಧಿಸಿದವರು ಎಚ್ಚರದಿಂದ ಕಾರ್ಯನಿರ್ವಹಿಸಿ. ಗಣೇಶನ ಪ್ರಾರ್ಥನೆಯೊಂದಿಗೆ ದಿನ ಆರಂಭಿಸಿ.

ಮಕರ: ಮಹತ್ವದ ವ್ಯಕ್ತಿಯೊಬ್ಬರು ನೀಡಿದ ಉಡುಗೊರೆಯನ್ನು ಕಳೆದುಕೊಂಡು ವ್ಯಥೆಪಡುವ ಸಾಧ್ಯತೆ ಇದೆ. ವ್ಯಾಪಾರದ ಬಗ್ಗೆ ಹಾಗೂ ಬರವಣಿಗೆಯ ಕುರಿತು ಉತ್ಸಾಹ, ಆಸಕ್ತಿ ಹೆಚ್ಚಲಿದೆ.

ಕುಂಭ: ವಿದ್ಯಾರ್ಥಿಗಳು ಧೃತಿಗೆಡದೆ ಹೆಚ್ಚಿನ ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ, ಜಯ ನಿಮ್ಮದಾಗುತ್ತದೆ. ಆರೋಗ್ಯ ಸುಧಾರಣೆಗೆ ಧಾರ್ಮಿಕ ಕಾರ್ಯಗಳನ್ನು ಮಾಡಿ.


ಮೀನ: ಈವರೆಗೆ ಕಠಿಣ ಪರಿಸ್ಥಿತಿಯನ್ನು ಎದುರಿಸಿದ ನಿಮಗೆ ಈ ದಿನವು ಆಶಾದಾಯಕ ಹಾಗೂ ಆರಾಮದಾಯಕವಾಗಿರುತ್ತದೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ.

ಪದಬಂಧ 5776

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಕ್ತನಾಳ ಇಲ್ಲಿದೆ (3)
3.ಮಂಡಿಗೆ ತಿನ್ನುತ್ತಿರುವವನ ಮೊಳಕಾಲು! (2)
5.ವಾಲಿಯ ಮಗನಿವನು (3)
6.ಕಸ್ತೂರಿ ಕಂಪಿನ ಭಾಷೆ (3)
7.ಪದರದಲ್ಲಿರುವ ಕೈವಲ್ಯ! (2)
8.ತೀವ್ರಜ್ವರದಿಂದ ಉಂಟಾಗುವ ಬುದ್ಧಿಭ್ರಮಣೆ (2)
9.ನಮ್ಮ ನಾಡ ಹಬ್ಬ (3)
10.ನಯನವಿಲ್ಲಿ ಉಲ್ಟಾ ಕಾಣುತ್ತಿದೆ (2)
12.ನಾವೆಲ್ಲರು ಕುಳಿತಿರುವ ದೋಣಿ! (2)
13.ಅನ್ನ ಮಾಡುವ ಪಾತ್ರೆ (3)
14.ಬಾಡಿದುದನ್ನು ಹೀಗೂ ಹೇಳುತ್ತಾರೆ (3)
15.ತಾಪತ್ರಯವಿದ್ದಾಗ ಬರೆದ ಓಲೆ (2)
16.ಸೂರ್ಯ ದೀಪ ಮೊದಲಾದವುಗಳ ಪ್ರಕಾಶ (3)

ಮೇಲಿಂದ ಕೆಳಕ್ಕೆ
2.ಮರದಲ್ಲಿರುವ ದುಂಬಿ (4)
3.ಮುಗುಳುನಗೆಯನ್ನು ಹೀಗೆನ್ನಿ (4)
4.ಬಸವಣ್ಣನ ಆತ್ಮೀಯ ವಲಯಕ್ಕೆ ಸೇರಿದ ಈ ಶರಣನ ಪತ್ನಿ ಲಿಂಗಮ್ಮ (7)
5.ದೋಣಿ ನಡೆಸುವ ಕಾಯಕ ಮಾಡುತ್ತಿದ್ದ ವಚನಕಾರ (7)
11.ಪವಿತ್ರವಲ್ಲದುದು ಇದು (4)
12.ನಾರಿ ಹಿಡಿದಿರುವ ತೆಂಗಿನ ಕಾಯಿ (4)



5775ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಲಕ 3.ಚಿನಿವಾರ
5.ಶಿವೇ 7.ಕಚ
9.ದಶಮ 11.ರಣಹೇಡಿ
13.ಅಂಗರಾಗ 14.ತವಕ
15.ವಕ್ರ 16.ಟಕ್ಕ
18.ಕವಾಯಿತು 19.ಅಪಥ್ಯ

ಮೇಲಿಂದ ಕೆಳಕ್ಕೆ:
12.ಕಳೆ 4.ರತ್ನಪಡಿ
6.ವೇದಪಾರಂಗತ 8.ಚದುರಂಗ
10.ಮರಣಸಂಕಟ 12.ಹೇಷಾರವ
13.ಅಂಗಾರಕ 17.ಕ್ಕಅ

ಸುಡೊಕು 6161

		1	4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5		
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6160 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ತುಂಗಭದ್ರಾ ಜಲಾಶಯದ ಎಲ್ಲ ಗೇಟ್ ಬಂದ್, ವಾರದಲ್ಲಿ 36 ಟಿಎಂಸಿ ಅಡಿ ನೀರು ಪೋಲು

19ನೇ ಗೇಟ್: 'ಕನ್ನಯ್ಯ ಆಪರೇಷನ್' ಯಶಸ್ವಿ

ಪ್ರಜಾವಾಣಿ ವಾರ್ತೆ

ಕೊಪ್ಪಳ/ಹೊಸಪೇಟೆ: ತುಂಗಭದ್ರಾ ಜಲಾಶಯದ 19ನೇ ತೂಬಿಗೆ ಎಲ್ಲ ಐದು ಎಲಿಮೆಂಟ್‌ಗಳನ್ನು ಅಳವಡಿಸುವ ಕಾರ್ಯ ಶನಿವಾರ ಯಶಸ್ವಿಯಾಗಿದ್ದು, ಸರಿಯಾಗಿ ಒಂದು ವಾರದ ಹಿಂದೆ ರೈತರಲ್ಲಿ ಮನೆಮಾಡಿದ್ದ ಆತಂಕ ಈಗ ದೂರವಾಗಿದೆ.

ನಾಲ್ಕು ಅಡಿ ಎತ್ತರದ ಐದು ಎಲಿಮೆಂಟ್‌ಗಳನ್ನು ಅಳವಡಿಸಿ ರಭಸದಿಂದ ಹರಿಯುವ ನೀರಿನ ವೇಗಕ್ಕೆ ಕಡಿವಾಣ ಹಾಕಲು ತಾತ್ಕಾಲಿಕ ಗೇಟ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಶುಕ್ರವಾರ ರಾತ್ರಿ ಮೊದಲ ಎಲಿಮೆಂಟ್ ಅಳವಡಿಸಿ, ಶನಿವಾರ ಉಳಿದ ಎಲಿಮೆಂಟ್‌ಗಳನ್ನು ಜೋಡಿಸಲಾಯಿತು. ರಾಜ್ಯದ ಕೊಪ್ಪಳ, ವಿಜಯನಗರ, ರಾಯಚೂರು, ಬಳ್ಳಾರಿ ಜಿಲ್ಲೆಗಳು, ನೆರೆಯ ಆಂಧ್ರ ಮತ್ತು ತೆಲಂಗಾಣ ರಾಜ್ಯಗಳು ಪಾಲು ಹೊಂದಿರುವ ಈ ಜಲಾಶಯದಲ್ಲಿ ಒಂದು ವಾರದ ಅವಧಿಯಲ್ಲಿ 36 ಟಿಎಂಸಿ ಅಡಿ ನೀರು ನದಿಗೆ ಹರಿದು ಪೋಲಾಗಿದೆ.

ಜಲಾಶಯದ ಗೇಟ್ ಕೊಚ್ಚಿ ಹೋದಾಗ ಕನಿಷ್ಠ 60 ಟಿಎಂಸಿ ಅಡಿ ನೀರು ಖಾಲಿಮಾಡಿಯೇ ಎಲಿಮೆಂಟ್‌ಗಳನ್ನು ಅಳವಡಿಸಬೇಕಾಗುತ್ತದೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದರು. ಜಲಾಶಯಗಳ ಕ್ರಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಅವರು ರಭಸವಾಗಿ ಹರಿಯುವ ನೀರಿನಲ್ಲಿಯೇ ಎಲಿಮೆಂಟ್‌ಗಳನ್ನು ಅಳವಡಿಸಿದರೆ ನೀರು ಉಳಿಸಬಹುದು ಎನ್ನುವ ಸಲಹೆ ನೀಡಿದ್ದರು. ಅವರ ಮಾರ್ಗದರ್ಶನದಲ್ಲಿಯೇ ನಡೆದ ಕಾರ್ಯಾಚರಣೆಯಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ನೀರು ಜಲಾಶಯದಲ್ಲಿಯೇ ಉಳಿಯಿತು.

ಒಂದೊಂದೇ ಎಲಿಮೆಂಟ್‌ಗಳನ್ನು ಅಳವಡಿಸಿದ ಬಳಿಕ ಅದರ ಅಕ್ಕಪಕ್ಕದ ಗೇಟ್‌ಗಳಿಂದ ನೀರಿನ ಹರಿವು ಬಂದ್ ಮಾಡಿ ಆ ನೀರಿನ ಒತ್ತಡವೆಲ್ಲ 19ನೇ ಗೇಟ್ ಮೇಲೆಯೇ ಬೀಳುವ ಪರೀಕ್ಷೆ ಮಾಡಲಾಯಿತು. ಪ್ರತಿ ಎಲಿಮೆಂಟ್ ಕೂಡಿಸಿದಾಗಲೂ ಇದೇ ರೀತಿಯ ಪರೀಕ್ಷೆ ನಡೆಸಿ ಅಳವಡಿಕೆ ಸರಿಯಾಗಿ ಆಗಿದೆಯೇ ಎಂದು ತಾಂತ್ರಿಕ ಸಿಬ್ಬಂದಿ ಖಚಿತಪಡಿಸಿಕೊಂಡರು.

ಎರಡನೇ ಎಲಿಮೆಂಟ್ ಅಳವಡಿಕೆಗೆ ಸುಮಾರು ಒಂದೂವರೆ ತಾಸು ಬೇಕಾಯಿತು. ಬಳಿಕ ವೇಗವಾಗಿ ಅವುಗಳನ್ನು ಅಳವಡಿಸಿ ಎಲ್ಲ ಗೇಟ್‌ಗಳಿಂದ ನೀರು ಬಂದ್ ಮಾಡಿದ್ದರಿಂದ ಕೆಲವೇ ನಿಮಿಷಗಳಲ್ಲಿ ಜಲಾಶಯದಲ್ಲಿ ಭೋರ್ಗರೆಯುತ್ತಿದ್ದ ನೀರು ಸ್ತಬ್ದವಾಯಿತು. ಕೊಪ್ಪಳ–ಹೊಸಪೇಟೆ ಮಾರ್ಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುವಾಗ ಜನರಿಗೆ ಕಣ್ಣು ಹಾಯಿಸಿದಷ್ಟೂ ದೂರ ನೀರೇ ನೀರು. ಆದರೆ ಶನಿವಾರ ಸಂಜೆಯಿಂದ ಕಿಂಚಿತ್ತೂ ನೀರು ಕಾಣದಿದ್ದಾಗ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟರು.



ಕೊಪ್ಪಳ ಜಿಲ್ಲೆಯ ತುಂಗಭದ್ರಾ ಜಲಾಶಯದಲ್ಲಿ ಶನಿವಾರ ಎಲ್ಲ ಗೇಟ್‌ಗಳನ್ನು ಬಂದ್ ಮಾಡಿ 19ನೇ ಗೇಟ್‌ನ ಸಾಮರ್ಥ್ಯ ಪರೀಕ್ಷೆ ಮಾಡಿದ ಕ್ಷಣ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

> **ರಭಸವಾಗಿ ಹರಿಯುವ ನೀರಿನಲ್ಲಿ ಕಾರ್ಯಾಚರಣೆ ನಡೆಸಿ ಗರಿಷ್ಠ ಪ್ರಮಾಣದಲ್ಲಿ ನೀರು ಜಲಾಶಯದಲ್ಲಿಯೇ ಉಳಿಸಿದ್ದೇವೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ಮತ್ತೆ ತುಂಗಭದ್ರಾ ಜಲಾಶಯ ತುಂಬಲಿದೆ**
> **ಶಿವರಾಜ ತಂಗಡಗಿ,** ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ

ಮುಖ್ಯಾಂಶಗಳು

- 19ನೇ ತೂಬಿನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಹರಿಯುತ್ತಿರುವ ನೀರು
- ಗೇಟ್ ಅಳವಡಿಸುತ್ತಿದ್ದಂತೆ ಮೀನುಗಾರಿಕೆ ಜೋರು
- ನೆಮ್ಮದಿಯ ನಿಟ್ಟುಸಿರಿಟ್ಟ ಜನರು

ಗೇಟ್ ಅಳವಡಿಸಿದ ಸಿಬ್ಬಂದಿಗೆ ತಲಾ ₹ 50 ಸಾವಿರ ಬಹುಮಾನ

ಬಳ್ಳಾರಿ: ಗೇಟ್ ಅಳವಡಿಕೆ ತಂಡದಲ್ಲಿ ಕೆಲಸ ಮಾಡಿದ್ದ 35 ಮಂದಿಗೆ ತಲಾ ₹ 50 ಸಾವಿರ ಬಹುಮಾನ ನೀಡುವುದಾಗಿ ವಸತಿ ಸಚಿವ ಬಿ.ಝಡ್ ಜಮೀರ್ ಅಹಮದ್ ಖಾನ್ ಶನಿವಾರ ಘೋಷಿಸಿದ್ದಾರೆ.

ಬಳ್ಳಾರಿಯಲ್ಲಿ ಮಾತನಾಡಿರುವ ಅವರು, 'ಗೇಟ್ ಅಳವಡಿಸಲು ಸಿಬ್ಬಂದಿ ಪ್ರಾಣದ ಹಂಗು ತೊರೆದು ಡ್ಯಾಂನಲ್ಲಿ ಕೆಲಸ ಮಾಡಿದ್ದಾರೆ. ತಂಡದಲ್ಲಿರುವ ಒಟ್ಟು 35 ಮಂದಿಗೆ ಖುದ್ದು ಸನ್ಮಾನ ಮಾಡಿ, ₹ 50 ಸಾವಿರ ನಗದು ನೀಡುವುದಾಗಿ ಹೇಳಿದ್ದೆ. ಆದರೆ ಅನಿವಾರ್ಯ ಕಾರಣಗಳಿಂದ ಬೆಂಗಳೂರಿಗೆ ತುರ್ತಾಗಿ ತೆರಳಬೇಕಿದೆ. ಹೀಗಾಗಿ ಇನ್ನೆರಡು ಮೂರು ದಿನಗಳಲ್ಲಿ ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ನೇತೃತ್ವದಲ್ಲಿ ಸಮಾರಂಭ ಆಯೋಜಿಸಿ, ಸಿಬ್ಬಂದಿಗೆ ಸನ್ಮಾನ ಮಾಡಲಾಗುವುದು. ಹಣದ ನೆರವನ್ನೂ ನೀಡಲಾಗುವುದು' ಎಂದು ತಿಳಿಸಿದರು. ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ ಕೆಲಸ ಮಾಡಿದ ಸಿಬ್ಬಂದಿಗೆ ಒಟ್ಟು ₹2 ಲಕ್ಷ ಬಹುಮಾನ ನೀಡಿ ಅಭಿನಂದಿಸಿದರು.



ತುಂಗಭದ್ರಾ ಜಲಾಶಯದ 19ನೇ ತೂಬಿನಿಂದ ಕೊಚ್ಚಿ ಹೋಗಿ ಜಲಾಶಯ ಮುಂಭಾಗದಲ್ಲಿ ಬಿದ್ದಿರುವ ಗೇಟ್

ಟೀಕೆಯ ಬಳಿಕ ಮುಖ್ಯ ಎಂಜಿನಿಯರ್ ನೇಮಕ

ಕೊಪ್ಪಳ: ಜಲಾಶಯದ ಗೇಟ್ ಕಳಚಿ ಅವಘಡವಾದ ಬಳಿಕ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ತಾತ್ಕಾಲಿಕವಾಗಿ ಮುಖ್ಯ ಎಂಜಿನಿಯರ್ ಹುದ್ದೆ ಸೃಷ್ಟಿ ಮಾಡಿದ್ದು, ಕರ್ನಾಟಕ ನೀರಾವರಿ ನಿಗಮದ ತಾಲ್ಲೂಕಿನ ಮುನಿರಾಬಾದ್ ಕಚೇರಿಗೆ ಹನುಮಂತ ಜಿ. ದಾಸರ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

ಮುನಿರಾಬಾದ್ ತುಂಗಭದ್ರಾ ಜಲಾಶಯಕ್ಕೆ ಒಂದು ವರ್ಷದಿಂದ ಮುಖ್ಯ ಎಂಜಿನಿಯರ್ ಹುದ್ದೆ ಖಾಲಿಯಿತ್ತು. ಗೇಟ್ ಕೊಚ್ಚಿಕೊಂಡು ಹೋದಾಗ, ಹುದ್ದೆ ಭರ್ತಿ ಮಾಡದ ಕಾರಣಕ್ಕೆ ಸಾಕಷ್ಟು ಟೀಕೆಗಳು ಕೇಳಿ ಬಂದಿದ್ದವು.

ತುಂಗಭದ್ರಾ ಅಣೆಕಟ್ಟೆಗೆ 30 ವರ್ಷವಷ್ಟೇ ಆಯಸ್ಸು: ಕನ್ನಯ್ಯ ನಾಯ್ಡು

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯ ಎಲ್ಲ ಕ್ರಸ್ಟ್‌ಗೇಟ್‌ಗಳನ್ನು ತಕ್ಷಣ ಬದಲಿಸಿ ಹೊಸ ಗೇಟ್ ಅಳವಡಿಸಬೇಕು. ಹಾಗೆ ಮಾಡಿದರೆ ಇನ್ನು 30 ವರ್ಷ ಸುಸ್ಥಿತಿಯಲ್ಲಿ ಇರಬಹುದು, ಆ ಬಳಿಕ ಹೊಸ ಅಣೆಕಟ್ಟೆ ನಿರ್ಮಿಸಲೇಬೇಕಾಗುತ್ತದೆ' ಎಂದು ಕ್ರಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಸಲಹೆ ನೀಡಿದ್ದಾರೆ.



ಶನಿವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಅಣೆಕಟ್ಟೆಗಳಿಗೆ ವಯಸ್ಸಾದಂತೆ ಅವುಗಳಿಗೆ ಆಗಾಗ ಹೆಚ್ಚುವರಿ ಉಪಚಾರ ಬೇಕಾಗುತ್ತದೆ. ಅಣೆಕಟ್ಟೆ ನಿರ್ಮಿಸಿ 45 ವರ್ಷವಾದಾಗಲೇ ಕ್ರಸ್ಟ್‌ಗೇಟ್‌ಗಳನ್ನು ಬದಲಿಸಬೇಕಿತ್ತು, ತುಂಗಭದ್ರಾದಲ್ಲಿ ಅದು ಆಗಿಲ್ಲ. 100 ವರ್ಷವಾದಾಗ ಕಲ್ಲುಗಳು ಸಡಿಲಗೊಂಡು ಅಣೆಕಟ್ಟೆ ಕುಸಿಯುವ ಸಾಧ್ಯತೆ ಇರುತ್ತದೆ ಎಂದರು.

'ದೇಶದಲ್ಲೇ ಮೊದಲ ಬಾರಿಗೆ ರಭಸವಾಗಿ ಹರಿಯುವ ನೀರಿನಲ್ಲೇ ಗೇಟ್ ಎಲಿಮೆಂಟ್ ಇಳಿಸುವ ಪ್ರಯತ್ನ ನಡೆಸಿ ಯಶಸ್ವಿಯಾಗಿದ್ದೇವೆ. ಇದರಿಂದ 30 ಟಿಎಂಸಿ ಅಡಿ ನೀರು ನದಿಗೆ ವ್ಯರ್ಥವಾಗಿ ಹೋಗುವುದು ತಪ್ಪಿದೆ. ಈಗ 90 ಟಿಎಂಸಿ ಅಡಿ ಸಂಗ್ರಹವಾಗಲಿದ್ದು, ರೈತರ ಒಂದು ಬೆಳೆಗೆ, ಕುಡಿಯಲು ನೀರು ಸಿಗಲಿದೆ' ಎಂದರು.



ಬೆಂಗಳೂರಿನಲ್ಲಿ ಶನಿವಾರ ಆರಂಭಗೊಂಡಿರುವ 'ಕುಂದಾಪ್ರ ಕನ್ನಡ ಹಬ್ಬ'ದಲ್ಲಿ, ರಾಷ್ಟ್ರಪ್ರಶಸ್ತಿ ವಿಜೇತ ನಟ ರಿಷಬ್ ಶೆಟ್ಟಿಗೆ 'ಊರ ಗೌರವ' ನೀಡಿ ಅವರ ಪತ್ನಿ ಪ್ರಗತಿ ಶೆಟ್ಟಿ ಜೊತೆಗೆ ಸನ್ಮಾನ ಮಾಡಲಾಯಿತು.

ಧ್ವಜಕ್ಕೆ ಅವಮಾನ: ಶಿಕ್ಷಕ ಅಮಾನತು


ಪ್ರಜಾವಾಣಿ ವಾರ್ತೆ

ಮಳವಳ್ಳಿ/ಬೆಳಕವಾಡಿ: ತಾಲ್ಲೂಕಿನ ಉತ್ತೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮಯಕ್ಕೆ ಸರಿಯಾಗಿ ರಾಷ್ಟ್ರಧ್ವಜವನ್ನು ಇಳಿಸದ ಆರೋಪದ ಮೇರೆಗೆ ಶಿಕ್ಷಕ ಸೋಮಣ್ಣ ಅವರನ್ನು ಅಮಾನತುಗೊಳಿಸಲಾಗಿದೆ.

'ಆ.15ರ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಹಾರಿಸಿದ್ದ ಧ್ವಜವನ್ನು ಆ.16ರವರೆಗೆ ಧ್ವಜ ಸ್ತಂಭದಿಂದ ಇಳಿಸಿಲ್ಲ' ಎಂದು ವ್ಯಕ್ತಿಯೊಬ್ಬರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದಿದ್ದರು. 16ರ ರಾತ್ರಿ ಕ್ಷೇತ್ರ ಸಮನ್ವಯಾಧಿಕಾರಿ ಎಂ.ಕೆ. ಶ್ರೀನಿವಾಸ್, ಬಿ.ಆರ್.ಸಿ ಸೋಮಣ್ಣ ಸ್ಥಳಕ್ಕೆ ಭೇಟಿ ನೀಡಿದಾಗಲೂ ಧ್ವಜವು ಸ್ತಂಭದಲ್ಲೇ ಇತ್ತು. 'ಧ್ವಜ ಸಂಹಿತೆಯನ್ನು ಉಲ್ಲಂಘಿಸಲಾಗಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಕ್ಕೆ ವಿರುದ್ಧವಾಗಿ ಶಿಕ್ಷಕರು ವರ್ತಿಸಿದ್ದಾರೆ' ಎಂದು ಅವರು ವರದಿ ನೀಡಿದ್ದರು. ವರದಿ ಪರಿಶೀಲಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಚಂದ್ರಪಾಟೀಲ್, ಶಿಕ್ಷಕ ಸೋಮಣ್ಣ ವಿರುದ್ಧ ಶಿಸ್ತುಕ್ರಮ ಹಾಗೂ ವಿಚಾರಣೆ ಕಾಯ್ದಿರಿಸಿ ಅಮಾನತು ಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮುಖ್ಯ ಶಿಕ್ಷಕಿ ಅಮಾನತು

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಆಲ್ಕೋಡ ಗ್ರಾಮದ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯದ ಆವರಣದಲ್ಲಿ ತಾಯಮ್ಮದೇವಿ ದೇವಸ್ಥಾನ ನಿರ್ಮಿಸಿ, ಸಾರ್ವಜನಿಕರಿಗೆ ಭೋಜನ ಕೂಟ ಏರ್ಪಡಿಸಿ ವಿವಾದ ಕ್ಕೀಡಾಗಿದ್ದ ಮುಖ್ಯ ಶಿಕ್ಷಕಿ ಸುರೇಖಾ ಪಾಟೀಲ ಅವರನ್ನು ಡಿಡಿಪಿಐ ಕೆ.ಡಿ. ಬಡಿಗೇರ ಅಮಾನತು ಮಾಡಿದ್ದಾರೆ.



ಸುರೇಖಾ ಅವರು ಆ.14ರಂದು ಅನಧಿಕೃತವಾಗಿ ಗೈರಾಗಿದ್ದರು. ಕರ್ತವ್ಯದಲ್ಲಿ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ನಡವಳಿಕೆ ತೋರಿಸಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸುಖದೇವ ಅವರು ವರದಿ ಸಲ್ಲಿಸಿದ್ದರು. ಶಾಲಾ ಆವರಣದಲ್ಲಿ ದೇವಸ್ಥಾನ ನಿರ್ಮಿಸಿದ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಿದ್ದರು.

ಚಿಕಿತ್ಸೆ ಸಿಗದೆ ಮಹಿಳೆ ಸಾವು

ಮುಳಬಾಗಿಲು (ಕೋಲಾರ): ವೈದ್ಯರ ಮುಷ್ಕರದ ಹಿನ್ನೆಲೆಯಲ್ಲಿ ಬೈರಕೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಕಾಲಕ್ಕೆ ಚಿಕಿತ್ಸೆ ಸಿಗದೆ ಮಹಿಳೆಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ.

ಮುಳಬಾಗಿಲು ತಾಲ್ಲೂಕಿನ ಅಪ್ಪಿಕೊಂಡೇನಹಳ್ಳಿ ಗ್ರಾಮದ ಅರುಣಮ್ಮ (35) ಚಿಕಿತ್ಸೆ ಸಿಗದೆ ಮೃತಪಟ್ಟ ಮಹಿಳೆ. ಮೂರು ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಮಹಿಳೆಯನ್ನು ಸಮೀಪದ ಬೈರಕೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತರಲಾಯಿತು. ಹೊರರೋಗಿಗಳ ವಿಭಾಗ (ಒಪಿಡಿ) ತೆರೆದಿದ್ದರೂ ವೈದ್ಯರು ಇರಲಿಲ್ಲ.

ಅಲ್ಲಿದ್ದ ನರ್ಸ್ ಹಾಗೂ ಸಿಬ್ಬಂದಿ ಮಹಿಳೆಯನ್ನು ಆಂಬುಲೆನ್ಸ್‌ನಲ್ಲಿ ಮಲಗಿಸಿ ಉಸಿರಾಟ ಹಾಗೂ ನಾಡಿ ಬಡಿತ ಪರೀಕ್ಷೆ ಮಾಡಿದರು. ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸ್‌ನಲ್ಲಿ ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ಕಳಿಸಿದ್ದಾರೆ. ಮಾರ್ಗ ಮಧ್ಯೆ ಮಹಿಳೆ ಮೃತಪಟ್ಟಿದ್ದಾರೆ.





ಯಾದಗಿರಿ ಜಿಲ್ಲೆಯ ಕಕ್ಕೇರಾ ಸಮೀಪದ ಬೂದನೂರಿನ ಹಿರೇಹಳ್ಳದಲ್ಲಿ ಕೊಚ್ಚಿ ಹೋಗುತ್ತಿದ್ದ ಕುರಿಗಳ ರಕ್ಷಣೆಯಲ್ಲಿ ತೊಡಗಿದ್ದ ಜನ (ಎಡಚಿತ್ರ) ಬಳ್ಳಾರಿ ತಾಲ್ಲೂಕಿನ ಹೊಸ ಮೋಕಾ ಪ್ರದೇಶದಲ್ಲಿ ನೀರು ನುಗ್ಗಿತ್ತು

ಇಬ್ಬರು ಸಾವು: ಹಳ್ಳದಲ್ಲಿ ಕೊಚ್ಚಿ ಹೋದ ಕುರಿಗಳು; ಮನೆಗಳಿಗೆ ನುಗ್ಗಿದ ನೀರು

ಕಲ್ಯಾಣ ಕರ್ನಾಟಕದಲ್ಲಿ ಮಳೆಯ ಆರ್ಭಟ

ಪ್ರಜಾವಾಣಿ ವಾರ್ತೆ

ಕಲಬುರಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಶನಿವಾರವೂ ಮಳೆಯ ಆರ್ಭಟ ಮುಂದುವರಿದಿದೆ. ಕೆರೆ,ಕಟ್ಟೆ, ಹಳ್ಳಗಳು ಭರ್ತಿಯಾಗುವ ಹಂತ ತಲುಪಿವೆ.

ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯನಗರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಭಾರಿ ಮಳೆಯಾಯಿತು.

ಮಳೆ ನೀರಿಗೆ ನೆನೆದು ಗೋಡೆ ಕುಸಿದು ಬಿದ್ದು ಕಲಬುರಗಿ ಜಿಲ್ಲೆ ಯಡ್ರಾಮಿ ತಾಲ್ಲೂಕಿನ ಕೊಂಡಗುಳಿಯ ಜಗದೇವಿ ಈರಣ್ಣಗೌಡ ಮಾಲಿಪಾಟೀಲ (23) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಯಚೂರಿನ ದೇವದುರ್ಗ ತಾಲ್ಲೂಕಿನ ಮೂಡಲಗುಂಡದ ರೈತ ಬಸವರಾಜ (30) ಸಿಡಿಲು ಬಡಿದು ಸತ್ತಿದ್ದಾರೆ. ಲಿಂಗಸುಗೂರು ತಾಲ್ಲೂಕಿನ ಮೂರು ಗ್ರಾಮಗಳ ಹಳ್ಳಗಳು ಉಕ್ಕಿ ಹರಿದು ಸೇತುವೆಗಳು ಮುಳುಗಡೆಯಾದವು. ಮೇದಿನಾಪುರ ಹಾಗೂ ಕೋಠಾ–ಗುಡದನಾಳ ಗ್ರಾಮಸ್ಥರು ಸೇತುವೆಗಳ ಸಂಪರ್ಕ ಕಡಿತದಿಂದ ಪರದಾಡಿದರು.

ಯಾದಗಿರಿ ಜಿಲ್ಲೆಯ ಕಕ್ಕೇರಾ ಸಮೀಪದ ಬೂದನೂರಿನ ಹಿರೇಹಳ್ಳದ ನೀರಿನಲ್ಲಿ ಸಾಮಯ್ಯ ಅವರಿಗೆ ಸೇರಿದ 20ಕ್ಕೂ ಹೆಚ್ಚು ಕುರಿಗಳು ಕೊಚ್ಚಿಕೊಂಡು ಹೋಗಿವೆ.

ಹುಣಸಗಿಯಲ್ಲಿ ಸೇತುವೆಗಳು ಮುಳುಗಡೆಯಾಗಿ, ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಬೀದರ್ ಜಿಲ್ಲೆಯ ಹುಲಸೂರಿನಲ್ಲಿ ಎರಡು ಗಂಟೆಗೂ ಹೆಚ್ಚು ಹೊತ್ತು ಬಿರುಸಿನ ಮಳೆಯಾಗಿದೆ. ಕಲಬುರಗಿ ನಗರವೂ ಸೇರಿ ಚಿಂಚೋಳಿ, ಕಾಳಗಿ, ಅಫಜಲಪುರದಲ್ಲಿ ಮಳೆಯಾಗಿದೆ.

ಕೊಪ್ಪಳದಲ್ಲಿ ರಭಸದ ಮಳೆ ಸುರಿದು, ರೈತಾಪಿಗಳಲ್ಲಿ ಹರ್ಷ ಮೂಡಿದೆ. ಕುಷ್ಟಗಿ, ಕುಕನೂರು ಭಾಗದಲ್ಲಿ ವ್ಯಾಪಕ ಮಳೆಯಾಗಿದೆ. ಸುಮಾರು ಎರಡೂವರೆ ತಾಸು ಗುಡುಗು–ಸಿಡಿಲಿನ ಅಬ್ಬರದೊಂದಿಗೆ ಭಾರಿ ಪ್ರಮಾಣದಲ್ಲಿ ಮಳೆ ಸುರಿದ ಕಾರಣ ಕುಷ್ಟಗಿ ತಾಲ್ಲೂಕು ವ್ಯಾಪ್ತಿಯಲ್ಲಿ ಹಳ್ಳಕೊಳ್ಳಗಳು ನದಿಯ ಮಾದರಿಯಲ್ಲಿ ಹರಿದಿದ್ದು, ಹೊಲಗದ್ದೆಗಳು ಜಲಾವೃತಗೊಂಡಿವೆ.

ಒಂದೇ ದಿನ 10.02 ಸೆಂ.ಮೀ. ಮಳೆಯಾಗಿರುವುದು ಕುಷ್ಟಗಿಯ ಮಾಪನ ಕೇಂದ್ರದಲ್ಲಿ ದಾಖಲಾಗಿದೆ. ಕುಷ್ಟಗಿ ತಾಲ್ಲೂಕಿನ ಟೆಂಗುಂಟಿ ಬಳಿ ಹಳ್ಳದ ಪ್ರವಾಹ ಊರೊಳಗೆ ನುಗ್ಗಿ ರಾತ್ರಿವೇಳೆ ಜನರು ತೀವ್ರ ತೊಂದರೆ ಅನುಭವಿಸಿದರು. ಕಂದಕೂರು ಗ್ರಾಮದಲ್ಲಿ ಕೆರೆ ಬಿರುಕು ಬಿಟ್ಟು ಊರಿನ ಮಧ್ಯೆ ನೀರು ಪ್ರವಾಹದ ರೀತಿಯಲ್ಲಿ ಹರಿದಿದೆ.

ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಹುನಗುಂದ, ಬಾದಾಮಿ, ಗುಳೇದಗುಡ್ಡ, ಜಮಖಂಡಿಯಲ್ಲಿ ಉತ್ತಮ ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಭಾರಿ ಸಿಡಿಲು, ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. ತಗ್ಗು ಪ್ರದೇಶಗಳು ಜಲಾವೃತಗೊಂಡ ಕಾರಣ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು.

ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಶುಕ್ರವಾರ ತಡರಾತ್ರಿ ಭಾರಿ ಮಳೆಯಾಗಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ದ್ಯಾಮುಣಸಿ ಗ್ರಾಮದ ಯಲ್ಲಪ್ಪ ಮಾರನಬಸರಿ ಎಂಬುವವರು ಶನಿವಾರ ಬೆಳಿಗ್ಗೆ ರಭಸವಾಗಿ ಹರಿಯುತ್ತಿದ್ದ ಹಳ್ಳ ದಾಟಲು ಮುಂದಾಗಿ ನೀರಿನಲ್ಲಿ ಕೊಚ್ಚಿಹೋಗಿ ದಡದಲ್ಲಿದ್ದ ಗಿಡ ಹಿಡಿದುಕೊಂಡು ರಕ್ಷಣೆ ಪಡೆದಿದ್ದರು. ಬಳಿಕ ಗ್ರಾಮಸ್ಥರು ಟ್ರ್ಯಾಕ್ಟರ್ ಸಹಾಯದಿಂದ ಅವರನ್ನು ಸುರಕ್ಷಿತವಾಗಿ ಕರೆತಂದರು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಹಲವೆಡೆ ಶುಕ್ರವಾರ ತಡರಾತ್ರಿ ಗುಡುಗು, ಸಿಡಿಲು ಸಹಿತ ಮಳೆಯಾಗಿದ್ದು ಜಾಜೂರು ಗ್ರಾಮದಲ್ಲಿ ಸಿಡಿಲಿಗೆ 106 ಕುರಿಗಳು ಬಲಿಯಾಗಿವೆ. ಆಂಜನೇಯ ಎಂಬುವವರಿಗೆ ಸೇರಿದ 90, ಓಬಣ್ಣ ಎಂಬುವವರ 16 ಕುರಿಗಳು ಮೃತಪಟ್ಟಿವೆ. ಇದರಿಂದ ಇವರಿಗೆ ₹ 20 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ.

ವಿಜಯನಗರ ಜಿಲ್ಲೆಯಲ್ಲಿ ಭಾರಿ ಮಳೆ

ವಿಜಯನಗರ ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಬಿರುಸಿನ ಮಳೆಯಾಗಿದೆ. ಕೊಟ್ಟೂರಿನಲ್ಲಿ 9.2 ಸೆಂ.ಮೀ.ಮಳೆ ದಾಖಲಾಗಿದೆ. ಬಳ್ಳಾರಿ ತಾಲ್ಲೂಕಿನ ಮೋಕಾ ಹೋಬಳಿಯ ಸಿರಿವಾರದಲ್ಲಿ ಶುಕ್ರವಾರ ರಾತ್ರಿ 6.5 ಸೆಂ.ಮೀ ಮಳೆಯಾಗಿದ್ದು, ಹೊಸ ಮೋಕಾ ಪ್ರದೇಶದ ಹೊಲ, ಗದ್ದೆ, ಜನವಸತಿ ಪ್ರದೇಶ, ಸರ್ಕಾರಿ ಕಚೇರಿಗಳಿಗೆ ನೀರು ನುಗ್ಗಿತು. ಹಗರಿ ನದಿ, ಹಳ್ಳಕೊಳ್ಳ ತುಂಬಿದ್ದರಿಂದ ಹೋಬಳಿಯ 80 ಮನೆಗಳಿಗೆ ನೀರು ನುಗ್ಗಿ, ಮನೆಗಳಿಗೆ ಹಾನಿ ಆಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123;26	13,428	10,390
ಹಾರಂಗಿ	2,859	2,857.55	2,786	1,187
ಕಬಿನಿ	2,284.00	2,282.27	4,509	6,350
ಹೇಮಾವತಿ	2,922	2,921.45	10,348	11,200
ಲಿಂಗನಮಕ್ಕಿ	1,819	1,816.90	9,249	7,872
ಸೂಪಾ (ಮೀ)	564	558.51	3,248	3,248.95
ಮಾಣಿ	595	589.02	736	-
ತುಂಗಭದ್ರಾ	1,633	1,623.32	44,721	61,424
ಮಲಪ್ರಭಾ	2,079.5	2,077.10	1,644	1,644
ಘಟಪ್ರಭಾ	2175	2,175.00	4,822	4,822
ಭದ್ರಾ *	186	180.1	5,665	6,811
ಆಲಮಟ್ಟಿ (ಮೀ)	519.6	519.60	22,432	17,548
ನಾರಾಯಣಪುರ (ಮೀ)	492.25	492.22	20,000	10,640

* ನೆಲಮಟ್ಟದಿಂದ

ಒಪಿಡಿ ಸ್ಥಗಿತ: ವೈದ್ಯಕೀಯ ಸೇವೆ ವ್ಯತ್ಯಯ

ಒಂದನೇ ಪುಟದಿಂದ...

ಮೈಸೂರಿನ ಕೆ.ಆರ್ ಆಸ್ಪತ್ರೆ ಹಾಗೂ ಚೆಲುವಾಂಬ ಮಕ್ಕಳ ಆಸ್ಪತ್ರೆಗೆ ದೂರದ ಊರುಗಳಿಂದ ಬಂದ ಜನ ಬೆಳಿಗ್ಗೆಯಿಂದಲೇ ವೈದ್ಯರಿಗಾಗಿ ಕಾಯುತ್ತಾ ಕುಳಿತಿದ್ದರು. ವೈದ್ಯರು ಮಾಹಿತಿ ನೀಡಿದ ಬಳಿಕವೂ, ವೈದ್ಯರು ಬರುತ್ತಾರೆಂದು ಹಲವರು ಅಲ್ಲಿಯೇ ಉಳಿದಿದ್ದರು. ಡಯಾಲಿಸಿಸ್‌ಗಾಗಿ ಬಂದಿದ್ದವರು ಚಿಕಿತ್ಸೆ ಸಿಗದೆ ತೊಂದರೆಗೊಳಗಾದರು.

ಐಎಂಎ ಕರ್ನಾಟಕ ಶಾಖೆಯು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಐಎಂಎ ಹೌಸ್‌ನಲ್ಲಿ ಪ್ರತಿಭಟನಾ ಸಭೆ ನಡೆಸಿತು. ಈ ವೇಳೆ ವೈದ್ಯರು, 'ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ನ್ಯಾಯ ಸಿಗಬೇಕು' ಎಂದು ಒತ್ತಾಯಿಸಿದರು.

ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ಎಂದಿನಂತೆ ಸೇವೆ ನೀಡಿದರೆ, ಔಷಧ ಮಳಿಗೆಗಳೂ ಯಥಾ ಪ್ರಕಾರ ಕಾರ್ಯನಿರ್ವಹಿಸಿದವು.

ಮಾಲೀಕ ಸಾವು: ಆಸ್ಪತ್ರೆಯಲ್ಲೇ ಉಳಿದ ಶ್ವಾನ

ಪ್ರಜಾವಾಣಿ ವಾರ್ತೆ

ಹೊಳೆಹೊನ್ನೂರು (ಶಿವಮೊಗ್ಗ): ತನ್ನ ಮಾಲೀಕ ಎದೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ವೇಳೆ ಅವರನ್ನು ಹಿಂಬಾಲಿಸಿಕೊಂಡು ಬಂದಿದ್ದ ಶ್ವಾನವೊಂದು, ಅವರು ಮೃತಪಟ್ಟಿದ್ದು ತಿಳಿಯದೇ ಅವರಿಗಾಗಿ ಆಸ್ಪತ್ರೆಯಲ್ಲೇ 15 ದಿನಗಳಿಂದ ಠಿಕಾಣಿ ಹೂಡಿದ್ದ ಪ್ರಸಂಗ ಇಲ್ಲಿ ನಡೆದಿದೆ.



ಮಾಲೀಕನಿಗಾಗಿ ಆಸ್ಪತ್ರೆಯಲ್ಲಿ ಠಿಕಾಣಿ ಹೂಡಿದ್ದ ಶ್ವಾನ

ಸಮೀಪದ ಕನ್ನೆಕೊಪ್ಪದ ಫಾಲಾಕ್ಷಪ್ಪ, ಎದೆನೋವಿನಿಂದಾಗಿ ಪಟ್ಟಣದ ಸಮುದಾಯ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಪ್ರಥಮ ಚಿಕಿತ್ಸೆ ನೀಡಿದ್ದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದ್ದರು. ಅಲ್ಲಿ ಅವರು ಈಚೆಗೆ ಹೃದಯಾಘಾತದಿಂದ ಮೃತಪಟ್ಟಿದ್ದರು.

ತನ್ನ ಮಾಲೀಕ ಸಮುದಾಯ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿರಬಹುದು ಎಂದು ಭಾವಿಸಿದ್ದ ಶ್ವಾನ, ಪ್ರತಿ ನಿತ್ಯ ಆಸ್ಪತ್ರೆಯ ಒಳಗೆ ಹೋಗಿ ಎಲ್ಲಾ ಕೋಣೆಗಳಲ್ಲೂ ಹುಡುಕಾಟ ನಡೆಸುತ್ತಿತ್ತು.


ಸಿಬ್ಬಂದಿ ಹಾಗೂ ರೋಗಿಯ ಸಂಬಂಧಿ ಅದನ್ನು ಹೊರಗೆ ಓಡಿಸಲು ಮುಂದಾದಾಗ ಬೊಗಳುತ್ತಿತ್ತು. ಈ ಶ್ವಾನವು ಫಾಲಾಕ್ಷಪ್ಪ ಅವರೊಂದಿಗೆ ಆಸ್ಪತ್ರೆಗೆ ಬಂದಿದ್ದನ್ನು ಅವರಿಗೆ ಚಿಕಿತ್ಸೆ ನೀಡಿದ್ದ ಸಿಬ್ಬಂದಿಯೊಬ್ಬರು ನೋಡಿದ್ದರು. ಶ್ವಾನದ ಉಪಟಳ ಹೆಚ್ಚಾಗಿದ್ದರಿಂದ ಇದನ್ನು ಹಿಡಿದುಕೊಂಡು ಹೋಗುವಂತೆ ವೈದ್ಯ ದೇವಾನಂದ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ಮನವಿ ಮಾಡಿದ್ದರು. ಹೀಗಾಗಿ ಸಿಬ್ಬಂದಿ ಶನಿವಾರ ಇದನ್ನು ಹಿಡಿದು, ತ್ಯಾಜ್ಯ ವಿಲೇವಾರಿ ಘಟಕದ ಸ್ಥಳದಲ್ಲಿ ಬಿಟ್ಟಿದ್ದಾರೆ.

ಚಾರಣ ನಿಷೇಧ ಆದೇಶ ವಾಪಸ್

ಮಂಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನದ ಬೆಳ್ತಂಗಡಿ ವನ್ಯಜೀವಿ ವಲಯ ವ್ಯಾಪ್ತಿಯ 'ನೇತ್ರಾವತಿ ಪೀಕ್ ಪ್ರದೇಶ' ಸೇರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾರಣಕ್ಕೆ ವಿಧಿಸಿದ್ದ ನಿಷೇಧವನ್ನು ಜಿಲ್ಲಾ ಆಡಳಿತ ವಾಪಸ್ ಪಡೆದಿದೆ.

ಜಿಲ್ಲೆಯ ಗಿರಿತಾಣ/ಶಿಖರಗಳ ಚಾರಣವನ್ನು ಹಾಗೂ ಹೋಂ ಸ್ಟೇ, ರೆಸಾರ್ಟ್, ಅರಣ್ಯ ಇಲಾಖೆಯಿಂದ ಕೈಗೊಳ್ಳುವ ಚಾರಣ–ಸಾಹಸ ಚಟುವಟಿಕೆಗಳನ್ನು ಅಗತ್ಯ ಮುಂಜಾಗ್ರತಾ ಕ್ರಮಗಳೊಂದಿಗೆ ನಡೆಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ. ವ್ಯಾಪಕ ಮಳೆಯ ಕಾರಣ ಭೂಕುಸಿತ, ಗುಡ್ಡ ಕುಸಿತ, ಸಿಡಿಲು, ಮರಬೀಳುವಂತಹ ದುರ್ಘಟನೆಗಳು ನಡೆಯುವ ಸಾಧ್ಯತೆ ಇರುವ ಕಾರಣಕ್ಕೆ ನಾಗರಿಕರ ಸುರಕ್ಷತೆಗಾಗಿ ಚಾರಣ ಮತ್ತಿತರ ಚಟುವಟಿಕೆಗಳಿಗೆ ನಿಷೇಧ ಹೇರಲಾಗಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹68
ಮೈಸೂರು	
100ಕ್ಕೆ	₹498

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹231
ಆರ್‌ಎಸ್‌ಎಸ್‌-5	₹224
ಗುಡ್ ಲಾಟ್	₹213


10 ವರ್ಷದಲ್ಲಿ ಬೆಳವಣಿಗೆ ದರ ಶೇ 2ರಷ್ಟು ದಾಟಿಲ್ಲ: ಐಎಂಎಫ್

ಉದ್ಯೋಗ ಸೃಷ್ಟಿ: ಭಾರತ ವಿಫಲ

ನವದೆಹಲಿ (ಪಿಟಿಐ): 'ಹೊಸ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಜಿ20 ರಾಷ್ಟ್ರಗಳ ಪೈಕಿ ಭಾರತವು ತೀರಾ ಹಿಂದುಳಿದಿದೆ. ದೇಶದ ಜನಸಂಖ್ಯೆ ಬೆಳವಣಿಗೆಗೆ ಅನುಗುಣವಾಗಿ 2030ರ ವೇಳೆಗೆ ಹೆಚ್ಚುವರಿಯಾಗಿ 14.8 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಅಗತ್ಯವಿದೆ' ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಹೇಳಿದ್ದಾರೆ.

ಶನಿವಾರ ನಡೆದ ಸ್ಕೂಲ್ ಆಫ್ ಎಕನಾಮಿಕ್ಸ್‌ನ ವಜ್ರ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, '2010ರಿಂದ ಭಾರತದ ಆರ್ಥಿಕತೆ ಬೆಳವಣಿಗೆಯು ಸರಾಸರಿ ಶೇ 6.6ರಷ್ಟಿದೆ. ಆದರೆ, ಕಳೆದ ಒಂದು ದಶಕದ ಅವಧಿಯಲ್ಲಿ ಉದ್ಯೋಗ ಬೆಳವಣಿಗೆ ದರವು ಶೇ 2ರಷ್ಟಿದೆ' ಎಂದು ಹೇಳಿದರು.

ಜಿ20 ರಾಷ್ಟ್ರಗಳ ಉದ್ಯೋಗದ ಬೆಳವಣಿಗೆಯ ದರವನ್ನು ಹೋಲಿಸಿದರೆ ಭಾರತದಲ್ಲಿ ತೀರಾ ಕಡಿಮೆಯಿದೆ ಎಂದರು.



ಐಎಂಎಫ್‌ನ ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಅವರು, ನವದೆಹಲಿಯಲ್ಲಿ ಶನಿವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದರು —ಪಿಟಿಐ ಚಿತ್ರ

'ಭಾರತದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಅನುಗುಣವಾಗಿ ಮುಂದಿನ ಆರು ವರ್ಷಗಳಲ್ಲಿ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುವ ತುರ್ತಿದೆ' ಎಂದರು.

ದೇಶದ ಜಿಡಿಪಿ ಬೆಳವಣಿಗೆಯ ಶೇ 7ರಷ್ಟಕ್ಕೆ ಅನುಗುಣವಾಗಿ ಖಾಸಗಿ ವಲಯದಲ್ಲಿ ಬಂಡವಾಳ ಹೂಡಿಕೆಯಾಗುತ್ತಿಲ್ಲ. ಹಾಗಾಗಿ, ಈ ವಲಯದಲ್ಲಿ ಹೂಡಿಕೆ ಹೆಚ್ಚಿಸುವ ಅಗತ್ಯವಿದೆ. ಆ ಮೂಲಕ ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕಿದೆ ಎಂದು ಹೇಳಿದರು.

ಪ್ರಸ್ತುತ ಸಾರ್ವಜನಿಕ ವಲಯದಲ್ಲಿನ ಬಂಡವಾಳ ಹೂಡಿಕೆ ಉತ್ತಮವಾಗಿದೆ. ಆದರೆ, ಖಾಸಗಿ ವಲಯದಲ್ಲಿಯೂ ಹೂಡಿಕೆ ಪ್ರಮಾಣವನ್ನು ಹೆಚ್ಚಿಸಬೇಕಿದೆ ಎಂದು ಹೇಳಿದರು.

ಭಾರತವು ತನ್ನ ಶೈಕ್ಷಣಿಕ ವ್ಯವಸ್ಥೆಯ ಪುನಶ್ಚೇತನಕ್ಕೆ ಒತ್ತು ನೀಡುವ ಅಗತ್ಯವಿದೆ. ದುಡಿಯುವ ವರ್ಗದ ಜನರ ಕೌಶಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂದು ತಿಳಿಸಿದರು.

ವ್ಯಾಪಾರ ಚಟುವಟಿಕೆಗಳ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಬೇಕಿದೆ. ಇದಕ್ಕೆ ಅನುಗುಣವಾಗಿ ತೆರಿಗೆ ಸಂಗ್ರಹದ ಮೂಲವನ್ನು ಮತ್ತಷ್ಟು ವಿಸ್ತರಿಸಬೇಕಿದೆ ಎಂದು ಪ್ರತಿಪಾದಿಸಿದರು.

ಆಹಾರ ಸಂಸ್ಕರಣೆ ಎಫ್‌ಡಿಐ ಇಳಿಕೆ

ನವದೆಹಲಿ (ಪಿಟಿಐ): ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಪ್ರಮಾಣವು (ಎಫ್‌ಡಿಐ) ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2022-23ರಲ್ಲಿ ₹7,194 ಕೋಟಿ ಬಂಡವಾಳ ಹೂಡಿಕೆಯಾಗಿತ್ತು. 2023-24ರಲ್ಲಿ ₹5,037 ಕೋಟಿ ಹೂಡಿಕೆಯಾಗಿದೆ. ಒಟ್ಟಾರೆ ಶೇ 30ರಷ್ಟು ಇಳಿಕೆಯಾಗಿದೆ ಎಂದು ಲೋಕಸಭೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ತಿಳಿಸಿದೆ.

ಈ ವಲಯದಲ್ಲಿ ಶೇ 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡಲಾಗಿದೆ. ಬಂಡವಾಳ ಹೆಚ್ಚಳಕ್ಕೆ ಅನುಗುಣವಾಗಿ ಹಲವು ನಿಯಮಾವಳಿ ರೂಪಿಸಲಾಗಿದೆ ಎಂದು ತಿಳಿಸಿದೆ.

ಕೈಗಾರಿಕೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1951ರ ಅನ್ವಯ ಸಂಸ್ಕರಿಸಿದ ಆಹಾರ ಪದಾರ್ಥಗಳಿಗೆ ಪರವಾನಗಿ ನೀಡುವುದಕ್ಕೆ ಸಂಬಂಧಿಸಿ ಕೆಲವು ವಿನಾಯಿತಿ ನೀಡಲಾಗಿದೆ ಎಂದು ವಿವರಿಸಿದೆ.

3,457 ಉದ್ಯೋಗ ಸೃಷ್ಟಿ: ಸಚಿವ ಎಂ.ಬಿ. ಪಾಟೀಲ

₹2,280 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ 147ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯು ₹2,280.52 ಕೋಟಿ ಬಂಡವಾಳ ಹೂಡಿಕೆಯ 20 ಯೋಜನೆಗಳಿಗೆ ಒಪ್ಪಿಗೆ ನೀಡಿದೆ.

ವೈಮಾಂತರಿಕ್ಷ ಜೋಡಣಾ ಘಟಕ, ಹಾಲು ಸಂಸ್ಕರಣಾ ಘಟಕಗಳೂ ಒಪ್ಪಿಗೆ ನೀಡಿರುವ ಯೋಜನೆಗಳಲ್ಲಿ ಸೇರಿವೆ. ರಾಮನಗರ, ಕೋಲಾರ, ಬೆಳಗಾವಿ, ತುಮಕೂರು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಈ ಕೈಗಾರಿಕಾ ಘಟಕಗಳು ಅಸ್ತಿತ್ವಕ್ಕೆ ಬರಲಿದ್ದು, 3,457 ಉದ್ಯೋಗಗಳು ಸೃಷ್ಟಿಯಾಗಲಿವೆ.

ಬಿಡದಿಯಲ್ಲಿ ₹450 ಕೋಟಿ ವೆಚ್ಚದಡಿ ಟೊಯೊಟೆಟ್ಸು ಇಂಡಿಯಾ ಆಟೊ ಪಾರ್ಟ್ಸ್ ಪ್ರೈವೆಟ್ ಲಿಮಿಟೆಡ್‌ನ ವಾಹನ ಬಿಡಿಭಾಗ ತಯಾರಿಕೆಯ 4ನೇ ಘಟಕಕ್ಕೆ ಒಪ್ಪಿಗೆ ನೀಡಿದೆ. ಇದರಿಂದ ಇನ್ನೋವಾ ಹೈಕ್ರಾಸ್‌ನ ಬೇಡಿಕೆ ಪೂರೈಸಲು ಅಗತ್ಯವಾದ ಬಿಡಿಭಾಗಗಳನ್ನು ತಯಾರಿಕೆಗೆ ಸಹಕಾರಿಯಾಗಲಿದೆ.



ಎಂ.ಬಿ. ಪಾಟೀಲ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಮುಂಬೈನ ಐಎಲ್‌ವಿ ಸೌತ್ ವೇರ್ ಹೌಸಿಂಗ್ ಪಾರ್ಕ್ಸ್ ಪ್ರೈವೆಟ್ ಲಿಮಿಟೆಡ್ ₹423 ಕೋಟಿ ವೆಚ್ಚದಲ್ಲಿ ಕೈಗಾರಿಕಾ ಪಾರ್ಕ್ ನಿರ್ಮಿಸಲಿದೆ. ಬೆಳಗಾವಿಯ ಮೃಣಾಲ್ ಷುಗರ್ಸ್ ಲಿಮಿಟೆಡ್, ಧಾರವಾಡ ಜಿಲ್ಲೆಯಲ್ಲಿ ₹386.86 ಕೋಟಿ ವೆಚ್ಚದಡಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲಿದೆ.

ತುಮಕೂರು ಜಿಲ್ಲೆಯ ವಸಂತ ನರಸಾಪುರದಲ್ಲಿ ಅಯೊಮಾ ಆಟೊ ಮೋಟಿವ್ ಫಾಸ್ಟನರ್ಸ್ (ಇಂಡಿಯಾ) ಪ್ರೈವೆಟ್ ಲಿಮಿಟೆಡ್ ₹210 ಕೋಟಿ ಮೊತ್ತದಲ್ಲಿ ವಾಹನ ಬಿಡಿಭಾಗ ತಯಾರಿಕಾ ಘಟಕಗಳನ್ನು ಸ್ಥಾಪಿಸಲಿದೆ.

₹50 ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ ಆರು ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳಿಂದ ₹2,025.71 ಕೋಟಿ ಮೊತ್ತದ ಬಂಡವಾಳ ಹೂಡಿಕೆಯೊಂದಿಗೆ 2,440 ಜನರಿಗೆ ಉದ್ಯೋಗ ದೊರೆಯಲಿದೆ.

₹15 ಕೋಟಿಯಿಂದ ₹50 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 13 ಹೊಸ ಯೋಜನೆಗಳಿಗೆ ಸಭೆಯು ಅನುಮೋದನೆ ನೀಡಿದೆ. ಇವುಗಳಿಂದ ₹214.81 ಕೋಟಿ ಮೊತ್ತದ ಹೂಡಿಕೆಯೊಂದಿಗೆ 1,017 ಉದ್ಯೋಗ ಸೃಷ್ಟಿಯಾಗಲಿವೆ.

ಹೆಚ್ಚುವರಿ ಬಂಡವಾಳ ಹೂಡಿಕೆಯ ಒಂದು ಯೋಜನೆಗೆ ಸಭೆಯು ಅನುಮೋದನೆ ನೀಡಿದೆ. ಇದರಿಂದ ₹40 ಕೋಟಿ ಹೂಡಿಕೆಯಾಗಲಿದೆ.

ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ಐಟಿ.-ಬಿ.ಟಿ ಇಲಾಖೆಯ ನಿರ್ದೇಶಕ ದರ್ಶನ್ ಎಚ್.ವಿ., ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಇದ್ದರು.

ಸುದ್ದಿ 2 ನಿಮಿಷ

ಪೋಲೆಂಡ್‌ಗೆ ಅಂಜೂರ ಹಣ್ಣಿನ ರಸ ರಫ್ತು: ಕೇಂದ್ರ

ನವದೆಹಲಿ (ಪಿಟಿಐ): ಭಾರತದಿಂದ ಮೊದಲ ಬಾರಿಗೆ ಅಂಜೂರ ಹಣ್ಣಿನ ರಸವನ್ನು ಪೋಲೆಂಡ್‌ಗೆ ರಫ್ತು ಮಾಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶನಿವಾರ ತಿಳಿಸಿದೆ.

ದೇಶದಲ್ಲಿ ಕೃಷಿ ಉತ್ಪನ್ನಗಳ ರಫ್ತು ಪ್ರಮಾಣ ಹೆಚ್ಚಿಸಲು ಈ ಕ್ರಮವಹಿಸಲಾಗಿದೆ. ಕೃಷಿ ಮತ್ತು ಆಹಾರ ಸಂಸ್ಕರಣಾ ರಫ್ತು ಅಭಿವೃದ್ಧಿ ಪ್ರಾಧಿಕಾರವು (ಎಪಿಇಡಿಎ) ಈ ನಿಟ್ಟಿನಲ್ಲಿ ಸಿದ್ಧತೆ ನಡೆಸಿದೆ ಎಂದು ವಿವರಿಸಿದೆ.



ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪುರಂದರ ತಾಲ್ಲೂಕಿನಲ್ಲಿ ಬೆಳೆಯುವ ಅಂಜೂರ ಹಣ್ಣಿಗೆ ಭೌಗೋಳಿಕ ಸೂಚ್ಯಂಕ ಪಟ್ಟ (ಜಿಐ ಟ್ಯಾಗ್) ಲಭಿಸಿದೆ. ಅಲ್ಲಿನ ಪುರಂದರ ಹೈಲ್ಯಾಂಡ್ ರೈತ ಉತ್ಪಾದಕರ ಕಂಪನಿಯಿಂದ ತಯಾರಿಸುವ ಅಂಜೂರ ಹಣ್ಣಿನ ರಸವು ಪ್ರಸಿದ್ಧಿ ಪಡೆದಿದೆ.

ವಿಶೇಷ ಮಹತ್ವ ಹೊಂದಿದ ಪದಾರ್ಥಗಳ ಉತ್ಪಾದನೆಗೆ ಭೌಗೋಳಿಕ ಸೀಮೆ ಗುರುತಿಸಿ ಅದಕ್ಕೆ ಆ ಸ್ಥಳದ ಮೊಹರು ಒತ್ತಲಾಗುತ್ತದೆ. ಜಿಐ ನೋಂದಣಿಯಾದ ಉತ್ಪನ್ನಗಳಿಗೆ ಕಾನೂನಾತ್ಮಕ ರಕ್ಷಣೆ ದೊರೆಯುತ್ತದೆ. ಅನಧಿಕೃತವಾಗಿ ಇದರ ಬಳಕೆಗೆ ಕಡಿವಾಣ ಬೀಳಲಿದೆ. ಅಲ್ಲದೆ, ಈ ಉತ್ಪನ್ನದ ರಫ್ತಿಗೆ ಹೆಚ್ಚು ಉತ್ತೇಜನ ಸಿಗಲಿದೆ.

ಅಂಜೂರ ಹಣ್ಣಿನ ರಸದ ರವಾನೆಯು ಜಾಗತಿಕ ಮಟ್ಟದಲ್ಲಿ ಭಾರತದ ಕೃಷಿ ಉತ್ಪನ್ನಗಳ ಉತ್ಕೃಷ್ಟತೆಗೆ ಕನ್ನಡಿ ಹಿಡಿದಿದೆ ಎಂದು ಸಚಿವಾಲಯವು ತಿಳಿಸಿದೆ.

ಆಕಸ್ಮಿಕ ಲಾಭ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆ ಮಾಡುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭದ ತೆರಿಗೆಯನ್ನು ಕೇಂದ್ರ ಸರ್ಕಾರವು ಅರ್ಧದಷ್ಟು ಇಳಿಸಿದೆ.

ಪ್ರತಿ ಟನ್‌ಗೆ ₹4,600 ಇದ್ದ ತೆರಿಗೆಯನ್ನು ₹2,100ಕ್ಕೆ ಇಳಿಸಲಾಗಿದೆ. ವಿಶೇಷ ಹೆಚ್ಚುವರಿ ಅಬಕಾರಿ ಸುಂಕದ (ಎಸ್‌ಎಇಡಿ) ರೂಪದಲ್ಲಿ ವಿಧಿಸುವ ಈ ತೆರಿಗೆಯು ಶನಿವಾರದಿಂದಲೇ ಜಾರಿಗೆ ಬಂದಿದೆ.

ರಫ್ತು ಮಾಡುವ ಡೀಸೆಲ್, ಪೆಟ್ರೋಲ್ ಮತ್ತು ವಿಮಾನ ಇಂಧನದ (ಎಟಿಎಫ್) ಮೇಲಿನ ಈ ಸುಂಕವನ್ನು ಪರಿಷ್ಕರಿಸಿಲ್ಲ.

ಜಾಗತಿಕ ಮಟ್ಟದಲ್ಲಿ ಹಲವು ರಾಷ್ಟ್ರಗಳಲ್ಲಿ ಇಂಧನ ಕಂಪನಿಗಳು ಗಳಿಸುವ ಹೆಚ್ಚಿನ ಆದಾಯದ ಮೇಲೆ ಈ ತೆರಿಗೆ ವಿಧಿಸಲಾಗುತ್ತದೆ. ಭಾರತದಲ್ಲಿ 2022ರ ಜುಲೈ 1ರಿಂದ ಈ ಪದ್ಧತಿ ಜಾರಿಗೆ ಬಂದಿದೆ. ಕೇಂದ್ರ ಸರ್ಕಾರವು ಪ್ರತಿ 15 ದಿನಕ್ಕೊಮ್ಮೆ ಸರಾಸರಿ ತೈಲ ದರ ಆಧರಿಸಿ ಆಕಸ್ಮಿಕ ಲಾಭದ ತೆರಿಗೆ ಬೆಲೆಯನ್ನು ಪರಿಷ್ಕರಿಸುತ್ತದೆ.

₹2 ಲಕ್ಷ ನಗದು ವಹಿವಾಟು ಮೇಲೆ ನಿಗಾ: ಸಿಬಿಡಿಟಿ

ನವದೆಹಲಿ (ಪಿಟಿಐ): ಹೋಟೆಲ್, ಲಕ್ಸುರಿ ಬ್ರ್ಯಾಂಡ್ ಮಾರಾಟ, ಆಸ್ಪತ್ರೆ ಮತ್ತು ಐವಿಎಫ್ ಕ್ಲಿನಿಕ್‌ಗಳಲ್ಲಿ ಅವ್ಯಾಹತವಾಗಿ ನಗದು ವಹಿವಾಟು ನಡೆಯುತ್ತದೆ. ಸಂಬಂಧಪಟ್ಟ ಸಂಸ್ಥೆಗಳು ಈ ಬಗ್ಗೆ ಬಹಿರಂಗಪಡಿಸುವುದಿಲ್ಲ. ಹಾಗಾಗಿ, ಇಂತಹ ವ್ಯವಹಾರದ ಬಗ್ಗೆ ತಪಾಸಣೆ ನಡೆಸಬೇಕಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ), ಆದಾಯ ತೆರಿಗೆ ಇಲಾಖೆಗೆ ನಿರ್ದೇಶನ ನೀಡಿದೆ.

ಕಳೆದ ಆರ್ಥಿಕ ವರ್ಷದಿಂದ ಇಲ್ಲಿಯವರೆಗೆ ಈ ಸಂಸ್ಥೆಗಳಲ್ಲಿ ನಡೆದಿರುವ ನಗದು ವಹಿವಾಟಿನ ಬಗ್ಗೆ ಪರಿಶೀಲನೆ ನಡೆಸಬೇಕು. ಬಾಕಿ ತೆರಿಗೆ ಮೊತ್ತವನ್ನು ವಸೂಲಿ ಮಾಡಬೇಕು ಎಂದು ತಿಳಿಸಿದೆ.

'ಗ್ರಾಹಕರು ₹2 ಲಕ್ಷಕ್ಕೂ ಹೆಚ್ಚು ನಗದು ವಹಿವಾಟು ನಡೆಸಿದರೆ ಆ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳು ಆದಾಯ ತೆರಿಗೆ ಇಲಾಖೆಗೆ ಹಣಕಾಸು ವ್ಯವಹಾರಗಳ ಹೇಳಿಕೆ (ಎಸ್‌ಎಫ್‌ಟಿ) ಸಲ್ಲಿಸಬೇಕಿದೆ. ಆದರೆ, ಈ ನಿಯಮಾವಳಿ ಉಲ್ಲಂಘಿಸಲಾಗುತ್ತಿದೆ' ಎಂದು ಆದಾಯ ತೆರಿಗೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತೆರಿಗೆ ವಂಚನೆಗೆ ಸಂಬಂಧಿಸಿದಂತೆ 2023-24ರಲ್ಲಿ ಇಲಾಖೆಯಿಂದ ದೇಶದಾದ್ಯಂತ 1,100ಕ್ಕೂ ಹೆಚ್ಚು ದಾಳಿ ನಡೆಸಲಾಗಿದೆ. ಒಟ್ಟು ₹2,500 ಕೋಟಿ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳಲಾಗಿದ್ದು, ಈ ಪೈಕಿ ₹1,700 ನಗದು ಇದೆ ಎಂದು ತಿಳಿಸಿದ್ದಾರೆ.

ಕಡಿಮೆ ಸಂಬಳ: ಬ್ಲೂ ಕಾಲರ್ ಉದ್ಯೋಗಿಗಳ ಸಂಕಷ್ಟ

ಮುಂಬೈ (ಪಿಟಿಐ): ದೇಶದಲ್ಲಿ ಬ್ಲೂ ಕಾಲರ್ ಉದ್ಯೋಗಿಗಳ ಮಾಸಿಕ ವೇತನವು ₹20 ಸಾವಿರ ಅಥವಾ ಅದಕ್ಕಿಂತಲೂ ಕಡಿಮೆಯಿದೆ ಎಂದು ಉದ್ಯೋಗ ಪೋರ್ಟಲ್ ವರ್ಕ್‌ಇಂಡಿಯಾ ತಿಳಿಸಿದೆ.

ಕಚೇರಿಯ ವ್ಯವಸ್ಥೆ ಇಲ್ಲದೆ ಕಟ್ಟಡ ನಿರ್ಮಾಣ, ಡ್ರೈವಿಂಗ್, ಕಾರ್ಖಾನೆಗಳಲ್ಲಿ ದೈಹಿಕ ಕೆಲಸ ನಿರ್ವಹಿಸುವವರನ್ನು ಬ್ಲೂ ಕಾಲರ್ ಉದ್ಯೋಗಿಗಳೆಂದು ಕರೆಯಲಾಗುತ್ತದೆ. ಕಡಿಮೆ ಸಂಬಳದಿಂದಾಗಿ ಈ ಉದ್ಯೋಗಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ದೈನಂದಿನ ಅಗತ್ಯತೆ ಪೂರೈಸಿಕೊಳ್ಳಲು ಹರಸಾಹಸಪಡುತ್ತಿದ್ದಾರೆ. ಮನೆ ಬಾಡಿಗೆ, ಆರೋಗ್ಯ ಮತ್ತು ಮಕ್ಕಳ ಶಿಕ್ಷಣಕ್ಕೆ ಹಣವನ್ನು ಸರಿದೂಗಿಸಿಕೊಳ್ಳಲು ಪರದಾಡುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಶೇ 57.63ರಷ್ಟು ಉದ್ಯೋಗಿಗಳ ಮಾಸಿಕ ಸಂಬಳವು ₹20 ಸಾವಿರ ಅಥವಾ ಅದಕ್ಕಿಂತಲೂ ಕಡಿಮೆಯಿದೆ. ಕೆಲವು ಉದ್ಯೋಗಿಗಳ ಸಂಬಳವು ಕನಿಷ್ಠ ವೇತನಕ್ಕಿಂತಲೂ ಕಡಿಮೆಯಿದೆ ಎಂದು ತಿಳಿಸಿದೆ. ಈ ಉದ್ಯೋಗಿಗಳು ಪಡೆಯುವ ಸಂಬಳವು ಅವರ ದೈನಂದಿನ ಅಗತ್ಯತೆಯನ್ನು ಪೂರೈಸಿಕೊಳ್ಳಲು ಸಾಕಾಗಬಹುದಾಗಿದೆ. ಆದರೆ, ಉಳಿತಾಯ ಅಥವಾ ಹೂಡಿಕೆ ದೃಷ್ಟಿಯಿಂದ ಚಿಕ್ಕ ಕೊಠಡಿಗಳಲ್ಲಿ ವಾಸಿಸುತ್ತಾರೆ. ಬಹುತೇಕ ಉದ್ಯೋಗಿಗಳ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ ಎಂದು ತಿಳಿಸಿದೆ. ಶೇ 29.34ರಷ್ಟು ಉದ್ಯೋಗಿಗಳ ಸಂಬಳವು ₹20 ಸಾವಿರದಿಂದ ₹40 ಸಾವಿರ ಇದೆ. ಶೇ 10.71ರಷ್ಟು ಮಂದಿಯ ಸಂಬಳ ₹40 ಸಾವಿರದಿಂದ ₹60 ಸಾವಿರ ಇದೆ.ಸಂಬಳ ₹60 ಸಾವಿರ ದಾಟಿರುವ ಉದ್ಯೋಗಿಗಳ ಸಂಖ್ಯೆ ಶೇ 2.31ರಷ್ಟು ಇದೆ.

ಬಾಲಕನಿಂದ ಗುಂಡೇಟು: ಭಾರತ ಮೂಲದ ವ್ಯಕ್ತಿ ಸಾವು

ವಾಷಿಂಗ್ಟನ್ (ಪಿಟಿಐ): ಅಮೆರಿಕದ ನಾರ್ತ್ ಕರೊಲಿನಾ ರಾಜ್ಯದಲ್ಲಿ ಬಾಲಕನೊಬ್ಬ ಅಂಗಡಿಯಲ್ಲಿ ದರೋಡೆ ನಡೆಸಿದ ನಂತರ ಭಾರತ ಮೂಲದ ವ್ಯಕ್ತಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏರ್‌ಪೋರ್ಟ್ ರಸ್ತೆಯಲ್ಲಿರುವ ತಂಬಾಕು ಹೌಸ್ ಸ್ಟೋರ್ ಮಾಲೀಕ ಮೈನಾಂಕ್ ಪಟೇಲ್ (36) ಮಂಗಳವಾರ ಬೆಳಿಗ್ಗೆ ಗುಂಡಿನ ದಾಳಿಯ ನಂತರ ಮೃತಪಟ್ಟಿದ್ದಾರೆ ಎಂದು 'ಸಾಲಿಸ್‌ಬರಿ ಪೋಸ್ಟ್' ವರದಿ ಮಾಡಿದೆ.

ಗುಂಡಿನ ದಾಳಿ ನಡೆಸಿದ, ಕಾನೂನು ಸಂಘರ್ಷಕ್ಕೆ ಸಿಲುಕಿರುವ ಬಾಲಕನನ್ನು ಬಂಧಿಸಲಾಗಿದೆ. ಬಾಲಕನ ಹೆಸರನ್ನು ಬಹಿರಂಗಪಡಿಸಿಲ್ಲ.

ಗುಂಡಿನ ದಾಳಿ ನಡೆದ ಬಗ್ಗೆ ಮಾಹಿತಿ ದೊರೆತ ಬಳಿಕ ಅಧಿಕಾರಿಗಳು ಸ್ಥಳಕ್ಕೆ ಹೋದಾಗ, ಮೈನಾಂಕ್ ದೇಹದ ಮೇಲೆ ಹಲವು ಕಡೆ ಗುಂಡೇಟುಗಳು ಬಿದ್ದು ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲಾಯಿತು. ಹೆಚ್ಚಿನ ಚಿಕಿತ್ಸೆಗೆ ಮತ್ತೊಂದು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು ಎಂದು ಸಾರ್ವಜನಿಕ ಮಾಹಿತಿ ಅಧಿಕಾರಿ ಕ್ಯಾಪ್ಟನ್ ಮಾರ್ಕ್ ಮೆಕ್‌ಡೇನಿಯಲ್ ತಿಳಿಸಿದ್ದಾರೆ.

ಒಳಮೀಸಲಾತಿ ತೀರ್ಪಿನ ವಿರುದ್ಧ ಅಸಮಾಧಾನ

21ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿಗಳ ಒಳ ವರ್ಗೀಕರಣ, ಒಳಮೀಸಲಾತಿಗೆ ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಜಾರಿಗೆ ಬರಬಾರದು ಎಂದು ಒತ್ತಾಯಿಸಿ ದಲಿತ, ಆದಿವಾಸಿ ಸಮುದಾಯಗಳ ರಾಷ್ಟ್ರೀಯ ಒಕ್ಕೂಟವು ಆಗಸ್ಟ್ 21ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಸಂವಿಧಾನವು ನೀಡಿರುವ ಹಕ್ಕುಗಳ ಮೇಲೆ ಈ ತೀರ್ಪು ಕೆಟ್ಟ ಪರಿಣಾಮ ಬೀರಲಿದೆ ಎಂದು ಒಕ್ಕೂಟ ತಿಳಿಸಿದೆ.

'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಸರ್ಕಾರಿ ನೌಕರರ 'ನಿಖರ ಅಂಕಿಅಂಶ'ಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೂಡಲೇ ಬಿಡುಗಡೆಗೊಳಿಸಬೇಕು, ಪ್ರಾತಿನಿಧ್ಯದ ಸರಿಯಾದ ಚಿತ್ರಣವನ್ನು ನೀಡಬೇಕು' ಎಂದು ಒಕ್ಕೂಟವು ಒತ್ತಾಯಿಸಿದೆ. ಸರ್ಕಾರವು ಉದ್ದೇಶಪೂರ್ವಕವಾಗಿ ಈ ಮಾಹಿತಿಯನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಅದು ದೂರಿದೆ.

'ಈ ವಿಚಾರವಾಗಿ ಸಂಬಂಧಿತ ವ್ಯಕ್ತಿಗಳ ಜತೆ ಚರ್ಚಿಸದೆ, ನ್ಯಾಯಾಲಯದಲ್ಲಿ ಕೆಟ್ಟ ನಿಲುವು ತಾಳಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೂಡಲೇ ವಜಾಗೊಳಿಸಬೇಕು' ಎಂದು ಒಕ್ಕೂಟದ ಅಧ್ಯಕ್ಷ ಅಶೋಕ್ ಭಾರ್ತಿ ಒತ್ತಾಯಿಸಿದರು.

'ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಸಮುದಾಯಗಳು ಪರಸ್ಪರ ಹೊಡೆದಾಡಿಕೊಳ್ಳುವುದನ್ನು ಸರ್ಕಾರ ಬಯಸುತ್ತಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೇಂದ್ರ ಸರ್ಕಾರದ ಉದ್ಯೋಗಿಗಳಲ್ಲಿ ಶೇ 60ರಷ್ಟು ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಕ್ಕೆ ಸೇರಿದವರಲ್ಲ ಎಂದು ಅವರು ಹೇಳಿದರು. ಆದರೆ, ಹಿಂದುಳಿದ ಸಮುದಾಯಗಳನ್ನು ವಿಭಜಿಸುವ ಸಂಕಥನವನ್ನು ಸರ್ಕಾರ ಹುಟ್ಟುಹಾಕುತ್ತಿದೆ ಎಂದರು.

'ಮೋದಿ ನೇತೃತ್ವದ ಸರ್ಕಾರವು ಹಿಂದೂ ರಾಷ್ಟ್ರ ನಿರ್ಮಾಣ ಮಾಡುವುದಾಗಿ ಹೇಳುತ್ತಿದೆ. ಎಸ್‌ಸಿ, ಎಸ್‌ಟಿ, ಒಬಿಸಿಗಳ ನಡುವೆ ತಾರತಮ್ಯ ಸೃಷ್ಟಿಸಿ ಯಾವ ಹಿಂದೂ ರಾಷ್ಟ್ರ ನಿರ್ಮಾಣ ಮಾಡುತ್ತೀರಿ?' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರಧಾನಿ ಮೋದಿ ಮಾತಿನಲ್ಲೂ ಸತ್ಯವಿಲ್ಲ'

ನಾಗ್ಪುರ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆಯಂದು ಮಾಡಿದ ತಮ್ಮ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಒಂದು ದೇಶ, ಒಂದು ಚುನಾವಣೆ' ವ್ಯವಸ್ಥೆ ಜಾರಿಯಾಗಬೇಕು ಎಂದು ಹೇಳಿದ್ದರು. ಆದರೆ, ಜಮ್ಮು ಮತ್ತು ಕಾಶ್ಮೀರ, ಹರಿಯಾಣ ವಿಧಾನಸಭೆ ಚುನಾವಣೆ ಜೊತೆಯಲ್ಲಿಯೇ ಮಹಾರಾಷ್ಟ್ರದ ಚುನಾವಣೆಯನ್ನು ಏಕೆ ನಡೆಸುತ್ತಿಲ್ಲ' ಎಂದು ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಶನಿವಾರ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

'2019ರಲ್ಲಿ ಹರಿಯಾಣ ಚುನಾವಣೆ ಜೊತೆಯಲ್ಲೇ ಮಹಾರಾಷ್ಟ್ರ, ಜಾರ್ಖಂಡ್ ರಾಜ್ಯದ ಚುನಾವಣೆ ನಡೆದಿತ್ತು. ಈ ಬಾರಿಯ ಚುನಾವಣೆಯ ವೇಳಾಪಟ್ಟಿಯನ್ನು ಗಮನಿಸಿದರೆ ಪ್ರಧಾನಿ ಮೋದಿ ಅವರ ಮಾತಿನಲ್ಲೂ ಸತ್ಯ ಇರುವುದಿಲ್ಲ ಎಂದಾಯಿತು' ಎಂದು ಅವರು ಲೇವಡಿ ಮಾಡಿದರು.

ವರದಿ ಬಿಡುಗಡೆ ಮಾಡಿದ ಯುಎನ್‌ಎಚ್‌ಸಿಆರ್

ಬಾಂಗ್ಲಾ: 650 ಜನರ ಸಾವು

ಢಾಕಾ/ಜಿನೀವಾ (ಪಿಟಿಐ): ಬಾಂಗ್ಲಾ ದೇಶದಲ್ಲಿ ಜುಲೈ 16ರಿಂದ ಆಗಸ್ಟ್ 11ರವರೆಗೆ ನಡೆದಿರುವ ಹಿಂಸಾಚಾರದಲ್ಲಿ ಸುಮಾರು 650 ಜನರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯ (ಯುಎನ್‌ಎಚ್‌ಸಿಆರ್) ಪ್ರಾಥಮಿಕ ವರದಿ ಹೇಳಿದೆ.

ಬಾಂಗ್ಲಾದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ತ್ವರಿತವಾಗಿ ಮರುಸ್ಥಾಪಿಸುವ ಪ್ರಾಮುಖ್ಯತೆಯನ್ನು ಈ ವರದಿ ಒತ್ತಿಹೇಳಿದ್ದು, ಜೊತೆಗೆ ಮತ್ತಷ್ಟು ಜೀವಹಾನಿ, ಹಿಂಸಾಚಾರ ಮತ್ತು ಪ್ರತೀಕಾರದ ಕೃತ್ಯಗಳನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳ ಅಗತ್ಯವನ್ನು ಜಿನೀವಾದಲ್ಲಿ ಶುಕ್ರವಾರ ಬಿಡುಗಡೆಯಾದ ಯುಎನ್‌ಎಚ್‌ಸಿಆರ್ ವರದಿ ಪ್ರತಿಪಾದಿಸಿದೆ.

ದೇಶದಲ್ಲಿ ನಡೆದಿರುವ ಹತ್ಯೆ, ಕಾನೂನುಬಾಹಿರ ಬಂಧನ, ಚಿತ್ರಹಿಂಸೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಧಮನ ಹಾಗೂ ಶಾಂತಿಯುತ ಸಭೆಗಳ ಮೇಲೆ ತೀವ್ರ ನಿರ್ಬಂಧಗಳನ್ನು ಹಾಕಿರುವ ಬಗ್ಗೆ ನಿಷ್ಪಕ್ಷಪಾತ ಮತ್ತು ಪಾರದರ್ಶಕ ತನಿಖೆ ಆಗಬೇಕು ಎಂದೂ ಈ ವರದಿಯಲ್ಲಿ ಶಿಫಾರಸು ಮಾಡಿದೆ.

'ಬಾಂಗ್ಲಾದೇಶದಲ್ಲಿನ ಇತ್ತೀಚಿನ ಪ್ರತಿಭಟನೆಗಳು ಮತ್ತು ಅಶಾಂತಿಯ ಪ್ರಾಥಮಿಕ ವಿಶ್ಲೇಷಣೆ' ಶೀರ್ಷಿಕೆಯ 10 ಪುಟಗಳ ವರದಿಯ ಪ್ರಕಾರ, ಜುಲೈ 16ರಿಂದ ಆಗಸ್ಟ್ 4ರವರೆಗೆ ನಡೆದಿರುವ ಅಶಾಂತಿಯ ಬೆಳವಣಿಗೆಗಳಲ್ಲಿ ಸುಮಾರು 400 ಮಂದಿ ಸತ್ತಿದ್ದಾರೆ. ಆಗಸ್ಟ್ 5 ಮತ್ತು 6ರ ನಡುವಿನ ಪ್ರತಿಭಟನೆ ಮತ್ತು ಹಿಂಸಾಚಾರದಿಂದ ಸುಮಾರು 250 ಜನರು ಮೃತಪಟ್ಟಿದ್ದಾರೆ. ದೇಶದಲ್ಲಿ ಸೃಷ್ಟಿಯಾದ ಈ ಅಶಾಂತಿಯ ವಾತಾವರಣವು ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾಯಿತು.

ಬಾಂಗ್ಲಾ: ಮಧ್ಯಂತರ ಸರ್ಕಾರದ ಮುಖ್ಯಸ್ಥರ ಭರವಸೆ

ಚುನಾವಣೆ ನಡೆಸಲು ಬದ್ಧ: ಯೂನಸ್

ಢಾಕಾ (ಪಿಟಿಐ): 'ಬಾಂಗ್ಲಾದೇಶದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಬೇಕಾದ ವಾತಾವರಣ ಸೃಷ್ಟಿಸಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಹೇಳಿದ್ದಾರೆ.

ಭಾರತವು ವರ್ಚುವಲ್ ರೂಪದಲ್ಲಿ ಆಯೋಜಿಸಿದ್ದ 'ವಾಯ್ಸ್ ಆಫ್ ಗ್ಲೋಬಲ್ ಸೌತ್' ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ಸಮಗ್ರ ಮತ್ತು ಬಹುತ್ವದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಖಾತರಿಪಡಿಸಿಕೊಳ್ಳಲು ಎಲ್ಲ ರೀತಿಯ ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಜನಸಾಮಾನ್ಯರನ್ನೂ ಒಳಗೊಂಡಂತೆ ನಮ್ಮ ಧೈರ್ಯಶಾಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಸಾಮೂಹಿಕ ಹೋರಾಟದ ಮೂಲಕ ಆಗಸ್ಟ್ 5ರಂದು ಬಾಂಗ್ಲಾದೇಶವು 'ಎರಡನೇ ಕ್ರಾಂತಿ'ಗೆ ಸಾಕ್ಷಿಯಾಗಿದೆ. ನಮ್ಮ ಚುನಾವಣಾ ವ್ಯವಸ್ಥೆ, ನ್ಯಾಯಾಂಗ, ಸ್ಥಳೀಯ ಸರ್ಕಾರ, ಮಾಧ್ಯಮ, ಆರ್ಥಿಕತೆ ಮತ್ತು ಶಿಕ್ಷಣದಲ್ಲಿ ಪ್ರಮುಖ ಸುಧಾರಣೆಗಳನ್ನು ಕೈಗೊಳ್ಳುವುದು ನಮ್ಮ ಕೆಲಸವಾಗಿದೆ' ಎಂದರು.



ಯೂನಸ್

'ಎಲ್ಲಾ ಜನರಿಗೆ, ವಿಶೇಷವಾಗಿ ಮಹಿಳೆಯರು ಮತ್ತು ಯುವಕರಿಗೆ ಹಣಕಾಸಿನ ಸೇವೆಗಳನ್ನು ಒದಗಿಸಬೇಕು. ಸಂಪತ್ತು ಎಲ್ಲರಿಗೂ ಹಂಚಿಕೆಯಾಗುವಂತೆ ಮಾಡಲು ಹಣಕಾಸು ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಬೇಕು' ಎಂದು ತಿಳಿಸಿದರು.

ಢಾಕಾಕ್ಕೆ ಬನ್ನಿ: 'ಶೀಘ್ರದಲ್ಲೇ ಢಾಕಾಕ್ಕೆ ಭೇಟಿ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ. ಇಲ್ಲದಿದ್ದರೆ ಮುಖ್ಯವಾದ ಅಂಶವೊಂದನ್ನು ನೀವು ಮಿಸ್ ಮಾಡಿಕೊಳ್ಳುವಿರಿ' ಎಂದು ಯೂನಸ್, ಸಭೆಯಲ್ಲಿ ಭಾಗವಹಿಸಿದ್ದ ನಾಯಕರಿಗೆ ಕರೆ ನೀಡಿದರು.

'ಢಾಕಾದ ಬಹುಭಾಗವು ಪ್ರಪಂಚದ ಗೀಚುಬರಹದ ರಾಜಧಾನಿಯಾಗಿ ಮಾರ್ಪಟ್ಟಿದೆ. 12-13 ವರ್ಷದ ಮಕ್ಕಳು, ವಿದ್ಯಾರ್ಥಿಗಳು ಢಾಕಾ ನಗರದ ಗೋಡೆಗಳ ಮೇಲೆ 'ಬಾಂಗ್ಲಾದಲ್ಲಿ ನಡೆದ ಕ್ರಾಂತಿಯ ಬಗ್ಗೆ ಬರೆದು, ಚಿತ್ರಗಳನ್ನು ಬಿಡಿಸುತ್ತಿದ್ದಾರೆ. ಅವರಿಗೆ ಯಾರೂ ಮಾರ್ಗದರ್ಶನ ನೀಡಿಲ್ಲ. ಇದು ಅವರ ಭಾವನೆಗಳ ಹೊರಹರಿವು' ಎಂದರು.

'7 ದಶಕದ ನಂತರ ಎರಡನೇ ಕ್ರಾಂತಿ'

1952ರಲ್ಲಿ 'ಬಂಗಾಳಿ ಭಾಷಾ ಚಳವಳಿ'ಯಲ್ಲಿ ಮಾತೃಭಾಷೆಗಾಗಿ ಬಾಂಗ್ಲಾದ ವಿದ್ಯಾರ್ಥಿಗಳು ತಮ್ಮ ಪ್ರಾಣತ್ಯಾಗ ಮಾಡಿದರು. ಸುಮಾರು 7 ದಶಕದ ನಂತರ ನಮ್ಮ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಎರಡನೇ ಕ್ರಾಂತಿಯು ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಸಮಾನತೆ, ಘನತೆ ಮತ್ತು ಸಂಪತ್ತಿನ ಹಂಚಿಕೆಗಾಗಿ ಧ್ವನಿ ಎತ್ತಿದೆ ಎಂದು ಯೂನಸ್ ಬಣ್ಣಿಸಿದರು.

ದೇಶವ್ಯಾಪಿ ಮುಷ್ಕರಕ್ಕೆ ಕೈಜೋಡಿಸಿದ ಖಾಸಗಿ ಆಸ್ಪತ್ರೆಗಳು; ಒಪಿಡಿ ಸೇವೆ ಬಂದ್

ಸೇವೆ ವ್ಯತ್ಯಯ: ರೋಗಿಗಳ ಪರದಾಟ



ನವದೆಹಲಿಯಲ್ಲಿ ವೈದ್ಯರು ಶನಿವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಪ್ರಕರಣ ಖಂಡಿಸಿ ವೈದ್ಯರು ದೇಶದಾದ್ಯಂತ ಮುಷ್ಕರ ನಡೆಸಿದ್ದರಿಂದ ಶನಿವಾರ ಹಲವೆಡೆ ವೈದ್ಯಕೀಯ ಸೇವೆಯಲ್ಲಿ ಏರುಪೇರು ಉಂಟಾಗಿ ರೋಗಿಗಳು ಪರದಾಡಿದರು.

ಶನಿವಾರ ಬೆಳಿಗ್ಗೆ 6ರಿಂದ ಭಾನುವಾರ ಬೆಳಿಗ್ಗೆ 6ರವರೆಗೆ ಒಪಿಡಿ ಸೇವೆ (ಹೊರರೋಗಿಗಳ ವಿಭಾಗ) ಸ್ಥಗಿತಗೊಳಿಸುವಂತೆ ಭಾರತೀಯ ವೈದ್ಯಕೀಯ ಸಂಘ (ಐಎಂಎ) ನೀಡಿದ್ದ ಕರೆಗೆ ದೇಶದಾದ್ಯಂತ ಉತ್ತಮ ಸ್ಪಂದನೆ ದೊರೆಯಿತು.

ದೆಹಲಿ, ಉತ್ತರ ಪ್ರದೇಶ, ಪಂಜಾಬ್, ಮಹಾರಾಷ್ಟ್ರ ಮತ್ತು ಹರಿಯಾಣ ಸೇರಿದಂತೆ ಹಲವು ರಾಜ್ಯಗಳಲ್ಲಿ ಸ್ಥಾನಿಕ ವೈದ್ಯರು ಕಳೆದ ಸೋಮವಾರದಿಂದಲೂ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ. ಶನಿವಾರ ಖಾಸಗಿ ಆಸ್ಪತ್ರೆಗಳೂ ಬೆಂಬಲ ನೀಡಿದವು.

ರಾಷ್ಟ್ರದ ರಾಜಧಾನಿಯಲ್ಲಿ ಹಲವು ಪ್ರಮುಖ ಖಾಸಗಿ ಆಸ್ಪತ್ರೆಗಳು ಮುಷ್ಕರದಲ್ಲಿ ಕೈಜೋಡಿಸಿದವು. ಸರ್ ಗಂಗಾ ರಾಮ್, ಫೋರ್ಟಿಸ್ ಮತ್ತು ಅಪೋಲೊ ಆಸ್ಪತ್ರೆಗಳಲ್ಲಿ ಒಪಿಡಿ, ಐಪಿಡಿ ಮತ್ತು ಆಯ್ದ ಕೆಲವು ಶಸ್ತ್ರಚಿಕಿತ್ಸಾ ಸೇವೆಗಳನ್ನು ನಿಲ್ಲಿಸಲಾಯಿತು.

'ನ್ಯಾಯದಾನ ವಿಳಂಬವಾಗದಂತೆ ಸಂಬಂಧಪಟ್ಟವರ ಮೇಲೆ ಒತ್ತಡ ಹೇರಲು ಮತ್ತು ತನಿಖಾ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಪ್ರತಿಭಟನೆಗಳು ಹಾಗೂ ವೈದ್ಯರ ಮುಷ್ಕರ ಈಗ ಅಗತ್ಯವಾಗಿದೆ' ಎಂದು ಗಂಗಾ ರಾಮ್ ಆಸ್ಪತ್ರೆಯ ಮುಖ್ಯಸ್ಥ ಅಜಯ್ ಸ್ವರೂಪ್ ತಿಳಿಸಿದರು.

ವಿಚಾರಣೆಗೆ ಹಾಜರಾದ ಘೋಷ್: ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಚಾರ್ಯ ಡಾ.ಸಂದೀಪ್ ಘೋಷ್ ಅವರು ಸತತ ಎರಡನೇ ದಿನವೂ ಸಿಬಿಐ ಅಧಿಕಾರಿಗಳ ಮುಂದೆ ತನಿಖೆಗೆ ಹಾಜರಾದರು. ಶನಿವಾರ ಬೆಳಿಗ್ಗೆ 10.30ಕ್ಕೆ ಅವರು ಸಿಬಿಐ ಕಚೇರಿಗೆ ಬಂದರು. ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರವೂ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

ದೇಶದಾದ್ಯಂತ ಆಕ್ರೋಶ

- ಛತ್ತೀಸಗಢದಲ್ಲಿ 4,500ಕ್ಕೂ ಅಧಿಕ ವೈದ್ಯರು ಮುಷ್ಕರದಲ್ಲಿ ಕೈಜೋಡಿಸಿದ್ದರಿಂದ ರಾಜ್ಯದಾದ್ಯಂತ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯ ಉಂಟಾಯಿತು.
- ಆರೋಗ್ಯ ಕಾರ್ಯಕರ್ತರ ಸುರಕ್ಷತೆ ಖಾತರಿಪಡಿಸುವಂತೆ ಒತ್ತಾಯಿಸಿ ಪಂಜಾಬ್ ಮತ್ತು ಹರಿಯಾಣದಲ್ಲಿ ವೈದ್ಯರು ಹಲವೆಡೆ ಪ್ರತಿಭಟನೆ ನಡೆಸಿದರು.
- ಗುಜರಾತ್‌ನಲ್ಲಿ ಖಾಸಗಿ ಆಸ್ಪತ್ರೆಗಳು ಒಪಿಡಿ ಸೇವೆ ಬಂದ್ ಮಾಡಿದವು. ಕೆಲವು ಆಸ್ಪತ್ರೆಗಳು ತುರ್ತು ಅಲ್ಲದ ಶಸ್ತ್ರಚಿಕಿತ್ಸೆಗಳನ್ನು ನಡೆಸಲಿಲ್ಲ.
- ಪಟ್ನಾದ ಏಮ್ಸ್ ಕ್ಯಾಂಪಸ್‌ನಲ್ಲಿ ಇನ್ನಷ್ಟು ಮಹಿಳಾ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲು ಹಾಗೂ ಹೆಚ್ಚುವರಿಯಾಗಿ 150 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲ್ ಕೃಷ್ಣ ಪಾಲ್ ತಿಳಿಸಿದರು.

ಬಾಂಗ್ಲಾದಲ್ಲಿಯೂ ಪ್ರತಿಭಟನೆ

ಢಾಕಾ (ಪಿಟಿಐ): ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಬಾಂಗ್ಲಾದೇಶದ ಪ್ರತಿಷ್ಠಿತ ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. 'ಆವಾಜ್ ತೋಲೋ ನಾರಿ' (ನಿನ್ನ ದನಿ ಎತ್ತು ಮಹಿಳೆ) ಎಂಬ ಶೀರ್ಷಿಕೆಯಡಿ ಶುಕ್ರವಾರ ವಿ.ವಿಯ ಆವರಣದಲ್ಲಿ ಪ್ರತಿಭಟನೆ ನಡೆಯಿತು. ಈ ವೇಳೆ 'ಅತ್ಯಾಚಾರಿಯನ್ನು ಗಲ್ಲಿಗೇರಿಸಿ' ಮತ್ತು 'ಹಿಂಸಾಚಾರವನ್ನು ನಿಲ್ಲಿಸಿ' ಎಂಬ ಫಲಕಗಳನ್ನು ಹಿಡಿದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು ಎಂದು 'ಢಾಕಾ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಪ್ರಧಾನಿ ಮಧ್ಯಪ್ರವೇಶಿಸಲಿ: ಐಎಂಎ ಮನವಿ

ಆರೋಗ್ಯ ಕಾರ್ಯಕರ್ತರ ಮೇಲಿನ ದೌರ್ಜನ್ಯ ತಡೆಗಟ್ಟಲು ಮತ್ತು ಆಸ್ಪತ್ರೆಗಳನ್ನು 'ಸುರಕ್ಷಿತ ವಲಯ'ಗಳಾಗಿ ಘೋಷಿಸುವ ಸಂಬಂಧ ಕೇಂದ್ರ ಸರ್ಕಾರವು ಕಾನೂನು ರೂಪಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಬೇಕು ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮನವಿ ಮಾಡಿದೆ.

'ಆಸ್ಪತ್ರೆಗಳಲ್ಲಿನ ಭದ್ರತಾ ವ್ಯವಸ್ಥೆಯು ವಿಮಾನ ನಿಲ್ದಾಣಗಳಿಗಿಂತ ಕಡಿಮೆಯಿರಬಾರದು. ಕಡ್ಡಾಯ ಭದ್ರತಾ ಮಾನದಂಡಗಳೊಂದಿಗೆ ಆಸ್ಪತ್ರೆಗಳನ್ನು ಸುರಕ್ಷಿತ ವಲಯಗಳಾಗಿ ಘೋಷಿಸಬೇಕು' ಎಂದು ಹೇಳಿದೆ.

'ಸುರಕ್ಷತೆ ಖಾತರಿ: ಸಲಹೆಗೆ ಸಮಿತಿ'

ನವದೆಹಲಿ (ಪಿಟಿಐ): ಆರೋಗ್ಯ ಕಾರ್ಯಕರ್ತರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ಏನೆಲ್ಲಾ ಕ್ರಮಗಳನ್ನು ಅನುಸರಿಸಬೇಕು ಎಂಬ ಸಲಹೆ ನೀಡಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ಹೇಳಿದೆ.

ರಾಜ್ಯ ಸರ್ಕಾರಗಳು ಒಳಗೊಂಡಂತೆ ಸಂಬಂಧಪಟ್ಟ ಎಲ್ಲ ಭಾಗೀದಾರರಿಗೆ ಈ ಸಮಿತಿಯೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ತಿಳಿಸಿದೆ.

ಡೆಂಗಿ ಮತ್ತು ಮಲೇರಿಯಾ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕರ ಹಿತಾಸಕ್ತಿಯನ್ನು ಪರಿಗಣಿಸಿ, ವೈದ್ಯರು ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಬೇಕು ಎಂದು ಮನವಿ ಮಾಡಿದೆ.

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮತ್ತು ಫೆಡರೇಷನ್ ಆಫ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್ (ಫೋರ್ಡಾ) ಪ್ರತಿನಿಧಿಗಳು ಶನಿವಾರ ನವದೆಹಲಿಯಲ್ಲಿ ಕೇಂದ್ರ ಆರೋಗ್ಯ ಸಚಿವರನ್ನು ಭೇಟಿಯಾಗಿ ಆರೋಗ್ಯ ಕಾರ್ಯಕರ್ತರ ಸುರಕ್ಷತೆ ಖಾತರಿಪಡಿಸುವಂತೆ ಮನವಿ ಮಾಡಿದರು.

'ವಿವಿಧ ವೈದ್ಯಕೀಯ ಸಂಘಗಳು ಮುಂದಿಟ್ಟಿರುವ ಬೇಡಿಕೆಗಳನ್ನು ಆಲಿಸಿರುವ ಸಚಿವಾಲಯ, ಆರೋಗ್ಯ ಕಾರ್ಯಕರ್ತರ ಸುರಕ್ಷತೆ ಖಾತರಿಪಡಿಸಿಕೊಳ್ಳಲು ಎಲ್ಲ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದೆ. ಸರ್ಕಾರವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂಬುದನ್ನು ಸಂಘಗಳ ಪ್ರತಿನಿಧಿಗಳಿಗೆ ತಿಳಿಸಲಾಯಿತು' ಎಂದು ಆರೋಗ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಮತಾ ರಾಜೀನಾಮೆಗೆ ಆಗ್ರಹ


ಆಶಾ ದೇವಿ

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿರುವ ಪ್ರಕರಣವನ್ನು ನಿಭಾಯಿಸಲು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿಫಲವಾಗಿದ್ದಾರೆ. ಹಾಗಾಗಿ ಅವರು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ದೆಹಲಿಯಲ್ಲಿ 2012ರಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದ 'ನಿರ್ಭಯಾ' ತಾಯಿ ಆಶಾ ದೇವಿ ಹೇಳಿದ್ದಾರೆ.

ಬ್ಯಾನರ್ಜಿ ಅವರು ತಮ್ಮ ಅಧಿಕಾರವನ್ನು ಬಳಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಸ್ವತಃ ಮಹಿಳೆಯಾಗಿದ್ದರೂ ಅವರು ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಪಿಟಿಐಗೆ ಪ್ರತಿಕ್ರಿಯಿಸಿದ್ದಾರೆ. ಕೋಲ್ಕತ್ತದ ವೈದ್ಯಕೀಯ ಕಾಲೇಜಿನಲ್ಲಿಯೇ ಹೆಣ್ಣುಮಗಳೊಬ್ಬಳಿಗೆ ಸುರಕ್ಷತೆ ಇಲ್ಲದಿದ್ದ ಮೇಲೆ ದೇಶದಲ್ಲಿ ಪರಿಸ್ಥಿತಿ ಹೇಗಿರಬೇಡ ಎಂದು ಪ್ರಶ್ನಿಸಿದ್ದಾರೆ.

ಅತ್ಯಾಚಾರ ಎಸಗಿದ ತಪ್ಪಿತಸ್ಥರಿಗೆ ನ್ಯಾಯಾಲಯದಿಂದ ಕಠಿಣ ಶಿಕ್ಷೆಯಾಗುವ ಹಾಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸದಿದ್ದರೆ, ದೇಶದಲ್ಲಿ ಈ ರೀತಿಯ ಕ್ರೂರ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ ಎಂದು ಪ್ರತಿಪಾದಿಸಿದ್ದಾರೆ.

ಮತ್ತೆ 45 ಪರಿಣತರ ನೇಮಕ

ಖಾಸಗಿಯವರಿಗೆ ಅವಕಾಶ: ಯುಪಿಎಸ್‌ಸಿ ಅಧಿಸೂಚನೆ

ನವದೆಹಲಿ (ಪಿಟಿಐ): ಆಡಳಿತ ಪ್ರಕ್ರಿಯೆಯನ್ನು ಇನ್ನಷ್ಟು ಸುಗಮಗೊಳಿಸುವ ಮೋದಿ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯ ಭಾಗವಾಗಿ ಖಾಸಗಿ ಕ್ಷೇತ್ರದ 45 ಪರಿಣತರು ಶೀಘ್ರದಲ್ಲೇ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳ ಉನ್ನತ ಹುದ್ದೆಗಳಿಗೆ ಸೇರಲಿದ್ದಾರೆ.

45 ಹುದ್ದೆಗಳಿಗೆ ನೇಮಕಾತಿ ಸಂಬಂಧ ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಶನಿವಾರ ಜಾಹೀರಾತು ಪ್ರಕಟಿಸಿದೆ. 10 ಜಂಟಿ ಕಾರ್ಯದರ್ಶಿಗಳು ಮತ್ತು 35 ನಿರ್ದೇಶಕರು/ಉಪ ಕಾರ್ಯದರ್ಶಿ ಹುದ್ದೆಗಳನ್ನು ಪರಿಣತರ ಮೂಲಕ ನೇಮಕ ತುಂಬಲಾಗುತ್ತದೆ.

ಸಾಮಾನ್ಯವಾಗಿ ಈ ಹುದ್ದೆಗಳಿಗೆ ಅಖಿಲ ಭಾರತ ಸೇವೆಗಳ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಮತ್ತು ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಹಾಗೂ ಮತ್ತು ಇತರ 'ಎ'ದರ್ಜೆ ಸೇವೆಗಳ ಅಧಿಕಾರಿಗಳು ಇಂತಹ ಪ್ರಮುಖ ಹುದ್ದೆಗಳನ್ನು ನಿಭಾಯಿಸುವರು.

'ಜಂಟಿ ಕಾರ್ಯದರ್ಶಿ ಮತ್ತು ನಿರ್ದೇಶಕ/ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಗಳ ಲ್ಯಾಟರಲ್ ಎಂಟ್ರಿ ನೇಮಕಾತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕೋರಿಕೆ ಸಲ್ಲಿಸಿದೆ. ಅದರಂತೆ, ರಾಷ್ಟ್ರ ನಿರ್ಮಾಣಕ್ಕಾಗಿ ಕೊಡುಗೆ ನೀಡಲು ಸಿದ್ಧರಿರುವ ಪ್ರತಿಭಾವಂತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ' ಎಂದು ಜಾಹೀರಾತಿನಲ್ಲಿ ಹೇಳಲಾಗಿದೆ.

ಜಂಟಿ ಕಾರ್ಯದರ್ಶಿಗಳ 10 ಹುದ್ದೆಗಳು ಗೃಹ, ಹಣಕಾಸು ಮತ್ತು ಉಕ್ಕು ಒಳಗೊಂಡಂತೆ ಇತರ ಸಚಿವಾಲಯಗಳಿಗೆ ಸಂಬಂಧಿಸಿದ್ದಾಗಿವೆ. ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ನಡೆಯಲಿದೆ.

ಸರ್ಕಾರದ ಉನ್ನತ ಹುದ್ದೆಗಳಿಗೆ ಖಾಸಗಿ ವಲಯದ ಪರಿಣತರು ಹಾಗೂ ತಜ್ಞರನ್ನು ನೇಮಕ ಮಾಡಿಕೊಳ್ಳುವ 'ಲ್ಯಾಟರಲ್ ಎಂಟ್ರಿ' ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2018ರಿಂದಲೂ ನಡೆಸಿಕೊಂಡು ಬರುತ್ತಿದೆ. ಇದುವರೆಗೆ ಈ ರೀತಿ 63 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಈಚೆಗಿನ ಅಂಕಿ–ಅಂಶ ಪ್ರಕಾರ ಅದರಲ್ಲಿ 57 ಮಂದಿ ಸರ್ಕಾರದ ವಿವಿಧ ಸಚಿವಾಲಯಗಳು/ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಮೀಸಲಾತಿಯಿಂದ ದೂರ ಇರಿಸುವ ಪಿತೂರಿ'


ಮಲ್ಲಿಕಾರ್ಜುನ ಖರ್ಗೆ

'ವಿವಿಧ ಸಚಿವಾಲಯಗಳಲ್ಲಿ ಖಾಲಿ ಇರುವ 45 ಹುದ್ದೆಗಳಿಗೆ ಖಾಸಗಿ ವಲಯದಿಂದ ನೇರ ನೇಮಕಾತಿ (ಲ್ಯಾಟೆರಲ್ ಎಂಟ್ರಿ) ಮಾಡಿಕೊಳ್ಳುವ ಜಾಹೀರಾತನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಹಾಗೂ ಇಡಬ್ಲ್ಯುಎಸ್‌ಗೆ ಮೀಸಲಾತಿ ನೀಡಲಾಗುತ್ತದೆಯೇ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

'ಬಿಜೆಪಿಯು ವ್ಯವಸ್ಥಿತ ಪಿತೂರಿ ನಡೆಸಿದೆ. ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯದ ಜನರನ್ನು ಮೀಸಲಾತಿಯಿಂದ ಹೊರಗಿಡಬೇಕು ಎನ್ನುವ ಉದ್ದೇಶದಿಂದಲೇ ಬಿಜೆಪಿ ಇಂಥ ನೇಮಕಾತಿ ನಡೆಸುತ್ತಿದೆ' ಎಂದು ಆರೋಪಿಸಿದರು. 'ಸಂವಿಧಾನವನ್ನು ಹರಿದು ಹಾಕಿದ ಬಿಜೆಪಿಯು ಈಗ ಮೀಸಲಾತಿಯ ಮೇಲೆ ಪ್ರಹಾರ ನಡೆಸುತ್ತಿದೆ. ಸಂವಿಧಾನದಲ್ಲಿರುವ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನ್ಯಾಯವು ಜನರಿಗೆ ಒದಗುವಂತೆ ಮಾಡಬೇಕು. ಈ ಕಾರಣಕ್ಕಾಗಿಯೇ ಪಕ್ಷವು ಜಾತಿ ಗಣತಿ ನಡೆಸಿ ಎಂದು ಒತ್ತಾಯಿಸುತ್ತಿದೆ' ಎಂದರು.

'69 ಸಾವಿರ ಸಹಾಯಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಲ್ಲಿ ಉತ್ತರ ಪ್ರದೇಶದ ಸರ್ಕಾರವು ನಡೆಸಿದ 'ಮೀಸಲಾತಿ ಹಗರಣ'ವನ್ನು ಹೈಕೋರ್ಟ್‌ನ ಹೊಸ ಆಯ್ಕೆ ಪಟ್ಟಿ ಬಹಿರಂಗಪಡಿಸಿದೆ' ಎಂದು ಇದೇ ವೇಳೆ ಅವರು ಉಲ್ಲೇಖಿಸಿದರು.

ಸಹಪಾಠಿಗೆ ಚೂರಿಯಿಂದ ಇರಿದ ವಿದ್ಯಾರ್ಥಿ ● ಇಂಟರ್‌ನೆಟ್ ಸೇವೆ ಸ್ಥಗಿತ

ರಾಜಸ್ಥಾನ: ಭುಗಿಲೆದ್ದ ಕೋಮು ಸಂಘರ್ಷದ ಕಿಡಿ



ಉದಯಪುರದಲ್ಲಿ ದುಷ್ಕರ್ಮಿಗಳು ಕಾರುಗಳಿಗೆ ಬೆಂಕಿ ಹಚ್ಚಿದ್ದರು(ಎಡಚಿತ್ರ) ಚೂರಿ ಇರಿದ ಬಾಲಕನ ಮನೆಯನ್ನು ಸರ್ಕಾರ ನೆಲಸಮಗೊಳಿಸಿತು –ಪಿಟಿಐ ಚಿತ್ರ

ಜೈಪುರ (ಪಿಟಿಐ): ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗೆ ಚಾಕುವಿನಿಂದ ಇರಿದಿರುವ ಘಟನೆಯು ಕೋಮು ಗಲಭೆಗೆ ಕಾರಣವಾಗಿರುವುದರಿಂದ ಉದಯಪುರದ ಹಲವು ಭಾಗಗಳಲ್ಲಿ ಇಂಟರ್‌ನೆಟ್ ಸೇವೆಯನ್ನು ಕಡಿತಗೊಳಿಸಲಾಗಿತ್ತು ಮತ್ತು ಎಲ್ಲ ಶಾಲೆಗಳನ್ನು ಮುಚ್ಚಲಾಗಿದೆ

ರಾಜಸ್ಥಾನದ ಉದಯಪುರದಲ್ಲಿನ ಸರ್ಕಾರಿ ಶಾಲೆಯೊಂದರಲ್ಲಿ 10ನೇ ತರಗತಿಯ ವಿದ್ಯಾರ್ಥಿಯೊಬ್ಬ ಶುಕ್ರವಾರ ತನ್ನ ಸಹಪಾಠಿಗೆ ಚಾಕುವಿನಿಂದ ಇರಿದಿದ್ದ. ಈ ಘಟನೆಯಿಂದಾಗಿ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ದುಷ್ಕರ್ಮಿಗಳ ಗುಂಪೊಂದು ಕಲ್ಲು ತೂರಾಟ ನಡೆಸಿ, 3–4 ಕಾರುಗಳಿಗೆ ಬೆಂಕಿ ಹಚ್ಚಿದೆ. ಶಾಪಿಂಗ್ ಮಾಲ್‌ನ ಮೇಲೆಯೂ ಕಲ್ಲು ತೂರಾಟ ನಡೆದಿದೆ.

'ಗಾಯಗೊಂಡಿರುವ ವಿದ್ಯಾರ್ಥಿಯು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ದಾಳಿ ಮಾಡಿರುವ ವಿದ್ಯಾರ್ಥಿಯನ್ನು ವಶಕ್ಕೆ ಪಡೆಯಲಾಗಿದೆ. ವಿದ್ಯಾರ್ಥಿಗಳಿಬ್ಬರು ಅಪ್ರಾಪ್ತರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ಆದೇಶದವರೆಗೆ ಉದಯಪುರದ ಎಲ್ಲ ಸರ್ಕಾರಿ ಮತ್ತು ಖಾಸಗಿ ಶಾಲೆಗಳನ್ನು ತೆರೆಯದಂತೆ ಜಿಲ್ಲಾಧಿಕಾರಿ ಅರವಿಂದ್ ಪೊಸ್ವಾಲ್ ಅವರು ಆದೇಶಿಸಿದ್ದು, ಘಟನೆಯ ಬಗ್ಗೆ ಊಹಾಪೋಹಗಳನ್ನು ನಂಬದಂತೆ ಜನರಲ್ಲಿ ಮನವಿ ಮಾಡಿದ್ದಾರೆ.

ಉದಯಪುರ ನಗರ, ಬೆದ್ಲಾ, ಬಡಗಾವ್, ಬ್ಲೀಚಾ, ದೇಬಾರಿ, ಏಕಲಿಂಗಾಪುರ, ಕಾನ್ಪುರ, ಧಿಕಾಲಿ ಮತ್ತು ಭುವನ ಪ್ರದೇಶಗಳಲ್ಲಿ ಶುಕ್ರವಾರ ರಾತ್ರಿ 10 ಗಂಟೆಯಿಂದ ಶನಿವಾರ ರಾತ್ರಿ 10 ಗಂಟೆಯವರೆಗೆ ಇಂಟರ್‌ನೆಟ್ ಸೇವೆಯನ್ನು ಕಡಿತಗೊಳಿಸಲು ವಿಭಾಗೀಯ ಕಮಿಷನರ್ ರಾಜೇಂದ್ರ ಭಟ್ ಅವರು ಆದೇಶಿಸಿದ್ದಾರೆ.

'ಜನರು ಗುಂಪು ಸೇರುವುದನ್ನು ನಿರ್ಬಂಧಿಸಲಾಗಿದೆ. ವಿವಿಧ ಧರ್ಮಗಳ ಮುಖಂಡರನ್ನು ಕರೆದು ಶಾಂತಿ ಸಭೆ ನಡೆಸಲಾಗಿದ್ದು, ಶನಿವಾರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಚೂರಿ ಇರಿದ ಬಾಲಕನ ಮನೆ ನೆಲಸಮ

ಕೋಮು ಸಂಘರ್ಷ ಉದ್ವಿಗ್ನಗೊಂಡ ಬೆನ್ನಲ್ಲೇ ಭಜನ್‌ಲಾಲ್ ಶರ್ಮಾ ನೇತೃತ್ವದ ಸರ್ಕಾರವು, ಚೂರಿ ಇರಿದಿರುವ ಬಾಲಕನ ಮನೆಯನ್ನು ಪೊಲೀಸರ ಸಮ್ಮುಖದಲ್ಲಿ ಜೆಸಿಬಿಗಳ ಮೂಲಕ ನೆಲಸಮಗೊಳಿಸಿದೆ. ಅರಣ್ಯ ಭೂಮಿಯಲ್ಲಿ ಅಕ್ರಮವಾಗಿ ಮನೆಯನ್ನು ನಿರ್ಮಿಸಲಾಗಿತ್ತು ಎಂದು ಅದು ಹೇಳಿದೆ.

'ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ಅಕ್ರಮವಾಗಿ ಮನೆ ನಿರ್ಮಾಣ ಮಾಡಲಾಗಿದೆ' ಎಂದು ಅರಣ್ಯ ಇಲಾಖೆಯು ಬಾಲಕನ ಕುಟುಂಬಕ್ಕೆ ಶನಿವಾರ ಬೆಳಿಗ್ಗೆ ನೋಟಿಸ್ ಕಳುಹಿಸಿತ್ತು. ಮನೆಯನ್ನು ತೆರವು ಮಾಡಲು ಮೂರು ದಿನಗಳ ಕಾಲಾವಕಾಶವನ್ನೂ ನೀಡಲಾಗಿತ್ತು. ಆದರೂ ಮಧ್ಯಾಹ್ನ 12 ಗಂಟೆ ಸುಮಾರಿಗೆ ಮನೆಯನ್ನು ನೆಲಸಮ ಮಾಡಲಾಗಿದೆ.

ಈ ಮಧ್ಯೆ ಆರು ತಿಂಗಳ ಹಿಂದೆ ಸಹ ಮನೆ ತೆರವು ಮಾಡುವಂತೆ ನೋಟಿಸ್ ಕಳುಹಿಸಲಾಗಿತ್ತು ಎಂದು ಅರಣ್ಯ ಇಲಾಖೆ ಹೇಳಿದೆ. 'ಮನೆಯಲ್ಲಿ ಮೂರು ಕೋಣೆಗಳು, ಒಂದು ಅಡುಗೆ ಕೋಣೆ ಮತ್ತು ನೆಲಮಹಡಿಯಲ್ಲಿ ಒಂದು ಅಂಗಡಿ ಇತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರೇವಂತ ರೆಡ್ಡಿ ಶೀಘ್ರ ಬಿಜೆಪಿಗೆ: ಕೆಟಿಆರ್

ಪ್ರಜಾವಾಣಿ ವಾರ್ತೆ



ಹೈದರಾಬಾದ್: ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ತಮ್ಮ ಮುಂದಿನ ರಾಜಕೀಯ ನಡೆಯು ಬಿಜೆಪಿಯತ್ತ ಇರಬಹುದು ಎಂದು ನಿಕಟವರ್ತಿಗಳ ಬಳಿ ಇತ್ತೀಚೆಗೆ ಹೇಳಿಕೊಂಡಿದ್ದಾರೆ ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ.ರಾಮರಾವ್ ಅವರು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ರೇವಂತ ರೆಡ್ಡಿ ತಮ್ಮ ಬಣದೊಂದಿಗೆ ಶೀಘ್ರವೇ ಬಿಜೆಪಿ ಸೇರಲಿದ್ದಾರೆ' ಎಂದು ಹೇಳಿದರು.

'ಮೋದಿ ಅವರ ಬಳಿ ರೇವಂತ ರೆಡ್ಡಿ ಅವರು 'ಎಬಿವಿಪಿ ಮೂಲಕ ರಾಜಕೀಯ ಜೀವನ ಆರಂಭಿಸಿದೆ ಮತ್ತು ರಾಜಕೀಯ ಜೀವನದ ಅಂತ್ಯವೂ ಕೇಸರಿ ಪಕ್ಷದಲ್ಲಿಯೇ ಆಗಲಿದೆ' ಎಂದು ಹೇಳಿಕೊಂಡಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟನೆ ನೀಡಲಿ' ಎಂದು ಸವಾಲು ಹಾಕಿದರು.

ಬಿಆರ್‌ಎಸ್ ಕಾರ್ಯಕರ್ತರಿಂದ ಪ್ರತಿಭಟನೆ: ಪಕ್ಷದ ಶಾಸಕ ಮತ್ತು ಮಾಜಿ ಸಚಿವ ಟಿ.ಹರೀಶ್ ರಾವ್ ಅವರ ಕ್ಯಾಂಪ್ ಕಚೇರಿ ಮೇಲೆ ಶುಕ್ರವಾರ ರಾತ್ರಿ ದುಷ್ಕರ್ಮಿಗಳು ದಾಳಿ ನಡೆಸಿದ್ದನ್ನು ಖಂಡಿಸಿ ಬಿಆರ್‌ಎಸ್ ಕಾರ್ಯಕರ್ತರು ಸಿದ್ದಿಪೇಟ್ ನಗರದಲ್ಲಿ ಪ್ರತಿಭಟನೆ ನಡೆಸಿದರು. ಹರೀಶ್ ರಾವ್ ಅವರು, 'ಕಾಂಗ್ರೆಸ್ ಪಕ್ಷದ ಗೂಂಡಾಗಳು ಶಾಸಕರ ಕಚೇರಿ ಮೇಲೆ ನಡುರಾತ್ರಿ ದಾಳಿ ನಡೆಸಿದ್ದಾರೆ. ಬೀಗವನ್ನು ಒಡೆದು, ವಸ್ತುಗಳನ್ನು ಜಖಂಗೊಳಿಸಿದ್ದಾರೆ. ಪೊಲೀಸರು ದಾಳಿಯನ್ನು ತಡೆಯುವುದನ್ನು ಬಿಟ್ಟು ಕಿಡಿಗೇಡಿಗಳನ್ನು ರಕ್ಷಿಸುತ್ತಿದ್ದಾರೆ. ಶಾಸಕರ ಕಚೇರಿಯನ್ನೇ ಧ್ವಂಸಗೊಳಿಸಿದ್ದಾರೆ ಎಂದಾದರೆ ಇನ್ನು ಜನಸಾಮಾನ್ಯರ ರಕ್ಷಣೆ ಎಲ್ಲಿದೆ' ಎಂದು ಪ್ರಶ್ನಿಸಿದರು.

ಬ್ಲ್ಯಾಕ್‌ಸ್ಟೋನ್ ಕಂಪನಿಗೆ ಅನುಕೂಲ ಮತ್ತೊಂದು ವರದಿ ಬಹಿರಂಗ

ನವದೆಹಲಿ (ಪಿಟಿಐ): 'ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರ ಪತಿ ಧವಳ್ ಬುಚ್ ಅವರು ಹಿರಿಯ ಸಲಹೆಗಾರರಾಗಿ ಕೆಲಸ ಮಾಡುವ ಹೂಡಿಕೆ ಕಂಪನಿ ಬ್ಲ್ಯಾಕ್‌ಸ್ಟೋನ್‌ಗೆ ಭಾರತದಲ್ಲಿ ಹಲವು ಗ್ರಾಹಕರಿದ್ದಾರೆ. ಈ ಗ್ರಾಹಕ ಕಂಪನಿಗಳಿಗೆ ಮಾಧವಿ ಅವರು ಹಲವು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ' ಎಂದು ಆರೋಪಿಸಿ 'ದಿ ಮಾರ್ನಿಂಗ್ ಕಾಂಟೆಕ್ಸ್ಟ್' ಎನ್ನುವ ಮಾಧ್ಯಮ ಸಂಸ್ಥೆಯು ವರದಿ ಪ್ರಕಟಿಸಿದೆ.

ಈ ವರದಿಯನ್ನು ಉಲ್ಲೇಖಿಸಿ ಕಾಂಗ್ರೆಸ್, ಸೆಬಿ ಅಧ್ಯಕ್ಷೆ ಮಾಧವಿ ಬುಚ್ ಅವರ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿದೆ. 'ಮಾಧವಿ ಅವರು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುವುದನ್ನು ಒಪ್ಪಲು ಸಾಧ್ಯವೇ ಇಲ್ಲ' ಎಂದಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ಅದಾನಿ ಸಮೂಹದ ಕುರಿತು ತನಿಖೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಈ ತನಿಖೆಯಲ್ಲಿ ಅದಾನಿ ಸಮೂಹಕ್ಕೆ ಸೆಬಿ ಕ್ಲೀನ್ ಚಿಟ್ ನೀಡಿತ್ತು. ಇದು ಸುಪ್ರೀಂ ಕೋರ್ಟ್ ಕುರಿತು ಮಾಧವಿ ಅವರು ಮಾಡಿದ್ದ ಅಪಹಾಸ್ಯ ವಾಗಿತ್ತು. ಈಗ ಸೆಬಿ ಅಧ್ಯಕ್ಷೆ ಅವರ ಹಿತಾಸಕ್ತಿ ಸಂಘರ್ಷದ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ' ಎಂದು ಜೈರಾಮ್ ರಮೇಶ್ ಅಭಿಪ್ರಾಯಪಟ್ಟಿದ್ದಾರೆ.


'ಬ್ಲ್ಯಾಕ್‌ಸ್ಟೋನ್–ಸೆಬಿ ಸಂಬಂಧ ಬೆಳಕಿಗೆ'



ಬ್ಲ್ಯಾಕ್‌ಸ್ಟೋನ್ ಕಂಪನಿಗೆ ಸಂಬಂಧಿಸಿದ ಎಲ್ಲ ವಿಚಾರಗಳಿಂದ ದೂರ ಉಳಿದಿದ್ದೇನೆ ಎಂದು ಸೆಬಿ ಅಧ್ಯಕ್ಷೆ ಮಾಧವಿ ಅವರು ಹೇಳಿದ್ದರು. ಆದರೆ, ಈಗ ಬ್ಲ್ಯಾಕ್‌ಸ್ಟೋನ್ ಕುರಿತು ಮಾಧವಿ ಅವರ ಹಿತಾಸಕ್ತಿ ಸಂಘರ್ಷದ ಒಂದು ಪ್ರಕರಣ ಬೆಳಕಿಗೆ ಬಂದಿದೆ. ಮಾಧವಿ ಅವರು ಸೆಬಿ ಅಧ್ಯಕ್ಷ ಸ್ಥಾನದಲ್ಲಿ ಉಳಿಯಬಾರದು. ಜಂಟಿ ಸಂಸದೀಯ ಸಮಿತಿಯನ್ನು ರಚಿಸಬೇಕು. ಆಗ ಮಾತ್ರವೇ 'ಮೋದಾನಿಯ ಬಹುದೊಡ್ಡ ಹಗರಣ' ಹೊರಬರಲು ಸಾಧ್ಯ

– **ಜೈರಾಮ್ ರಮೇಶ್**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ವೇಣುಗೋಪಾಲ್ ಪಿಎಸಿ ಅಧ್ಯಕ್ಷ



ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್ ಅವರು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ (ಪಿಎಸಿ) ನೇತೃತ್ವ ವಹಿಸಲಿದ್ದಾರೆ ಎಂದು ಲೋಕಸಭೆ ಸಚಿವಾಲಯ ತಿಳಿಸಿದೆ.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಪಿಎಸಿ ಸೇರಿದಂತೆ ಒಟ್ಟು ಐದು ಸಮಿತಿಗಳನ್ನು ರಚಿಸಿದ್ದು, ಲೋಕಸಭೆ ಸಚಿವಾಲಯವು ಶುಕ್ರವಾರ ಈ ಸಂಬಂಧ ಪ್ರಕಟಣೆ ಹೊರಡಿಸಿದೆ. ಸಾರ್ವಜನಿಕ ಉದ್ಯಮಗಳ ಸಮಿತಿ ಮತ್ತು ಅಂದಾಜು ಸಮಿತಿಗಳಿಗೆ ಬಿಜೆಪಿ ನಾಯಕರು ಅಧ್ಯಕ್ಷರಾಗಿದ್ದಾರೆ.

ಸಾರ್ವಜನಿಕ ಲೆಕ್ಕಪತ್ರ, ಸಾರ್ವಜನಿಕ ಉದ್ಯಮ ಮತ್ತು ಅಂದಾಜು ಸಮಿತಿಗಳು ಸರ್ಕಾರದ ಲೆಕ್ಕಪತ್ರಗಳು ಹಾಗೂ ಸಾರ್ವಜನಿಕ ವಲಯದ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಮೇಲೆ ನಿಗಾ ಇಡುವಂತಹ ಸಂಸತ್ತಿನ ಪ್ರಮುಖ ಮೂರು ಹಣಕಾಸು ಸಮಿತಿಗಳಾಗಿವೆ.

ಅಂದಾಜು ಸಮಿತಿಯ ಮುಖ್ಯಸ್ಥರಾಗಿ ಬಿಜೆಪಿಯ ಸಂಜಯ್ ಜೈಸ್ವಾಲ್ ನೇಮಕಗೊಂಡರೆ, ಅದೇ ಪಕ್ಷದ ಬೈಜಯಂತ್ ಪಾಂಡಾ ಅವರು ಸಾರ್ವಜನಿಕ ಉದ್ಯಮಗಳ ಸಮಿತಿಯನ್ನು ಮುನ್ನಡೆಸಲಿದ್ದಾರೆ.

ಬಿಜೆಪಿಯ ಗಣೇಶ್ ಸಿಂಗ್ ಅವರು ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಕಲ್ಯಾಣ ಸಮಿತಿ ಹಾಗೂ ಫಗ್ಗನ್ ಸಿಂಗ್ ಕುಲಸ್ತೆ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು.

ಈ ಸಮಿತಿಗಳು ಒಂದು ವರ್ಷದ ಅಧಿಕಾರಾವಧಿ ಹೊಂದಿವೆ. ಪಿಎಸಿಗೆ ಸಾಧಾರಣವಾಗಿ ಲೋಕಸಭೆಯ ವಿರೋಧ ಪಕ್ಷದ ಹಿರಿಯ ಸದಸ್ಯರೊಬ್ಬರು ನೇತೃತ್ವ ವಹಿಸುವರು. ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಅವರು ಕಳೆದ ಐದು ವರ್ಷ ಈ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಬಾರಿ ಎಲ್ಲ ಸಮಿತಿಗಳಿಗೆ ಅವಿರೋಧ ಆಯ್ಕೆ ನಡೆದಿದೆ.


ಸಾಬರಮತಿ ಎಕ್ಸ್‌ಪ್ರೆಸ್ ರೈಲಿನ ಬೋಗಿಗಳು ಹಳಿ ತಪ್ಪಿದ ಕಾರಣ ಪ್ರಯಾಣಿಕರು ಪರ್ಯಾಯ ವ್ಯವಸ್ಥೆಗಾಗಿ ರೈಲು ಹಳಿಯ ಮೇಲೆ ಕಾಯುತ್ತಿದ್ದರು – ಪಿಟಿಐ ಚಿತ್ರ

ಹಳಿ ತಪ್ಪಿದ 20 ಬೋಗಿಗಳು

ಕಾನ್ಪುರ/ ನವದೆಹಲಿ (ಪಿಟಿಐ): ವಾರಾಣಸಿ– ಅಹಮದಾಬಾದ್ ನಡುವೆ ಸಂಚರಿಸುತ್ತಿದ್ದ ಸಾಬರಮತಿ ಎಕ್ಸ್‌ಪ್ರೆಸ್ ಪ್ರಯಾಣಿಕರ ರೈಲು ಕಾನ್ಪುರದ ಗೋವಿಂದಪುರಿ ನಿಲ್ದಾಣದ ಬಳಿ ಶನಿವಾರ ನಸುಕಿನಲ್ಲಿ ಹಳಿ ತಪ್ಪಿದ್ದು, ಯಾವುದೇ ಜೀವಹಾನಿ ಮತ್ತು ಗಾಯಗಳಾದ ವರದಿಯಾಗಿಲ್ಲ.

ಕಾನ್ಪುರ ಮತ್ತು ಭೀಮ್‌ಸೇನ್ ರೈಲು ನಿಲ್ದಾಣಗಳ ನಡುವೆ ನಸುಕಿನ 2.35 ಗಂಟೆಯ ವೇಳೆಗೆ ರೈಲಿನ 20 ಬೋಗಿಗಳು ಹಳಿತಪ್ಪಿದ್ದು, ತ್ವರಿತವಾಗಿ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಯಿತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'ಹಳಿ ಮೇಲಿದ್ದ ವಸ್ತುವೊಂದು ಬಡಿದ ಕಾರಣ, ಸಾಬರಮತಿ ಎಕ್ಸ್‌ಪ್ರೆಸ್ ಹಳಿ ತಪ್ಪಿದೆ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ರೈಲು ಹಳಿ ತಪ್ಪಲು ಕಾರಣವಾದ ವಸ್ತುವನ್ನು ವಶಕ್ಕೆ ಪಡೆಯಲಾಗಿದ್ದು, ಗುಪ್ತಚರ ವಿಭಾಗ ಮತ್ತು ಉತ್ತರ ಪ್ರದೇಶದ ಪೊಲೀಸರು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಎಲ್ಲ ಪ್ರಯಾಣಿಕರಿಗೂ ಅವರ ಮುಂದಿನ ಪ್ರಯಾಣಕ್ಕಾಗಿ ಪರ್ಯಾಯ ವ್ಯವಸ್ಥೆ ಮಾಡಲಾಯಿತು' ಎಂದು ಅವರು ವಿವರಿಸಿದ್ದಾರೆ.

69,000 ಸಹಾಯಕ ಶಿಕ್ಷಕರ ನೇಮಕ ಪ್ರಕರಣ ● 3 ತಿಂಗಳಲ್ಲಿ ಪಟ್ಟಿ ಪೂರ್ಣಗೊಳಿಸಲು ಸೂಚನೆ

ಹೊಸ ಆಯ್ಕೆಪಟ್ಟಿ ಪ್ರಕಟಿಸಲು ನಿರ್ದೇಶನ

ಲಖನೌ (ಪಿಟಿಐ): ಉತ್ತರ ಪ್ರದೇಶದ 69,000 ಸಹಾಯಕ ಶಿಕ್ಷಕರ ನೇಮಕಾತಿಗೆ ಹೊಸದಾಗಿ ಆಯ್ಕೆಪಟ್ಟಿ ಸಿದ್ಧಪಡಿಸುವಂತೆ ಅಲಹಾಬಾದ್ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

6,800 ಅಭ್ಯರ್ಥಿಗಳು ಸೇರಿದಂತೆ 2022ರ ಜನವರಿ ಮತ್ತು 2020ರ ಜೂನ್‌ನಲ್ಲಿ ಪ್ರಕಟವಾಗಿರುವ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ಅನೂರ್ಜಿತಗೊಳಿಸಿದೆ.

ಹೈಕೋರ್ಟ್‌ನ ಏಕ ಸದಸ್ಯ ಪೀಠ ಮಾರ್ಚ್ 13ರಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಮಹೇಂದ್ರ ಪಾಲ್ ಮತ್ತು ಇತರ 90 ವಿಶೇಷ ಅರ್ಜಿಗಳನ್ನು ಇತ್ಯರ್ಥಗೊಳಿಸಿದ ನ್ಯಾಯಮೂರ್ತಿಗಳಾದ ಎ.ಆರ್.ಮಸೋದಿ, ಬ್ರಿರಾಜ್ ಸಿಂಘ್ ಅವರ ಪೀಠವು ಈ ಕುರಿತು ತೀರ್ಪು ಪ್ರಕಟಿಸಿದೆ. ಅದರ ಪ್ರತಿಯನ್ನು ಶುಕ್ರವಾರ ಹೈಕೋರ್ಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಹೊಸ ಆಯ್ಕೆಪಟ್ಟಿ ಸಿದ್ಧಪಡಿಸುವಾಗ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಶಿಕ್ಷಕರಿಗೆ ಈ ಶೈಕ್ಷಣಿಕ ಅವಧಿಯನ್ನು ಪೂರ್ಣಗೊಳಿಸಲು ಅವಕಾಶ ದೊರೆಯುವಂತೆ ಎಚ್ಚರ ವಹಿಸಬೇಕು. ಈ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು ಎಂದು ಪೀಠ ಹೇಳಿದೆ.

ಹಿಂದಿನ ಆದೇಶವನ್ನು ಪರಿಷ್ಕರಿಸಿರುವ ಪೀಠವು, ಸಾಮಾನ್ಯ ವರ್ಗದ ಮೆರಿಟ್ ಪಟ್ಟಿಯಲ್ಲಿ ಸ್ಥಾನ ಪಡೆದ ಮೀಸಲು ಪ್ರವರ್ಗದ ಅಭ್ಯರ್ಥಿಗಳನ್ನು, ಸಾಮಾನ್ಯ ವರ್ಗಕ್ಕೆ ಸ್ಥಳಾಂತರಿಸಬೇಕು ಎಂದೂ ಪೀಠ ತಿಳಿಸಿದೆ. ಅಲ್ಲದೆ ಲಂಬ ಮೀಸಲಾತಿಯ ಅನುಕೂಲಗಳು ಸಮತಲ ಮೀಸಲಾತಿ ಪ್ರವರ್ಗಗಳಿಗೂ ವಿಸ್ತರಣೆಯಾಗಬೇಕು ಎಂದು ಪೀಠ ನಿರ್ದೇಶಿಸಿದೆ.

2022ರ ಜನವರಿ 5ರ 6,800 ಮೀಸಲು ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ರದ್ದು ಮಾಡಿದ್ದ ಏಕಸದಸ್ಯ ಪೀಠದ ತೀರ್ಪನ್ನು ಈ ಪೀಠವೂ ಎತ್ತಿ ಹಿಡಿದಿದೆ.

ಹೊಸ ಆಯ್ಕೆ ಪಟ್ಟಿಯನ್ನು ಮುಂದಿನ ಮೂರು ತಿಂಗಳಲ್ಲಿ ಪೂರ್ಣಗೊಳಿಸಿ ಪ್ರಕಟಿಸುವಂತೆ ಪೀಠವು ರಾಜ್ಯ ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಗೆ ನಿರ್ದೇಶಿಸಿದೆ.

ರಾಜ್ಯದಲ್ಲಿ 69,000 ಶಿಕ್ಷಕರ ನೇಮಕಾತಿಯಲ್ಲಿ ಒದಗಿಸಿರುವ ಮೀಸಲಾತಿ ನಿಖರವಾಗಿಲ್ಲ ಎಂದು ವಾದಿಸಿದ್ದ ಮೇಲ್ಮನವಿದಾರರು, 6,800 ಶಿಕ್ಷಕರ ನೇಮಕಾತಿಯ ಸಿಂಧುತ್ವವನ್ನು ಪ್ರಶ್ನಿಸಿದ್ದರು.

ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ಮೀಸಲಾತಿಯ ಲಾಭ ಪಡೆದ ಅಭ್ಯರ್ಥಿಗಳು ಸಾಮಾನ್ಯ ವರ್ಗದ ಕಟ್–ಆಫ್‌ನಷ್ಟು ಅಂಕಗಳನ್ನು ಪಡೆದಿದ್ದರೂ ಅವರನ್ನು ಸಾಮಾನ್ಯ ವರ್ಗದ ಅಡಿ ಪರಿಗಣಿಸಬಾರದು ಎಂದು ಏಕ ಸದಸ್ಯ ಪೀಠ ತೀರ್ಪು ನೀಡಿತ್ತು.

ಈ ಕುರಿತು ಸ್ಪಷ್ಟಪಡಿಸಿರುವ ವಿಭಾಗೀಯ ಪೀಠ, ಅಭ್ಯರ್ಥಿಯ ಅಂಕಗಳು ಸಾಮಾನ್ಯ ವರ್ಗದ ಅರ್ಹತಾ ಮಾನದಂಡಗಳನ್ನು ಪೂರೈಸುವಂತಿದ್ದರೆ, ಅವರನ್ನು ಸಾಮಾನ್ಯ ವರ್ಗಕ್ಕೆ ಸ್ಥಳಾಂತರಿಸಬೇಕು ಎಂದು ತಿಳಿಸಿದೆ. ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಸಹಾಯಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮೇಲೆ ಹೈಕೋರ್ಟ್‌ನ ಈ ತೀರ್ಪು ವ್ಯಾಪಕ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿಯ ಪಿತೂರಿಗಳಿಗೆ ತಕ್ಕ ಉತ್ತರ: ರಾಹುಲ್ ಗಾಂಧಿ


ರಾಹುಲ್ ಗಾಂಧಿ

ನವದೆಹಲಿ(ಪಿಟಿಐ): ಉತ್ತರ ಪ್ರದೇಶದ 69,000 ಸಹಾಯಕ ಶಿಕ್ಷಕರ ನೇಮಕಾತಿಗೆ ಹೊಸ ಆಯ್ಕೆಪಟ್ಟಿ ಸಿದ್ಧಪಡಿಸುವಂತೆ ಹೇಳಿರುವ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಮೀಸಲಾತಿ ವ್ಯವಸ್ಥೆ ಜತೆ ಆಟವಾಡುತ್ತಿರುವ ಬಿಜೆಪಿ ಸರ್ಕಾರದ ಪಿತೂರಿಗಳಿಗೆ ಈ ತೀರ್ಪು ತಕ್ಕ ಉತ್ತರ' ಎಂದು ಹೇಳಿದ್ದಾರೆ.



ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಇದು ಐದು ವರ್ಷಗಳಿಂದ ಚಳಿ, ಬೇಸಿಗೆ ಮತ್ತು ಮಳೆಗಾಲದಲ್ಲಿ ಬೀದಿಗಿಳಿದು ಹೋರಾಡುತ್ತಿರುವ ಅಮಿತ್ ಮೌರ್ಯ ಅವರಂತಹ ಸಹಸ್ರಾರು ಯುವ ಜನರ ಜತೆಗೆ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಪ್ರತಿಯೊಬ್ಬರಿಗೂ ದೊರೆತ ವಿಜಯವಾಗಿದೆ' ಎಂದು ಬಣ್ಣಿಸಿದ್ದಾರೆ.

'ಮೀಸಲಾತಿಯನ್ನು ಕಿತ್ತುಕೊಳ್ಳುವ ಬಿಜೆಪಿಯ ಹಠಮಾರಿತನವು ಹಲವು ಅಮಾಯಕ ಅಭ್ಯರ್ಥಿಗಳ ಭವಿಷ್ಯವನ್ನು ಕತ್ತಲಿಗೆ ತಳ್ಳಿದೆ' ಎಂದು ಅವರು ಕಿಡಿಕಾರಿದ್ದಾರೆ.

'ನೇಮಕಾತಿ ಪಟ್ಟಿಯಲ್ಲಿ ಸ್ಥಾನ ಪಡೆಯಲು ಐದು ವರ್ಷಗಳ ಕಾಲ ಹೋರಾಡುವಂತೆ ಮಾಡಿದ್ದಕ್ಕೆ ಬಿಜೆಪಿಯನ್ನು ಶಪಿಸಬೇಕು. ಅಂತೆಯೇ ಬಿಜೆಪಿ ಕಾರಣದಿಂದಲೇ ಹಲವರು ಹೊಸ ಪಟ್ಟಿಯಿಂದ ಹೊರ ಹೋಗಲಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

ಕಾಂಗ್ರೆಸ್ ಕಾನೂನು ವಿಭಾಗಕ್ಕೆ ಸಿಂಘ್ವಿ ಅಧ್ಯಕ್ಷ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಕಾನೂನು, ಮಾನವ ಹಕ್ಕುಗಳು ಮತ್ತು ಆರ್‌ಟಿಐ ವಿಭಾಗವನ್ನು ಪುನರ್‌ರಚನೆ ಮಾಡಿದ್ದು, ಅಧ್ಯಕ್ಷರಾಗಿ ಅಭಿಷೇಕ್ ಮನು ಸಿಂಘ್ವಿ ಅವರನ್ನು ನೇಮಿಸಿದೆ.

ಈ ವಿಭಾಗವು ಹಿರಿಯ ವಕೀಲರಾದ ಸಲ್ಮಾನ್ ಖುರ್ಷಿದ್, ಕೆಟಿಎಸ್ ತುಳಸಿ ಮತ್ತು ವಿವೇಕ್ ತಂಖಾ ಅವರನ್ನು ಒಳಗೊಂಡಿದೆ. ಹರಿನ್ ರಾವಲ್, ಪ್ರಶಾಂತೊ ಸೇನ್, ದೇವದತ್ತ ಕಾಮತ್ ಮತ್ತು ವಿಪುಲ್ ಮಹೇಶ್ವರಿ ಅವರೂ ಸದಸ್ಯರಾಗಿದ್ದಾರೆ. ಕಾರ್ಯದರ್ಶಿಯಾಗಿ ಮಹಮ್ಮದ್ ಆಲಿ ಖಾನ್ ಅವರನ್ನು ನೇಮಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಕುರಿತ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿ, ತಕ್ಷಣದಿಂದಲೇ ಅನುಷ್ಠಾನ ಮಾಡುವಂತೆ ಸೂಚಿಸಿದ್ದಾರೆ ಎಂದು ಪಕ್ಷವು ಹೇಳಿಕೆಯಲ್ಲಿ ತಿಳಿಸಿದೆ.

ಮುಂಗಾರು ಜೀವ ಸಂಕುಲದ ಸಂಭ್ರಮ

ಶಶಿಕಾಂತ್ ಹೆಚ್. ಮಜಗಿ

ಈ ಭೂಮಿ ಅಗಣಿತ ಜೀವಿಗಳ ಆಗರ, ಆಶ್ರಯ ತಾಣ. ಈಗಾಗಲೇ ಗುರುತಿಸಿದ ಲಕ್ಷಾಂತರ ಜೀವರಾಶಿಗಳು ಇವೆ. ಇನ್ನು 60ರಿಂದ 80 ಲಕ್ಷ ಗುರುತಿಸದೆ ಉಳಿದ ಜೀವರಾಶಿಗಳು ಇವೆ ಎಂದು ಅಂದಾಜಿಸಲಾಗಿದೆ. ಈ ಎಲ್ಲಾ ಜೀವಿಗಳೂ ತಮ್ಮ ಬದುಕಿಗೆ, ಜೀವನ ಚಕ್ರಕ್ಕೆ ಅವಶ್ಯಕತೆಯಂತೆ ಆವಾಸಸ್ಥಾನಗಳನ್ನು ಹುಡುಕಿಕೊಂಡು ಹೊಂದಿಕೊಂಡಿರುತ್ತವೆ.

ಬದಲಾಗುತ್ತಿರುವ ಋತುಚಕ್ರಗಳಿಗೆ ಅನುಗುಣವಾಗಿ ಸಸ್ಯಗಳು ಪ್ರಾಣಿಗಳು ಪಕ್ಷಿಗಳು ಕೀಟಗಳು ಉಭಯವಾಸಿಗಳು ಸರೀಸೃಪಗಳು ಸಸ್ತನಿಗಳ ಸಂಕುಲ ತಮ್ಮ ಚಟುವಟಿಕೆಗಳನ್ನು ನಡೆಸುತ್ತವೆ. ಬೇಸಿಗೆ ಮುಗಿದು ಮಳೆಗಾಲ ಬರಲು ಎಲ್ಲವೂ ಕಾಯುತ್ತಿರುತ್ತವೆ. ಮಳೆಯೊಂದಿಗೆ ನಮ್ಮ ಕೃಷಿ ಚಟುವಟಿಕೆಗಳೂ ಚುರುಕುಗೊಳ್ಳುತ್ತವೆ. ಹೀಗಾಗಿ ನಮ್ಮ ಜೀವನ ಕ್ರಮ ಮಳೆಯನ್ನು ಅವಲಂಬಿಸಿದೆ. ಆದ್ದರಿಂದಲೇ ಮಳೆ ಬಂತೆಂದು ಸಂತೋಷ ಪಡುತ್ತೇವೆ. ಹಾಗೆಯೇ ಪ್ರಾಣಿ ಪಕ್ಷಿಗಳು ಸಸ್ಯಗಳೂ ಇದರಿಂದ ಹೊರತಾಗಿಲ್ಲ. ಅವು ಯಾವುದೇ ಕೃಷಿ, ಕೈಗಾರಿಕೆ ಚಟುವಟಿಕೆಗಳನ್ನು ನಡೆಸದೇ ಇದ್ದರೂ ಮಳೆಗಾಲ ಅವುಗಳಿಗೆ ಅತ್ಯಂತ ಪ್ರಮುಖ ಮತ್ತು ನಿರ್ಣಾಯಕ ಕಾಲ.

ಹಕ್ಕಿಗಳ ಕಲರವ, ಬೀಜ ಮೊಳಕೆಯೊಡೆಯುವುದು, ಹೂಗಳು ಅರಳುವುದು, ಎಲ್ಲಾ ಕಡೆ ಸಸ್ಯಗಳೂ ಗಿಡ ಮರಗಳೂ ಚಿಗುರೊಡೆಯುವುದು ಸೃಷ್ಟಿಯ ಸಹಜ ಪ್ರಕ್ರಿಯೆ. ಅಸಂಖ್ಯಾತ ಜೀವಿಗಳೂ ತಮ್ಮ ಅಡಗು ಇಲ್ಲವೇ ಆಶ್ರಯತಾಣಗಳಿಂದ, ಗೂಡುಗಳಿಂದ ಹೊರಬರುತ್ತವೆ. ಹಕ್ಕಿಗಳಿಗೆ, ಇತರೆ ಜೀವಿಗಳಿಗೆ ತಮ್ಮ ಮರಿಗಳಿಗೆ ಹುಳುಗಳನ್ನು, ಕೀಟಗಳನ್ನು ಮತ್ತು ಲಾರ್ವಾಗಳನ್ನು ಒದಗಿಸಲು, ಗೂಡು ಕಟ್ಟಲು, ಮರಿಹಾಕಲು, ಮರಿಗಳಿಗೆ ಪೋಷಣೆ ಮಾಡಲು ಇದು ಸೂಕ್ತ ಕಾಲ. ಸಕಲ ಜೀವರಾಶಿಗಳೂ ತಮ್ಮ ನಂಟನ್ನು ನೀರಿನೊಂದಿಗೆ ಬೆಸೆದುಕೊಂಡಿವೆ.

ತಮ್ಮ ಜೀವನಕ್ರಮದ ಭಾಗವಾಗಿ ನವಿಲುಗಳು ನರ್ತಿಸುತ್ತವೆ, ಮಿಂಚುಹುಳುಗಳು ಬೆಳಕು ಚೆಲ್ಲುತ್ತವೆ. ಕಪ್ಪೆಗಳು ಒಟಗುಟ್ಟುತ್ತವೆ. ಸಸ್ಯಗಳು ಗಿಡಮರಗಳು ನವಚೈತನ್ಯದೊಂದಿಗೆ ಚಿಗುರೊಡೆಯುತ್ತವೆ. ಬಾಯಾರಿದ ನೆಲ ನೀರನ್ನು ಕುಡಿದು ಒದ್ದೆಯಾಗಿ ತನ್ನ ಘಮಲನ್ನು ಬೀರಿ ಧನ್ಯವಾದ ತಿಳಿಸುತ್ತದೆ. ಭೂಮಿ ಮದುವಣಗಿತ್ತಿಯಂತೆ ಹೊಸ ಹೂಗಳಿಂದ, ಚಿಗುರುಗಳಿಂದ, ಹಸಿರಿನಿಂದ, ಜಲಧಾರೆಗಳಿಂದ ಶೃಂಗಾರಗೊಂಡು ನಳನಳಿಸುತ್ತದೆ. ಈ ಅಪರಿಮಿತ ಸವಿಯನ್ನು, ಸೊಬಗನ್ನು ಸವಿಯಲು ಕ್ರಿಮಿಕೀಟಗಳಿಂದ ಹಿಡಿದು ಸಸ್ತನಿಗಳವರೆಗೂ ಹೊರ ಪ್ರಪಂಚಕ್ಕೆ ತೆರೆದುಕೊಳ್ಳುತ್ತವೆ. ಅದರಲ್ಲೂ ಕೆಲವು ಪಕ್ಷಿಗಳು, ಉದಾಹರಣೆಗೆ ಬುಲ್ ಬುಲ್, ಕುಕ್ಕೂ, ರಾಬಿನ್, ಬಾರ್‌ಬೆಟ್ಸ್, ಸ್ಪ್ಯಾರೋ, ಬ್ಯಾಬರ್ಸ್, ಬಯಾವಿರ್ಸ್ ಮಳೆಗಾಲಕ್ಕೂ ಮುಂಚೆ ಮೊಟ್ಟೆ ಇಡುತ್ತವೆ. ಸರಿಯಾಗಿ ಮಳೆಗಾಲಕ್ಕೆ ಮರಿ ಹೊರಬಂದು, ಅದಕ್ಕೆ ಬೇಕಾದ ಆಹಾರ, ನೀರು ಇತರೆ ಅಗತ್ಯ ಪೋಷಕಾಂಶಗಳು ಹೇರಳವಾಗಿ ದೊರೆಯುತ್ತವೆ.

> ಸಕಲ ಜೀವರಾಶಿಗಳೂ ತಮ್ಮ ನಂಟನ್ನು ನೀರಿನೊಂದಿಗೆ ಬೆಸೆದುಕೊಂಡಿವೆ. ಅವುಗಳಿಗೆ ಮಳೆಗಾಲ ಅತ್ಯಂತ ಪ್ರಮುಖ ಮತ್ತು ನಿರ್ಣಾಯಕ ಕಾಲ. ಮಳೆಗಾಲ ಪ್ರಾಣಿ ಪಕ್ಷಿ ಸಸ್ಯ ಸಂಕುಲದ ಸಂತಾನೋತ್ಪತ್ತಿಯ ಪರ್ವಕಾಲ. ಏಕೆ ಮತ್ತು ಹೇಗೆ ಎನ್ನುವ ವಿಸ್ಮಯಕಾರಿ ಸಂಗತಿಗಳು ಇಲ್ಲಿವೆ.



ಸ್ವಾಲೋಟೈಲ್ ಚಿಟ್ಟೆಗಳು



ರೆಡ್ ವೆಲ್ವೆಟ್ ಮೈಟ್



ಜೀರುಂಡೆ



ಟ್ರೀಹಾಪರ್



ಪರ್ಪಲ್ ಫ್ರಾಗ್

ಮಲಬಾರ್ ಪಿಟ್ ವೈಪರ್, ಪರ್ಪಲ್ ಫ್ರಾಗ್, ಹ್ಯಾಮರ್ ಹೆಡ್ಡೆಡ್ ಹುಳು, ಸಿಕಾಡಸ್, ಟ್ರೀ ಹಾಪರ್, ಮಲಬಾರ್ ಗ್ಲೆಂಡಿಂಗ್ ಫ್ರಾಗ್, ಟೈಗರ್ ಬೀಟಲ್ಸ್, ಪೈಡ್ ಕುಕ್ಕೊ, ಫ್ಯಾನ್ ಥ್ರೋಟೆಡ್ ಲಿಝರ್ಡ್, ಇಂಡಿಯನ್ ಬುಲ್ ಫ್ರಾಗ್, ರೆಡ್ ವೆಲ್ವೆಟ್ ಮೈಟ್ಸ್ ಮುಂತಾದ ಜೀವಿಗಳೂ ಮಳೆಗಾಲಕ್ಕಾಗಿ ಕಾತುರದಿಂದ ಕಾಯುತ್ತಿರುತ್ತವೆ ಮತ್ತು ಸಂಭ್ರಮಿಸುತ್ತವೆ.

ಚಿಟ್ಟೆ, ಸೊಳ್ಳೆ, ಇರುವೆ, ಗೆದ್ದಲು, ಮಿಡತೆ, ಡ್ಯಾಮಸೆಲ್ ಹುಳು, ಜೀರುಂಡೆ, ಪರದೆ ರೆಕ್ಕೆಯ ಜೀರುಂಡೆ (Net winged beetles) ಜೇಡ ಕೂಡ ಮಳೆಗಾಲದ ಆಗಮನಕ್ಕೆ ಹಾತೊರೆಯುತ್ತವೆ. ಜೀವಿಗಳು ತಮ್ಮ ಬಲಿಷ್ಟ ಸಂತತಿಯನ್ನು ಹೆಚ್ಚಿಸಲು ಸಂತಾನೋತ್ಪತ್ತಿ ಮತ್ತು ಮರಿ ಹಾಕುವ ಸಮಯಕ್ಕೆ ಮರಿಗಳಿಗೆ ಬೇಕಾಗುವ ಅವಶ್ಯ ಪೋಷಕಾಂಶ, ಗುಣಮಟ್ಟದ ಆಹಾರ ಮಳೆಗಾಲದಲ್ಲಿಯೇ ಲಭ್ಯವಿರುತ್ತದೆ. ಸಸ್ತನಿಗಳಲ್ಲಿ ಹಾಲುಣಿಸುವ ಪ್ರಕ್ರಿಯೆಯಲ್ಲಿ ಅಧಿಕಶಕ್ತಿಯು ವ್ಯಯವಾಗುವುದರಿಂದ ಮಳೆಗಾಲದಲ್ಲಿ ಸೂಕ್ತ ಹಾಗೂ ಹೆಚ್ಚಾಗಿ ಆಹಾರ ಬೇಕಾಗುತ್ತದೆ. ಮಳೆಗಾಲದಲ್ಲಿ ಆಹಾರ ನಿರಾತಂಕವಾಗಿ ಮತ್ತು ನಿರಂತರವಾಗಿ ಲಭ್ಯವಿರುತ್ತದೆ. ಆದ್ದರಿಂದ ಈ ಕಾಲ ಸಂತಾನೊತ್ಪತ್ತಿಯ ಪರ್ವಕಾಲ. ಸಂತಾನೋತ್ಪತ್ತಿಯು ಬದುಕಿನ ಗಮ್ಯ ಪಯಣ ಕೂಡ ಹಾಗೂ ಬದುಕಿನ ಉದ್ದೇಶವೂ ಹೌದು.

ಪರದೆ ರೆಕ್ಕೆಯ ಜೀರುಂಡೆಗಳು ಗುಂಪುಗುಂಪಾಗಿ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗುತ್ತವೆ. ಕೆಲವು ಸಲ ಎರಡರಿಂದ ಆರರವರೆಗೂ ಜೊತೆಯಾಗಿ ಸೇರುವ ಪರದೆ ರೆಕ್ಕೆಯ ಜೀರುಂಡೆಗಳನ್ನು ನೋಡಬಹುದು. ಅವು ಮಕರಂದ ಸೂಸುವ ಸಸ್ಯಗಳಲ್ಲಿ ಹೆಚ್ಚಾಗಿ, ಅದರಲ್ಲೂ ಮಳೆಗಾಲದಲ್ಲಿ ಮಾತ್ರ ಸಂತಾನವನ್ನು ವೃದ್ಧಿಪಡಿಸುತ್ತವೆ. ಈ ಸದಾವಕಾಶ ಬರೀ ಸಣ್ಣ ಪ್ರಾಣಿಗಳಷ್ಟೇ ಸೀಮಿತವಲ್ಲ, ಬಹುಮುಖ್ಯವಾಗಿ ಸಸ್ತನಿಗಳಲ್ಲಿ ಜಿರಾಫೆಗಳು, ಆಫ್ರಿಕಾದ ಆನೆಗಳು, ರಿಸ್ಸೆಸ್ ಕೋತಿಗಳು, ತೋಳಗಳು ಸಮಶೀತೋಷ್ಣವಲಯದಲ್ಲಿ ಮಳೆಗಾಲದಲ್ಲಿಯೇ ಹೆಚ್ಚು ಸಕ್ರಿಯವಾಗಿರುತ್ತವೆ. ಮನುಷ್ಯರು ಕೂಡ ಇದರಿಂದ ಹೊರತಾಗಿಲ್ಲ. ಇದಕ್ಕೆ ಪೂರಕವಾಗಿ ಹಲವಾರು ಅಧ್ಯಯನಗಳು ಪುಷ್ಟಿ ನೀಡುತ್ತವೆ.

ಪರ್ಪಲ್ ಫ್ರಾಗ್ ಪಶ್ಚಿಮಘಟ್ಟಗಳಿಗೆ ಸೀಮಿತಗೊಂಡ ಕಪ್ಪೆ. ಮಳೆಗಾಲ ಪ್ರಾರಂಭದ ದಿನಗಳಲ್ಲಿ ವಾರ್ಷಿಕ ಒಂದೇ ಬಾರಿ ಮೊಟ್ಟೆ ಇಡಲು ಬರುತ್ತದೆ. ಆ ಕೆಲವು ಗಂಟೆಗಳು ಅತ್ಯಂತ ನಿರ್ಣಾಯಕ. ಅಷ್ಟೇ ಸಮಯದಲ್ಲಿಯೂ ಏಡಿಗಳಿಗೆ ಹಾಗೂ ಸರೀಸೃಪಗಳಿಗೆ ಆಹಾರವಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ. ಹಾಗಾಗಿಯೇ ಇವುಗಳ ಸಂಖ್ಯೆ ಗಣನೀಯವಾಗಿ ಇಳಿಮುಖಗೊಂಡ ಕಾರಣ IUCN ಪಟ್ಟಿಯಲ್ಲಿ ಇವುಗಳು Threatened ಪಟ್ಟಿಯಲ್ಲಿದೆ.

ರೆಡ್ ವೆಲ್ವೆಟ್ ಮೈಟ್ಸ್ ಸಾಮಾನ್ಯವಾಗಿ ತಣ್ಣನೆಯ ಕತ್ತಲು ಪ್ರದೇಶದಲ್ಲಿ ವಾಸಿಸುತ್ತವೆ. ಆದರೆ ಮಳೆಗಾಲದಲ್ಲಿ ಮಾತ್ರ ಸಂಗಾತಿಯನ್ನು ಪಡೆಯಲು ಸಂತಾನೋತ್ಪತ್ತಿಯನ್ನು ನಡೆಸಲು ಹೊರಬರುತ್ತವೆ. ಇಲ್ಲಿ ಕುತೂಹಲಕರ ಸಂಗತಿಯೊಂದಿದೆ. ಗಂಡು ಗೂಡನ್ನು ಕಟ್ಟಲು ಸ್ಥಳ ಪರಿಶೀಲನೆ ನಡೆಸುತ್ತದೆ. ಇದನ್ನು ಕೆಲವು ವಿಜ್ಞಾನಿಗಳು ಪ್ರೀತಿಯ ಗೂಡು (Love nest) ಎಂದು ಕರೆಯುತ್ತಾರೆ. ನಂತರ ಹೆಣ್ಣಿನ ಖಾಸಗಿ ಕೋಣೆಯನ್ನು (Boudoir) ಸಿದ್ಧಪಡಿಸುತ್ತದೆ. ಮರದ ತೊಗಟೆ, ಟೊಂಗೆ, ಎಲೆಗಳು ಮತ್ತು ವಿಶೇಷವಾಗಿ ವೀರ್ಯಗಳಿಂದ ಕೋಣೆಯನ್ನು ಅಲಂಕರಿಸುತ್ತದೆ. ನಂತರ ಹೆಣ್ಣಿನ ಆಗಮನಕ್ಕಾಗಿ ಕಾತುರದಿಂದ ಗಂಡು ಕಾಯುತ್ತದೆ. ಯಾವುದಾದರೂ ಹೆಣ್ಣು ಆಸಕ್ತಿ ತೋರಿ ಕೋಣೆಯ ಬಾಗಿಲಲ್ಲಿ ಬಂದು ನಿಂತಾಗ ಗಂಡಿನ ಖುಷಿಗೆ ಪಾರವೇ ಇಲ್ಲ. ಅದು ತನ್ನ ಕಾಲುಗಳನ್ನು ಅಲ್ಲಾಡಿಸುತ್ತ, ಮೈಯನ್ನು ಅತ್ತ ಇತ್ತ ಓಲಾಡಿಸುತ್ತ ಕುಣಿಯುತ್ತದೆ. ಇದನ್ನು ಕಂಡು ಹೆಣ್ಣು ಕೂಡ ಸ್ಪಂದಿಸಿ ಗಂಡಿನ ಕುಣಿತ ಮುಗಿದ ನಂತರ ಕೋಣೆಯನ್ನು ಪ್ರವೇಶಿಸುತ್ತದೆ. ಕೋಣೆಯಲ್ಲಿ ಅಲಂಕರಿಸಿ ಇಡಲಾದ ವೀರ್ಯದ ಉಂಡೆಗಳನ್ನು ತನ್ನ ಅಂಡಾಶಯಗಳೊಂದಿಗೆ ಮಿಲನಗೊಳಿಸಿದ ನಂತರ ಅಂಡಾಶಯಗಳು ಫಲಿತಗೊಳ್ಳುತ್ತವೆ. ನಂತರ ಕೆಲವೇ ನಿಮಿಷಗಳಲ್ಲಿ ತನ್ನ ಖಾಸಗಿ ಕೋಣೆಯನ್ನು ತೊರೆಯುತ್ತದೆ. ಇದು ಸಂತತಿ ಮುಂದುವರೆಸುವ ಗಮ್ಯ ಪಯಣ. ಹಾಗೆಂದ ಮಾತ್ರಕ್ಕೆ ಇಲ್ಲಿ ಗಂಡುಗಳ ಮಧ್ಯೆ ಪೈಪೋಟಿ ಇಲ್ಲವೆಂದೇನಿಲ್ಲ. ಕೆಲವೊಮ್ಮೆ ಬಲಿಷ್ಠ ಗಂಡು ಬೇರೆ ಗಂಡು ಸಿದ್ಧಪಡಿಸಿದ ಖಾಸಗಿ ಕೋಣೆಯನ್ನು ಬಲವಂತದಿಂದ ತನ್ನದಾಗಿಸಿಕೊಂಡು ತನ್ನ ವೀರ್ಯದ ಉಂಡೆಗಳನ್ನು ಅಲಂಕರಿಸುತ್ತದೆ. ಈ ಪೈಪೋಟಿ ಕೂಡ ಪ್ರಾಣಿಗಳಲ್ಲಿ ಸಹಜ ಕ್ರಿಯೆ. ತನ್ನ ಅಸ್ತಿತ್ವಕ್ಕೆ ಹೋರಾಟ ಮಾಡುತ್ತವೆ ಮತ್ತು ಬಲಿಷ್ಠವಾದವು ಮಾತ್ರ ಬದುಕುಳಿಯುತ್ತವೆ.

ಮುಂಗಾರು ಮಳೆ ಸಕಲ ಜೀವರಾಶಿಗೂ ಜೀವನೋತ್ಸಾಹ ತುಂಬುತ್ತದೆ. ಇದಕ್ಕಾಗಿಯೇ ಈ ಮೋಹಕ ಮಳೆಗಾಗಿ ಪ್ರಾಣಿ ಪಕ್ಷಿ ಸಸ್ಯ ಸಂಕುಲ ಮತ್ತು ಮನುಷ್ಯರು ಕಾತರಿಸುವುದು, ಕನವರಿಸುವುದು...!

ಯುದ್ಧಗಳ ಹೆಜ್ಜೆ ಗುರುತಿನ ಮ್ಯೂಸಿಯಂ

ಕೆ.ಪಿ.ಸತ್ಯನಾರಾಯಣ

ರಾಜಸ್ಥಾನದ ಜೈಸಲ್ಮೇರ್ ಶ್ರೀಮಂತ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿರುವ ಸುಂದರ ನಗರವಾಗಿದ್ದು, ಕೋಟೆಗಳು, ಸುಂದರವಾದ ಮರಳು ದಿಬ್ಬಗಳು ಮತ್ತು ಪ್ರಾಚೀನ ದೇವಾಲಯಗಳಿಗೆ ಹೆಸರುವಾಸಿ. ಮರಳುಗಾಡಿನಲ್ಲಿ ಮೋಜು ಮಸ್ತಿಗಾಗಿ ಈ ನಗರಕ್ಕೆ ಬರುವವರೇ ಹೆಚ್ಚು. ಆದರೆ ಇಲ್ಲಿ ಮರೆಯದೇ ನೋಡಬೇಕಾದ 'ಜೈಸಲ್ಮೇರ್ ಯುದ್ಧ ವಸ್ತುಸಂಗ್ರಹಾಲಯ'ವೂ ಇದೆ. 'ಜೈಸಲ್ಮೇರ್ ವಾರ್ ಮ್ಯೂಸಿಯಂ' ಎಂದು ಕರೆಯಲ್ಪಡುವ ಈ ಸಂಗ್ರಹಾಲಯ ಜೈಸಲ್ಮೇರ್-ಜೋಧ್‌ಪುರ ಹೆದ್ದಾರಿಯಲ್ಲಿ, ಜೈಸಲ್ಮೇರ್‌ನಿಂದ 10 ಕಿ.ಮೀ ದೂರದ ಥೈಯಾಟ್‌ನಲ್ಲಿದೆ.

ಭಾರತೀಯ ಸೈನಿಕರ ಅಗಾಧಶಕ್ತಿ ಮತ್ತು ಯುದ್ಧಕಾಲದಲ್ಲಿ ಅವರ ಶೌರ್ಯ ಸಾಹಸಗಳು ಮತ್ತು ತ್ಯಾಗಗಳನ್ನು ಪ್ರದರ್ಶಿಸುವ ಈ ವಸ್ತುಸಂಗ್ರಹಾಲಯ, ದೇಶದ ಮಿಲಿಟರಿ ಇತಿಹಾಸದ ಬಗ್ಗೆ ಆಸಕ್ತಿ ಹೊಂದಿರುವವರು ಭೇಟಿ ನೀಡಲೇಬೇಕಾದ ಸ್ಥಳ. ಇಲ್ಲಿಗೆ ಭೇಟಿ ಕೊಟ್ಟ ನಂತರ ಸೈನಿಕರ ಬಲಿದಾನದ ಬಗ್ಗೆ ಹೆಮ್ಮೆ ಎನಿಸುತ್ತದೆ.

ಜೈಸಲ್ಮೇರ್ ವಾರ್ ಮ್ಯೂಸಿಯಂನ ಪರಿಕಲ್ಪನೆ ಲೆಫ್ಟಿನೆಂಟ್ ಜನರಲ್ ಬಾಬಿ ಮ್ಯಾಥ್ಯೂಸ್ ಅವರದ್ದು. ಇದನ್ನು ಸಾಕಾರಗೊಳಿಸಿದ್ದು ಭಾರತೀಯ ಸೇನೆಯ ಡೆಸರ್ಟ್ ಕಾರ್ಪ್ಸ್ ತಂಡ. ಈ ವಸ್ತುಸಂಗ್ರಹಾಲಯವನ್ನು ಭಾರತೀಯ ವಾಸ್ತುಶಿಲ್ಪಿ ಜಸ್ಬೀರ್ ಸಾಹ್ನಿ ವಿನ್ಯಾಸಗೊಳಿಸಿದ್ದಾರೆ. ಈ ಸಂಗ್ರಹಾಲಯವನ್ನು 1965ರ ಭಾರತ-ಪಾಕಿಸ್ತಾನ ಯುದ್ಧದ ಸುವರ್ಣ ಮಹೋತ್ಸವದ ಸ್ಮರಣಾರ್ಥ 2015ರ ಆಗಸ್ಟ್ 24ರಂದು ರಾಷ್ಟ್ರಕ್ಕೆ ಸಮರ್ಪಿಸಲಾಯಿತು.

1971ರಲ್ಲಿ ನಡೆದ ಲೋಂಗೇವಾಲಾ ಕದನ ಸೇರಿದಂತೆ ಹಲವಾರು ಕದನಗಳಿಗೆ ಸಾಕ್ಷಿಯಾದ ಜೈಸಲ್ಮೇರ್ ಜಿಲ್ಲೆಯನ್ನು ಈ ಸಂಗ್ರಹಾಲಯದ ಸ್ಥಾಪನೆಗಾಗಿ ಆಯ್ಕೆ ಮಾಡಲಾಯಿತು. ಜೈಸಲ್ಮೇರ್ ಮಿಲಿಟರಿ ಸ್ಟೇಷನ್‌ನೊಳಗೆ 15 ಎಕರೆ ವಿಸ್ತೀರ್ಣವನ್ನು ಹೊಂದಿದ ಪ್ರದೇಶದಲ್ಲಿ ಜೈಸಲ್ಮೇರ್ ವಾರ್ ಮ್ಯೂಸಿಯಂ ನಿರ್ಮಿಸಲಾಗಿದೆ.

ವಸ್ತುಸಂಗ್ರಹಾಲಯವು ಪರಮವೀರ ಚಕ್ರ ಮತ್ತು ಮಹಾವೀರ ಚಕ್ರ ಶೌರ್ಯ ಪ್ರಶಸ್ತಿ ಪುರಸ್ಕೃತರ ಗೌರವಾರ್ಥ ಅವರ ಹೆಸರನ್ನು ಕೆತ್ತಿದ ಗೋಡೆಯನ್ನು ಹೊಂದಿದೆ. ಇಂಡಿಯನ್ ಆರ್ಮಿ ಹಾಲ್ ಮತ್ತು ಲಾಂಗೇವಾಲಾ ಹಾಲ್ ಎಂಬ ಎರಡು ದೊಡ್ಡ ಮಾಹಿತಿ ಪ್ರದರ್ಶನ ಸಭಾಂಗಣಗಳು, ಧ್ವನಿ ಬೆಳಕಿನ ಕೊಠಡಿ ಹೊಂದಿದೆ. ಜೈಸಲ್ಮೇರ್ ಯುದ್ಧ ವಸ್ತುಸಂಗ್ರಹಾಲಯವು ಭಾರತದ ಶ್ರೀಮಂತ ಮಿಲಿಟರಿ ಇತಿಹಾಸವನ್ನು ಪ್ರದರ್ಶಿಸಲು ಮತ್ತು ಭಾರತೀಯ ಯೋಧರ ಅಪ್ರತಿಮ ಸಾಹಸವನ್ನು ಪರಿಚಯಿಸಲು ಮಾಡಿದ ವಿಶಿಷ್ಟ ಪರಿಕಲ್ಪನೆಯಾಗಿದೆ. ಭಾರತೀಯ ಸಶಸ್ತ್ರ ಪಡೆಗಳು ಮಾಡಿದ ತ್ಯಾಗದ ಬಗ್ಗೆ ಹೆಚ್ಚಿನ ಜಾಗೃತಿಯನ್ನು ಮೂಡಿಸುವ ಗುರಿಯನ್ನು ಹೊಂದಿದೆ.

ಯುದ್ಧ ಟ್ರೋಫಿಗಳು ಮತ್ತು ವಿಂಟೇಜ್ ಉಪಕರಣಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಯುದ್ಧದಲ್ಲಿ ಪ್ರಾಣ ಕಳೆದುಕೊಂಡ ಸೈನಿಕರ ಭಿತ್ತಿಚಿತ್ರಗಳು ಮತ್ತು ಆ ಸಮಯದಲ್ಲಿ ಬಳಸಲಾದ ಬಂದೂಕುಗಳು ಇತ್ಯಾದಿ ಶಸ್ತ್ರಾಸ್ತ್ರಗಳಿವೆ. 1971ರ ಇಂಡೋ-ಪಾಕ್ ಯುದ್ಧದ (ಲೋಂಗೇವಾಲಾ ಸಮರ) ಸಮಯದಲ್ಲಿ ಬಳಸಲಾದ ಭಾರತೀಯ ವಾಯುಪಡೆಯ ಫೈಟರ್ ವಿಮಾನವನ್ನು ನೋಡಬಹುದು. ಯೋಧರ ಸಾಹಸಗಾಥೆಯನ್ನು ಸಾಕ್ಷ್ಯಚಿತ್ರದ ಮೂಲಕ ತೋರಿಸಲಾಗುತ್ತದೆ. ಕಾರ್ಗಿಲ್ ಕದನದ ಬೃಹತ್ ಪ್ರತಿಕೃತಿಯನ್ನೂ ನಿರ್ಮಿಸಿರುವುದು ವಿಶೇಷ. ಯುದ್ಧ ಟ್ಯಾಂಕ್‌ಗಳು ಮತ್ತಿತರ ಮಿಲಿಟರಿ ವಾಹನಗಳನ್ನು ವಿಶಾಲವಾದ ಬಯಲಿನಲ್ಲಿ ನೋಡಬಹುದು.

ಲೋಂಗೇವಾಲಾ ಹಾಲ್: ಡಿಸೆಂಬರ್ 4, 1971ರ ರಾತ್ರಿ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಲೋಂಗೇವಾಲಾ ಕದನ ಕುರಿತ ಮಾಹಿತಿಯನ್ನು ಈ ಹಾಲ್ ಪ್ರದರ್ಶಿಸುತ್ತದೆ. **12ನೇ ಪುಟಕ್ಕೆ...**



ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ಹೆಸರುಗಳನ್ನು ಕೆತ್ತಿರುವ ಗೋಡೆ



ಲೋಂಗೇವಾಲಾ ಸಮರದ ಸಮಯದಲ್ಲಿ ಬಳಸಲಾದ ಭಾರತೀಯ ವಾಯುಪಡೆಯ ಫೈಟರ್ ಮಾದರಿ

53 ಗಂಟೆಗಳಲ್ಲಿ 3,620 ಕಿ.ಮೀ.

ಸಾಹಸಯಾನ!

'ಬೆಂಗಳೂರಿಗರು ಉಣ್ಣಲು, ತಿನ್ನಲೆಂದೇ ಪ್ರವಾಸ ಹೋಗ್ತಾರೆ. ಯಾರೂ ಸಾಹಸಿ ಮನೋಭಾವದಿಂದ ಹೋಗೋದಿಲ್ಲ. ಇಷ್ಟೆಲ್ಲ ಜನ ಬೈಕರ್‌ಗಳಿದ್ದರೂ ಒಬ್ಬರಾದರೂ ದಾಖಲೆ ನಿರ್ಮಿಸಲಿಲ್ವಲ್ಲ' ಎಂಬ ಚುಚ್ಚುಮಾತುಗಳನ್ನೇ ಸ್ಫೂರ್ತಿಯಾಗಿಸಿ ದಾಖಲೆ ನಿರ್ಮಿಸಿದ ಕಥೆ ಇದು.

ರಶ್ಮಿ ಎಸ್



₹67,000 ಇಂಧನ ಖರ್ಚು

'**ಮನಸಲ್ಲಿ ಹಟ ಹುಟ್ಟಿತ್ತು.** ರಟ್ಟೆಗಳಲ್ಲಿ ಕಸುವಿತ್ತು. ಕಂಗಳಲ್ಲಿ ಕನಸು ಮೂಡಿತ್ತು. ಹಗಲಿರುಳೂ ಕನವರಿಕೆಯಾಗಿ ಬದಲಾಯಿತು. ಇನ್ನಿದನ್ನು ನನಸಾಗಿಸದಿದ್ದರೆ... ಎಂಬ ಯೋಚನೆಯೇ ಆತಂಕ ಮೂಡಿಸುತ್ತಿತ್ತು.

ಹೋಗುವುದೇ ನಿಜವಾದರೆ ದಾಖಲೆ ನಿರ್ಮಿಸೋಣ ಎಂದೆನಿಸಿದ್ದೇ ತಡ, ದಾಖಲೆ ನಿರ್ಮಿಸಲು ಕೈಗೊಳ್ಳಬೇಕಾದ ಪ್ರಕ್ರಿಯೆಗಳನ್ನೆಲ್ಲ ಪೂರ್ಣಗೊಳಿಸಿದೆ. ಫೆಬ್ರುವರಿ 25ರಂದು ಪ್ರಯಾಣ ಆರಂಭಿಸಿ, 27ರ ಸಂಜೆ ಜಮ್ಮು ಮತ್ತು ಕಾಶ್ಮೀರ ತಲುಪಿದೆ...'

ಬೆಂಗಳೂರಿನ ಯುವಕ ಚಿನ್ಮಯ್ ಸುದರ್ಶನ್ ತಮ್ಮ ಸಾಹಸಗಾಥೆಯನ್ನು ಹೀಗೆ ಸರಳವಾಗಿ ಹೇಳುತ್ತಿದ್ದರು. ಅಂದಾಜು 3,620 ಕಿ.ಮೀ. ದೂರವನ್ನು ಅವರು 53 ಗಂಟೆಗಳಲ್ಲಿ ಪೂರೈಸಿದ್ದರು. ಪ್ರತಿಗಂಟೆಗೆ ಸರಾಸರಿ 57ಕಿ.ಮೀ ವೇಗ.

ಸವಾಲು ಇದ್ದದ್ದು 53 ಗಂಟೆ ನಿರಂತರ ಬೈಕ್ ಓಡಿಸುವುದರಲ್ಲಿ. ಗಾಡಿಯ ಮೇಲೆ ಕುಳಿತ ನಂತರ ಗಡಿ ನಿರ್ಧಾರವಾಗಿದ್ದವು. ಬೆಂಗಳೂರಿನಿಂದ ಕನ್ಯಾಕುಮಾರಿ ತಲುಪಿದ ಮೇಲೆ ಇಡೀ ದಿನ ವಿರಮಿಸಿದೆ. ಸೋಮವಾರ ಸಂಜೆ ಪ್ರಯಾಣ ಆರಂಭಿಸಿದೆ.

ಇಲ್ಲಿಂದ ಶುರುವಾಯ್ತು ಪ್ರಯಾಣ. ಕನ್ಯಾಕುಮಾರಿಯಿಂದ ಬೆಂಗಳೂರು, ಬೆಂಗಳೂರಿನಿಂದ ಹೈದರಾಬಾದ್. ಹೈದರಾಬಾದ್ ಬಳಿ ರಸ್ತೆ ಕಾಮಗಾರಿ ನಡೀತಿತ್ತು. ನಗರದೊಳಗೆ ನುಸುಳಿದ್ದೇ ಒಂದೂವರೆ ಎರಡು ಗಂಟೆ ಹಿಂದೆ ಬೀಳುವಂತಾಯಿತು. ಅದನ್ನು ಸರಿಪಡಿಸಲು ವೇಗ ಹೆಚ್ಚಿಸಲೇಬೇಕಿತ್ತು. ಪ್ರತಿ 250 ಕಿ.ಮೀ ಗೆ ಇಂಧನ ತುಂಬಿಸಲು ನಿಲ್ಲಿಸುತ್ತಿದ್ದೆ. ಆ ಎರಡು ಮೂರು ನಿಮಿಷ ಮಾತ್ರ ವಿರಾಮ. ಆಗಲೇ ಕೈಕಾಲು ಸಡಿಲಿಸಿಕೊಂಡು, ಮತ್ತೆ ಮುನ್ನಡೆಯುತ್ತಿದ್ದೆ. ಗುರಿ ಮುಟ್ಟುವವರೆಗೂ ವಿರಾಮವೆಂದರೆ ಅಷ್ಟೇನೆ.

ಹಸಿವಾಗದಂತೆ, ದಣಿವಾಗದಂತೆ ಎಲೆಕ್ಟ್ರಾಲ್ ಮತ್ತು ನೀರನ್ನು ಜೊತೆಗಿರಿಸಿಕೊಂಡಿದ್ದೆ. ಎರಡು ದಿನಗಳಲ್ಲಿ ಕೇವಲ ಮೂರು ಲೀಟರ್ ನೀರು ಮತ್ತು ಎಲೆಕ್ಟ್ರಾಲ್ ಮಾತ್ರ ಸೇವಿಸಿದ್ದೆ. ಎಲ್ಲವೂ ಸರಿಯಾಗಿದೆ ಎಂದುಕೊಂಡು ಹೊರಟಾಗಲೇ ಮಧ್ಯಪ್ರದೇಶ ಪ್ರವೇಶಿಸಿದ್ದೆ. ಚಂಬಲ್ ಘಾಟಿ ದಾಟಬೇಕಿತ್ತು. ಚಂಬಲ್ ಕಣಿವೆಯ ಎಲ್ಲ ಕಥೆಗಳೂ ನೆನಪಾಗಿದ್ದವು. ಧೃತಿಗೆಡದೆ ಹೊರಟಿದ್ದೆ. ಆದರೆ ಇದ್ದಕ್ಕಿದ್ದಂತೆ ನನ್ನ ಹಿಂದೆ ಒಂದೆರಡು ಬೈಕುಗಳು ಬೆನ್ನಟ್ಟಿ ಬಂದವು. ಕನ್ನಡಿಯಲ್ಲಿ ಅವರು ಬರುವುದು ಕಾಣುತ್ತಿತ್ತು. ಮುಂದೆ ಹೋದಂತೆ ಎರಡಿದ್ದವು ನಾಲ್ಕು ಬೈಕುಗಳಾದವು. ಕಣಿವೆಯ ಕಥೆ ನೆನಪಾಗತೊಡಗಿತ್ತು. ಜೊತೆಗೆ ವಿಪರೀತ ದೂಳು. ಕಣ್ಣು ಕೆಂಪಾಗತೊಡಗಿದ್ದವು.

11ನೇ ಪುಟಕ್ಕೆ...

ಕಾಲದ ಹಿಂಸೆಗೆ ಕಾವ್ಯಕನ್ನಡಿ

ವಿಕ್ರಮ ವಿಸಾಜಿ

ರಂಗ ಪ್ರಯೋಗ

ಕಾಲದ ಪ್ರಜ್ಞೆಯೇ ಕಲಾಪ್ರಜ್ಞೆ ಎಂಬಂತೆ ಬುಕ್‌ಬ್ರಹ್ಮ ಸಾಹಿತ್ಯೋತ್ಸವದಲ್ಲಿ ನಿರ್ದಿಗಂತ ತಂಡದಿಂದ 'ಭಾಷೆ ಬೇರೆಯಾದರೂ ಭಾವವೊಂದೇ' ಎಂಬ ಕಾವ್ಯಕಥಾರಂಗದ ಪ್ರಸ್ತುತಿಯಿತ್ತು. ಕನ್ನಡ, ತಮಿಳು, ಮಲಯಾಳಂ, ತೆಲುಗು ಕವಿತೆಗಳನ್ನು ಆಯಾ ಭಾಷೆಯಲ್ಲಿಯೇ ವಾಚಿಸುತ್ತ, ಭಾರತದ ಹಲವು ಭಾಷೆಯ ಅನುವಾದಗಳು, ಜಾಗತಿಕ ಕಾವ್ಯದ ತುಣುಕುಗಳು, ಅಲ್ಲಲ್ಲಿ ಕೆಲ ಕಥೆಯ ಪ್ರಸಂಗಗಳನ್ನು ಕನ್ನಡದಲ್ಲಿ ನಿರೂಪಿಸಲಾಯಿತು. ಇದೊಂದು ವಿಶಿಷ್ಟ ಸಂಯೋಜನೆ. ಕವಿತೆ, ಕಥೆ, ಹಾಡು ಮತ್ತು ಸಂಗೀತದ ಕೂಡುಕುಟುಂಬ. ಇದರ ಮುಖ್ಯ ಆಶಯ ಯುದ್ಧ, ಹಿಂಸೆ, ಅಸಮಾನತೆ ಮತ್ತು ಕೋಮುವಾದವನ್ನು ಎದುರುಗೊಳ್ಳುವುದು. ನಮ್ಮ ಕಾಲದ ಹಿಂಸೆಗೆ, ತಲ್ಲಣಗಳಿಗೆ ಕನ್ನಡಿ ಹಿಡಿಯುವುದು. ಇದಕ್ಕಾಗಿ ಬ್ರೆಕ್ಟ್, ನೆರೂದಾ, ಗೌರೀಶ್ ಕಾಯ್ಕಿಣಿ, ಎ.ಕೆ.ರಾಮಾನುಜನ್, ಅಯ್ಯಪ್ಪ ಪಣಿಕ್ಕರ್, ಕ್ವಾಸಿರ್ ಹಸನ್, ಶ್ರೀಶ್ರೀ, ನಿಖಿಲ್ ಸಜ್ಜನ್, ಫೈಜ್ ಅಹಮ್ಮದ್ ಫೈಜ್, ಗುಲ್ಜಾರ್, ಆದವನ್, ಮುಕುಂದ ನಾಗರಾಜನ್, ವಿಡುಗಲೈ, ಬೋಳುವಾರು ಮಹಮ್ಮದ್ ಕುಂಞ, ಎಂ.ಡಿ.ವಕ್ಕುಂದ, ಸುಧಾ ಆಡುಕಳ ಮತ್ತು ಸಂವರ್ತ್ ಸಾಹಿಲ್ ಅವರ ರಚನೆಗಳನ್ನು ರಂಗಕ್ಕೆ ಅಳವಡಿಸಲಾಗಿತ್ತು. ಈ ಕಾವ್ಯ ಕೊಲಾಜ್ ಮಾನವೀಯ ಲೋಕದ ಹಂಬಲದಲ್ಲಿತ್ತು. ಕವಿತೆಯ ಮೂಲಕವೇ ಅಭಿವ್ಯಕ್ತಿ ಪಡೆದಿದ್ದರಿಂದ ಇದೊಂದು ಮಹತ್ವದ ವಿಭಿನ್ನ ಪ್ರಯೋಗ. ಇಡೀ ಪ್ರಸ್ತುತಿಯ ಶರೀರ ಕಾವ್ಯಮಯವಾಗಿದ್ದರೆ, ಆತ್ಮವು ವೈಚಾರಿಕವಾಗಿತ್ತು.

> ನಿರ್ದಿಗಂತವು ಹೊಸ ಪ್ರಯೋಗಗಳಿಗೆ ತೆರೆದುಕೊಂಡಿದೆ. ಈಚೆಗೆ ಬೆಂಗಳೂರಿನಲ್ಲಿ ಪ್ರಸ್ತುತಿಗೊಂಡ 'ಭಾಷೆ ಬೇರೆಯಾದರೂ ಭಾವವೊಂದೇ' ಎಂಬ ಕಾವ್ಯಕಥಾರಂಗ ಮತ್ತೊಂದು ಸೇರ್ಪಡೆ. ಕವಿತೆ, ಕಥೆ, ಹಾಡು ಮತ್ತು ಸಂಗೀತದ ಸೊಗಸಾದ ಮಿಶ್ರಣಗಳ ವಿಶಿಷ್ಟ ಪ್ರಯೋಗ.

ಇದರ ಕೇಂದ್ರದಲ್ಲಿದ್ದವರು ಬಹುಭಾಷಾ ನಟ ಪ್ರಕಾಶ್ ರಾಜ್. ಅವರ ವಿಶಿಷ್ಟ ವಾಚನ ಶೈಲಿ, ಕವಿತೆಗಳ ತೀವ್ರಲೋಕ ಮತ್ತು ಹಿತಮಿತ ಸಂಗೀತದ ಸ್ಪರ್ಶ ಬೆರಗುಗೊಳಿಸಿದವು. ಒಂದು ಕವಿತೆಯಿಂದ ಇನ್ನೊಂದು ಕವಿತೆಗೆ ಸಾಗುತ್ತ, ಪ್ರೇಕ್ಷಕರನ್ನು ಒಳಗೊಳ್ಳುತ್ತ ಯೋಚನೆಗೆ ತೊಡಗಿಸಿದರು. ಪ್ರಕಾಶ್ ಕವಿತೆಗಳ ಓದಿನ ಮೂಲಕವೇ ರಂಗದಲ್ಲಿ ತುಂಬು ಕ್ರಿಯಾಶೀಲತೆಯನ್ನು ಉಂಟುಮಾಡಿದ್ದರು. ಇಲ್ಲಿನ ಕವಿತೆಗಳೇ ಹಲವು ಕತೆಗಳನ್ನು ಮಂಡಿಸಿದ್ದವು. ನೋವಿನ, ಸಂಕಟದ ಕತೆಗಳಿವು. ಯುದ್ಧದ ಚೀತ್ಕಾರ ಮತ್ತು ನಿರರ್ಥಕತೆಯ ಕತೆಗಳು. ಮನುಷ್ಯರ ಒಳಗಿನ ಪ್ರೇಮ ಮತ್ತು ಕನಸುಗಳು ಗಾಯಗೊಂಡ ಕತೆಗಳು. ಕವಿ ಇಂಥ ಗಾಯಗಳ ಸಂಗಾತಿ. ಇಲ್ಲಿನ ಅಧಿಕಾರದ ರಾಜಕಾರಣ ಮತ್ತು ಧರ್ಮ ಉಂಟು ಮಾಡಿರುವ ಗಾಯ, ಮನುಷ್ಯರು ತಮಗೆ ತಾವೇ ಮಾಡಿಕೊಂಡ ಗಾಯಗಳನ್ನು ಮಾಯಿಸಿಕೊಳ್ಳಲು ಶತಮಾನಗಳಿಂದಲೂ ನಡೆಯುತ್ತಿರುವ ಚಡಪಡಿಕೆ ಇಲ್ಲಿನ ಕವಿತೆಗಳಲ್ಲಿತ್ತು. 'ತುಂಬಾ ಸರಳ ಅಸಮಾನತೆಯ, ಅನ್ಯಾಯದ ಜಗತ್ತನ್ನು ಬದಲಾಯಿಸೋದು. ಹೆಚ್ಚೇನೂ ಬೇಕಾಗಿಲ್ಲ ನಾವೆಲ್ಲಾ ಒಂದಾಗಿದ್ದರೆ ಸಾಕು' ಎಂಬ ಆರಂಭದ ಮಾತು ಮುಂದಿನ ಕವಿತೆಗಳನ್ನು ಪೋಣಿಸಿದ ಸೂತ್ರವಾಗಿತ್ತು. ಜಾತಿ, ಧರ್ಮ, ಭಾಷೆ, ಲಿಂಗ, ಅಂತಸ್ತು, ಅಧಿಕಾರವು ನಿರ್ಮಿಸಿರುವ ಗೋಡೆಗಳು. ದೇಶ ದೇಶಗಳ ನಡುವೆ ಎದ್ದಿರುವ ಗೋಡೆಗಳು, ಮನುಷ್ಯರ ನಡುವೆ ನಿಂತಿರುವ ಗೋಡೆಗಳು, ರಕ್ತದ ಕಲೆ ಅಂಟಿಕೊಂಡಿರುವ ಗೋಡೆಗಳು. ಕಣ್ಣಿಗೆ ಕಾಣುವ ಗೋಡೆಗಳು, ಅದೃಶ್ಯ ಗೋಡೆಗಳು. ಎಷ್ಟೆಲ್ಲಾ ಗೋಡೆಗಳನ್ನು ದಾಟಿ ಮನುಷ್ಯರು ಮುನ್ನಡೆಯಬೇಕಾಗಿದೆ. ತನ್ನ ಬಿಡುಗಡೆಗಾಗಿ ತನ್ನದೇ ಆಂತರ್ಯದ ದನಿ ಆಲಿಸಬೇಕಾಗಿದೆ. ಈ ಎಚ್ಚರವನ್ನು ಧ್ವನಿಸುವಂತೆ ಕಾವ್ಯದ ಪ್ರಸ್ತುತಿಯಿತ್ತು. ಕವಿತೆಗಳ ಆಯ್ಕೆಯೂ ಒಂದು ಸವಾಲು. ಪುಟ್ಟ ಕವಿತೆಗಳು ಪ್ರೇಕ್ಷಕರನ್ನು ತಲುಪುವ ಮೊದಲೇ ಮುಗಿದುಹೋಗುತ್ತವೆ. ದೀರ್ಘ ಕವಿತೆಗಳು ಪ್ರೇಕ್ಷಕರನ್ನು ತಲುಪುವಷ್ಟರಲ್ಲಿ ದಣಿದುಹೋಗುತ್ತವೆ. ಇದರ ವಿನ್ಯಾಸ ಮತ್ತು ನಿರ್ದೇಶನ ಕೈಗೊಂಡ ಶ್ರೀಪಾದ ಭಟ್ಟರು ಕವಿತೆಗಳ ಆಯ್ಕೆ ಮತ್ತು ಪ್ರಮಾಣದಲ್ಲಿ ಸೂಕ್ಷ್ಮತೆ ಮೆರೆದಿದ್ದಾರೆ. ಜಟಿಲ, ಸಂಕೀರ್ಣವಲ್ಲದ ಆದರೆ ರಾಜಕೀಯ ಪ್ರಜ್ಞೆಯುಳ್ಳ ಕವಿತೆಗಳಿವು. ಸಂವಹನಕ್ಕೆ ತೊಡಕಾಗದ ಇವುಗಳ ಶೈಲಿ ಪ್ರೇಕ್ಷಕರನ್ನು ಬಹುಬೇಗ ತಲುಪುತ್ತಿತ್ತು. ಪ್ರದರ್ಶನದಲ್ಲಿ ಧರ್ಮ ಮತ್ತೆ ಮತ್ತೆ ಉಲ್ಲೇಖಗೊಂಡಿತ್ತು.

ಯಾವುದು ಧರ್ಮ? ದಯವೇ ಧರ್ಮವೊ? ಅಥವಾ ಯಾರನ್ನಾದರೂ ಕೊಂದು ಉಳಿಸಿಕೊಳ್ಳಬೇಕಾದ ಧರ್ಮವೊಂದಿದೆಯೊ? ಎಂಬ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಮಾತು ರಂಗಕ್ಕಿಳಿದಿತ್ತು. ಧರ್ಮಗಳ ನಡುವೆ ಪರಸ್ಪರ ಬೆಳೆದು ನಿಂತಿರುವ ಫೋಬಿಯಾ. ಈ ಭಯವನ್ನು ಹಬ್ಬಿಸುತ್ತಿರುವ ಗುಂಪುಗಳು, ಇದಕ್ಕಾಗಿ ಸೃಷ್ಟಿಸಲಾಗುತ್ತಿರುವ ಹೊಸ ಹೊಸ ನಿರೂಪಣೆಗಳ ನಡುವೆ ಕಾವ್ಯದ ನಿರೂಪಣೆಗಳು ಸಜ್ಜುಗೊಳ್ಳುತ್ತಿದ್ದವು. ಮನುಷ್ಯರಾಳದ ಈ ಭಯವೇ ದ್ವೇಷವನ್ನು ಹುಟ್ಟುಹಾಕುವುದು. ಯುದ್ಧಗಳನ್ನು ಸಂಭ್ರಮಿಸುವುದು. ಇದನ್ನು ಮೀರಲು ಇರುವ ಹಲವು ದಾರಿಗಳನ್ನು ತಡಕಾಡುತ್ತಿರುವಂತಿತ್ತು ಪ್ರದರ್ಶನ. 'ಗೆದ್ದವರ ಪಾಳಯದಲ್ಲೂ ಸೋತವರ ಪಾಳಯದಲ್ಲೂ ಸತ್ತವರು ಸಾಮಾನ್ಯ ಜನರೇ ಆಗಿದ್ದರು' ಎಂಬ ಬ್ರೆಕ್ಟ್ ಕವಿತೆ, 'ಸೋತವನು ಚಕ್ರವರ್ತಿಯಾದ, ಗೆದ್ದವನು ಗೊಮ್ಮಟನಾದ' ಭರತ ಬಾಹುಬಲಿಯ ಕವಿತೆ, 'ಹಕ್ಕಿಗಳ ಕಲರವ ಕೇಳಬೇಕೆಂದರೆ ಯುದ್ಧ ವಿಮಾನಗಳ ಸದ್ದಡಗಬೇಕು' ಎಂಬ ಕವಿತೆಗಳು ರಂಗದ ಮೇಲೆ ಕಾಲೂರಿ ನಿಂತಿದ್ದವು. ಪ್ರದರ್ಶನ ಮುಗಿದ ಮೇಲೂ ಅನುರಣಿಸುತ್ತಿದ್ದವು. ಉದ್ದಕ್ಕೂ ದ್ವೇಷ, ಹಿಂಸೆಯ ಎದುರು ಪ್ರೇಮ ಒಂದು ಭಾವವಾಗಿ, ಸಹಿಷ್ಣುತೆ ಒಂದು ನಂಬಿಕೆಯಾಗಿ, ಅಹಿಂಸೆ ಒಂದು ಮೌಲ್ಯವಾಗಿ ಕಲ್ಪಿಸಿಕೊಳ್ಳಲಾಗಿತ್ತು.

ಕವಿತೆಗಳನ್ನು ತಮ್ಮ ಗಡಸು ಕಂಠದಲ್ಲಿ ವಾಚಿಸುತ್ತ, ನಾಟಕೀಯವಾಗಿ ನಿರೂಪಿಸುತ್ತ, ಭಾಷೆಯ ಒತ್ತು, ಲಯ, ಮಾತಿನ ಸಹಜತೆಗೆ ಹತ್ತಿರವಾಗುತ್ತ ವೈವಿಧ್ಯಮಯವಾಗಿ ಕವಿತೆಗಳ ಲೋಕವನ್ನು ಪ್ರಕಾಶ್ ತೆರೆದಿಟ್ಟರು. ಪ್ರಶ್ನೆ, ವ್ಯಂಗ್ಯ, ಮೌನ, ಚೀರಾಟ, ವಿಷಾದದ ನಗುವನ್ನು ಉದ್ದಕ್ಕೂ ಬಳಸಿಕೊಂಡರು.

ಈ ಪ್ರದರ್ಶನದಲ್ಲಿ ದೇಹದ ಭಂಗಿಗಳಿಗೆ ಅಷ್ಟು ಅವಕಾಶವಿರಲಿಲ್ಲ. ಮಾಂಸದೂಟದ ಕವಿತೆಯೊಂದರಲ್ಲಿ ಕೆಲಹೊತ್ತು ಕೆಳಗೆ ಕೂತು ಹಾವಭಾವಗಳನ್ನು ಪ್ರದರ್ಶಿಸಿದ್ದನ್ನು ಬಿಟ್ಟರೆ ಉಳಿದಂತೆ ಅವರ ಕಂಠವೇ ನಟನಾಗಿ, ದೇಹ ಪ್ರೇಕ್ಷಕನಾಗಿತ್ತು.

ಇಲ್ಲಿನ ಕವಿತೆಗಳು ಗ್ರಾಂಥಿಕ ಭಾಷೆಗೆ ಒಲಿದುಕೊಂಡಿದ್ದವು. ಪ್ರಕಾಶ್ ತರಹದ ಪಳಗಿದ ನಟರು ಇಂಥ ಕವಿತೆಗಳನ್ನು ಕಂಠಕ್ಕೆ ತಂದುಕೊಂಡಾಗ ಆಡುಮಾತಿನ ವರಸೆಗೆ ಬದಲಾಯಿಸಿಕೊಳ್ಳುವರು. ಬರಹದ ಲಯಗಳನ್ನು ಮಾತಿನ ಲಯಗಳಿಗೆ ಇಳಿಸಿದ್ದರು. ನಟನ ಮಾತು, ಮಾತಿನ ನಟನೆ ಎರಡೂ ಆಪ್ಯಾಯಮಾನವಾಗಿತ್ತು. ಹಲವು ಭಾಷೆಗಳಲ್ಲಿ ಇದನ್ನು ಏಕಕಾಲಕ್ಕೆ ಸಾಧಿಸುವುದು ಒಂದು ದೊಡ್ಡ ಸವಾಲು. ಅದನ್ನು ಅವರು ಯಶಸ್ವಿಯಾಗಿ ಎದುರಿಸಿದ್ದರು. ಜೊತೆಗೆ ಸಂಗೀತದ ಸಾಹಚರ್ಯ, ಆಲಾಪ, ಹಾಡಿನ ತುಣುಕುಗಳು (ಶಾಲೋಮ್ ಸನ್ನುತಾ, ಮುನ್ನಾ ಮೈಸೂರು) ಕಾವ್ಯಕಥಾರಂಗಕ್ಕೆ ಇನ್ನಷ್ಟು ತ್ರಾಣ ತುಂಬಿದ್ದವು. ರಂಗದ ಹಿಂಭಾಗದಲ್ಲಿದ್ದ ಚಿತ್ರಗಳಲ್ಲಿ ಮುಳ್ಳು ತಂತಿ ಬೇಲಿ ದಾಟಿನಿಂತ ಹೆಣ್ಣುಮಗಳು, ಹಲವು ಭಾಷೆಗಳ ಶಾಬ್ದಿಕ ಮರ, ಯುದ್ಧದ ವರದಿಗಳನ್ನು ಹೊತ್ತುನಿಂತ ಸುದ್ದಿಪತ್ರಿಕೆಯ ಶೀರ್ಷಿಕೆಗಳು ಕಾವ್ಯಕಥಾರಂಗದ ದೃಶ್ಯಕಾವ್ಯದಂತಿದ್ದವು. ಇಂಥದ್ದೊಂದು ಪ್ರದರ್ಶನದ ಮೂಲಕ ನಿರ್ದಿಗಂತವು ಕಾವ್ಯದ ಅನುಭೂತಿಯನ್ನೂ, ಕಾಲದ ಅನುಭೂತಿಯನ್ನೂ ಒಟ್ಟಿಗೆ ಮೂಡಿಸಿತ್ತು.



ನಟ ಪ್ರಕಾಶ್ ರಾಜ್ ಪ್ರಸ್ತುತಿ ಪಡಿಸಿದ 'ಭಾಷೆ ಬೇರೆಯಾದರೂ ಭಾವವೊಂದೇ' ರಂಗರೂಪ ಚಿತ್ರ: ಕಿಶೋರ್ ಕುಮಾರ್ ಬೋಳಾರು

53 ಗಂಟೆಗಳಲ್ಲಿ 3620 ಕಿ.ಮೀ ಸಾಹಸಯಾನ!

10ನೇ ಪುಟದಿಂದ...

ಇನ್ನು ವೇಗ ಹೆಚ್ಚಿಸದಿದ್ದಲ್ಲಿ ಕಣಿವೆಯಲ್ಲಿಯೇ ಕಣ್ಮರೆಯಾಗುವ ಎಲ್ಲ ಸಾಧ್ಯತೆಗಳೂ ಕಂಡವು. ವೇಗ ಹೆಚ್ಚಿಸಿ, ಅವರನ್ನ ಹಿಂದಿಕ್ಕಿ ಕಣಿವೆ ದಾಟಿದ ಮೇಲೆಯೇ ನಿರಾಳವಾಗಿದ್ದು.

ಮಧ್ಯಪ್ರದೇಶದಿಂದ ನವದೆಹಲಿ ಪ್ರವೇಶಿಸಿದಾಗ ಕಣ್ಣೆಳೆಯತೊಡಗಿದ್ದವು. ಬೆನ್ನು ಮಾತಾಡತೊಡಗಿತ್ತು. ಒಂದು ಚಹಾ, ಜೊತೆಗೊಂದು ಬನ್ ಕೊಂಡೆ. ಗಾಡಿಗೆ ಇಂಧನ ತುಂಬಿಸುತ್ತಿದ್ದೆ. ಆ ಬಿಡುವಿನಲ್ಲಿಯೇ ಇದನ್ನೆಲ್ಲ ಮಾಡಿದೆ. ಉಣ್ಣಲು, ತಿನ್ನಲೆಂದು ನಿಲ್ಲುವಂತಿರಲಿಲ್ಲ. ಗುರಿ ಸಮೀಪ ಇತ್ತು. ಆದರೆ...

ಕಂಗಳಿಗೆ ಚೂರು ವಿರಾಮ ನೀಡಿದಂತೆ ಒಂದರೆಕ್ಷಣ ಕಣ್ಮುಚ್ಚಿ ತೆರೆದು ಮಾಡುತ್ತಲೇ ಚಹಾ ಸೇವಿಸುತ್ತಾ ಬನ್ ತಿಂದು ಪಂಜಾಬ್ ರಾಜ್ಯವನ್ನು ಪ್ರವೇಶಿಸಿದೆ. ರೈತರ ಪ್ರತಿಭಟನೆ ನಡೆದಿತ್ತು. ಹೆದ್ದಾರಿಯನ್ನು ಬಿಟ್ಟು ಒಳಹಾದಿಗಳಿಂದ ಪ್ರಯಾಣ ಕೈಗೊಳ್ಳಬೇಕಾಯಿತು. ಆದರೆ ಪಂಜಾಬ್ ರಾಜ್ಯದಾದ್ಯಂತ ಪ್ರತಿಭಟನೆ ನಡೆದಿತ್ತು. ಈಗಾಗಲೇ ಎರಡೂವರೆಗಂಟೆ ಹಿಂದಿದ್ದೆ. ಮತ್ತೆ ಸಮಯದೊಂದಿಗೆ ರಾಜಿಯಾಗುವುದು ಬೇಕಾಗಿರಲಿಲ್ಲ. ಕೂಡಲೇ ದಾರಿ ಬದಲಿಸಿದೆ. ಹಿಮಾಚಲ ಪ್ರದೇಶ ಪ್ರವೇಶಿಸಿದೆ. ಹಿಮಾಚಲ ಪ್ರದೇಶದಿಂದ ಹಾಯ್ದು, ಪಠಾಣ್ ಕೋಟ್ ತಲುಪಿದೆ. ಪಠಾಣ್ ಕೋಟ್‌ನಿಂದ ಜಮ್ಮು ಮತ್ತು ಕಾಶ್ಮೀರದ ಗಡಿ ತಲುಪಿದೆ.

ಇದಿಷ್ಟೂ ದಾಖಲೆಗಾಗಿ ಆದ ಯಾನ. ಆದರೆ ನನ್ನೊಳಗಿನ ಯಾತ್ರೆ ಅಲ್ಲಿಂದ ಶುರುವಾಗಿತ್ತು. ಹಸಿವಿನ ಬಗ್ಗೆ ಬಾಲ್ಯದಿಂದಲೇ ಅರಿವಿತ್ತು. ಆದರೆ ಚಹಾದ ಗುಟುಕೊಂದು ಜೀವದಾಯಿನಿ ಅನಿಸಿದ್ದು, ರೈತರ ಬಗ್ಗೆ, ಅನ್ನದ ಬಗ್ಗೆ ಇನ್ನಷ್ಟು ಗೌರವ ಹುಟ್ಟಿತು. ಕಾಶ್ಮೀರ ತಲುಪಿದಾಗ ಕನ್ನಡದ ಯುವ ಸೈನಿಕರು ತಾವಾಗಿಯೇ ಬಂದು ಮಾತಾಡಿಸಿದರು. ಗಡಿ ದಾಟಿದಾಗಲೇ ಹೆಚ್ಚು ಹೆಚ್ಚು ನಮ್ಮತನದ ಅರಿವು ಮೂಡುವುದು. ಅವರೊಟ್ಟಿಗೆ ಮಾತಾಡಿ, ಫೋಟೊ ಕ್ಲಿಕ್ಕಿಸಿಕೊಂಡೆವು.

ಹೇಳಲೇಬೇಕಾದ ಮಾತೊಂದಿದೆ. ಕಾಶ್ಮೀರದಿಂದ ವಾಪಸ್ ಮರಳುತ್ತಿದ್ದೆ. ಇದ್ದಕ್ಕಿದ್ದಂತೆ ಹಿಮಪಾತ ಶುರುವಾಯಿತು. ಏನದು ಎಂದು ನೋಡುವಾಗಲೇ ನನ್ನ ಎಡಬದಿಯ ಬೆಟ್ಟ ಕುಸಿಯಿತು. ನನ್ನ ಗಾಡಿಯೂ ಸೇರಿದಂತೆ ನಾನೂ ಒಂದೆರಡು ಅಡಿ ಪಕ್ಕಕ್ಕೆ ಜರುಗಿದ್ದೆ. ಅದೃಷ್ಟ, ಬದುಕಿಕೊಂಡೆ ಅಂತನಿಸಿದ್ದು ಅದೇ ಕ್ಷಣ. ಆದರೆ ಕಣ್ಮುಂದೆಯೇ ಅದೆಷ್ಟು ಜನ ಹೂತುಹೋದರು. ಕಣಿವೆಯಲ್ಲಿ ಕುಸಿದ ಬದುಕು ನೋಡಿದಾಗ, ಇರುವುದೊಂದೇ ಜನ್ಮ. ಪರೋಪಕ್ಕಾರಕ್ಕೆ ಇದನ್ನ ತೇಯಬೇಕು ಎಂದೆನಿಸಿತು. ಬದುಕುವುದೆಂದರೆ ಬರೀ ಉಸಿರಾಡುವುದಷ್ಟೇ ಅಲ್ಲ. ಆ ಗಳಿಗೆಯ ನಂತರ ಅನಿಸಿದ್ದು ಕನ್ನಡದ ನೆಲಕ್ಕೆ ಕೂಡಲೇ ತಲುಪಬೇಕು. ಕನ್ನಡಿಗರ ನಡುವೆ ಬರಬೇಕು. ಅಷ್ಟೇ... ಮತ್ತೆ ಪ್ರಯಾಣ ಆರಂಭವಾಯಿತು. ಮತ್ತೆಲ್ಲಿಯೂ ನಿಲ್ಲಿಸಲಿಲ್ಲ. ಬೆಂಗಳೂರಿಗೆ ಬಂದೆ...

ಉಫ್... ಅಂತ ಬ್ರೆತ್‌ಲೆಸ್ ಹಾಡಿನಂತೆ ತಮ್ಮ ಯಾನವನ್ನು ಬಿಚ್ಚಿಟ್ಟ ಚಿನ್ಮಯ್ ಇನ್ನು ಪೂರ್ವದಿಂದ ಪಶ್ಚಿಮಕ್ಕೆ ಒಂದು ಯಾತ್ರೆ ಕೈಗೊಳ್ಳಬೇಕು ಎಂಬ ಯೋಚನೆಯಲ್ಲಿದ್ದಾರೆ. ಮೊದಲ ಪ್ರಯಾಣ ಸಾಕಷ್ಟು ಪಾಠಗಳನ್ನೂ ಹೇಳಿದೆ. ಎರಡನೆಯದ್ದು ತಮ್ಮ ದಾಖಲೆಯನ್ನು ತಾವೇ ಮುರಿಯುವಂತಾಗಲಿ ಎಂಬ ಆಸೆ ಅವರದ್ದು.

ಪ್ರಯಾಣಕ್ಕೂ ಮುನ್ನ

- ಆರೋಗ್ಯದ ಕಡೆಗೆ ಗಮನವಿರಲಿ
- ಹೆಚ್ಚು ನೀರು ಕುಡಿಯದೇ ಓಡಿಸುವಾಗ ನಿರ್ಜಲೀಕರಣ ಆಗುವ ಸಾಧ್ಯತೆ ಇರುತ್ತದೆ. ವೈದ್ಯರಿಂದ ತಪಾಸಣೆಗೆ ಒಳಗಾಗಿ, ಅವರ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ
- ಎಲ್ಲ ಆಧುನಿಕ ಗ್ಯಾಜೆಟ್‌ಗಳೂ ನಿಮ್ಮೊಂದಿಗಿರಲಿ. ಪವರ್‌ಬ್ಯಾಂಕ್ ಇರಿಸಿಕೊಳ್ಳಿ. ದೂರಸಂಪರ್ಕ ಸೇವೆಗಳ ಬಗ್ಗೆ ಮುಂಚೆಯೇ ಗೊತ್ತಿರಲಿ.
- ಸಾಧ್ಯವಿದ್ದಷ್ಟೂ ಏಕಾಂಗಿ ಟ್ರಿಪ್ಪುಗಳನ್ನು ಕೈಗೊಳ್ಳಬೇಡಿ. ಜೊತೆಗೆ ಇನ್ನೊಬ್ಬರು ಇದ್ದರೆ ಒಳಿತು
- ಪ್ರತಿ ಯಾನವೂ ನಿಮ್ಮಲ್ಲಿ ಸಾಕಷ್ಟು ಬದಲಾವಣೆ ತರುತ್ತದೆ. ಆ ಪ್ರಯಾಣವನ್ನು ಬದುಕಿನ ಪಾಠವೆಂದೇ ಪರಿಗಣಿಸಿ
- ತುರ್ತು ಸಂಪರ್ಕದ ಸಂಖ್ಯೆಗಳನ್ನು ಫೋನಿನಲ್ಲಿ ದಾಖಲಿಸಿಡಿ



ಕಾಶ್ಮೀರದಲ್ಲಿ ಕನ್ನಡಿಗ ಸೈನಿಕರೊಂದಿಗೆ ಚಿನ್ಮಯ್ ಸುದರ್ಶನ್



ಬಹು ಆಕರ್ಷಣೀಯ ಪಾಂಡವರ ಅಡಿಕೆ


ಬೀರಣ್ಣ ನಾಯಕ ಮೊಗಟಾ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ತುತ್ತತುದಿಯ ಗಡಿ ಗ್ರಾಮ ಮೋತಿಗುಡ್ಡ. ಪರಿಸರದ ಮಡಿಲಿನಲ್ಲಿರುವ ಈ ಊರು ಸಮುದ್ರ ಪಾತಳಿಯಿಂದ 369 ಮೀಟರ್ ಎತ್ತರದಲ್ಲಿದೆ. ಮೋತಿಗುಡ್ಡದ ಸ್ನೇಹಿತರ ಮನೆಯಲ್ಲಿ ಅಲ್ಬಂ ಮೇಲೆ ಕಣ್ಣಾಡಿಸುತಿದ್ದೆ. ಅದರಲ್ಲಿ ಒಂದು ಬಗೆಯ ಅಡಿಕೆ ಹಾಗೂ ಅದರ ಸಿಂಗಾರ (ಹೂವು)ದ ಚಿತ್ರಗಳು ಬಹುವಾಗಿ ಆಕರ್ಷಿಸಿದವು. ಗೆಳೆಯ ಭಾಸ್ಕರ ಹೆಗಡೆ ನನ್ನ ಕುತೂಹಲ ಅರಿತು ಅದು ಬೆಳೆಯುವ ಪ್ರದೇಶಕ್ಕೆ ಕರೆದೊಯ್ದರು.

ಮೋತಿಗುಡ್ಡದಿಂದ ದೂರೆಕಟ್ಟೆಗೆ ಹೋಗುವ ಶಿಖರದಂತಿರುವ ಗುಡ್ಡದ ಇಳಿಜಾರಿನಲ್ಲಿ ಮಾತ್ರ ಕಂಡು ಬರುವ ಈ ಅಡಿಕೆಗೆ 'ಪಾಂಡವರ ಅಡಿಕೆ' ಎಂದು ಸ್ಥಳೀಯರು ಕರೆಯುತ್ತಾರೆ. ಪಾಂಡವರು ವನವಾಸದಲ್ಲಿದ್ದಾಗ ಈ ಅಡಿಕೆಯನ್ನು ನೆಟ್ಟಿದ್ದಾರೆಂಬ ಪ್ರತೀತಿ ಇದೆ. ಅತ್ಯಂತ ಚುಗುರಾದ, ತಿನ್ನಲು ಬಾರದ ಈ ಅಡಿಕೆಯನ್ನು ಸುಲಿದಾಗ ನಮ್ಮ 'ಮಾಣಿ' ಅಡಿಯನ್ನು ಹೋಲುತ್ತದೆ. ತೋಟದ ಅಡಿಕೆ ಸಿಂಗಾರ ಬಿಡುವ ಸಮಯದಲ್ಲಿಯೇ ಹೂ ಬಿಡುವ ಈ ಅಡಿಕೆಮರ ಮೂರರ ತನಕ ಗೊನೆ ಬಿಡುತ್ತದೆ. ಸಿಂಗಾರ ನಮ್ಮ ತೋಟದಲ್ಲಿಯ ಸಿಂಗಾರಕಿಂತಲೂ ಅತಿ ಹೆಚ್ಚು ಆಕರ್ಷಕ. ನಮ್ಮ ಅಡಿಕೆಮರಗಳಿಗಿಂತ ತೆಳ್ಳಗೆ ಇರುವ ಈ ಗಿಡಗಳನ್ನು ಆಲಂಕಾರಿಕ ಗಿಡಗಳಾಗಿ ಬೆಳೆಯಬಹುದು.

ಇದು ಅಪರೂಪದ ಸಸ್ಯವಾಗಿದ್ದು ಇದರ ವೈಜ್ಞಾನಿಕ ಹೆಸರು Arecaceae ಇದುBercht ಎನ್ನುವ ಕುಟುಂಬದಾಗಿದ್ದು Plantae ಎನ್ನುವ ಕಿಂಗ್ಡಮ್‌ಗೆ ಸೇರಿದ ಗಿಡವಾಗಿದೆ ಎನ್ನುತ್ತಾರೆ ಸಸ್ಯಶಾಸ್ತ್ರಜ್ಞೆ ಪ್ರೊ.ವಾಣಿಶ್ರೀ ಹೆಗಡೆ.

ಈ ಅಪರೂಪದ, ಆಕರ್ಷಕ ಹಾಗೂ ಅಳಿವಿನಂಚಿನಲ್ಲಿರುವ ಈ ಗಿಡದ ರಕ್ಷಣೆ ಅರಣ್ಯ ಇಲಾಖೆಯಿಂದ ಆಗಬೇಕಿದೆ.



ಪಾಂಡವರ ಅಡಿಕೆ ಮರದ ಸಿಂಗಾರ

ಮುನ್ನೋಟ 18-08-2024 ರಿಂದ 24-08-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವ್ಯಾಪಾರಿ ಮನೋಭಾವ ನಿಮ್ಮಲ್ಲಿ ಇರುತ್ತದೆ. ಹೀಗಾಗಿ ವ್ಯಾಪಾರದ ಬಗ್ಗೆ ಹೆಚ್ಚು ಚಿಂತೆ ಮಾಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುತ್ತದೆ. ಕುಟುಂಬದಲ್ಲಿ ಹೊಂದಾಣಿಕೆ ಚೆನ್ನಾಗಿ ಇರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಲಾಭವಿರುತ್ತದೆ. ಹೆಚ್ಚಿನ ಅನುಕೂಲಕ್ಕಾಗಿ ನರಸಿಂಹ ಪ್ರಾರ್ಥನೆಯನ್ನು ಮಾಡಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಚಟುವಟಿಕೆಗಳಿಂದ ಆದಾಯವನ್ನು ವೃದ್ಧಿಸಿಕೊಳ್ಳಬಹುದು. ಸೌಮ್ಯವಾಗಿ ಮಾತನಾಡಿ ಜನರ ಮನಸನ್ನು ಗೆಲ್ಲುವಿರಿ. ಮನೆ ಪಾಠ ಹೇಳುವವರಿಗೆ ಬೇಡಿಕೆ ಮತ್ತು ಆದಾಯ ಹೆಚ್ಚುತ್ತದೆ. ಧಾರ್ಮಿಕ ವಿದ್ಯೆಯನ್ನು ಕಲಿಸುವವರಿಗೆ ಮತ್ತು ಕಲಿಯುವವರಿಗೆ ಸಾಕಷ್ಟು ಅನುಕೂಲವಿದೆ. ಹೈನುಗಾರಿಕೆಯ ಬಗ್ಗೆ ಸಲಹೆ ಕೊಡುವವರಿಗೆ ಲಾಭವಿರುತ್ತದೆ. ಹೆಚ್ಚಿನ ಒಳಿತಿಗಾಗಿ ಗಣೇಶ, ದುರ್ಗೆಯರನ್ನು ಪ್ರಾರ್ಥಿಸಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಾರದ ಆರಂಭ ತೃಪ್ತಿದಾಯಕವಾಗಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ಆದಾಯ ಹೆಚ್ಚಿಸಿಕೊಳ್ಳುವತ್ತ ಗಮನಹರಿಸುವಿರಿ. ಕೃಷಿಕರಿಗೆ ಬೆಳೆಯಿಂದ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿ ಸಂತೋಷಕ್ಕಾಗಿಯೂ ಹಣ ಖರ್ಚಾಗುತ್ತದೆ. ಹೆಚ್ಚಿನ ಒಳಿತಿಗಾಗಿ ಶಿವ ಮತ್ತು ಗಣೇಶ ಧ್ಯಾನ ಮಾಡಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಪ್ರಶಾಂತತೆಯನ್ನು ಕಾಪಾಡಿಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಆಸ್ತಿ ಸಂಬಂಧಿತ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಕೆಲವರಿಗೆ ಪ್ರೀತಿ, ಪ್ರೇಮದಲ್ಲಿ ಯಶಸ್ಸು ದೊರಕುತ್ತದೆ. ಹೆಚ್ಚಿನ ಒಳಿತಿಗಾಗಿ ಶನೇಶ್ವರ ಮತ್ತು ದುರ್ಗಾ ಪ್ರಾರ್ಥನೆ ಮಾಡಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವ್ಯಕ್ತಿತ್ವದಲ್ಲಿ ಬಹಳ ಗಂಭೀರತೆ ಇರುತ್ತದೆ. ಆದಾಯದಲ್ಲಿ ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಾರ್ವಜನಿಕರ ಸಹಾಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ಶೀತ ಸಂಬಂಧಿ ಕಾಯಿಲೆಗಳು ಕೆಲವರನ್ನು ಬಾಧಿಸಬಹುದು. ಹಿರಿಯರ ಕೃಷಿ ಭೂಮಿಯಿಂದ ಆದಾಯವಿರುತ್ತದೆ. ಹೆಚ್ಚಿನ ಒಳಿತಿಗಾಗಿ ದುರ್ಗಾ ಶನೇಶ್ವರ ಧ್ಯಾನ ಮಾಡಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಕಡಿಮೆ ಇರುತ್ತದೆ. ಕೃಷಿ ಉತ್ಪನ್ನಗಳಿಂದ ಲಾಭವಿರುತ್ತದೆ. ಕೆಲವೊಂದು ವಿಷಯಗಳಲ್ಲಿ ಬಂಧುಗಳಿಂದ ತೀವ್ರ ಪ್ರತಿರೋಧ ಬರುತ್ತದೆ. ಸಂಗಾತಿಯ ಉಡಾಫೆ ಮಾತುಗಳು ನಿಮಗೆ ಮುಜುಗರವನ್ನು ಉಂಟು ಮಾಡಬಹುದು. ಕೆಲವರಿಗೆ ಸಂಗಾತಿ ದೆಸೆಯಿಂದ ವಿದೇಶಯಾನ ಅಥವಾ ದೂರ ಪ್ರಯಾಣ ಒದಗಬಹುದು. ಹೆಚ್ಚಿನ ಒಳಿತಿಗಾಗಿ ಗಣೇಶ, ದುರ್ಗೆಯರನ್ನು ಪ್ರಾರ್ಥಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕೆಲವರು ಕುಟುಂಬದವರ ಹೆಸರಿನಲ್ಲಿ ಗೌರವವನ್ನು ಪಡೆದುಕೊಳ್ಳುವರು. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ಕೃಷಿಯಿಂದ ನಿಮಗೆ ಆದಾಯವಿರುತ್ತದೆ. ಚರ್ಮರೋಗಗಳು ಕೆಲವರನ್ನು ಬಾಧಿಸಬಹುದು. ಸಂಗಾತಿಯ ವೆಚ್ಚದಲ್ಲಿ ಏರಿಕೆಯಾಗುತ್ತದೆ. ಸರ್ಕಾರಿ ಕೆಲಸ ಕಾರ್ಯಗಳು ಅಂದುಕೊಂಡಂತೆ ಆಗುವುದಿಲ್ಲ. ಹೆಚ್ಚಿನ ಒಳಿತಿಗಾಗಿ ಸುಬ್ರಹ್ಮಣ್ಯ, ಶನೇಶ್ವರ ಧ್ಯಾನ ಮಾಡಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯವು ಉತ್ತಮವಾಗಿರುತ್ತದೆ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ಮಕ್ಕಳಿಂದ ತೀಕ್ಷ್ಣವಾದ ಮಾತುಗಳು ಬರಹಬಹುದು. ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆಯನ್ನು ಕಾಣಬಹುದು. ಸಂಗಾತಿ ಮಾಡುವ ಆಹಾರ ಪದಾರ್ಥಗಳ ಮಾರಾಟದಿಂದ ಹೆಚ್ಚು ಲಾಭವಿರುತ್ತದೆ. ತಾಯಿ ಸ್ವಲ್ಪ ಮುನಿಸಿಕೊಳ್ಳಬಹುದು. ಹೆಚ್ಚಿನ ಒಳಿತಿಗಾಗಿ ದುರ್ಗಾ ಮತ್ತು ಗಣೇಶನ ಧ್ಯಾನ ಮಾಡಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಸ್ವಲ್ಪ ಆಲಸೀತನವಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಬರುತ್ತದೆ. ರಾಜಕೀಯ ನಾಯಕರುಗಳಿಗೆ ಜನ ಬೆಂಬಲ ಕಡಿಮೆಯಾಗುವ ಸಾಧ್ಯತೆಗಳಿವೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶಗಳು ದೊರೆಯುತ್ತವೆ. ಸಂಗಾತಿ ಮಾಡುವ ವ್ಯವಹಾರಗಳಲ್ಲಿ ನಿಮಗೆ ಹೆಚ್ಚು ಪಾಲು ದೊರೆಯುತ್ತದೆ. ಹೆಚ್ಚಿನ ಒಳಿತಿಗಾಗಿ ದುರ್ಗಾ ಪ್ರಾರ್ಥನೆಯನ್ನು ಮಾಡಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮನಸ್ಸಿನಲ್ಲಿ ಸಂತೋಷವಿರುತ್ತದೆ. ನೀವು ಮಾಡಿದ ಕೆಲಸಗಳಿಗೆ ಪ್ರತಿಫಲ ದೊರಕುವ ಸಂದರ್ಭ ಬಂದಿದೆ. ಆದಾಯ ಕಡಿಮೆ ಇದ್ದರೂ ನಿರ್ವಹಣೆ ಉತ್ತಮವಾಗಿರುತ್ತದೆ. ರಕ್ತ ತೊಂದರೆ ಇರುವವರು ಎಚ್ಚರ ವಹಿಸಿ. ಸಂಗಾತಿಯು ನಿಮಗೆ ಮನಸಾರೆ ಸಹಕರಿಸುವರು. ಅನಿರೀಕ್ಷಿತ ಸರ್ಕಾರಿ ಸಹಾಯಗಳು ಒದಗುವ ಸಾಧ್ಯತೆಗಳಿವೆ. ಹೆಚ್ಚಿನ ಒಳಿತಿಗಾಗಿ ಶನೇಶ್ವರ ಮತ್ತು ದುರ್ಗಾ ಪ್ರಾರ್ಥನೆ ಮಾಡಿರಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮಾತನಾಡುವಾಗ ಎಚ್ಚರಿಕೆ ಇರಲಿ. ಧಾರ್ಮಿಕ ಕೆಲಸ ಮಾಡುವವರಿಗೆ ಗುರುಗಳ ಆಶೀರ್ವಾದವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಉತ್ತಮ ಕಾಲ. ಶೀತಬಾಧೆ ತೊಂದರೆ ಇರುವವರು ಎಚ್ಚರ ವಹಿಸಿರಿ. ಸಂಗಾತಿಯ ಕಡೆಯವರ ಬಲದಿಂದ ವೃತ್ತಿಯಲ್ಲಿ ಸ್ಥಿರತೆಯನ್ನು ಕಾಣಬಹುದು. ಉದ್ಯೋಗದಲ್ಲಿ ಆಲಸ್ಯ ಖಂಡಿತ ಬೇಡ. ಹೆಚ್ಚಿನ ಒಳಿತಿಗಾಗಿ ಗೌರಿ ಪ್ರಾರ್ಥನೆಯನ್ನು ಮಾಡಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳನ್ನು ಅನುಸರಿಸಿ ನಡೆಯುವುದು ನಿಮಗೆ ಒಳ್ಳೆಯದು. ಗುಪ್ತರೋಗ ಅಥವಾ ಶ್ವಾಸಕೋಶದ ತೊಂದರೆ ಇರುವವರು ಎಚ್ಚರ ವಹಿಸಿರಿ. ಸಂಗಾತಿಯಿಂದ ಕೆಲವು ವಿಷಯಗಳಲ್ಲಿ ಸಹಕಾರ ಸಿಗುವುದಿಲ್ಲ. ಮೇಲಧಿಕಾರಿಗಳಿ ಈಗ ಕಿರುಕುಳ ನೀಡಬಹುದು. ಹೆಚ್ಚಿನ ಒಳಿತಿಗಾಗಿ ಲಕ್ಷ್ಮೀನಾರಾಯಣನ ಧ್ಯಾನ ಮಾಡಿರಿ.

ಪದಬಂಧ 2855



ಮೇಲಿನಿಂದ ಕೆಳಕ್ಕೆ

1. ಸ್ವಯಂ ಕಲಿಯುವ ಪ್ರವೃತ್ತಿ 3
2. ಕಾಡನ್ನು ಕಾಪಾಡುವವ 5
3. ಯುದ್ಧದ ಭಯಂಕರ ರೂಪ 5
4. ಒಂಭತ್ತು ರೀತಿಯ ಕಟ್ಟಳೆ 3
6. ನಾಡಿನಲ್ಲಿ ಹುಟ್ಟಿದ ಮಹಾನ್ ಕವಿ ಪಂಪನಂತೆ 3
8. ನೈವೇದ್ಯದ ನಂತರ ಭಕ್ತರಿಗೆ ಇದು ಸಿಗುತ್ತದೆ 3
10. ಮುಖಕ್ಕೊಂದು ಪಡಿನುಡಿ 3
11. ಬೇಡವೆನ್ನುವುದಕ್ಕೆ ಅಲ್ಪ ಖಾರ 3
13. ಬಿಡುವಿನಲ್ಲೂ ದಶರಥಾತ್ಮಜನ ನೆನಪು 3
14. ಹಾಗೇ ನೋಡಿದರೆ ಇದು ಗುಂಪೇ ಅಲ್ಲ ಆದರೂ ಇದು ನಕಾರಾತ್ಮಕ ಗುಂಪು 3
16. ಕತ್ತಲೆಯ ಭಾರವನ್ನಿಳಿಸಿ ಬೆಳಕಿನ ಭರವಸೆ ಉಂಟುಮಾಡುವ ಮಿತ್ರ 3
17. ಅಂದುಕೊಂಡ ಪರಿಸ್ಥಿತಿ ನೆಟ್ಟಗಾಗದಿದ್ದಲ್ಲಿ ಹೀಗಾಗಿರಬಹುದು 5
18. ಹಾವನ್ನೇ ಹಾಸಿಗೆಯಾಗಿ ಮಾಡಿಕೊಂಡ ಮಹಾವಿಷ್ಣು 5
19. ಕವಿಯ ಮನದ ಪದ್ಯ 3
21. ಸೀಗಷ್ಟೇ ಮಿತವಾದದ್ದು 3
23. ಬಟ್ಟೆಯಂತೆ ಒಮ್ಮೊಮ್ಮೆ ಭಾಷೆಯೂ ಚಿಂದಿ 3

ಎಡದಿಂದ ಬಲಕ್ಕೆ

1. ತ್ರಿವರ್ಣ ಮೇಲೇರುವ ಬಿಡುಗಡೆಯ ಹಬ್ಬ 5
3. ಸೋದರ ಸೋದರಿಯರನ್ನು ಬಂಧಿಸುವ ಸೂತ್ರ 5
5. ಕೃಷ್ಣ ವಿಹಾರಕ್ಕೆ ಹೆಸರಾದ ನದಿಯ ದಂಡೆ 5
7. ಕುರುಕುಲ ಪಿತಾಮಹನ ವಚನ ಪ್ರಮಾಣ 5
9. ಇದು ಕೇವಲ ಆ ಕ್ಷಣಕ್ಕೆ ಸೀಮಿತ 3
10. ಉಸಿರಾಡಲು ಬೇಕಾಗುವ ರಾಸಾಯನಿಕ 5
12. ಸೂರ್ಯನನ್ನು ನೋಡುವ ಭಾಗ್ಯ 5
15. ನಮ್ಮ ದೇಶ ಒಂಭತ್ತನೆ ಸಲ ಹುಟ್ಟಿಬಂದಾಗಲೂ ಹೊಸದೇ 5
18. ಹುಟ್ಟಿದ ಮಗುವಿಗೆ ಹೆಸರನ್ನಿಡುವ ವಿಧಿ 5
20. ಕಿಸೆಯಲ್ಲಿರುವ ಕಾಸನ್ನು ಲೆಕ್ಕ ಹಾಕುವವ 3
21. ಹೊಲಿಗೆ ಹಾಕದ ಹೆಣ್ಣಿನ ಉಡುಪು ಜೊತೆಗೆ ಮೇಲ್ಕುಪ್ಪಸ 5
22. ರಾಜರಾಣಿಯರ ಮಲಗುವ ಕೋಣೆ 5
24. ಅಚಾತುರ್ಯ ನಡೆದು ಹೋದ ಸರಿಯಲ್ಲದ ಕ್ಷಣ 5
25. ಮಾತು ನಡಿಗೆಗಳಲ್ಲಿ ನಯಗಾರಿಕೆ ಸೂಕ್ಷ್ಮತೆ 5

ಪದಬಂಧ ಉತ್ತರ -2854

ಮೇಲಿಂದ ಕೆಳಕ್ಕೆ

1.ಗಿಣಿರಾಮ 2.ನದಿಮೂಲ 3.ಮಣೆಹಾಕು 4.ನೆಲಮನೆ 7.ಕಪಟಧ್ವನಿ 8.ಹವನಹೋಮ 9.ಶಂಕರಾನಂದ 10.ಸ್ಥಾಪನಾದಿನ 14.ಯವನಿಕ 15.ಯತಿವರ್ಯ 17.ಮನೋರಮ 18.ರಿಪುಧ್ವಜ


ಎಡದಿಂದ ಬಲಕ್ಕೆ

1. ಗಿರಿವನ 2.ಮರಿಯಾನೆ 5.ದಿನಾಚರಣೆ 6.ಮನೆಕಲಹ 9.ಶಂಕುಸ್ಥಾಪನೆ 11.ಪಲ್ಲಟ 12.ನಕರಾ 13.ನಾಯಕ 14.ಯಮನಿಯಮ 16.ದಮನಕಾರಿ 19.ವರೋಪಚಾರ 20.ಕಲಾಚಾರ್ಯ 21.ಮನಸಿಜ

ಬಿಸಿಲ ನೆಲದ 'ನವ್ಯ' ದನಿ ರಾಜಶೇಖರ ನೀರಮಾನ್ವಿ

ಕನ್ನಡ ಕಥಾಲೋಕದಲ್ಲಿ ತಮ್ಮದೇ ಛಾಪು ಮೂಡಿಸಿದ ಅಪರೂಪದ ಕಥೆಗಾರ ರಾಜಶೇಖರ ನೀರಮಾನ್ವಿ. ನವ್ಯದ ಪ್ರಭಾವಕ್ಕೆ ಒಳಗಾಗಿ ಬರೆದ ಕಥೆಗಳು ಬಹುಕಾಲ ಕಾಡುವಂತಿವೆ. ಸಾಂಸ್ಕೃತಿಕ ಚಹರೆಯ ಬದಲಾವಣೆಗೆ ಹಂಬಲಿಸುತ್ತಿದ್ದ ನೀರಮಾನ್ವಿ ಎಲ್ಲಾ ಕಾಲಕ್ಕೂ ಸಲ್ಲುವ ಕಥೆಗಾರ.

ದಸ್ತಗೀರಸಾಬ್ ದಿನ್ನಿ



70ರ ದಶಕದ ಕನ್ನಡ ಸಾಹಿತ್ಯದಲ್ಲಿ ಗೋಪಾಲಕೃಷ್ಣ ಅಡಿಗ ನವ್ಯಕ್ಕೆ ನಾಂದಿ ಹಾಡಿದರು. ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಮುಕ್ತಛಂದಸ್ಸಿನ ಪ್ರಯೋಗ ಮಾಡಿದರು. ಸ್ವಾತಂತ್ರ್ಯ ನಂತರದ ಭ್ರಮನಿರಸನ ಮನಸಿನ ಒಳತೋಟಿ, ಹೊಯ್ದಾಟಗಳನ್ನು ತೆರೆದಿಟ್ಟರು. ಅದೇ ಕಾಲಘಟ್ಟದಲ್ಲಿ ಶಾಂತಿನಾಥ ದೇಸಾಯಿ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶರ ಹಾಗೆಯೇ ರಾಜಶೇಖರ ನೀರಮಾನ್ವಿ ಅವರು ಸಣ್ಣಕಥೆಯಲ್ಲಿ ನವ್ಯದ ದನಿಯನ್ನು ತಂದು ಕಥನ ಪ್ರಪಂಚವನ್ನು ವಿಸ್ತರಿಸಿದರು. ಹೊಸ ಸಂವೇದನೆಯ ಕಥೆಗಳಿಂದ ಶ್ರೇಷ್ಠ ಕಥೆಗಾರರ ಸಾಲಿಗೆ ಸೇರಿದರು. ನವ್ಯದ ವಿಕ್ಷಿಪ್ತತೆ, ಲೈಂಗಿಕ ಅರಾಜಕತೆ, ಸ್ತ್ರೀ ಸಂಕಟ, ಸಣ್ಣತನ, ಕ್ರೌರ್ಯವನ್ನು ಕಣ್ಣಿಗೆ ಕಟ್ಟುವ ಹಾಗೆ ರೂಪಕನಿಷ್ಠವಾಗಿ ಕಥೆ ಹೆಣೆಯುವ ಕಲೆಗಾರಿಕೆ ನೀರಮಾನ್ವಿಯವರಿಗೆ ಸಿದ್ಧಿಸಿತ್ತು .1978 ರಲ್ಲಿ ಪ್ರಕಟವಾದ 'ಹಂಗಿನರಮನೆಯ ಹೊರಗೆ' ಸಂಕಲನ ಸಾಹಿತ್ಯಲೋಕದಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿತ್ತು. ಗ್ರಾಮ್ಯ ಜಗತ್ತಿನ ಭಾಷೆಯ ಸೊಗಡು, ವ್ಯಕ್ತಿಪ್ರಜ್ಞೆ ಮತ್ತು ಪ್ರಜ್ಞಾ ಪ್ರವಾಹ ತಂತ್ರ, ಸಾತ್ವಿಕ ವ್ಯಂಗ್ಯ, ವಿಶಿಷ್ಟ ಶೈಲಿ ಮತ್ತು ಬದುಕಿನ ಪರಿಧಿಯನ್ನು ದುಡಿಸಿಕೊಂಡ ಬಗೆ ಅನನ್ಯ.

1990ರಲ್ಲಿ ಪ್ರಕಟವಾದ 'ಕರ್ಪೂರದ ಕಾಯದಲ್ಲಿ' ಕಥೆಯಲ್ಲಿ ವ್ಯವಸ್ಥೆಯ ವೈರುಧ್ಯ, ದಟ್ಟವಾದ ತಿರಸ್ಕಾರ, ಸವಾಲುಗಳ ಸಾಂದ್ರತೆಯಿದೆ. ರಾಜಕೀಯ ಸಂಘರ್ಷ, ಅಮಾನವೀಯವೆನಿಸುವ ವೈದೃಶ್ಯಗಳಿವೆ. ಕಥೆಗಾರ ಆಪ್ತತೆ, ತೀವ್ರತೆ ಮತ್ತು ಅನುಭವನಿಷ್ಠರಾಗಿ ಬರೆದಿರುವುದರಿಂದ ಅಲ್ಲಿನ ವೈಯಕ್ತಿಕ ಸಂಬಂಧಗಳ ಚಿತ್ರಣ ಸಾಮಾಜಿಕ ಆಯಾಮವನ್ನು ಪಡೆದುಕೊಂಡಿದೆ. ಕಥೆಗಳ ಭಿತ್ತಿಯಲ್ಲಿ ಆಧುನಿಕ ಬದುಕಿನ ತಲ್ಲಣ, ಮನುಷ್ಯನ ಅಸ್ತಿತ್ವ, ಸಾಮಾಜಿಕ ಸ್ಥಿತ್ಯಂತರ, ಬಿರುಕು ಬಿಟ್ಟ ಬದುಕು, ಜಾಗತೀಕರಣ ಒಡ್ಡಿದ ಸವಾಲು, ಹತಾಶೆ, ತಣ್ಣನೆಯ ಪ್ರತಿರೋಧದ ವಿನ್ಯಾಸಗಳಿವೆ. ಭೂತ, ವರ್ತಮಾನ ಸಂಕೀರ್ಣತೆಗೆ ಎಡೆ ಮಾಡಿಕೊಡದಂತೆ ಕಥೆ ಕಟ್ಟಿದ ರೀತಿ ಚೇತೋಹಾರಿಯಾಗಿದೆ.

ಅವರ ಮೊದಲ ಕಥೆ 'ವೃತ್ತ' ಪ್ರಕಟವಾದದ್ದು 'ಸಂಕ್ರಮಣ' ಪತ್ರಿಕೆಯಲ್ಲಿ 'ಭೂತ' 'ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ'ಯಲ್ಲಿ ತೀರ್ಪುಗಾರರ ಮೆಚ್ಚುಗೆ ಗಳಿಸಿತ್ತು. ಅಡಿಗರ 'ಸಾಕ್ಷಿ'ಯಲ್ಲಿ 'ಹಂಗಿನರಮನೆಯ ಹೊರಗೆ' ಕಥೆಯನ್ನು ಓದಿ ಮೆಚ್ಚಿಕೊಂಡ ಗೆಳೆಯ ಸಿ.ಚನ್ನಬಸವಣ್ಣ ಇನ್ನಷ್ಟು ಕಥೆಗಳನ್ನು ಬರೆಯಲು ಒತ್ತಾಯಿಸಿದರು. ಐದಾರು ತಿಂಗಳ ನಂತರ ಇಬ್ಬರು ಚಹಾ ಸೇವಿಸುತ್ತ ಮಾತಿಗಿಳಿದಾಗ, 'ಸಂಕಲನಕ್ಕಾಗುವಷ್ಟು ಕಥೆಗಳನ್ನು ಬರೆದಿರಾ?' ಎಂದು ಕೇಳಿದರು. 'ನಿನ್ನ ಮಾತು ಕೇಳಿ ಕಥೆಗಳನ್ನು ಬರೆದೀನಿ. ಈಗ ಯಾವನು ಪುಸ್ತಕ ಪ್ರಿಂಟ್ ಮಾಡ್ತಾನ?' ನೀರಮಾನ್ವಿಯ ಈ ಮಾತಿಗೆ 'ಅಣ್ಣಾ ನಾನು ಪ್ರಕಟಿಸ್ತೀನಿ' ಎಂದು ಚನ್ನಬಸವಣ್ಣ ನಗುತ್ತ ಮುಂದೆ ಬಂದರು. ಆಗ ಹುಟ್ಟಿಕೊಂಡಿದ್ದೇ ಲೋಹಿಯಾ ಪ್ರಕಾಶನ. ಹೊಗೆಯಾಡುವ ಚಹಾದ ಬಟ್ಟಲಿನೊಂಗಿನ ಮಾತುಕತೆಯ ಗಳಿಗೆ ಒಂದು ಪ್ರಮುಖ ಪ್ರಕಾಶನದ ಹುಟ್ಟಿಗೆ ಕಾರಣವಾಯಿತು.

ರಾಯಚೂರಿನ ಬಿಸಿಲನೆಲದ ಜಮೀನ್ದಾರಿಕೆಯ ಅಟ್ಟಹಾಸ, ತಳ ಸಮುದಾಯಗಳ ಕಿತ್ತು ತಿನ್ನುವ ಬಡತನ, ನಿಜಾಂಶಾಹಿ ಆಡಳಿತ ಉಂಟು ಮಾಡಿದ ತಲ್ಲಣ, ಸಾಮಾಜಿಕ ಕೇಡು, ಮಾನವೀಯತೆಯ ಶೋಧ ಮತ್ತು ಅದರಾಚೆಗೆ ಬರವಣಿಗೆಯ ಬೇರುಗಳು ನಿರ್ವಚನೆಗೊಂಡ ರೀತಿ ವಿಶಿಷ್ಟವಾಗಿದೆ. ಲೇಖಕರು ನಿರ್ಲಿಪ್ತರಾಗಿದ್ದುಕೊಂಡೇ ಶೋಷಣೆಯ ಮುಖಗಳನ್ನು ಬಿಡಿಸಿದ್ದಾರೆ. ಪ್ರಧಾನವಾಗಿ ಅಲ್ಲಿನ ಅಭಿವ್ಯಕ್ತಿಯಲ್ಲಿ ಲೋಹಿಯಾ ಸಮಾಜವಾದದ ಪ್ರಭಾವವಿದೆ. ತಾತ್ವಿಕ, ಪ್ರಗತಿಪರ ಧೋರಣೆಯ ಸೂಕ್ಷ್ಮ ಎಳೆಗಳಿವೆ. ಸಾಮಾಜಿಕ ಸಂಬಂಧಗಳು ವಿಘಟನೆಯಾಗದಂತೆ ಎಚ್ಚರಿಕೆಯ ಪ್ರಜ್ಞೆಯಿಂದ ಬರೆಯುತ್ತಿದ್ದ, ಸಾಂಸ್ಕೃತಿಕ ಚಹರೆಯ ಬದಲಾವಣೆಗೆ ಹಂಬಲಿಸುತ್ತಿದ್ದ ನೀರಮಾನ್ವಿ ಎಲ್ಲ ಕಾಲಕ್ಕೂ ಸಲ್ಲುವ ಕಥೆಗಾರರಾಗಿದ್ದಾರೆ. ಹೊಸ ತಲೆಮಾರಿನ ಬರೆಹಗಾರರು ಅವರ ಕಥೆಗಳನ್ನು ಗಂಭೀರವಾಗಿ ಗಮನಿಸಬೇಕು.

ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್, ಜಿ.ಎಚ್.ನಾಯಕರಿಗೆ 'ಕನ್ನಡ ಸಣ್ಣಕಥೆಗಳು' ಸಂಪಾದಿಸುವ ಜವಾಬ್ದಾರಿ ನೀಡಿತ್ತು. ಅದರಲ್ಲಿ ಸೇರಿದ್ದ ರಾಜಶೇಖರ ನೀರಮಾನ್ವಿಯವರ 'ಹಂಗಿನರಮನೆಯ ಹೊರಗೆ' ಕಥೆಯನ್ನು ಸಂಕಲನದಿಂದ ಕೈ ಬಿಡಬೇಕೆಂದು ಗೋಪಾಲಕೃಷ್ಣ ಅಡಿಗರು ನೆಹರೂ ಕುಟುಂಬದ ಆಪ್ತ ವಲಯಕ್ಕೆ ಸೇರಿದ ಕನ್ನಡಿಗ ಎಚ್.ವೈ.ಶಾರದಾಪ್ರಸಾದರಿಂದ ನಾಯಕರಿಗೆ ದೂರವಾಣಿ ಕರೆ ಮಾಡಿಸಿದರು. ಆಗ ಜಿ.ಎಚ್. ನಾಯಕರು 'ನನ್ನ ಹೊಣೆಗಾರಿಕೆಯ ವಿಚಾರದಲ್ಲಿ ಯಾರೂ ತಲೆ ಹಾಕಲು ಅವಕಾಶ ಇಲ್ಲ' ಎಂದರು. ಅಡಿಗರು 'ಸಾಕ್ಷಿ'ಯಲ್ಲಿ ತಾವೇ ಪ್ರಕಟಿಸಿದ್ದ ಆ ಕಥೆಯನ್ನು ಪ್ರಕಟಸಬಾರದೆಂದು ಯಾಕೆ ಹೇಳಿದರು? ಇದು ಇಂದಿಗೂ ಸೋಜಿಗ. ಈ ಪ್ರಸಂಗವನ್ನು ರಾಜಶೇಖರ ನೀರಮಾನ್ವಿಯವರು ತಮ್ಮ ಸಮಗ್ರ ಕಥಾ ಸಂಕಲನದ ಲೇಖಕರ ನುಡಿಯಲ್ಲಿ ದಾಖಲಿಸಿದ್ದಾರೆ.

ಖ್ಯಾತ ನಿರ್ದೇಶಕ ಬಸು ಚಟರ್ಜಿ 2007 ರಲ್ಲಿ ಭಾರತ ದೇಶದ 27 ಭಾಷೆಗಳ ಕಥೆಗಳನ್ನು ಹಿಂದಿ ಭಾಷೆಯಲ್ಲಿ ದೆಹಲಿ ದೂರದರ್ಶನಕ್ಕೆ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡಿದ್ದರು. ಕನ್ನಡ ಭಾಷೆಯ ಕಥೆಯನ್ನು ಸೂಚಿಸಲು ನಾಗತಿಹಳ್ಳಿ ಚಂದ್ರಶೇಖರರನ್ನು ಸಂಪರ್ಕಿಸಿದರು. ಆಗ 'ಹಂಗಿನರಮನೆಯ ಹೊರಗೆ' ಒಪ್ಪಿಗೆಯಾಯಿತು. ಅದು 'ಮೆಹರಬಾನೋಂಕೆ ಘರ್ ಕೆ ಬಾಹರ್' ಎನ್ನುವ ಹೆಸರಿನಲ್ಲಿ ಪ್ರಸಾರವಾಗಿ ಜನ ಮೆಚ್ಚುಗೆ ಗಳಿಸಿತು.

ನೀರಮಾನ್ವಿಯವರ ಕಥೆಗಳು ಭಾರತೀಯ ಭಾಷೆಗಳಿಗೆ ಅನುವಾದಗೊಂಡು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣದಲ್ಲಿ ಚರ್ಚೆಗೆ ಒಳಗಾಗಿವೆ. ಇವುಗಳನ್ನು ಹೊರತುಪಡಿಸಿ ನೋಡಿದರೆ ನಿರೀಕ್ಷಿಸಿದ ಮಟ್ಟದಲ್ಲಿ ಸಂವಾದ, ವಿಮರ್ಶೆಗಳಾಗಿಲ್ಲ. ಅದಕ್ಕೆ ವಿಮರ್ಶಕರ ಉದಾಸೀನತೆ, ಪ್ರಾದೇಶಿಕ ಅಸಮಾನತೆ, ಮಾಧ್ಯಮಗಳ ನಿರ್ಲಕ್ಷ್ಯ ಧೋರಣೆ ಕೂಡ ಕಾರಣವಿರಬಹುದು.

30 ವರ್ಷಗಳ ಹಿಂದೆ ನಡೆದ ರಸ್ತೆ ಅಪಘಾತದಲ್ಲಿ ನೀರಮಾನ್ವಿಯವರ ತಲೆಗೆ ತೀವ್ರವಾದ ಪೆಟ್ಟಾಗಿತ್ತು. ವರ್ಷವಿಡೀ ನೆನಪಿನಶಕ್ತಿ ಕಳೆದುಕೊಂಡು ಸಾವು ಬದುಕಿನ ನಡುವೆ ಹೋರಾಡಿದರು. ನಿಧಾನಕ್ಕೆ ನೆನಪಿನಶಕ್ತಿ ಮರುಕಳಿಸಿತು. ಇದು ಬರೆವಣಿಗೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಲು ಆಗದಿರುವುದಕ್ಕೆ ಬಲವಾದ ಕಾರಣವಿರಬಹುದು. ಗೌಡ ಮನೆತನದಲ್ಲಿ ಜನಿಸಿದ್ದರೂ ಗೌಡಿಕೆಯ ಅಹಮಿಕೆ ಎಳ್ಳಷ್ಟೂ ಇರಲಿಲ್ಲ. ಸರಳ ಮತ್ತು ಸಹಜವಾಗಿ ಬದುಕಿದರು. ಅದಮ್ಯ ಜೀವನ ಪ್ರೀತಿಯ ಅವರಲ್ಲಿ ಸದಾ ಹಾಸ್ಯ ಪ್ರಜ್ಞೆ ಮನೆ ಮಾಡಿತ್ತು. ಅದು ತಂದೆ ವೀರನಗೌಡ ನೀರಮಾನ್ವಿಯಿಂದ ಬಂದ ಬಳುವಳಿ. ಪ್ರಶಸ್ತಿ ಪುರಸ್ಕಾರಗಳಿಂದ ಬಹು ದೂರವಿದ್ದ ಅವರಿಗೆ ಪ್ರಶಸ್ತಿಗಳೇ ಅರಸಿ ಬಂದಿದ್ದವು. ಅವುಗಳಲ್ಲಿ ರಾಜ್ಯೋತ್ಸವ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳು ಪ್ರಮುಖವಾದವು. ಇವರು ಆಗಸ್ಟ್ 8ರಂದು ನಿಧನರಾದರು.

ಯುದ್ಧಗಳ ಹೆಜ್ಜೆ ಗುರುತಿನ ಮ್ಯೂಸಿಯಂ

10ನೇ ಪುಟದಿಂದ...

ಆ ಯುದ್ಧದ ಸಮಯದಲ್ಲಿ ಪೂರ್ವ ಮತ್ತು ಪಶ್ಚಿಮ ವಲಯಗಳಲ್ಲಿ ಭಾರತೀಯ ಸೇನೆಯ ಕಾರ್ಯಾಚರಣೆಗಳನ್ನು ಸಹ ಪ್ರದರ್ಶಿಸಲಾಗಿದೆ. ಇಲ್ಲಿ ಇರಿಸಲಾದ 106ಮಿ.ಮಿ ಆರ್.ಸಿ.ಎಲ್ ಗನ್ ಲೋಂಗೇವಾಲಾ ಕದನದ ಸಮಯದಲ್ಲಿ ಸೇನೆಯ ರಕ್ಷಾಕವಚದ ರೀತಿ ಕಾರ್ಯನಿರ್ವಹಿಸಿ, ಆಕ್ರಮಣವನ್ನು ತಡೆಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು.

ಇಂಡಿಯನ್ ಆರ್ಮಿ ಹಾಲ್

ಭಾರತೀಯ ಸೇನಾ ಸಭಾಂಗಣವು 1947-48 ರ ಭಾರತ-ಪಾಕಿಸ್ತಾನ ಯುದ್ಧ, 1962 ರ ಚೀನಾ - ಭಾರತ ಯುದ್ಧ, 1965ರ ಇಂಡೋ-ಪಾಕಿಸ್ತಾನ ಯುದ್ಧ ಮತ್ತು 1999 ರ ಭಾರತ-ಪಾಕಿಸ್ತಾನ ಯುದ್ಧಗಳ (ಕಾರ್ಗಿಲ್ ಸಂಘರ್ಷ) ಕುರಿತದ್ದಾಗಿದೆ. ಈ ಸಭಾಂಗಣವು ಭಾರತೀಯ ಸೇನೆಯು ವಿವಿಧ ಯುದ್ಧಗಳಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು, ಭಾರತೀಯ ವಾಯುಪಡೆಯ ಹಂಟರ್ ಏರ್‌ಕ್ರಾಫ್ಟ್ ಮತ್ತು ಇತರೆ ಉಪಕರಣಗಳನ್ನು ಪ್ರದರ್ಶಿಸುತ್ತದೆ.



ಮ್ಯೂಸಿಯಂನ ಹೊರಭಾಗದಲ್ಲಿರುವ ಯುದ್ಧಗಳಲ್ಲಿ ಬಳಸುತ್ತಿದ್ದ ಶಸ್ತ್ರಸಜ್ಜಿತ ಟ್ಯಾಂಕರ್

ಕಾರ್ಗಿಲ್ ಸ್ಮಾರಕ

ಆಪರೇಷನ್ ವಿಜಯ್ ನಡೆದ ಕಾರ್ಗಿಲ್ ಬೆಟ್ಟಗಳ ಪ್ರತಿಕೃತಿಯನ್ನು ಇಲ್ಲಿ ವಿಶೇಷವಾಗಿ ನಿರ್ಮಿಸಲಾಗಿದೆ. ಆ ದುರ್ಗಮ ಪ್ರದೇಶದಲ್ಲಿ ಕಾದಾಡಿ, ಶತ್ರುಗಳನ್ನು ಹಿಮ್ಮೆಟ್ಟಿಸಿದ ಸೈನಿಕರು ಭಾರತದ ಬಾವುಟವನ್ನು ಹಾರಿಸಿದ ರೀತಿಯನ್ನು ಕಂಡು ಮೈ ನವಿರೇಳುತ್ತದೆ. ಅದರ ಮುಂದೆ ನಿಂತು ಫೋಟೊ ತೆಗೆದುಕೊಳ್ಳುವುದರಲ್ಲಿ ನಿರತರಾದ ಪ್ರವಾಸಿಗರ ಮುಖ ಚಹರೆಗಳನ್ನು ನೋಡುವುದೇ ಒಂದು ಸಂಭ್ರಮ.

ಕಾರ್ಗಿಲ್ ಯುದ್ಧ

ಕಾಶ್ಮೀರದ ಕಾರ್ಗಿಲ್ ಜಿಲ್ಲೆ ಮತ್ತು ನಿಯಂತ್ರಣರೇಖೆಯಿರುವ ಪ್ರದೇಶಗಳಲ್ಲಿ ಮೇ 3,1999 ರಿಂದ ಜುಲೈ 26, 1999 ರ ನಡುವೆ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಸಶಸ್ತ್ರ ಯುದ್ಧವನ್ನು ಕಾರ್ಗಿಲ್ ಸಂಘರ್ಷ ಎಂದು ಹೇಳಲಾಗುತ್ತದೆ. ಆಪರೇಷನ್ ವಿಜಯ್ ಎಂದೂ ಸಹ ಕರೆಯಲಾಗುತ್ತದೆ. ಈ ಯುದ್ಧದ ನೆನಪಿನಲ್ಲಿ ವಿಜಯೋತ್ಸವದ ದಿನವಾದ ಜುಲೈ 26 ಅನ್ನು 'ವಿಜಯ್ ದಿವಸ್' ಎಂದು ಆಚರಿಸಲಾಗುತ್ತದೆ. ಕಾರ್ಗಿಲ್ ಯುದ್ಧಕ್ಕೆ ಈ ವರ್ಷ ರಜತ ಮಹೋತ್ಸವದ ಸಂಭ್ರಮ.



ಮ್ಯೂಸಿಯಂನ ಇಂಡಿಯನ್ ಆರ್ಮಿ ಹಾಲ್‌ನ ಒಂದು ನೋಟ

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪಕ್ಷಿ ಗಾಂಧಿ

ಕುವೆಂಪು ಅವರು ತಾ.10.4.1942ರಂದು 'ಎರಡನೆಯ ಮಹಾಯುದ್ಧದ ಮಧ್ಯಘಟ್ಟದಲ್ಲಿ ಜಪಾನೂ ಯುದ್ಧಕ್ಕಿಳಿದು. ಯುದ್ಧದ ಬಿಸಿ ಭಾರತಕ್ಕೂ ತಟ್ಟಿದ ಸಮಯದಲ್ಲಿ' ಜಗನ್ಮಾತೆಯನ್ನು ಕುರಿತು ರಚಿಸಿದ ಕವನ 'ಏನೆಂದು ಪ್ರಾರ್ಥಿಸಲಿ?'.

ಕವಿಯು ಕಲೆಯ ಸೃಷ್ಟಿಯ ನಾಶವನ್ನು ಸಹಿಸುವುದಿಲ್ಲ. ಅವನಿಗೆ ಜಗತ್ತಿನ ಯುದ್ಧಕ್ಕಿಂತ ಹಿರಿದಾದುದು ಕವಿಯನ್ನು ನಿರ್ಮಾಣ ಮಾಡುತ್ತಿರುವ ರಾಮಾಯಣ; ಗಿಡದಲ್ಲಿ ಹೊಮ್ಮಿ ಬರುವ ಕೆಂಪು ಹೂ, 'ಶಾಂತಿ ಸುಗ್ಗಿಗೆ ಸುವ್ವಿ ಸುವ್ವಿ!' ಎಂದುಹಾಡುವ ಟುವ್ವಿ ಹಕ್ಕಿಯ ಆಲಾಪನೆ.

ಕುವೆಂಪು ಅವರು ಆ ಪಕ್ಷಿ ಸದಾ ಶಾಂತಿಯ ಮಂತ್ರವನ್ನು ಗಾಂಧಿಯಂತೆ ಸಾರುತ್ತಿದೆ ಎಂಬ ಆದರ್ಶ ಸೌಂದರ್ಯದಲ್ಲಿ 'ಪಕ್ಷಿಗಾಂಧಿ'ರೂಪಕದಲ್ಲಿ ಚಿತ್ರಿಸಿದ್ದಾರೆ. ಗಾಂಧೀಜಿಯು ತಮ್ಮ ನಡೆ ನುಡಿಯಿಂದ ಶಾಂತಿಯ ಅನುಭಾವಿಗಳಾಗಿ ಶಾಂತಿಗೀತ ಹಾಡುತ್ತಿರುತ್ತಾರೆ. ಎಂಬ ಅರಿವಿನ ಕವಿ ಭಾವ 'ಪಕ್ಷಿಗಾಂಧಿ' ರೂಪಕದಲ್ಲಿ ಪಡಿಮೂಡಿದೆ. ಶಾಂತಿಯ ಬೆರಗು, ಸೌಂದರ್ಯ, ಮೌನ, ಆಲಾಪನೆ ಗರಿಗಟ್ಟಿ ನಲಿದು ಹಾರಾಡಿದೆ!


ಈ ಜಗದ್‌ಯುದ್ಧಕಿಂ ಪಿರಿಯ ವೈಸಲೆ ಕವಿಯ
ರಚಿಸುತಿಹ ರಾಮಾಯಣಂ ಮೇಣ್ ಕೆಂಪುವೂ ಗಿಡದಿ,
ಪಕ್ಷಿಗಾಂಧಿಯ ತೆರದಿ, 'ಶಾಂತಿ ಸುಗ್ಗಿಗೆ ಸುವ್ವಿ, ಸುವ್ವಿ!' ಎನುವೀ ಟುವ್ವಿ ಹಕ್ಕಿಯಾಲಾಪನಂ?'
(ಏನೆಂದು ಪ್ರಾರ್ಥಿಸಲಿ - ಇಕ್ಷುಗಂಗೋತ್ರಿ)

ಮಲೆಪೊಡವಿ

(ನಾ). ಮಲೆನಾಡು
[ಮಲೆ + ಪೊಡವಿ(> ಪೃಥುವಿ)]

ಭರದ್ವಾಜ ಮುನಿಗಳು ರಾಮಸೀತೆ ಲಕ್ಷ್ಮಣರಿಗೆ ಚಿತ್ರಕೂಟಕ್ಕೆ ಹೋಗಿ ನೆಲಸಲು ತಿಳಿಸುವರು. ಅವರ ಆರು ಕಣ್ಣುಗಳು ಒಂದಾಗಿ, ಅಗೋಚರವಾದಂತಹ ಆತ್ಮಾನಂದ ರಸವಾಗಿ ಚಿತ್ರಕೂಟದ ದೃಶ್ಯ ದೇವೇಂದ್ರನನ್ನು ಮೈಮರೆತು ಕಂಡರು; ಮೈಯೆಲ್ಲ ಕಣ್ಣಾಗಿ ನೋಡಿದರು. ಆ ದಿಟ್ಟ ಮಲೆಕಾಡು-ವಿಸ್ತಾರವಾಗಿ ಹರಡಿದ ಹಸುರು ರೋಮ ಸಮೂಹದ ಭೀಷಣ ಚರ್ಮ ಹೊದ್ದಂತಿದ್ದ ಅಪೂರ್ವ ಭೂ ಬೃಹತ್ ಪ್ರಾಣಿಯಂತಿತ್ತು. ಎಂದು ಕವಿ ಬಣ್ಣಿಸಿದ್ದಾರೆ. ಆ ಮಲೆನಾಡನ್ನು 'ಮಲೆಪೊಡವಿ' ಎಂದು ಕರೆದಿದ್ದಾರೆ.

ಸಾಂದ್ರರೋಮರಾಜಿಯರುಂದ್ರ
ಚರ್ಮದೊಂದತಿಪೂರ್ವ ಭೂ
ಬೃಹಜ್ಜಂತುವೆನೆ
ಹಬ್ಬಿ ಹಸಿರಿಸಿತುಬ್ಬಿತಡವಿ ದಟ್ಟಯ್ಸಿದಾ
ದಿಟ್ಟ ಮಲೆಪೊಡವಿ




ಮೊದಲ ಓದು

ದೊಡ್ಡ ಸಾಮಗರ ಯಕ್ಷ ಜೀವನ ದರ್ಶನ

ಅಪ್ರತಿಮ ವಾಕ್ಚಾತುರ್ಯದಿಂದ, ಸುಲಲಿತ ತರ್ಕ ಪ್ರತಿಭೆ ಹೊಂದಿದ್ದ ದಿ.ಮಲ್ಪೆ ಶಂಕರನಾರಾಯಣ ಸಾಮಗರು 'ದೊಡ್ಡ ಸಾಮಗರು' ಎಂದೇ ಜನಜನಿತರು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸ ಅನುಭವಿಸಿದವರು, ದಾರ್ಶನಿಕರು, ಗಾಂಧಿವಾದಿ ಮತ್ತು ಹರಿಕಥಾದಾಸರು. ಯಕ್ಷಗಾನದಲ್ಲೂ ತಾಳಮದ್ದಳೆಯಲ್ಲೂ ಪ್ರತ್ಯುತ್ಪನ್ನಮತಿತ್ವ ಮತ್ತು ಪಾಂಡಿತ್ಯದಿಂದ ಬಹುಬೇಡಿಕೆಯ ಕಲಾವಿದರಾಗಿದ್ದ ಅವರ ಪ್ರತಿಭೆಯನ್ನು ನಾಲ್ಕೂ ದಿಕ್ಕಿನಿಂದ ಪರಿಚಯಿಸುವ ಗ್ರಂಥವೇ 'ಸಾಮಗರ ನಾಲ್ಮೊಗ'. ಈ ಜೀವನ ದರ್ಶನದ ಗ್ರಂಥವನ್ನು ಸಂಪಾದಿಸಿ ನಿರೂಪಿಸಿದವರು ಕಲಾವಿದ ಹಾಗೂ ಪ್ರಸಂಗಕರ್ತರೂ ಆಗಿರುವ ದಿನೇಶ್ ಉಪ್ಪೂರರು.

ದೊಡ್ಡ ಸಾಮಗರ ಜೀವಿತಾವಧಿಯಲ್ಲಿ (1911-1999) ಈಗಿನಂತೆ ಸಾಮಾಜಿಕ ಮಾಧ್ಯಮಗಳೇನೂ ಇಲ್ಲದ ಕಾರಣದಿಂದಾಗಿ, ಅವರ ಜೀವನ ಚರಿತ್ರೆಗೆ ಚಾರಿತ್ರಿಕ ದಾಖಲೆಗಳಿಲ್ಲ. ಆದರೂ, ಸಾಮಗರ ಒಡನಾಡಿಗಳು, ಸ್ವಂತ ಅನುಭವಗಳು, ಪುತ್ರರು, ಸಹೋದರರು, ಅಭಿಮಾನಿಗಳು, ಸಹ ಕಲಾವಿದರ ಕಡೆಯಿಂದ ಅವರ ಬಗೆಗೆ ಕೇಳಿ ತಿಳಿದುಕೊಂಡು, ಜೊತೆಗೆ ತಮ್ಮ ಕಲ್ಪನಾಶಕ್ತಿಯೊಂದಿಗೆ ಆ ಘಟನೆಗಳ ಮರುಸೃಷ್ಟಿಯೊಂದಿಗೆ ದಿನೇಶ ಉಪ್ಪೂರರು ಈ ಅಮೂಲ್ಯ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಯಕ್ಷಗಾನದ ಮಟ್ಟಿಗೆ ಇದೊಂದು ಸಂಗ್ರಹಯೋಗ್ಯ ಕೈಪಿಡಿಯಾಗಬಲ್ಲುದು. ನಿರೂಪಣಾ ಶೈಲಿಯು ಅನನ್ಯವಾದುದರಿಂದ ಇದನ್ನು ಜೀವನ ಚರಿತ್ರೆ ಎನ್ನುವುದಕ್ಕಿಂತಲೂ ಆ ಕಾಲದ ಏರಿಳಿತಗಳನ್ನು, ಯಕ್ಷಗಾನದ ಇತಿಹಾಸವನ್ನಷ್ಟೇ ಅಲ್ಲದೆ, ಸಾಮಾಜಿಕ ಸ್ಥಿತ್ಯಂತರಗಳ ಮೇಲೆ ಬೆಳಕುಚೆಲ್ಲುವ ಕೃತಿ ಎನ್ನಬಹುದು.



ಪು: 258 ₹350

ದೊಡ್ಡ ಸಾಮಗರ ನಾಲ್ಮೊಗ
ಲೇ: ದಿನೇಶ ಉಪ್ಪೂರ
ಪ್ರ: ಮಣಿಪಾಲ ಯೂನಿವರ್ಸಲ್ ಪ್ರೆಸ್
ಸಂ: 0820-2922954

ಕರಾಳ ಜಾತಿ ಪದ್ಧತಿಯ ಅನಾವರಣ

ಆಲೂರು ದೊಡ್ಡನಿಂಗಪ್ಪನವರ ಎರಡನೇ ಕಾದಂಬರಿ 'ಚಂದ್ರನ ಚೂರು', ಅವರ ಮೊದಲ ಕಾದಂಬರಿಯಾದ 'ಗಿಣಿ ಬಿಸ್ಕತ್ತು' ರೀತಿಯಲ್ಲೇ, ಗ್ರಾಮೀಣ ಬದುಕನ್ನು ಜಾತೀಯತೆಯ ನೆಲೆಯಲ್ಲಿ ತಣ್ಣಗೆ ಅನಾವರಣಗೊಳಿಸುವ ವಿಶಿಷ್ಟ ಪ್ರಯತ್ನ.


ಕಥನಕಲೆಯಲ್ಲಿ ಲೇಖಕನಿಗೆ ದೊಡ್ಡ ಸವಾಲುಗಳನ್ನು ಒಡ್ಡುವ ಪ್ರಕಾರ ಕಾದಂಬರಿ. ಪಾತ್ರ, ಸನ್ನಿವೇಶಗಳ ಪರಿಧಿಯೊಳಗೇ ನಿಂತು, ಕತೆಯೊಂದನ್ನು ಅವುಗಳಾಚೆಗೆ ಬಿಡಿಸಿ ಇಡಲು ನಿರೂಪಕನಿಗೆ ಅಪಾರ ತಾಳ್ಮೆ, ಪರಿಶ್ರಮ ಮತ್ತು ಜೀವನದ್ರವ್ಯ ಅತ್ಯಗತ್ಯ. ನಿಂಗಪ್ಪ ಅತ್ತಕಡೆಗೆ ಗಟ್ಟಿಹೆಜ್ಜೆ ಇಟ್ಟಿದ್ದಾರೆ.

ಜಾತೀಯತೆಯಿಂದ ಕಟು ಅವಮಾನಗಳನ್ನು ಖುದ್ದು ಎದುರಿಸಿದ್ದರಿಂದಲೇ, ಈ ಕಾದಂಬರಿ ಬರೆಯಲು ಸಾಧ್ಯವಾಯಿತು ಎಂಬ ಮಾತುಗಳನ್ನು ನಿಂಗಪ್ಪ, 'ನಾನಿಲ್ಲದೇ ಇರುವ ವಸ್ತು' ಎಂಬ ಅವರ ನುಡಿಗಳಲ್ಲಿ ಆಡಿ ತೋರಿದ್ದಾರೆ. ಅದು, ಕಾದಂಬರಿಯ ಓದಿಗೆ ಉತ್ತಮ ಪ್ರವೇಶಿಕೆಯೂ ಆಗಿದೆ. ತ್ಯಾಗ, ಆತನ ತಾಯಿ ದ್ಯಾವಕ್ಕ, ಮಲ್ಲ, ಸಿದ್ದ, ಚಂದ್ರ ಸೇರಿ ಐದಾರು ಪ್ರಮುಖ ಪಾತ್ರಗಳನ್ನೇ ಬಳಸಿ, ಎರಡನೇ ಕಾದಂಬರಿಯಲ್ಲಿ ಹೈಜಂಪ್ ಮಾಡಿದ್ದಾರೆ.

ದೊಡ್ಡವರೊಂದಿಗೆ ಮಕ್ಕಳು, ಪ್ರಾಣಿ, ಪಕ್ಷಿಗಳೂ ಇಲ್ಲಿ ಪಾತ್ರಗಳಾಗಿ ಜೀವಿಸಿರುವುದು ವಿಶೇಷ. ಒಟ್ಟಾರೆ ಪ್ರಕೃತಿ ಮತ್ತು ಗ್ರಾಮೀಣ ಪರಿಸರ ಎರಡೂ ಜಾತೀಯತೆಯ ವಿಷಮತೆಯನ್ನು ಬಿಚ್ಚಿಡುವುದಕ್ಕಾಗಿಯೇ ಬಳಕೆಯಾಗಿರುವುದು ನಿಚ್ಚಳವಾಗಿ ತೋರುತ್ತದೆ.

'ಕುಲೆಂಟು ಜಾತಿಗಳಿರುವ ಈ ಊರಲ್ಲಿ ಸುಮಾರು ನೂರೈವತ್ತು ಮನೆಗಳಿವೆ. ಮುಂದೆ ಮುಂದೆ ಮಕ್ಕಳು ಮರಿ ಬೆಳೆದಂತೆಲ್ಲ ಮನೆಗಳೂ ಹೆಚ್ಚಿ ಈಗ ಊರು ದೊಡ್ಡದಾಗಿ ಊರ ಹೊರಗಿದ್ದ ಕಾಲೊನಿ ಊರ ಮಧ್ಯ ಸೇರಿಕೊಂಡು ಹೊರ ಊರ ಜನರ ಕಣ್ಣಲ್ಲಿ ಹೊಲೆ ಮಾದಿಗರನ್ನ ಊರ ಮಧ್ಯ ಇಟ್ಟುಕೊಂಡಿರುವ ಆದರ್ಶ ಊರಾಗಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ'

–ಹೀಗೆ ವ್ಯಂಗ್ಯದಿಂದ ಶುರುವಾಗುವ ಕಾದಂಬರಿಯು, ಜಾತಿ ಪದ್ಧತಿಗೆ ಜೀವ ತೇಯುವ, ಜೀವವನ್ನೇ ಬಿಟ್ಟುಕೊಡುವ ಪಾತ್ರಗಳನ್ನು 126 ಪುಟಗಳಲ್ಲಿ ನಿರುದ್ವಿಗ್ನವಾಗಿ ಪೋಣಿಸಿ, ವಿಷಾದ ಜಿನುಗಿಸುತ್ತದೆ. ಅದಕ್ಕೆ, 'ಚಂದ್ರನ ಚೂರು' ಎಂಬ ರೂಪಕವೂ ಸಾಕ್ಷಿಯಾಗಿ ನಿಲ್ಲುತ್ತದೆ.




ಪು: 128 ₹150

ಚಂದ್ರನ ಚೂರು
ಲೇ: ಆಲೂರು ದೊಡ್ಡನಿಂಗಪ್ಪ
ಪ್ರ: ಪಂಪ ಸಾಂಸ್ಕೃತಿಕ ವೇದಿಕೆ
ಸಂ: 9632475625

ಹೇಳದೇ ಇದ್ದ ವಾಸ್ತವಗಳು...

ಮೂವತ್ತು ವರ್ಷ ಪ್ರಜಾವಾಣಿ ಸಂಪಾದಕೀಯ ವಿಭಾಗದಲ್ಲಿ ದುಡಿದಿರುವ ಪಿ. ಶ್ರೀಧರ ನಾಯಕ್ ಅವರು ತಮ್ಮ ನೆನಪಿನಾಳದಿಂದ ಹಲವು ವಾಸ್ತವಗಳನ್ನು ದಾಖಲಿಸಿದ್ದಾರೆ. ತಮ್ಮ ಕಾರ್ಯಾವಧಿಯಲ್ಲಿ ಹಾಸನ ಹಾಗೂ ಕಲಬುರ್ಗಿಯಲ್ಲಿ ಕಾರ್ಯನಿರ್ವಹಿಸಿದ ಅನುಭವಗಳನ್ನು ಸೊಗಸಾಗಿ ದಾಖಲಿಸಿದ್ದಾರೆ. ಕೆಲವು ಲಘುಪ್ರಬಂಧದ ಧಾಟಿಯಲ್ಲಿದ್ದರೆ, ಕೆಲವು ವರದಿ ಅಥವಾ ಪುರವಣಿಗಾಗಿ ಬರೆದ ಬರೆಹಗಳ ಸ್ವರೂಪದಲ್ಲಿವೆ. ಪ್ರತಿ ಜಿಲ್ಲೆಯ ಇತಿಹಾಸ ಹಾಗೂ ಸಾಂಸ್ಕೃತಿಕ ಆಯಾಮವನ್ನು ಹೊರಗಿನ ಜಿಲ್ಲೆಯ ವ್ಯಕ್ತಿಯ ನೋಟ, ಕುತೂಹಲ ಮತ್ತು ದಾಖಲಿಸುವ ಕಾತರ ಈ ವರದಿಗಳಲ್ಲಿ ಎದ್ದು ಕಾಣುತ್ತದೆ. ಪತ್ರಿಕೋದ್ಯಮದ ಹಲವು ಮಜಲುಗಳು, ಪತ್ರಿಕೆ ಪ್ರಕಟವಾಗಿ ಮರುದಿನ ಸಂಜೆಯಿಂದ ಮಧ್ಯಾಹ್ನಕ್ಕೆ ಮತ್ತು ಅಂದೇ ಬೆಳಗಿನ ಹೊತ್ತಿಗೆ ತಲುಪುವ ವರೆಗೆ ಬದಲಾದ ತಂತ್ರಜ್ಞಾನಗಳ ಕುರಿತೂ ಇಲ್ಲಿ ಮಾಹಿತಿ ಇದೆ. ಗೂಗಲ್, ವಿಕಿಪಿಡಿಯಾ ಇಲ್ಲದ ಹೊತ್ತಿನಲ್ಲಿ ಒಬ್ಬ ವರದಿಗಾರನ ಅಧ್ಯಯನಶೀಲ ಮತ್ತು ಕ್ರಿಯಾಶೀಲ ಗುಣಗಳು ಹೇಗಿರಬೇಕು ಎಂಬುದು ಪುಸ್ತಕ ಓದುತ್ತ ಹೋದಂತೆ ಮನವರಿಕೆಯಾಗುತ್ತದೆ.

ಬರೆಯಬಾರದ ಸಂಗತಿಗಳಿವು ಅಲ್ಲ ಎಂದು ಹೇಳಿರುವ ಉಡುಪಿ ಮೂಲದ ಶ್ರೀಧರ್ ನಾಯಕ್, ಮಲೆನಾಡಿನ ಹಾಸನ ಜಿಲ್ಲೆ ಹಾಗೂ ಬಿರುಬೇಸಿಗೆಯ ಬಯಲುಸೀಮೆಯ ಕಲಬುರ್ಗಿಯಲ್ಲಿ ಕಂಡ ಬದುಕನ್ನು ಆಪ್ತವಾಗಿ ದಾಖಲಿಸಿದ್ದಾರೆ. ಮಾನವೀಯ ಸ್ಪರ್ಶದೊಂದಿಗಿರುವ ಪತ್ರಿಕೋದ್ಯಮವನ್ನು ಅರ್ಥ ಮಾಡಿಕೊಳ್ಳಲು ಈ ಪುಸ್ತಕ ಸಹಾಯಕವಾಗಿದೆ. ಜಿಲ್ಲಾ ವರದಿಗಾರರಿಗೆ, ವಿದ್ಯಾರ್ಥಿ ಪತ್ರಕರ್ತರಿಗೆ ಮಾರ್ಗದರ್ಶಿಯಂತೆಯೂ ಇದೆ.



ಪು: 168 ₹200

ಹೇಳದೇ ಇದ್ದ ವಾಸ್ತವಗಳು
ಲೇ: ಪಿ. ಶ್ರೀಧರ ನಾಯಕ್
ಪ್ರ: ಗೀತಾಂಜಲಿ ಪ್ರಕಾಶನ
ಸಂ: 9740066842

ಸಿನಿಮಾಸಕ್ತರಿಗೆ ಕುತೂಹಲದ ಖನಿ

ಪುಸ್ತಕದ ಶೀರ್ಷಿಕೆಯ ಅಡಿ ಬರಹ 'ಸಿನಿಮಾದವರೊಂದಿಗಿನ ಕ್ಲೋಸ್ ಅಪ್ ಶಾಟ್ಸ್' ಹೇಳುವಂತೆ ಲೇಖಕ ಬಿ.ಎಲ್. ವೇಣು ಅವರು ತಮ್ಮ ನಾಲ್ಕು ದಶಕಗಳ ಚಿತ್ರರಂಗದ ಅನುಭವವನ್ನು ಈ ಕೃತಿ ಕಟ್ಟಿಕೊಟ್ಟಿದೆ.

ಸರ್ಕಾರಿ ನೌಕರಿಯಲ್ಲಿದ್ದುಕೊಂಡೇ ಸಿನಿಮಾ ಸಾಹಿತಿಯಾಗಿ ತಮ್ಮನ್ನು ರೂಪಿಸಿಕೊಂಡ, ಬರವಣಿಗೆಯ ಅಂತಃಸತ್ವ ಕಾಪಿಟ್ಟುಕೊಂಡ, ಬರವಣಿಗೆಯಿಂದಲೇ ಬದುಕು–ಭಾವವನ್ನೂ ಹಸನಾಗಿಸಿಕೊಂಡ ಬಗೆಯನ್ನು, ಜನಪ್ರಿಯತೆ ಸಂಪಾದಿಸಿದ್ದನ್ನೂ ಮುಕ್ತವಾಗಿ ತೆರೆದಿಟ್ಟಿದ್ದಾರೆ ಲೇಖಕರು.

ಕನ್ನಡದ ಹೆಸರಾಂತ ನಿರ್ದೇಶಕರಾದ ಕೆ.ವಿ.ಜಯರಾಂ, ಪುಟ್ಟಣ್ಣ ಕಣಗಾಲ್, ಭಾರ್ಗವ, ದೊರೆ ಭಗವಾನ್, ನಟರಾದ ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್ ಸೇರಿದಂತೆ ಈಗಿನ ಕೆಲವು ನಿರ್ದೇಶಕರು ಮತ್ತು ಕಲಾವಿದರೊಂದಿಗಿನ ತಮ್ಮ ಒಡನಾಟ-ಚಿತ್ರರಂಗದ ನಂಟಿನಲ್ಲಿ ಇಷ್ಟು ವರ್ಷ ಕಂಡುಂಡಿದ್ದನ್ನು 'ಸೆನ್ಸಾರ್' ಮಾಡದೆ ಹಂಚಿಕೊಂಡಿದ್ದಾರೆ. ಸಂದರ್ಭೋಚಿತವಾಗಿ ಬಳಕೆಯಾಗಿರುವ ಅಪರೂಪದ ಚಿತ್ರಗಳು ಕೃತಿಗೆ ಮೆರುಗು ತಂದುಕೊಟ್ಟಿವೆ.

ವೇಣು ಅವರು ಆರಂಭದಲ್ಲಿ ಬರೆದ ಕಥೆಗಳಲ್ಲಿ 'ದೊಡ್ಮನೆ' ಕಥೆ ಮೊದಲ ಬಾರಿಗೆ 'ದೊಡ್ಡಮನೆ ಎಸ್ಟೇಟ್' ಹೆಸರಿನಲ್ಲಿ ಸಿನಿಮಾ ಆಗುತ್ತಿದೆ ಎಂದಾಗ ಅವರಿಗೆ ಆದ ಖುಷಿ, ಪುಳಕ–ಆ ಚಿತ್ರ ಬಿಡುಗಡೆಯಾದಾಗ ಅದರಲ್ಲಿ ತಮ್ಮ ಕಥೆಯೇ ಮಾಯವಾಗಿರುವುದನ್ನು ಕಂಡಾಗ ಆದ ವ್ಯಥೆಯನ್ನು ಇಲ್ಲಿ ಮೆಲುಕು ಹಾಕಿದ್ದಾರೆ.

ವೇಣು ಅವರ ದಂಡಿ ದಂಡಿ ಪ್ರಸಂಗಗಳು ಸಿನಿಪ್ರಿಯರಿಗೆ, ಸಿನಿಮಾ ರಂಗದ ಅಧ್ಯಯನನಿರತರಿಗೂ ಒಂದಿಷ್ಟು ಉಪಯುಕ್ತ ಮತ್ತು ಕುತೂಹಲದ ಮಾಹಿತಿಗಳು ಆಗಿವೆ.




ಪು: 292 ₹350

ಬೆಳ್ಳಿ ತೆರೆಯ ಮಿಂಚು
ಲೇ: ಡಾ. ಬಿ.ಎಲ್. ವೇಣು
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ
ಸಂ : 94498 86390

ಟೌನ್ ಆಫ್ ಬ್ಯೂಟಿ ಈ ಹಳ್ಳಿ!

ಪ್ರಕೃತಿ ಮತ್ತು ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುವ ಹಳ್ಳಿ ಮನಾಝುರು. ತಮ್ಮ ಊರಿನ ಪ್ರಕೃತಿ ಸೌಂದರ್ಯಕ್ಕೆ ಅಪಾರ್ಟ್‌ಮೆಂಟ್‌ಗಳು, ರೆಸಾರ್ಟ್‌ಗಳು, ಗಗನಚುಂಬಿ ಕಟ್ಟಡಗಳಿಂದ ಕುತ್ತು ಬರುತ್ತದೆ ಎನ್ನುವುದನ್ನು ಅರಿತ ಅಲ್ಲಿನ ಜನರು ಹೋರಾಟ ನಡೆಸಿ ಯಶಸ್ವಿಯಾದ ಅಪರೂಪದ ಕಥನವಿದು.





ಕಡಲತೀರದ ಮನಾಝುರು ಹಳ್ಳಿಯ ನೋಟ

ಶ್ವೇತ ಆರಾಧ್ಯ

ಪ್ರವಾಸ

ಜಪಾನಿನಲ್ಲಿ ಎಂದಿನಂತೆ ಅದು ಬೇಸಿಗೆಯ ಜುಲೈ ತಿಂಗಳು. ಮೂರು ದಿನ ರಜೆ ಇತ್ತು. ಟೋಕಿಯೊ ನಗರದ ಗೌಜು-ಗದ್ದಲ ಬೇಸರ ತರಿಸಿತ್ತು. ಕೆಲ ಸಮಯವನ್ನು ಪ್ರಶಾಂತವಾದ ಜಾಗದಲ್ಲಿ ಕಳೆಯಬೇಕೆಂದು ಯೋಚಿಸುತ್ತಿದ್ದಾಗ, ಎಂದೋ ಕೇಳಿದ ಕಡಲತೀರದ ಮನಾಝುರು ಹಳ್ಳಿಯ ನೆನಪಾಯಿತು. ಇದು ಟೋಕಿಯೊ ನಗರದಿಂದ ಸುಮಾರು 90 ಕಿಲೊಮೀಟರ್ ದೂರದಲ್ಲಿದ್ದು, ಎರಡು ಗಂಟೆಗಳ ರೈಲು ಪ್ರಯಾಣ. ಕುತೂಹಲ ತುಂಬಿದ ಪ್ರವಾಸಕ್ಕೆ ಮುಂಜಾನೆಯೇ ಹೊರಟೆವು.

ರೈಲು ಸುರಂಗಮಾರ್ಗದ ಮೂಲಕ ಹಾದುಹೋಗಿ, ಸಮುದ್ರತೀರದಲ್ಲಿ ಮುಂದೆ ಸಾಗಿತು. ಪ್ರಾಕೃತಿಕ ದೃಶ್ಯಗಳನ್ನು ನೋಡುತ್ತಾ, ಎರಡು ಗಂಟೆಗಳ ಪ್ರಯಾಣ ಕಳೆದುಹೋಗಿದ್ದೇ ಗೊತ್ತಾಗಲಿಲ್ಲ. 'ಟೌನ್ ಆಫ್ ಬ್ಯೂಟಿ' ಎಂದೇ ಹೆಸರಾಗಿರುವ ಮನಾಝುರು ಹಳ್ಳಿಯನ್ನು ತಲುಪಿದೆವು. ನಿಲ್ದಾಣದಿಂದ ಹೊರಗಡೆ ಬಂದಾಗ ನೀಲಿ ಆಕಾಶ ಮತ್ತು ಅದಕ್ಕಿಂತ ಆಕರ್ಷಕವಾದ ನೀಲಿ ಸಮುದ್ರ ನಮ್ಮನ್ನು ಸ್ವಾಗತಿಸಿತು. ಸುತ್ತಲೂ ಹಸಿರಾದ ಬೆಟ್ಟಗುಡ್ಡಗಳು, ದೇವದಾರು ಮರಗಳ ಕಾಡು, ಅಲ್ಲಲ್ಲಿ ಚಾಚಿಕೊಂಡಿರುವ ಮೇಪಲ್ ಮರದ ಎಲೆಗಳಿಂದ ತೂರಿ ಬಂದ ಬೆಳಕು ನೆಲದ ಮೇಲೆ ಹರಡಿತ್ತು. ಬೆಟ್ಟದ ಇಳಿಜಾರಿನಲ್ಲಿ ಒಂದರ ಮೇಲೊಂದು ಕಟ್ಟಿರುವ ಮನೆಗಳು ಮೆಟ್ಟಿಲಿನಂತೆ ಕಾಣಿಸುತ್ತಿದ್ದು, ಎಲ್ಲಾ ಮನೆಗಳು ಸಮುದ್ರದ ದಿಕ್ಕಿಗೆ ಮುಖ ಮಾಡಿದ್ದವು.

ಇಲ್ಲಿನ ಪಾರಂಪರಿಕ ಜಪಾನೀ ಮನೆಗಳು, ಕಿರಿದಾದ ಹಾಗೂ ಶಾಂತವಾಗಿರುವ ರಸ್ತೆಗಳನ್ನು ಕಂಡು 'ಈ ಊರಿನಲ್ಲಿ ಜನ ಇಲ್ಲವೇ' ಎನ್ನುವ ಪ್ರಶ್ನೆ ಮೂಡಿತು. ಆ ಸಮಯದಲ್ಲಿ ಒಬ್ಬರು ಅಜ್ಜ ಸೈಕಲ್ ತುಳಿಯುತ್ತಾ ದಿಬ್ಬವನ್ನು ಹತ್ತಿ ಬಂದು ಮುಗುಳ್ನಕ್ಕು ಹಾದುಹೋದರು. ಅಜ್ಜನಿಗೆ ಸುಮಾರು 80 ವರ್ಷ ಇರಬೇಕು ಅನ್ನಿಸಿತು. ಆದರೂ ಸುಲಭವಾಗಿ ಸೈಕಲ್ ತುಳಿಯುತ್ತಿರುವುದನ್ನು ನೋಡಿ ಆಶ್ಚರ್ಯಗೊಂಡೆ. ಜಪಾನಿನಲ್ಲಿ ಸಾಮಾನ್ಯವಾಗಿ ರಸ್ತೆಬದಿಗೆ ತೊಡಕಾಗುವ ಯಾವುದೇ ವಸ್ತುವನ್ನು ಇಡುವುದಿಲ್ಲ, ಆದರೆ ಇಲ್ಲಿ ಮನೆಗಳ ಮುಂದೆ ಬೆಂಚ್‌ಗಳು ಮತ್ತು ಹೂವಿನ ಕುಂಡಗಳನ್ನು ನೋಡಿ 'ಈ ಬೆಂಚ್‌ಗಳನ್ನು ಏಕೆ ಇಟ್ಟಿದ್ದಾರೆ' ಎಂದು ವಿಚಾರಿಸಿದಾಗ, ಈ ಹಳ್ಳಿಯಲ್ಲಿ ವಯಸ್ಸಾದವರು ಜಾಸ್ತಿ, ಅವರು ನಡೆದು ದಣಿದಾಗ ವಿಶ್ರಾಂತಿ ಪಡೆಯಲು ಈ ರೀತಿಯ ಬೆಂಚ್‌ಗಳನ್ನು ಇಟ್ಟಿದ್ದಾರೆ' ಎಂದು ಒಬ್ಬರು ತಿಳಿಸಿದರು. ಅಲ್ಲಿ ಹಿರಿಯ ಜೀವಗಳಿಗೆ ಕೊಡುವ ಆದ್ಯತೆಯನ್ನು ಕಂಡು ಅತೀವ ಖುಷಿ ಆಯಿತು.

ಈ ಹಳ್ಳಿಯಲ್ಲಿ ಯಾವುದೇ ಅಪಾರ್ಟ್‌ಮೆಂಟ್ ಅಥವಾ ಬೃಹತ್ ಕಟ್ಟಡಗಳು ಕಾಣಿಸಲಿಲ್ಲ! ಇದಕ್ಕೆ ಪ್ರಮುಖ ಕಾರಣವೆಂದರೆ, ಎಂಬತ್ತರ ದಶಕದಲ್ಲಿ ರೆಸಾರ್ಟ್‌ಗಳನ್ನು ನಿರ್ಮಿಸಬೇಕು ಎಂದು ಅಭಿವೃದ್ಧಿ ಯೋಜನೆಗಳು ಜಾರಿಯಲ್ಲಿದ್ದಾಗ, ಈ ಹಳ್ಳಿಯ ಜನರು ತಮ್ಮ ಊರಿನ ಪ್ರಕೃತಿ ಸೌಂದರ್ಯ ನಾಶವಾಗುತ್ತದೆಂದು ಭಯಗೊಂಡು ಆಡಳಿತಾಧಿಕಾರಿಗಳೊಂದಿಗೆ ಊರನ್ನು ರಕ್ಷಿಸಲು ಮನವಿ ಮಾಡಿಕೊಂಡರು. ಹಳ್ಳಿಗರೊಂದಿಗೆ ಚರ್ಚಿಸಿ, ಇಲ್ಲಿನ ಜೀವನಶೈಲಿ, ನೈಸರ್ಗಿಕ ಸೌಂದರ್ಯ ಕಾಪಾಡಲು 'ಸ್ಟ್ಯಾಂಡರ್ಡ್ ಆಫ್ ಬ್ಯೂಟಿ' ಎನ್ನುವ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಯಿತು. ಅನುಕೂಲಸ್ಥರು ದೊಡ್ಡ ದೊಡ್ಡ ಮನೆ ಕಟ್ಟುವುದು ಸಾಮಾನ್ಯ. ಆದರೆ ಈ ಹಳ್ಳಿಯಲ್ಲಿ ಎಲ್ಲರೂ ಪ್ರಕೃತಿ ಸೌಂದರ್ಯವನ್ನು ಸವಿಯಲಿ ಎಂದು ತಮ್ಮ ಮನೆಯ ಎತ್ತರವನ್ನು ಸೀಮಿತಗೊಳಿಸಿದ್ದಾರೆ. ಪ್ರತಿ ಮನೆ ಬಾಲ್ಕನಿಯಿಂದ ದೂರದ ಸಮುದ್ರದವರೆಗೂ ಕಣ್ಣಾಯಿಸಬಹುದು. ಸ್ಥಳೀಯವಾಗಿ ದೊರಕುವ ಮರ ಹಾಗೂ ಕಲ್ಲುಗಳನ್ನು ಬಳಸಿ ಮನೆ ಕಟ್ಟಿ, ಮನೆಗಳ ಬಣ್ಣವನ್ನೂ ಸಹ ಪರಿಸರಕ್ಕೆ ಹೊಂದುವಂತೆ ತಿಳಿಯಾಗಿ ಹಚ್ಚುತ್ತಾರೆ.

ಇಳಿಜಾರಿನಲ್ಲಿ ನಡೆಯುತ್ತಾ ಕಡಲತೀರ ತಲುಪಿದೆವು. ಕಡಲಿನ ಅಂಚಿನಲ್ಲಿ ಲಂಗರು ಹಾಕಿದ್ದ ದೋಣಿಗಳು, ಕೆಲಸದಲ್ಲಿ ತಲ್ಲೀನರಾದ ಮೀನುಗಾರರು, ಸ್ಥಳೀಯರು ತಾಜಾ ಮೀನುಗಳನ್ನು ಖರೀದಿಸುತ್ತಿದ್ದರು. ಇಲ್ಲಿ 200 ಜಾತಿಯ ಮೀನುಗಳು ಸಿಗುತ್ತವೆ! ವಿಶೇಷವೆಂದರೆ, ಇಲ್ಲಿನ ಮೀನುಗಾರರು ದಿನಕ್ಕೆ ಎಷ್ಟು ಬೇಕೋ ಅಷ್ಟು ಮೀನನ್ನು ಮಾತ್ರ ಹಿಡಿಯುತ್ತಾರೆ. ಅದಕ್ಕಿಂತ ಹೆಚ್ಚಾಗಿ ಬಲೆಗೆ ಬಿದ್ದ ಮೀನುಗಳನ್ನು ಪುನಃ ಸಮುದ್ರಕ್ಕೆ ಬಿಡುವುದು ರೂಢಿ. ಕಡಲತೀರದಲ್ಲಿ ಹೆಜ್ಜೆ ಹಾಕುತ್ತಾ, ಇಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮನಸೋತು ನಿಂತೆ.

ಕಡಲತೀರದ ಜೀವನ ಯಾರಿಗೆ ತಾನೇ ಇಷ್ಟವಿಲ್ಲ ಹೇಳಿ! ಬೀಸುವ ತಂಗಾಳಿ, ಲಯದ ಸದ್ದುಗಳೊಂದಿಗೆ ದಡಕ್ಕಪ್ಪಳಿಸುವ ಅಲೆಗಳು, ಇಲ್ಲಿಯ ಶಾಂತ ಪರಿಸರ ಮನಸ್ಸಿನ ಉದ್ವೇಗವನ್ನು ಕ್ಷಣಾರ್ಧದಲ್ಲಿ ತಣಿಸುತ್ತದೆ. ಇಲ್ಲಿನ ಜನರು ಪ್ರಕೃತಿ ಮತ್ತು ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುವುದರಿಂದ, ಮನಾಝುರು ಎಲ್ಲರನ್ನು ತನ್ನತ್ತ ಆಕರ್ಷಿಸುತ್ತಿದೆ. ಮನಾಝುರು ಕೇವಲ ಒಂದು ಪ್ರವಾಸಿ ತಾಣವಷ್ಟೇ ಅಲ್ಲ, ಅದು ಒಂದು ಮರೆಯಲಾಗದ ಅನುಭವ. ಮತ್ತೆ ಮತ್ತೆ ಇಲ್ಲಿಗೆ ಬರಲು ಮನಸ್ಸು ಬಯಸುತ್ತಿದೆ!.

1100 ವರ್ಷಗಳ ಕಿಬೂನೆ ಮತ್ಸುರಿ ಹಬ್ಬ!

ಕಾಲ್ನಡಿಗೆಯಲ್ಲಿ ಮನಾಝುರು ಹಳ್ಳಿಯೆಲ್ಲಾ ಸುತ್ತಾಡುತ್ತಿರುವಾಗ, ಒಂದು ಮನೆಯ ಕಲ್ಲಿನಗೋಡೆಯ ಮೇಲೆ ಚಾಚಿಕೊಂಡಿರುವ ಕಿತ್ತಳೆಯ ಹಣ್ಣುಗಳನ್ನು ಕಂಡು ಹತ್ತಿರ ಹೋದೆ. ಕೆಲಸದಲ್ಲಿ ತೊಡಗಿದ್ದ ಅಜ್ಜಿಯೊಬ್ಬರು ಆತ್ಮೀಯವಾಗಿ ಮಾತಾಡಿದರು. ಪ್ರತಿವರ್ಷ ಜುಲೈ ತಿಂಗಳ 27 ಮತ್ತು 28 ರಂದು ನಡೆಯುವ 'ಕಿಬೂನೆ ಮತ್ಸುರಿ' ಎನ್ನುವ ಹಬ್ಬದ ಕುರಿತು ವಿವರಿಸಿದರು. ಈ ಸಮಯದಲ್ಲಿ ಎಲ್ಲಾ ದೋಣಿಗಳನ್ನು ಹೂಗಳಿಂದ ಸಿಂಗರಿಸಿ, ಊರಿನ ಬೀದಿಗಳನ್ನು ಬಣ್ಣದದೀಪಗಳಿಂದ ಅಲಂಕರಿಸಿರುತ್ತಾರೆ. ಸುಮಾರು 1100 ವರ್ಷಗಳಿಂದ ನಡೆಯುತ್ತಿರುವ ಈ ಹಬ್ಬ, ಜಪಾನಿನ ಮೂರು ಅತಿ ದೊಡ್ಡ ಹಡಗು ಉತ್ಸವಗಳಲ್ಲಿ ಒಂದಾಗಿದೆ. ಉತ್ತಮ ಆರೋಗ್ಯ ಮತ್ತು ಮೀನುಗಾರಿಕೆಯಲ್ಲಿ ಸಮೃದ್ಧಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ.


ಇದರ ಇತಿಹಾಸ ಕೆದಕುತ್ತಾ ಹೊರಟಾಗ, ಕೆಲವು ವಿಷಯಗಳು ಹೊರಬಂದವು. ಸಾವಿರ ವರ್ಷಗಳ ಹಿಂದೆ ಒಂದು ದೋಣಿಯ ಒಳಗೆ ಮರದ ಹನ್ನೆರಡು ಪ್ರತಿಮೆಗಳನ್ನು ಕಂಡು, ಈ ಪ್ರತಿಮೆಗಳನ್ನು ಪ್ರದರ್ಶಿಸುವ ಮೂಲಕ ಊರು ಸಮೃದ್ಧಿಯಾಗುತ್ತದೆಂಬ ನಂಬಿಕೆಯಿಂದ ಸ್ಥಳೀಯರು ಇಂದಿನವರೆಗೂ ತಪ್ಪದೆ 'ಕಿಬೂನೆ ಮತ್ಸುರಿ'ಯನ್ನು ಆಚರಿಸುತ್ತಾ ಬಂದಿದ್ದಾರೆ.


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಶ್ಶ ಚಕ್ಕು ಕೇಶ್ರಸ್ಸ ಕಥೆಯ — ಬಿಸಿಲಿಗೆ ಬಸವಳಿದ ಬೆದರುಗೊಂಬೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಗದ್ದೆಯಲ್ಲಿದ್ದ ಕಲ್ಲಂಗಡಿ ಬೆಳೆಯನ್ನು ಉಳಿಸಲು ಬೆದರುಗೊಂಬೆಯೊಂದನ್ನು ನಿಲ್ಲಿಸಿದ್ದರು. ಒಂದು ದಿನ ಬಿಸಿಲಿನ ತಾಪ ಹೆಚ್ಚಾಗಿತ್ತು. ನಿಂತು ನಿಂತು ಬೆದರುಗೊಂಬೆಗೆ ತಲೆತಿರುಗಿತ್ತು. ಸ್ವಲ್ಪ ಹೊತ್ತು ಸುತ್ತುಮುತ್ತ ನೋಡಿದ ಬೆದರುಗೊಂಬೆ ಅಲ್ಲೇ ನೆಲದಲ್ಲಿ ಬೆಳೆದಿದ್ದ ಕಲ್ಲಂಗಡಿ ಹಣ್ಣೊಂದನ್ನು ಎತ್ತಿಕೊಂಡು ಅದಕ್ಕೊಂದು ತೂತು ಮಾಡಿ ಹಣ್ಣಿನ ರಸವನ್ನು ಕುಡಿಯಲು ಆರಂಭಿಸಿತು. ಇದನ್ನು ನೋಡಿದ ಸೂರ್ಯ ಬೆವತುಕೊಳ್ಳಲಾರಂಭಿಸಿದ.

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಅ	ಚಿ	ಹ	ಕ
ಸ	ಅ	ಉ	ಅ
ಒ	ಕೆ	ಶಿ	ಚಿ

1

	ರ	ತೆ
	ರ	ತೆ

2

	ವ	ಳೆ
	ವ	ಳೆ

3

	ರ	ಡಿ
	ರ	ಡಿ

4

	ಮ್ಮ	ಟ
	ಮ್ಮ	ಟ

5

	ನಾ	ದಿ
	ನಾ	ದಿ

6

	ಬ್ಬ	ರ
	ಬ್ಬ	ರ

ಮೋಜಿನ ENGLISH

ಇಲ್ಲಿ ಕೊಟ್ಟಿರುವ ಬಿಗ್B ಅಕ್ಷರದ ಮುಂದೆ ಒಂದು ಇಂಗ್ಲಿಷ್ ಪದ ತುಂಬಿ ನಂತರ B ಅಕ್ಷರ ಜೋಡಿಸಿಕೊಂಡು ಓದಿದರೆ ಅದೂ ಒಂದು ಇಂಗ್ಲಿಷ್ ಪದವಾಗಬೇಕು. ಪ್ರಯತ್ನಿಸಿ.

ಉದಾಹರಣೆ		
1	B	rush
2	B	
3	B	
4	B	
5	B	
6	B	
7	B	
8	B	
9	B	
10	B	
11	B	
12	B	
13	B	
14	B	
15	B	
16	B	
17	B	
18	B	
19	B	
20	B	

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೊಂದಿಸು-ಆನಂದಿಸು

ಇಲ್ಲಿ ಕೊಟ್ಟಿರುವ 9 ಚೌಕಗಳಲ್ಲಿ 1ರಿಂದ 9 ಅಂಕಿಗಳನ್ನು ಒಮ್ಮೆ ಮಾತ್ರ ಬಳಸಿಕೊಂಡು ಎಡದಿಂದ ಕೂಡಿದರೂ 15 ಹಾಗೂ ಮೇಲಿನಿಂದ ಕೂಡಿದರೂ 15 ಮೊತ್ತ ಬರುವಂತೆ ಅಂಕಿಗಳನ್ನು ಹೊಂದಿಸಿರಿ

			=	15
			=	15
			=	15
15	15	15		

ಚಿಕ್ಕಲೆಕ್ಕ

ಎರಡು ವರ್ಗ ಸಂಖ್ಯೆಗಳ ಮೊತ್ತ 100 ಆದರೆ ಆ ಎರಡು ಸಂಖ್ಯೆಗಳು ಯಾವುವು?

ಪದ ಶೋಧ

ಇಲ್ಲಿ ಕೊಟ್ಟಿರುವ ಪ್ರತಿ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಂದು ಗ್ರಾಮೀಣ ಆಟದ ಹೆಸರನ್ನು ಹುಡುಕಿ.

1.ಕರುಣಾಮಯಿ
....

2.ಹಣ್ಣುಹಂಪಲು
....

3.ಮುಖ್ಯಾಧಿಕಾರಿ
....

4.ಕಚ್ಚಾಸಾಮಾಗ್ರಿ
....

5.ಲೆಕ್ಕಬಿಡಿಸು
....

ಜಾಣಪದ ಆಟ

ಕಾಟುಹೊಡಿ ಪದಪಡಿ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಕೆಲವು ಅಕ್ಷರ ಕಾಟು ಹೊಡೆದರೆ ಮುಂದೆ ಕೊಟ್ಟ ಸುಳಿವಿಗೆ ತಕ್ಕ ಪದಗಳು ಸಿಗುತ್ತವೆ. ಪ್ರಯತ್ನಿಸಿ.

1	ನಾಗತಿಹಳ್ಳಿ	ಒಂದು ಹಳ್ಳಿ ಆಟ
2	ಅಂಗನವಾಡಿ	ದಿನಸಿ ಸಾಮಾನು ಮಾರುವ ಸ್ಥಳ
3	ಆಶ್ರಯಮನೆ	ಒಂದು ಪ್ರಾಣಿ
4	ಗರತಿಹಾಡು	ವೇಗ
5	ವಾನರಸೇನೆ	ಏಳು ದಿನದ ಅವಧಿ
6	ಗರಡಿಮನೆ	ಹದ್ದು
7	ಜಲಾನಯನ	ಹುಟ್ಟು
8	ಸಹಕರಿಸು	ವಿಷ್ಣು
9	ಜಗದಗಲ	ಒಂದು ಜಿಲ್ಲೆ
10	ಗುಣಪಡಿಸು	ಮಂದಿರ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಚುಟುಕು-ಗುಟುಕು 2.ಕಾರ್ಮಿಕ-ಮಾರ್ಮಿಕ 3.ಹೋರಾಟ-ಮಾರಾಟ 4.ನೀರಜ-ಪಾರಜ 5.ಬೆರಗು-ಕೊರಗು 6.ಸರಣಿ-ಕರಣಿ

ಪದಶೋಧ: ಲಿಂಗನಮಕ್ಕಿ

ಜಾಣಪದ ಆಟ: ರಾಜ್ಯ, ಮೃತ, ಕ್ಲೇಶ, ಕತ್ತೆ, ವಜ್ರ, ಬಲ್ಲ, ಹುಗ್ಗಿ, ದಡ್ಡ, ಬಣ್ಣ, ಪಟ್ಟ

ಮೋಜಿನ ಇಂಗ್ಲಿಷ್: Clone, Done, Gone, Honey, Money, None, Phone, Stone, Tone, Zone


ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಯುಕ್ತ ಸಮನ್ವಿ
ಬೆಂಗಳೂರು



ಜಗ್‌ಮೋಹನ್ ಎನ್.
ತುಮಕೂರು



ಶ್ರೇಜಲ್ ಟಿ.
ತುಮಕೂರು



ಸಯ್ಯೆದ್ ಸಕೀಬ್
ಬಳ್ಳಾರಿ



ಮಾಜ್ ಎನ್.
ಅಣಜಿಗೆರೆ



ಸಮೃದ್ಧಿ
ಹಾಸನ





ನವದೆಹಲಿಯ ವಿಮಾನ ನಿಲ್ದಾಣಕ್ಕೆ ಶನಿವಾರ ಬೆಳಿಗ್ಗೆ ಬಂದಿಳಿದ ಕುಸ್ತಿಪಟು ವಿನೇಶ್ ಫೋಗಟ್ ಅವರು ಭಾವೋದ್ವೇಗಕ್ಕೆ ಒಳಗಾದರು. ಬಜರಂಗ್ ಪೂನಿಯಾ ಮತ್ತು ಸಾಕ್ಷಿ ಮಲಿಕ್ ಈ ಸಂದರ್ಭದಲ್ಲಿ ಜೊತೆಯಲ್ಲಿದ್ದರು (ಎಡಚಿತ್ರ). ಮೆರವಣಿಗೆಯಲ್ಲಿ ವಿನೇಶ್ ಫೋಗಟ್ ಅವರಿಗೆ ಪುಷ್ಪವೃಷ್ಟಿಗರೆಯಲಾಯಿತು –ಪಿಟಿಐ ಚಿತ್ರಗಳು

ಪ್ಯಾರಿಸ್ ದುಗುಡದ ನಂತರ ತವರಿಗೆ ಮರಳಿದ ಭಾರತದ ಕುಸ್ತಿಪಟು

ವಿನೇಶ್‌ಗೆ ವೀರೋಚಿತ ಸ್ವಾಗತ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಮಹಿಳೆಯರ 50 ಕೆ.ಜಿ. ಕುಸ್ತಿ ಸ್ಪರ್ಧೆಯಲ್ಲಿ ನೂರು ಗ್ರಾಮ್ ಅಧಿಕ ತೂಕದ ಕಾರಣ ಅನರ್ಹಗೊಂಡು ಪದಕವಂಚಿತರಾದ ವಿನೇಶ್ ಫೋಗಟ್ ಶನಿವಾರ ಬೆಳಿಗ್ಗೆ ಪ್ಯಾರಿಸ್‌ನಿಂದ ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಸೇರಿದ್ದ ನೂರಾರು ಮಂದಿ ಆತ್ಮೀಯ ಸ್ವಾಗತ ಕೋರಿದರು.

ಒಲಿಂಪಿಯನ್‌ಗಳಾದ ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್, ವಿವಿಧ ಖಾಪ್ ಪಂಚಾಯತ್ ಮುಖಂಡರು, ಅಭಿಮಾನಿಗಳು ಬರಮಾಡಿಕೊಂಡರು. ಹಲವರು ಹೂವಿನಹಾರಹಾಕಿ ಸ್ವಾಗತಿಸಿದ ನಂತರ ತೆರೆದ ಜೀಪ್‌ನಲ್ಲಿ ಮೆರವಣಿಗೆ ನಡೆಯಿತು.

'ಇಡೀ ದೇಶಕ್ಕೆ ಧನ್ಯವಾದ ಹೇಳುವೆ' ಎಂದು ಅವರು ಕರಮುಗಿದು ವಿನೀತರಾಗಿ ಹೇಳಿದರು. ವಿಮಾನ ನಿಲ್ದಾಣದಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ವಿನೇಶ್ ಅಲ್ಲಿಂದ ಹರಿಯಾಣದ ತವರು ಗ್ರಾಮ ಬಲಾಲಿಗೆ ತೆರಳಿದರು. ಸ್ವಗ್ರಾಮಕ್ಕೆ ತೆರಳುವ ಮೊದಲು ದ್ವಾರ್ಕಾದ ದೇಗುಲದಲ್ಲಿ ಪೂಜೆ ಸಲ್ಲಿಸಿದರು.

ಮುಖ್ಯಾಂಶಗಳು

- 'ಇಡೀ ದೇಶಕ್ಕೆ ಧನ್ಯವಾದ ಹೇಳುವೆ' ಎಂದ ವಿನೇಶ್
- ಹರಿಯಾಣದ ತವರು ಗ್ರಾಮ ಬಲಾಲಿಗೆ ತೆರಳಿದ ಕುಸ್ತಿಪಟು
- ಕುಸ್ತಿಗೆ ವಿದಾಯ ಹೇಳಿರುವ ವಿನೇಶ್ ಫೋಗಟ್

ತಮ್ಮ ಅನರ್ಹತೆಯನ್ನು ಅಂತರ ರಾಷ್ಟ್ರೀಯ ಕ್ರೀಡಾ ಮಧ್ಯಸ್ಥಿಕೆ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಿದ್ದ ವಿನೇಶ್ ಪ್ಯಾರಿಸ್‌ನಲ್ಲಿ ಉಳಿದು ಕೊಂಡಿದ್ದರು. ಬುಧವಾರ ಅವರ ಮನವಿ ವಜಾಗೊಂಡಿತ್ತು.

'ಅವರು ದೀರ್ಘ ಕಾಲದ ನಂತರ ತವರುದೇಶಕ್ಕೆ ಮರಳಿದ್ದಾರೆ. ಅವರು ಭಾವೋದ್ವೇಗಕ್ಕೆ ಒಳಗಾಗಿದ್ದರು. ಕುಟುಂಬದೊಂದಿಗೆ ಕಾಲ ಕಳೆದು ತಮ್ಮ ಒತ್ತಡ ಕಡಿಮೆ ಮಾಡಿಕೊಳ್ಳುವರು. ಮಹಿಳೆಯರಿಗಾಗಿ ಅವರು ಏನು ಸಾಧಿಸಿದ್ದಾರೊ ಅದು ಶ್ಲಾಘನೀಯ. ಅವರಿಗೆ ಪದಕ ದೊರೆತಿರಲಿಕ್ಕಿಲ್ಲ. ಆದರೆ ಅವರು ನಮಗೆ ಚಾಂಪಿಯನ್' ಎಂದು ಸಾಕ್ಷಿ ಮಲಿಕ್ ಬಣ್ಣಿಸಿದರು.

ಭಾರತ ತಂಡದ ಷೆಫ್ ಡಿ ಮಿಷನ್ ಆಗಿದ್ದ ಒಲಿಂಪಿಕ್ ಕಂಚಿನ ಪದಕ ವಿಜೇತ ಗಗನ್ ನಾರಂಗ್ ಅವರು ಪ್ಯಾರಿಸ್ ಏರ್‌ಪೋರ್ಟ್‌ನಲ್ಲಿ ವಿನೇಶ್ ಜೊತೆಗಿದ್ದ ಚಿತ್ರವನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಅವರಿಬ್ಬರು ಒಂದೇ ವಿಮಾನದಲ್ಲಿ ಬಂದಿಳಿದರು.

'ಅವರು ಒಂದನೇ ದಿನ ಚಾಂಪಿಯನ್ ಆಗಿ ಕ್ರೀಡಾ ಗ್ರಾಮಕ್ಕೆ ಹಿಂತಿರುಗಿದರು ಮತ್ತು ಅವರು ಸದಾ ನಮಗೆ ಚಾಂಪಿಯನ್. ಶತಕೋಟಿ ಜನರ ಕನಸುಗಳಿಗೆ ಸ್ಫೂರ್ತಿ ತುಂಬಲು ಕೆಲವೊಮ್ಮೆ ಒಲಿಂಪಿಕ್ ಪದಕದ ಅಗತ್ಯವಿರುವುದಿಲ್ಲ... ವಿನೇಶ್ ಫೋಗಟ್ ನೀವು ತಲೆಮಾರುಗಳಿಗೆ ಸ್ಫೂರ್ತಿಯಾಗಿದ್ದೀರಿ. ನಿಮ್ಮ ಮನೋಬಲಕ್ಕೆ ವಂದನೆಗಳು...' ಎಂದು ನಾರಂಗ್ ಎಕ್ಸ್‌ನಲ್ಲಿ ಬರೆದಿದ್ದಾರೆ.

'ಜನರು ಗ್ರಾಮದಲ್ಲಿ ವಿನೇಶ್‌ಗಾಗಿ ಕಾಯುತ್ತಿದ್ದರು. ಅವರನ್ನು ಭೇಟಿಯಾಗಿ, ಉತ್ತೇಜನ ನೀಡಲು ಕಾತರರಾಗಿದ್ದರು' ಎಂದು ಅವರ ಸಹೋದರ ಹರ್ವಿಂದರ್ ಫೋಗಟ್ ಹೇಳಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅನರ್ಹಗೊಂಡ ಮರುದಿನವೇ ವಿನೇಶ್ ಅವರು ಕುಸ್ತಿಗೆ ವಿದಾಯ ಹೇಳಿದ್ದರು.

ತೊಡೆಯ ನೋವಿನಿಂದ ಬಳಲುತ್ತಿರುವ ಭಾರತದ ಜಾವೆಲಿನ್ ಥ್ರೋ ತಾರೆ

ಡೈಮಂಡ್ ಲೀಗ್‌ನಲ್ಲಿ ನೀರಜ್ ಸ್ಪರ್ಧೆ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ವಿಜೇತ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಮುಂಬರುವ ಡೈಮಂಡ್ ಲೀಗ್‌ನ ಲೂಸಾನ್ ಲೆಗ್‌ನಲ್ಲಿ ಕಣಕ್ಕೆ ಇಳಿಯುವುದಾಗಿ ಶನಿವಾರ ಖಚಿತಪಡಿಸಿದ್ದಾರೆ.

26 ವರ್ಷ ವಯಸ್ಸಿನ ಚೋಪ್ರಾ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಾಂಪಿಯನ್ ಆಗಿದ್ದರು. ಕಳೆದ ವಾರ ಪ್ಯಾರಿಸ್‌ನಲ್ಲಿ ತೊಡೆಯ ನೋವಿನ ಹೊರತಾಗಿಯೂ ಋತುವಿನ ಅತ್ಯುತ್ತಮ ಸಾಧನೆಯೊಂದಿಗೆ (89.45 ಮೀ) ಬೆಳ್ಳಿ ಗೆದ್ದಿದ್ದಾರೆ. ಈ ಸ್ಪರ್ಧೆಯಲ್ಲಿ ಪಾಕಿಸ್ತಾನದ ಅರ್ಷದ್ ನದೀಮ್ (92.97 ಮೀ) ಒಲಿಂಪಿಕ್ಸ್ ದಾಖಲೆಯೊಂದಿಗೆ ಚಿನ್ನ ಜಯಿಸಿದ್ದಾರೆ.

'ಆ.22ರಂದು ಪ್ರಾರಂಭವಾಗುವ ಲೂಸಾನ್ ಲೆಗ್ ನಲ್ಲಿ ಭಾಗವಹಿಸಲು ನಿರ್ಧರಿಸಿದ್ದೇನೆ' ಎಂದು ಚೋಪ್ರಾ ಶನಿವಾರ ವರ್ಚುವಲ್ ಸಂವಾದದಲ್ಲಿ ತಿಳಿಸಿದರು.

ಪ್ಯಾರಿಸ್‌ನಲ್ಲಿ ಗೆದ್ದ ಬೆಳ್ಳಿ ಪದಕವು ಟೋಕಿಯೊದಲ್ಲಿ ಜಯಿಸಿದ್ದ ಚಿನ್ನದಷ್ಟೇ ಖುಷಿ ಕೊಟ್ಟಿದೆ ಎಂದು ಚೋಪ್ರಾ ಹೇಳಿದರಾದರೂ, ಅವರ ಮುಖದಲ್ಲಿ ನಿರಾಸೆ ಎದ್ದು ಕಾಣುತ್ತಿತ್ತು. ಚಾಂಪಿಯನ್ 'ಪಟ್ಟ'ವನ್ನು ಉಳಿಸಿಕೊಳ್ಳುವ ಮತ್ತು 90 ಮೀಟರ್ ಮೈಲಿಗಲ್ಲನ್ನು ದಾಟುವ ಅವರ ಕನಸು ಈ ಬಾರಿಯೂ ನನಸಾಗದ ಕೊರಗು ಮಾತಿನಲ್ಲಿ ವ್ಯಕ್ತವಾಯಿತು.

'ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವಾಗ ಮಾನಸಿಕವಾಗಿ ಪೂರ್ಣಪ್ರಮಾಣದಲ್ಲಿ ಸಿದ್ಧನಾಗಿದ್ದೆ. ಆದರೆ, ದೈಹಿಕವಾಗಿ ಶೇ 100ರಷ್ಟು ತೊಡಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಫೈನಲ್‌ನಲ್ಲಿ ನದೀಮ್ ಅವರಿಂದ ದಾಖಲೆಯ ದೂರದ ಎಸೆತ ಬಂದ ನಂತರವೂ ನನಗೆ ಚಿನ್ನ ಗೆಲ್ಲಲು ಸಾಧ್ಯವಿಲ್ಲ ಎಂದು ಅನಿಸಿರಲಿಲ್ಲ' ಎಂದು ಚೋಪ್ರಾ ಹೇಳಿದರು.

ಪ್ಯಾರಿಸ್‌ನಲ್ಲಿ ಆಗಸ್ಟ್ 8ರಂದು ಒಲಿಂಪಿಕ್ಸ್‌ನ ಪುರುಷರ ಜಾವೆಲಿನ್ ಥ್ರೋ ಫೈನಲ್‌ನ ನಂತರ ಸ್ವಿಟ್ಜರ್ಲೆಂಡ್‌ಗೆ ತೆರಳಿರುವ ಚೋಪ್ರಾ, ಅಲ್ಲಿ ತರಬೇತಿ ಪಡೆಯುತ್ತಿದ್ದಾರೆ. ದೀರ್ಘಕಾಲದಿಂದ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದರೂ ಋತುವನ್ನು ಯಶಸ್ವಿಯಾಗಿ ಮುಗಿಸಲು ಅವರು ನಿರ್ಧರಿಸಿದ್ದಾರೆ.

ಸೆ.13ರಿಂದ ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ ಡೈಮಂಡ್ ಲೀಗ್‌ನ ಫೈನಲ್ ನಡೆಯಲಿದ್ದು, ಅದರಲ್ಲಿ ಭಾಗವಹಿಸಿದ ನಂತರ ಚೋಪ್ರಾ ಅವರು ತೊಡೆಯ ನೋವಿನ ಸಮಸ್ಯೆ ಬಗ್ಗೆ ವೈದ್ಯರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಶಸ್ತ್ರಚಿಕಿತ್ಸೆಯ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

'ಪ್ರಸ್ತುತ ಋತು ಮುಕ್ತಾಯಕ್ಕೆ ಇನ್ನು ಒಂದು ತಿಂಗಳು ಉಳಿದಿದೆ. ಅಲ್ಲಿಯವರೆಗೆ ಆದಷ್ಟು ಕಾಳಜಿ ವಹಿಸಲು ಪ್ರಯತ್ನಿಸುತ್ತೇನೆ. ಋತು ಮುಗಿದ ನಂತರ ವೈದ್ಯರನ್ನು ಸಂಪರ್ಕಿಸಿ, ಚಿಕಿತ್ಸೆಗೆ ಒಳಪಡುತ್ತೇನೆ' ಎಂದು ಚೋಪ್ರಾ ಹೇಳಿದರು.

'ನಾನು ಜ್ಯೂರಿಕ್ ಲೆಗ್ (ಸೆ.5) ಮತ್ತು ಡೈಮಂಡ್ ಲೀಗ್ ಫೈನಲ್ ಬಗ್ಗೆ ಯೋಚಿಸುತ್ತಿದ್ದೆ. ಆದರೆ, ಅದೃಷ್ಟವಶಾತ್ ಗಾಯದ ತೀವ್ರತೆ ಕಡಿಮೆಯಿರುವುದರಿಂದ ಅದಕ್ಕೂ ಮೊದಲು ಲೂಸಾನ್ ಲೆಗ್‌ನಲ್ಲಿ ಭಾಗವಹಿಸಲು ಸಜ್ಜಾಗುತ್ತಿದ್ದೇನೆ' ಎಂದು ಹೇಳಿದರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ನೀರಜ್ ಚೋಪ್ರಾ –ಪ್ರಜಾವಾಣಿ ಚಿತ್ರ/ಕೆ.ಎನ್‌. ಶಾಂತಕುಮಾರ್

ಮುಖ್ಯಾಂಶಗಳು

- ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿರುವ ಭಾರತದ ಅಥ್ಲೀಟ್
- ಋತುವನ್ನು ಯಶಸ್ವಿಯಾಗಿ ಮುಗಿಸಿ, ಬಳಿಕ ಚಿಕಿತ್ಸೆಗೆ ನಿರ್ಧಾರ
- 2022ರ ಡೈಮಂಡ್ ಲೀಗ್‌ನಲ್ಲಿ ಚಾಂಪಿಯನ್ ಆಗಿದ್ದ ನೀರಜ್

'ಸಾಮಾನ್ಯವಾಗಿ ಸ್ಪರ್ಧೆಯ ನಂತರ ಗಾಯದ ತೀವ್ರತೆ ಹೆಚ್ಚಾಗುತ್ತದೆ. ಆದರೆ, ಈ ಬಾರಿ ಇಶಾನ್ ಮರ್ವಾಹಾ (ಫಿಸಿಯೊ) ಪ್ಯಾರಿಸ್‌ನಲ್ಲಿ ನನಗೆ ಸೂಕ್ತ ಚಿಕಿತ್ಸೆ ನೀಡಿದರು. ಅವರಿಗೆ ಧನ್ಯವಾದ ಹೇಳುತ್ತೇನೆ. ಅವರು 2017ರಿಂದ ನನ್ನೊಂದಿಗೆ ಇದ್ದಾರೆ. ಪ್ರತಿ ಹಂತದಲ್ಲೂ ಅವರು ನೆರವಾಗಿದ್ದಾರೆ' ಎಂದರು.

ಚೋಪ್ರಾ ಅವರು ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಬಳಿಕ ತೊಡೆಯ ಸ್ನಾಯು ನೋವಿನ ಸಮಸ್ಯೆ ಎದುರಿಸುತ್ತಿದ್ದಾರೆ.

ಬ್ರಸೆಲ್ಸ್‌ನಲ್ಲಿ ನಡೆಯುವ ಫೈನಲ್‌ಗೆ ಅರ್ಹತೆ ಪಡೆಯಲು ಚೋಪ್ರಾ, ಡೈಮಂಡ್ ಲೀಗ್ ಲೆಗ್ ಸರಣಿಯಲ್ಲಿ ಅಗ್ರ ಆರರಲ್ಲಿ ಸ್ಥಾನ ಪಡೆಯಬೇಕಾಗಿದೆ. ಪ್ರಸ್ತುತ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ. 2022ರ ಆವೃತ್ತಿಯ ಚಾಂಪಿಯನ್ ಚೋಪ್ರಾ, ಕಳೆದ ಆವೃತ್ತಿಯಲ್ಲಿ ಬೆಳ್ಳಿ ಗೆದ್ದಿದ್ದರು. ಅಲ್ಲಿ ಝೆಕ್ ರಿಪಬ್ಲಿಕ್‌ನ ಜೇಕಬ್ ವಾಡ್ಲೆಚ್ ಚಿನ್ನ ಜಯಿಸಿದ್ದರು.

ಮಹಾರಾಜ ಕಪ್ ಕ್ರಿಕೆಟ್ ಟೂರ್ನಿ: ಹಾಲಿ ಚಾಂಪಿಯನ್ ಟೈಗರ್ಸ್‌ಗೆ ಸತತ ಎರಡನೇ ಗೆಲುವು

ರೋಹನ್ ಅರ್ಧಶತಕ: ಡ್ರ್ಯಾಗನ್‌ಗೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹನ್ ಪಾಟೀಲ್ (72, 40ಎ) ಮತ್ತು ಮೆಕ್‌ನಿಲ್ ನೊರೊನಾ (48, 19ಎ) ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಮಂಗಳೂರು ಡ್ರ್ಯಾಗನ್ಸ್ ತಂಡ ಮಹಾರಾಜ ಕಪ್ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಶನಿವಾರ ಶಿವಮೊಗ್ಗ ಲಯನ್ಸ್ ಮೇಲೆ ಎಂಟು ವಿಕೆಟ್‌ಗಳ ಸುಲಭ ಜಯಗಳಿಸಿತು.

ಲಯನ್ಸ್‌ನ ಅಭಿನವ್ ಮನೋಹರ್ (ಅಜೇಯ 84, 34ಎ) ಅವರ ಮಿಂಚಿನ ಆಟ ಗೆಲುವಿಗೆ ಸಾಲಲಿಲ್ಲ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 176 ರನ್‌ಗಳ ಗುರಿಯನ್ನು ಎದುರಿಸಿದ ಮಂಗಳೂರು ತಂಡಕ್ಕೆ ರೋಹನ್ ಮತ್ತು ಮೆಕ್‌ನಿಲ್ ಪವರ್‌ಪ್ಲೇ ಅವಧಿಯೊಳಗೆ 75 ರನ್ ಸೇರಿಸಿ ಮಿಂಚಿನ ಆರಂಭ ಒದಗಿಸಿದರು. ರೋಹನ್ ಆಟದಲ್ಲಿ ಆರು ಬೌಂಡರಿ, ಐದು ಸಿಕ್ಸರ್‌ಗಳಿದ್ದವು. ನೊರೊನಾ ಆಟದಲ್ಲಿ ನಾಲ್ಕು ಬೌಂಡರಿ, ನಾಲ್ಕು ಸಿಕ್ಸ‌ರ್‌ಗಳಿದ್ದವು.

ರೋಹನ್ ನಂತರ ನಿಕಿನ್ ಜೋಸ್ (ಔಟಾಗದೇ 17) ಜೊತೆ ಎರಡನೇ ವಿಕೆಟ್‌ಗೆ 38 ಎಸೆತಗಳಲ್ಲಿ 59 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಕೆ.ಸಿದ್ಧಾರ್ಥ್ ಔಟಾಗದೇ 38 ರನ್ (19ಎ) ಹೊಡೆದರು. ತಂಡ ಕೇವಲ 16.2 ಓವರುಗಳಲ್ಲಿ 2 ವಿಕೆಟ್‌ಗೆ 178 ರನ್ ಬಾರಿಸಿತು.



ರೋಹನ್ ಪಾಟೀಲ್ ಬ್ಯಾಟಿಂಗ್ ವೈಖರಿ

ಇದಕ್ಕೆ ಮೊದಲು ಟಾಸ್ ಸೋತಿದ್ದ ಶಿವಮೊಗ್ಗ ಲಯನ್ಸ್ 6 ವಿಕೆಟ್‌ಗೆ 175 ರನ್ ಗಳಿಸಿತ್ತು. ಮಧ್ಯಮ ಕ್ರಮಾಂಕದ ಆಟಗಾರ ಅಭಿನವ್ ಮನೋಹರ್ ಅಜೇಯ 84 ರನ್ ಗಳಿಸಿದ್ದರಿಂದ ತಂಡ ಗೌರವದ ಮೊತ್ತ ಗಳಿಸಲು ಸಾಧ್ಯವಾಯಿತು. ಇದರಲ್ಲಿ 3 ಬೌಂಡರಿ, 9 ಸಿಕ್ಸರ್‌ಗಳಿದ್ದವು. ಐದನೇ ವಿಕೆಟ್‌ಗೆ ಅವರು ಅವಿನಾಶ್ ಡಿ. (22, 21ಎ) ಜೊತೆ 44 ಎಸೆತಗಳಲ್ಲಿ 88 ರನ್ ಸೇರಿಸಿದ್ದು ಗಮನಸೆಳೆಯಿತು.

ಟೈಗರ್ಸ್‌ಗೆ ಗೆಲುವು: ದಿನದ ಮತ್ತೊಂದು ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡವು 6 ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಮಣಿಸಿತು. ಹಾಲಿ ಚಾಂಪಿಯನ್ ಟೈಗರ್ಸ್‌ಗೆ ಇದು ಸತತ ಎರಡನೇ ಗೆಲುವಾದರೆ, ಮಿಸ್ಟಿಕ್ಸ್‌ಗೆ ಸತತ ಎರಡನೇ ಸೋಲು.

ಮೊದಲು ಬ್ಯಾಟಿಂಗ್ ಮಾಡಿದ ಮಿಸ್ಟಿಕ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 158 ರನ್ ಗಳಿಸಿತು. ಆರಂಭಿಕ ಬ್ಯಾಟರ್‌ಗಳಾದ ನಾಯಕ ದೇವದತ್ತ ಪಡಿಕ್ಕಲ್ (46; 29ಎ) ಮತ್ತು ಲುವ್ನಿತ್ ಸಿಸೋಡಿಯಾ (39; 27) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಟೈಗರ್ಸ್‌ನ ಕುಮಾರ್ ಎಲ್.ಆರ್. ಮತ್ತು ಕೆ.ಸಿ. ಕಾರ್ಯಪ್ಪ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದು ಮಿಂಚಿದರು.

ಈ ಗುರಿಯನ್ನು ಬೆನ್ನತ್ತಿದ ಟೈಗರ್ಸ್ ತಂಡವು 9 ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 160 ರನ್ ಗಳಿಸಿ ಗೆಲುವಿನ ಗಡಿ ದಾಟಿತು. ಶ್ರೀಜಿತ್ ಕೆ.ಎಲ್. (51;36ಎ) ಅರ್ಧಶತಕ ಗಳಿಸಿದರೆ, ನಾಯಕ ಮನೀಷ್ ಪಾಂಡೆ (31; 30ಎ), ಅನೀಶ್ವರ್ ಗೌತಮ್ (ಔಟಾಗದೇ 35;20ಎ) ಮತ್ತು ಕಾರ್ತಿಕೇಯ ಕೆ.ಪಿ. (ಔಟಾಗದೇ 31;20ಎ) ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಲಯನ್ಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 175 (ರೋಹಿತ್ ಕೆ. 24, ಧ್ರುವ್ ಪ್ರಭಾಕರ್ 20, ಅಭಿನವ್ ಮನೋಹರ್ ಔಟಾಗದೇ 84, ಅವಿನಾಶ್ ಡಿ. 22; ಅಭಿಲಾಷ್ ಶೆಟ್ಟಿ 39ಕ್ಕೆ1, ನಿಶ್ಚಿತ್ ಎನ್.ರಾವ್ 31ಕ್ಕೆ2, ಶ್ರೇಯಸ್ ಗೋಪಾಲ್ 26ಕ್ಕೆ1, ಎಂ.ಬಿ.ದರ್ಶನ್ 36ಕ್ಕೆ1); **ಮಂಗಳೂರು ಡ್ರ್ಯಾಗನ್ಸ್:** 16.2 ಓವರುಗಳಲ್ಲಿ 2 ವಿಕೆಟ್‌ಗೆ 178 (ಮೆಕ್‌ನಿಲ್ ಹ್ಯಾಡ್ಲಿ ನೊರೊನಾ 42, ರೋಹನ್ ಪಾಟೀಲ್ 72, ನಿಕಿನ್ ಜೋಸ್ ಔಟಾಗದೇ 17, ಕೃಷ್ಣಮೂರ್ತಿ ಸಿದ್ಧಾರ್ಥ ಔಟಾಗದೇ 38; ರಾಜ್‌ವೀರ್ ವಾಧ್ವಾ 23ಕ್ಕೆ1, ಹಾರ್ದಿಕ್ ರಾಜ್ 33ಕ್ಕೆ1). **ಪಂದ್ಯದ ಆಟಗಾರ:** ಎ.ರೋಹನ್ ಪಾಟೀಲ್.

ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 9ಕ್ಕೆ 158 (ಲುವ್ನಿತ್ ಸಿಸೋಡಿಯಾ 39, ದೇವದತ್ತ ಪಡಿಕ್ಕಲ್ 46; ಕುಮಾರ್ ಎಲ್.ಆರ್. 34ಕ್ಕೆ 3, ಕೆ.ಸಿ. ಕಾರ್ಯಪ್ಪ 22ಕ್ಕೆ 2). **ಹುಬ್ಬಳ್ಳಿ ಟೈಗರ್ಸ್:** 18.3 ಓವರ್‌ಗಳಲ್ಲಿ 4ಕ್ಕೆ 160 (ಶ್ರೀಜಿತ್ ಕೆ.ಎಲ್. 51, ಮನೀಷ್ ಪಾಂಡೆ 31, ಅನೀಶ್ವರ್ ಗೌತಮ್ ಔಟಾಗದೇ 35, ಕಾರ್ತಿಕೇಯ ಕೆ.ಪಿ. ಔಟಾಗದೇ 31; ವೈಶಾಕ್ ವಿ. 30ಕ್ಕೆ 2). **ಪಂದ್ಯದ ಆಟಗಾರ:** ಅನೀಶ್ವರ್ ಗೌತಮ್

ಇಂದಿನ ಪಂದ್ಯಗಳು

ಗುಲ್ಬರ್ಗ ಮಿಸ್ಟಿಕ್ಸ್– ಮೈಸೂರು ವಾರಿಯರ್ಸ್ (ಮಧ್ಯಾಹ್ನ 3)

ಬೆಂಗಳೂರು ಬ್ಲಾಸ್ಟರ್ಸ್– ಶಿವಮೊಗ್ಗ ಲಯನ್ಸ್ (ಸಂಜೆ 7

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರ‍್ಯಾಕೆಟ್ ಕುಕ್ಕಿದ ಅಲ್ಕರಾಜ್

ಸಿನ್ಸಿನಾಟಿ ಓಪನ್ ಟೂರ್ನಿಯಲ್ಲಿ ಸೋಲು; ಕ್ಷಮೆಯಾಚನೆ

ಸಿನ್ಸಿನಾಟಿ (ಎಪಿ): ವಿಶ್ವದ ಮೂರನೇ ಕ್ರಮಾಂಕದ ಟೆನಿಸಿಗ ಕಾರ್ಲೋಸ್ ಅಲ್ಕರಾಜ್ ಅವರು ವಿರಳವೆಂಬಂತೆ ಪಂದ್ಯವೊಂದರ ವೇಳೆ ಹತಾಶೆಯಿಂದ ರ‍್ಯಾಕೆಟ್‌ಅನ್ನು ಆಗಾಗ ನೆಲಕ್ಕೆ ಕುಕ್ಕಿದರು. ಶುಕ್ರವಾರ ನಡೆದ ಸಿನ್ಸಿನಾಟಿ ಓಪನ್ ಟೂರ್ನಿಯ ಈ ಪಂದ್ಯದಲ್ಲಿ ನಾಲ್ಕು ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ಸ್ಪೇನ್‌ನ ಆಟಗಾರ 6–4 6–7 (5–7), 4–6 ರಲ್ಲಿ ಶ್ರೇಯಾಂಕರಹಿತ ಆಟಗಾರ ಗೇಲ್ ಮಾನ್ಫಿಲ್ಸ್ ಅವರಿಗೆ ಮಣಿದರು.

ಗುರುವಾರ ರಾತ್ರಿ ನಡೆಯಬೇಕಾಗಿದ್ದ ಎರಡನೇ ಸುತ್ತಿನ ಈ ಪಂದ್ಯ ಮಳೆಯಿಂದಾಗಿ ಅರ್ಧದಲ್ಲೇ ಮುಂದಕ್ಕೆ ಹೋಗಿತ್ತು. ಆಗ ಆಟಗಾರರು ಎರಡನೇ ಸೆಟ್‌ನ ಟೈಬ್ರೇಕರ್ ಆಡುತ್ತಿದ್ದರು. 37 ವರ್ಷ ವಯಸ್ಸಿನ ಮಾನ್ಫಿಲ್ಸ್ ಅವರು ಎರಡನೇ ಶ್ರೇಯಾಂಕದ ಆಟಗಾರನ ವಿರುದ್ಧ ಕೊನೆಯ ಎರಡೂ ಸೆಟ್‌ಗಳನ್ನು ಗೆದ್ದು 16ರ ಸುತ್ತಿಗೆ ಮುನ್ನಡೆದರು.



ಕಾರ್ಲೋಸ್ ಅಲ್ಕರಾಜ್

ವರ್ಷದ ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿರುವ ಅಮೆರಿಕ ಓಪನ್‌ಗೆ ಮೊದಲು ಅಲ್ಕರಾಜ್‌ಗೆ ಇದು ಒಳ್ಳೆಯ ಸಿದ್ಧತೆಯಾಗಲಿಲ್ಲ.

'ನನ್ನ ಟೆನಿಸ್ ಜೀವನದಲ್ಲೇ ಆಡಿದ ಅತ್ಯಂತ ಕೆಟ್ಟ ಪಂದ್ಯ ಇದಾಗಿತ್ತು ಎಂಬ ಭಾವನೆ ಮೂಡಿತು. ನಾನು ಉತ್ತಮ ಅಭ್ಯಾಸ ನಡೆಸಿದ್ದೆ. ಚೆನ್ನಾಗಿ ಆಡುತ್ತಿದ್ದೇನೆಂಬ ಭಾವನೆಯೂ ಮೂಡಿತು. ಆದರೆ ನಾನಂದುಕೊಂಡ ಹಾಗೆ ಆಗಲಿಲ್ಲ. ಇದನ್ನೆಲ್ಲಾ ಮರೆತು ನ್ಯೂಯಾರ್ಕ್‌ಗೆ ತೆರಳುವೆ' ಎಂದು ಅವರು ಸ್ಪೇನ್‌ನ ಆಟಗಾರ ಹೇಳಿದರು. ಅಮೆರಿಕ ಓಪನ್ ಆಗಸ್ಟ್ 26ರಂದು ಆರಂಭ ಆಗಲಿದೆ.

'ನನ್ನ ವರ್ತನೆಗೆ ಕ್ಷಮೆಯಾಚಿಸುತ್ತೇನೆ. ಅಂಕಣದಲ್ಲಿ ಆ ರೀತಿಯ ಪ್ರತಿಕ್ರಿಯೆ ಒಳ್ಳೆಯದಲ್ಲ. ಉದ್ವಿಗ್ನತೆಗೆ ಒಳಗಾದಾಗ ಭಾವನೆಗಳನ್ನು ನಿಯಂತ್ರಿಸುವುದು ತುಂಬಾ ಕಠಿಣ' ಎಂದು ಶನಿವಾರ ಅವರು ಹೇಳಿಕೆ ನೀಡಿದ್ದಾರೆ.

ಕಳೆದ ವರ್ಷ ಇದೇ ಟೂರ್ನಿಯ ಫೈನಲ್‌ನಲ್ಲಿ ಅವರು ಸರ್ಬಿಯಾದ ನೊವಾಕ್ ಜೊಕೊವಿಚ್‌ಗೆ ಸೋತಿದ್ದರು.

ಅಮೆರಿಕ ಓಪನ್ ಟೆನಿಸ್: ಹಿಂದೆಸರಿದ ವೊಂದ್ರುಸೋವಾ

ನ್ಯೂಯಾರ್ಕ್ (ಎಪಿ): 2023ರ ವಿಂಬಲ್ಡನ್ ಮಹಿಳಾ ಚಾಂಪಿಯನ್ ಮರ್ಕೆತಾ ವೊಂದ್ರುಸೋವಾ ಮತ್ತು ಬ್ರಿಟನ್‌ನ ಆಟಗಾರ ಕ್ಯಾಮ್ ನೋರಿ ಅವರು ಆ.26ರಂದು ಆರಂಭವಾಗುವ ಅಮೆರಿಕ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆಸರಿದಿದ್ದಾರೆ.

25 ವರ್ಷ ವಯಸ್ಸಿನ ವೊಂದ್ರುಸೋವಾ (ಝೆಕ್ ರಿಪಬ್ಲಿಕ್) ಪ್ರಸ್ತುತ 18ನೇ ಕ್ರಮಾಂಕ ಹೊಂದಿದ್ದಾರೆ. ಅವರು ತೋಳಿನ ನೋವಿನಿಂದಾಗಿ ಆಡುತ್ತಿಲ್ಲ.

ಹೈದರಾಬಾದ್ ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

ನಿಜಾಮ್ಸ್ ಗೋಲ್ಡ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:55ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಮೇರಿಕನ್ ಫ್ಲೇಮ್ 5, ಜಸ್ಟ್ ಇಂಕ್ರೆಡಿಬಲ್ 1, ಇಂಡಿಯನ್ ಟೆಂಪಲ್ 4

2ನೇ ರೇಸ್: ಕ್ಲಾರ 6, ಏರಿಯನ್ ಒನ್ 5, ಪ್ಲೆಸಂಟ್ ಸ್ಟಾರ್ 3

3ನೇ ರೇಸ್: ಹರಿಕೇನ್ ಬೇ 2, ಟ್ರಿಶೂಲ್ 3, ಆಲ್‌ಫೈನ್ ಗರ್ಲ್ 5

4ನೇ ರೇಸ್: ಗ್ರೇಟ್ ಗನ್ಸ್ 3, ಬ್ಲೇಜಿಂಗ್ ಗನ್ 10, ಎಲ್ವೆನಾರ್ 12

5ನೇ ರೇಸ್: ಟಚ್ ಆಫ್ ಗ್ರೇ 1, ಚಾಮೊನಿಕ್ಸ್ 5, ಜಿಯೊಗ್ರಾಫಿಕ್ 6

6ನೇ ರೇಸ್: ಕ್ಲೇರ್ 1, ಅಶ್ವಗಜ್‌ರಾಜ್ 3, ಕ್ರೌನ್ ವಿಟ್‌ನೆಸ್ 4

ಉತ್ತಮ ಬೆಟ್: ಕ್ಲೇರ್

ಜಾಕ್‌ಪಾಟ್‌ಗೆ	1ನೇ ಟ್ರೆಬಲ್	2ನೇ ಟ್ರೆಬಲ್
3,4,5,6,7	1,2,3	4,5,6

ಚೆಸ್: ಅಲಿರೇಜಾ ಚಾಂಪಿಯನ್

ಸೇಂಟ್ ಲೂಯಿ (ಅಮೆರಿಕ): ಕೊನೆಯ ದಿನ ಬ್ಲಿಟ್ಜ್ ಸುತ್ತಿನ ಉದ್ದಕ್ಕೂ ಮುನ್ನಡೆ ಸಾಧಿಸಿದ್ದ ಫ್ರಾನ್ಸ್‌ನ ಅಲಿರೇಜಾ ಫಿರೋಜ್, ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಶುಕ್ರವಾರ ಮುಕ್ತಾಯಗೊಂಡ ಈ ಟೂರ್ನಿಯಲ್ಲಿ ಅವರು 13 ಪಾಯಿಂಟ್ಸ್ ಕಲೆಹಾಕಿದರು.

ಇರಾನ್‌ನಲ್ಲಿ ಹುಟ್ಟಿ ಬೆಳೆದು ಕೆಲ ವರ್ಷ ಹಿಂದೆ ಫ್ರಾನ್ಸ್‌ನ ಪೌರತ್ವ ಪಡೆದ ಅಲಿರೇಜಾ, 2022ರಲ್ಲೂ ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಬ್ಲಿಟ್ಜ್‌ನ 18 ಸುತ್ತುಗಳಲ್ಲಿ ಅವರಿಂದ ಅತ್ಯುತ್ತಮ ಸಾಧನೆ ಮೂಡಿಬಂತು. ಅವರು ಬಹುಮಾನದ ಮೊತ್ತವಾಗಿ ₹33,55,000 ಜೇಬಿಗಿಳಿಸಿಕೊಂಡರು.

ಬ್ಲಿಟ್ಜ್‌ನ 18 ಸುತ್ತುಗಳ ಪೈಕಿ 13ನೇ ಸುತ್ತಿನಲ್ಲಿ ಪ್ರಜ್ಞಾನಂದ ಮೇಲೆ ಜಯಗಳಿಸಿದ ಅಲಿರೇಜಾ, ಎರಡು ಸುತ್ತುಗಳು ಉಳಿದಿರುವಂತೆ ಪ್ರಶಸ್ತಿಯನ್ನು ಖಾತರಿಪಡಿಸಿಕೊಂಡಿದ್ದರು.

ಅಮೆರಿಕದ ವೆಸ್ಲಿ ಸೊ (10 ಪಾಯಿಂಟ್ಸ್), ಹಿಕಾರು ನಕಾಮುರ (8) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ (1) ಬ್ಲಿಟ್ಜ್‌ನಲ್ಲಿ ಸುಧಾರಿತ ಪ್ರದರ್ಶನ ನೀಡಿದರೂ ಕೊನೆಯ ಸ್ಥಾನದಿಂದ ಮೇಲೇರಲಿಲ್ಲ. 10 ಮಂದಿ ಆಟಗಾರರ ಟೂರ್ನಿಯಲ್ಲಿ ಪ್ರಜ್ಞಾನಂದ ₹5.87 ಲಕ್ಷ ಬಹುಮಾನ ಪಡೆದರು.

ಕಳೆದ ಬಾರಿ ಚಾಂಪಿಯನ್ ಆಗಿದ್ದ ಅಮೆರಿಕದ ಫ್ಯಾಬಿಯಾನೊ ಕರುವಾನ (4.5) ಆರನೇ ಸ್ಥಾನ ಪಡೆದರು.



ಟ್ರೋಫಿಯೊಂದಿಗೆ ಅಲಿರೇಜಾ ಫಿರೋಜ್ – ಎಕ್ಸ್ ಚಿತ್ರ

ಅಂತಿಮ ಸ್ಥಾನ: 1. ಅಲಿರೇಜಾ ಫಿರೋಜ್ (ಫ್ರಾನ್ಸ್, 13), 2. ವೆಸ್ಲಿ ಸೊ (ಅಮೆರಿಕ, 10), 3. ಹಿಕಾರು ನಕಾಮುರ (ಅಮೆರಿಕ, 8), 4. ಲೆವೊನ್ ಅರೋನಿಯನ್ (ಅಮೆರಿಕ, 6.5), 5. ಮ್ಯಾಕ್ಸಿಂ ವೇಷಿಯಲ್ ಲಗ್ರಾವ್ (ಫ್ರಾನ್ಸ್, 6.5), 6. ಫ್ಯಾಬಿಯಾನೊ ಕರುವಾನಾ (ಅಮೆರಿಕ, 4.5), 7. ಇಯಾನ್ ನಿಪೊಮ್‌ನಿಷಿ (ರಷ್ಯಾ–ಫಿಡೆ, 4.5) 8. ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ, 3), 9. ಲೀನಿಯರ್ ಡೊಮಿಂಗೆಝ್ (ಅಮೆರಿಕ, 2), 10. ಆರ್.ಪ್ರಜ್ಞಾನಂದ (ಭಾರತ, 1).

ಟಿಟಿ: ತನಿಷ್ಕಾಗೆ ಪ್ರಶಸ್ತಿ 'ಡಬಲ್'


ಪ್ರಜಾವಾಣಿ ವಾರ್ತೆ

ಹೊಸಪೇಟೆ: ತನಿಷ್ಕಾ ಕಪಿಲ್ ಕಾಲಭೈರವ, ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ಮತ್ತು 15 ವರ್ಷದೊಳಗಿನ ಬಾಲಕಿಯರ ವಿಭಾಗಗಳ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಇಲ್ಲಿನ ಟಿ.ಬಿ.ಡ್ಯಾಮ್ ರಿಕ್ರಿಯೇಷನ್ ಕ್ಲಬ್‌ನಲ್ಲಿ ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಟೂರ್ನಿ ನಡೆಯುತ್ತಿದೆ. ತನಿಷ್ಕಾ ಅವರಿಗೆ ಇಲ್ಲಿ ಇದು ಮೂರನೇ ಪ್ರಶಸ್ತಿಯಾಗಿದೆ. ಶುಕ್ರವಾರ 13 ವರ್ಷದೊಳಗಿನ ವಿಭಾಗದಲ್ಲೂ ಚಾಂಪಿಯನ್ ಆಗಿದ್ದರು.

ಶನಿವಾರ ನಡೆದ 17 ವರ್ಷದೊಳಗಿನವರ ಫೈನಲ್‌ನಲ್ಲಿ ತನಿಷ್ಕಾ 11-9, 11-8, 5-11, 11-4ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಪ್ರಣವಿ ಅವರನ್ನು; ಹಿಮಾಂಶಿ ಅವರು ಪ್ರೇಕ್ಷಾ ತಿಲಾವತ್ ಅವರನ್ನು ಸೋಲಿಸಿದ್ದರು.

15 ವರ್ಷದೊಳಗಿವನರ ಫೈನಲ್ ನಲ್ಲಿ ತನಿಷ್ಕಾ 11-8, 2-11, 7-11, 11-2, 11-9ರಿಂದ ಹಿಯಾ ಸಿಂಗ್ ಅವರನ್ನು ಮಣಿಸಿದರು.



ಪ್ರಶಸ್ತಿಯೊಂದಿಗೆ ತನಿಷ್ಕಾ ಕಪಿಲ್ ಕಾಲಭೈರವ ಮತ್ತು ಬಿ.ಆರ್‌. ಗೌರವ್

ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಶಿವಾನಿ ಮಹೇಂದ್ರನ್ ಅವರನ್ನು; ಹಿಯಾ ಅವರು ಕೈರಾ ಬಾಳಿಗಾ ಅವರನ್ನು ಅವರನ್ನು ಹಿಮ್ಮೆಟ್ಟಿಸಿದ್ದರು.

ಗೌರವ್‌ಗೆ ಪ್ರಶಸ್ತಿ: 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬಿ.ಆರ್. ಗೌರವ್ 8-11, 12-10, 11-9, 13-15, 11-9ರಿಂದ ಅರ್ಣವ್ ಎನ್. ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಸೆಮಿಫೈನಲ್‌ನಲ್ಲಿ ಗೌರವ್ ಅವರು ವಿಭಾಸ್ ವಿ.ಜಿ. ಅವರನ್ನು; ಅರ್ಣವ್ ಅವರು ತೆಶುಬ್ ದಿನೇಶ್ ಅವರನ್ನು ಸೋಲಿಸಿದ್ದರು.



ಬೆಂಗಳೂರಿನ ಹಾಕಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸೆಂಟೆನರಿ ಶೀಲ್ಡ್ (17 ವರ್ಷದೊಳಗಿನವರ) ಅಂತರ ಶಾಲಾ ಹಾಕಿ ಟೂರ್ನಿಯಲ್ಲಿ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆ ತಂಡ ಪ್ರಶಸ್ತಿಯನ್ನು ಗೆದ್ದುಕೊಂಡಿತು. (ನಿಂತಿರುವವರು ಎಡದಿಂದ) ಕೆವಿನ್ ಜೊನಾಥನ್‌, ಸ್ಯಾಮ್ಸನ್ ಡೇಲ್ ಶೆಫರ್ಡ್, ಅಮನ್ ಪುಣಚ ಪಿ.ಎ, ಶರ್ವೇಶ್‌, ಸಾಬು ವರ್ಕಿ (ಕೋಚ್), ಆಯುಷ್ ಎ, ಅಥವನ್‌, ಅದ್ವಿಕ್ ರೊಡ್ರಿಗಸ್‌, ಗಗನ್ ಚೇತನ್‌, ಬ್ರಾಡೆನ್ ವಿನ್ಸೆಂಟ್ ಎಸ್‌. ಮತ್ತು ಅಮ್ಮರ್ ಟೋಪಿವಾಲಾ (ಕುಳಿತವರು ಎಡದಿಂದ) ಅಲನ್ ಬೆನ್‌, ರೋನಿತ್ ಇನ್‌ಫೆಂಟ್‌, ಶರತ್ ಆರ್‌, ಬ್ರಾಂಡೆನ್ ಜೋಸ್‌, ಅಯಾನ್ ಶಕೀರ್ ಅಲಿ, ಸೇನತ್ ಕೊಠಾರಿ, ಜೋಯಲ್ ಪಾಲ್ ಮತ್ತು ಅಕ್ರಿತ್ ರೊಡ್ರಿಗಸ್ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಡುರಾಂಡ್ ಕಪ್: ಇಂದಿನ ಪಂದ್ಯ ರದ್ದು

ಕೋಲ್ಕತ್ತ (ಪಿಟಿಐ): ವೈದ್ಯೆಯ ಮೇಲೆ ಅತ್ಯಾಚಾರ– ಕೊಲೆ ಪ್ರಕರಣದ ನಂತರ ನಗರದಲ್ಲಿ ಪ್ರತಿಭಟನೆ ನಡೆಯುತ್ತಿರುವ ಕಾರಣ, ಮೋಹನ್ ಬಾಗನ್ ಮತ್ತು ಈಸ್ಟ್ ಬೆಂಗಾಲ್ ನಡುವಣ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಬೇಕಾಗಿದ್ದ ಡುರಾಂಡ್ ಕಪ್ ಫುಟ್‌ಬಾಲ್ ಡರ್ಬಿ ಪಂದ್ಯವನ್ನು ರದ್ದುಗೊಳಿಸಲಾಗಿದೆ.

ಲಂಕಾ ಕ್ರಿಕೆಟಿಗ ಡಿಕ್ವೆಲ್ಲಾ ಅಮಾನತು

ಕೊಲಂಬೊ (ಪಿಟಿಐ): ಲಂಕನ್ ಪ್ರೀಮಿಯರ್ ಲೀಗ್ ವೇಳೆ ಉದ್ದೀಪನ ಮದ್ದುಸೇವನೆ ತಡೆ ನಿಯಮ ಉಲ್ಲಂಘಿಸಿದ ಕಾರಣಕ್ಕೆ ರಾಷ್ಟ್ರೀಯ ತಂಡದ ವಿಕೆಟ್ ಕೀಪರ್ ನಿರೋಶನ್ ಡಿಕ್ವೆಲ್ಲಾ ಅವರನ್ನು ಶ್ರೀಲಂಕಾ ಕ್ರಿಕೆಟ್ ಅಮಾನತು ಮಾಡಿದೆ.



ಇತ್ತೀಚೆಗೆ ಮುಕ್ತಾಯಗೊಂಡ ಲಂಕಾ ಪ್ರೀಮಿಯರ್ ಲೀಗ್‌ನಲ್ಲಿ ಗಾಲೆ ಮಾರ್ವೆಲ್ಸ್ ತಂಡಕ್ಕೆ ಈ ಆಟಗಾರ ನಾಯಕರಾಗಿದ್ದರು.

31 ವರ್ಷದ ನಿರೋಶನ್ 2023ರ ಮಾರ್ಚ್‌ನಲ್ಲಿ ಕೊನೆಯ ಬಾರಿ ಶ್ರೀಲಂಕಾ ತಂಡಕ್ಕೆ ಆಡಿದ್ದರು.

ಕರ್ನಾಟಕ ರಾಜ್ಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ದಕ್ಷಿಣ ಕನ್ನಡ ಸ್ಪರ್ಧಿಗಳ ಮೇಲುಗೈ

ಪ್ರಜಾವಾಣಿ ವಾರ್ತೆ

ಮೈಸೂರು: ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಆಳ್ವಾಸ್ ಕಾಲೇಜು ಹಾಗೂ ಉಜಿರೆಯ ಎಸ್‌ಡಿಎಂ ಕಾಲೇಜಿನ ಸ್ಪರ್ಧಿಗಳು ಶನಿವಾರ ಇಲ್ಲಿ ಆರಂಭಗೊಂಡ ಕರ್ನಾಟಕ ರಾಜ್ಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಾಬಲ್ಯ ಮೆರೆದರು.

ಕರ್ನಾಟಕ ರಾಜ್ಯ ವೇಟ್‌ಲಿಫ್ಟರ್ಸ್ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ವೇಟ್‌ಲಿಫ್ಟರ್ಸ್ ಸಂಸ್ಥೆ ಸಹಯೋಗದಲ್ಲಿ ಮಹಾಜನ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯ ಪುರುಷರ 55 ಕೆ.ಜಿ. ಒಳಗಿನವರ ವಿಭಾಗದಲ್ಲಿ ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಪ್ರಶಾಂತ್ ಸಿನ್ಹಾ ಚಿನ್ನ ಗೆದ್ದರು. ಒಟ್ಟು 223 ಕೆ.ಜಿ (97 + 126) ಭಾರ ಎತ್ತಿ ಈ ಸಾಧನೆ ಮಾಡಿದರು.

ಮಹಿಳೆಯರ 49 ಕೆ.ಜಿ. ವಿಭಾಗದಲ್ಲಿ ಬೆಂಗಳೂರಿನ ಸಂಜೀವಿ ಶೆಟ್ಟಿ ಕ್ಲಬ್‌ನ ಬಿ. ಲಕ್ಷ್ಮಿ ಒಟ್ಟು 156 ಕೆ.ಜಿ ((71 + 85) ಭಾರ ಎತ್ತಿ ಬಂಗಾರ ತಮ್ಮದಾಗಿಸಿಕೊಂಡರು.

ದಿನದ ಫಲಿತಾಂಶ: ಪುರುಷರು: 55 ಕೆ.ಜಿ. ವಿಭಾಗ: ಪ್ರಶಾಂತ್ ಸಿನ್ಹಾ (ಆಳ್ವಾಸ್ ಕಾಲೇಜು, ಒಟ್ಟು ಭಾರ: 223 ಕೆ.ಜಿ)–1, ಬಿ.ಆರ್. ಮನೋಜ್ (ಎಸ್‌ಡಿಎಂ, ಉಜಿರೆ)–2; 61 ಕೆ.ಜಿ. ವಿಭಾಗ: ಸುಬ್ರಹ್ಮಣ್ಯ (ಎಸ್‌ಡಿಎಂ, ಉಜಿರೆ, 240 ಕೆ.ಜಿ)–1, ಕೆ. ನಾಗರಾಜ್ (ಆಳ್ವಾಸ್)–2; 67 ಕೆ.ಜಿ. ವಿಭಾಗ: ಚಿರಂಜೀವಿ (ಆಳ್ವಾಸ್, 241 ಕೆ.ಜಿ)–1, ಕೆ.ಕವನ್ (ಎಸ್‌ಡಿಎಂ, ಉಜಿರೆ)–2, ದೇವೇಂದ್ರ (ಸಂಜೀವಿ ಶೆಟ್ಟಿ ಕ್ಲಬ್)–3.

ಜೂನಿಯರ್ ಬಾಲಕರು: 55 ಕೆ.ಜಿ: ಮೊಹಮ್ಮದ್ ಅಮೀರ್–1, 61 ಕೆ.ಜಿ. ವಿಭಾಗ: ವಿ. ಗಣೇಶ್ (ಸಿಎಂಸಿ ಜಿಮ್, ದಾವಣಗೆರೆ, 210 ಕೆ.ಜಿ)–1, ಮೊಹಮ್ಮದ್ ಮುನಾಫ್ ರೆಹಮಾನ್ (ಸೇಂಟ್ ಫಿಲೋಮಿನಾ, ಪುತ್ತೂರು)–2, ರಹಿಫಾನ್ (ಮಂಗಳಾ ಥ್ರೋವರ್ಸ್ ಅಕಾಡೆಮಿ)–3; 67 ಕೆ.ಜಿ. ಒಳಗಿನವರು: ದೇವೇಂದ್ರ (ಸಂಜೀವಿ ಶೆಟ್ಟಿ ಕ್ಲಬ್, 228 ಕೆ.ಜಿ)–1, ಕೆಂಚಪ್ಪ ಗಡ್ಡಿ (ಆಳ್ವಾಸ್)–2, ರಾಹುಲ್ ಶರ್ಮ (ಡಿಸಿಸಿ, ಮಂಗಳೂರು)–3.

ಯೂತ್ ಬಾಯ್ಸ್: 49 ಕೆ.ಜಿ ಒಳಗಿನವರು: ಬಿ. ಹೇಮಾದ್ರಿ (ಸಂಜೀವಿಶೆಟ್ಟಿ ಕ್ಲಬ್. 138 ಕೆ.ಜಿ), ಪ್ರಜ್ವಲ್ (ಮಂಗಳಾ ಅಕಾಡೆಮಿ)–2, ಅದಿತ್ ಪಟೇಲ್ (ಡಿವೈಇಎಸ್, ಬೆಳಗಾವಿ)–3; 55 ಕೆ.ಜಿ. ಒಳಗಿನವರು: ರೋಹಿತ್ ಕೆ.ಎಂ (ಡಿವೈಇಎಸ್, ಬೆಳಗಾವಿ. 135 ಕೆ.ಜಿ)–1, ಧ್ರುವ ಭಂಡಾರಿ (ಸೇಂಟ್ ಫಿಲೋಮಿನಾ, ಪುತ್ತೂರು)–2; 61 ಕೆ.ಜಿ. ಒಳಗಿನವರು: ವಿ. ಗಣೇಶ್ (ಸಿಎಂಸಿ ಜಿಮ್, ದಾವಣಗೆರೆ. 210 ಕೆ.ಜಿ)–1, ಯಜತ್ (ಜೈನ್ ಕಾಲೇಜು)–2, ಆರ್. ಕೆ. ರಂಜನ್ (ಜೈನ್ ಕಾಲೇಜು)–3; 67 ಕೆ.ಜಿ. ವಿಭಾಗ: ಆರ್. ಶ್ರೀರಾಘ್ (ಡಿಸಿಎಂ ಮಂಗಳೂರು. 160 ಕೆ.ಜಿ)–1, ಕೆ.ಎ.ಮಂಜುನಾಥ್ (ಸಿಎಂಸಿ ಜಿಮ್, ದಾವಣಗೆರೆ)–2, ಎಂ. ದಿಶನ್ (ಸೇಂಟ್ ಫಿಲೋಮಿನಾ, ಪುತ್ತೂರು)–3.



ಭಾರ ಎತ್ತಿದ ಬಿ. ಲಕ್ಷ್ಮಿ

ಮಹಿಳೆಯರು: 45 ಕೆ.ಜಿ. ಒಳಗಿನವರು: ಕೆ. ಸ್ಪಂದನಾ (ಸೇಂಟ್ ಫಿಲೋಮಿನಾ, ಪುತ್ತೂರು)–1, ಶ್ರಾವ್ಯ (ಆಳ್ವಾಸ್)–2, ಪಲ್ಲವಿ (ಡಿವೈಇಎಸ್, ಬೆಂಗಳೂರು)–3; 49 ಕೆ.ಜಿ. ಒಳಗಿನವರು: ಬಿ. ಲಕ್ಷ್ಮಿ (ಸಂಜೀವಿ ಶೆಟ್ಟಿ ಕ್ಲಬ್, ಬೆಂಗಳೂರು)–1, ಯಾಸ್ಮಿನ್ ಶೇಖ್ (ಆಳ್ವಾಸ್)–2, ಎಸ್.ಆರ್. ಅಮೃತಾ (ಎಸ್‌ಡಿಎಂ, ಉಜಿರೆ)–3.

ಜೂನಿಯರ್ ಬಾಲಕಿಯರು: 40 ಕೆ.ಜಿ. ಒಳಗಿನವರು: ಸಾನಿಕಾ (ಸುಧೀರ್ ಫಿಟ್ನೆಸ್ ಕೇಂದ್ರ. 87 ಕೆ.ಜಿ)–1, ಪಲ್ಲವಿ (ಆಳ್ವಾಸ್)–2, ಅದಿತಿ ಪಾಟೀಲ (ಡಿವೈಇಎಸ್, ಬೆಳಗಾವಿ)–3: 45 ಕೆ.ಜಿ. ಒಳಗಿನವರು: ಸಂಜನಾ (ಆಳ್ವಾಸ್. 85 ಕೆ.ಜಿ)–1, ಸೈಶಾ ಗೊಂದಲ್ಕರ್ (ಡಿವೈಇಎಸ್, ಬೆಳಗಾವಿ)–2. 49 ಕೆ.ಜಿ. ಒಳಗಿನವರು: ಎಸ್.ಆರ್. ಅಮೃತಾ (ಎಸ್‌ಡಿಎಂ ಉಜಿರೆ, 90 ಕೆ.ಜಿ)–1, ವನಜಾಕ್ಷಿ (ಆಳ್ವಾಸ್)–2, ಲಾವಣ್ಯ ಭಟ್ (ಮೈಸೂರು)–3.